
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಅಕ್ಟೋಬರ್ 3, 2012 ಪುಟ 20 ರೂ. 14/-



ಡಾ.ಸುಲೋಚನಾ ಗುಣಶೀಲ ನೆನಪಲ್ಲಿ..



ಸಮಾಧಿಯ ದುರ್ಗತಿ



ಬಿಜೆಪಿಗೆ ಟಾಟಾ?

ನಮ್ಮ ಮಾಲ್ಗುಡಿ ವಿರುದ್ಧ ಚಿಮೂ ರಾಡಿ

ಉಕ್ಕಡ ಮಾರಮ್ಮನ ಹಣಕ್ಕೆ

ಚಂದ್ರು ಕನ್ನ





ಹೊನ್ನಾಳಿ ರೇಣುಕಾನ ರಂಪಾಟ



ಸಂಗೊಳ್ಳಿ ರಾಯಣ್ಣಗೆ ಅಪಸ್ವರ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಚಿಲ್ಲರೆ ವಿಷಯವಲ್ಲ

ನಮ್ಮ ರೈತರು ತೀರದ ಸಂಕಷ್ಟದಲ್ಲಿದ್ದಾರೆ. ಅವರು ತಾವು ಬೆಳೆದ ಬೆಳೆಯನ್ನು ಗ್ರಾಹಕರಿಗೆ ತಲುಪಿಸುವ ಮುನ್ನ ಕನಿಷ್ಠ 4ರಿಂದ 5 ಹಂತಗಳನ್ನು ದಾಟಿ ಹೋಗಬೇಕಾಗುತ್ತದೆ. ಸಾಗಾಣಿಕೆ, ಸಂಗ್ರಹಣೆ ಇತ್ಯಾದಿಗಳೆಲ್ಲದರ ಖರ್ಚನ್ನು ಸೇರಿಸಿದ ನಂತರ ಗ್ರಾಹಕರು ಹೆಚ್ಚಿನ ದರವನ್ನು ನೀಡಿ ಸರಕನ್ನು ಖರೀದಿಸುತ್ತಾರೆ. ಗ್ರಾಹಕರು ತೆರಬೇಕಾದ ಹಣದಲ್ಲಿ ಶೇ.25 ರಷ್ಟು ಲಾಭವೂ ರೈತರಿಗೆ (ಅಥವಾ ಇನ್ನಿತರ ಉತ್ಪಾದಕರಿಗೆ) ದಕ್ಕುವುದಿಲ್ಲ. ಇದಕ್ಕೊಂದು ಪರಿಹಾರವನ್ನು ಹುಡುಕಬೇಕು.

ಅಂತಹ ಒಂದು ಪರಿಹಾರವನ್ನು ಎಲ್ಲಾ ರಾಜಕೀಯ ಪಕ್ಷಗಳು ಸೇರಿ ಹುಡುಕಿವೆ. ಅದೇ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಬಂಡವಾಳ. ಎಫ್‌ಡಿಐ ಎಂದು ಕಳೆದೊಂದು ವಾರದಿಂದ ಎಲ್ಲೆಡೆ ಸದ್ದು ಮಾಡುತ್ತಿರುವ ವಿದ್ಯಮಾನ ಇದೇ.

ಇದರಿಂದ ರೈತರ ಸಂಕಷ್ಟ ತೀರುತ್ತದೆಯೇ?

ಹೌದು.

ಎಫ್‌ಡಿಐ ಈ ಕ್ಷೇತ್ರಕ್ಕೆ ಬಂದರೆ ಮುಂದಿನ ಹಲವು ವರ್ಷಗಳಲ್ಲಿ ನಿಧಾನಕ್ಕೆ ಈ ದೇಶದ ಗಮನಾರ್ಹ ಪಾಲು ರೈತರು ವ್ಯವಸಾಯವನ್ನು ಬಿಟ್ಟುಬಿಡಬೇಕಾಗುತ್ತದೆ. ಆ ಮೂಲಕ ರೈತರಾಗಿ ಅವರ ಸಂಕಷ್ಟ ತೀರುತ್ತದೆ. ಅವರು ತಮ್ಮ ಜಮೀನುಗಳನ್ನು ದೊಡ್ಡ ದೊಡ್ಡ ಕಂಪೆನಿಗಳಿಗೆ ಮಾರಾಟ ಮಾಡುತ್ತಾರೆ ಅಥವಾ ಲೀಸ್ ಕೊಡುತ್ತಾರೆ. ಅವರೆಲ್ಲರನ್ನೂ ಹಳ್ಳಿಗಳಿಂದ ಒಕ್ಕಲೆಬ್ಬಿಸುವುದಿಲ್ಲ, ಅವರು ಅದೇ ಜಮೀನುಗಳಲ್ಲಿ ಕೂಲಿಗಳಾಗಿ ಕೆಲಸ ಮಾಡಲು ಸಾಧ್ಯ. ಅದರ ಜೊತೆಜೊತೆಗೇ ರೈತರ ಪಾಲಿಗೆ 'ಕಂಟಕ'ವಾಗಿರುವ 'ಮಧ್ಯವರ್ತಿ'ಗಳನ್ನೂ ಒಂದೇ ಏಟಿಗೆ ತೀರಿಸಲಾಗುತ್ತದೆ. ಅವರು ಅಲ್ಲಿಂದ ಮುಂದಕ್ಕೆ ವ್ಯಾಪಾರಿಗಳಾಗಿ ಉಳಿಯುವುದಿಲ್ಲ; ಆದರೆ ಅವರಲ್ಲಿ ಒಂದಷ್ಟು ಭಾಗ ಅದೇ ಕ್ಷೇತ್ರದಲ್ಲಿ ಉಳಿಯಬಹುದು. 'ಸೇಲ್ಸ್‌ಮನ್ ಮತ್ತು ಸೇಲ್ಸ್‌ಗರ್ಲ್'ಗಳಾಗಿ.

ಚಿಲ್ಲರೆ ವ್ಯಾಪಾರವೆಂಬ ದೊಡ್ಡ ಉದ್ಯೋಗದಾತ ಕ್ಷೇತ್ರ - ದೊಡ್ಡ ಲಾಭದಾಯಕ ಕ್ಷೇತ್ರ

ಭಾರತದಲ್ಲಿ ಕೃಷಿ ಕ್ಷೇತ್ರ ಬಿಟ್ಟರೆ ಅತ್ಯಂತ ಹೆಚ್ಚು ಜನರು ತೊಡಗಿಕೊಂಡಿರುವ ಕ್ಷೇತ್ರವೆಂದರೆ ಅದು ಚಿಲ್ಲರೆ ವ್ಯಾಪಾರದ ಕ್ಷೇತ್ರ. ಒಂದು ಅಂದಾಜಿನ ಪ್ರಕಾರ ಉತ್ಪಾದಕರಿಂದ ಗ್ರಾಹಕರಿಗೆ ವಿವಿಧ ಸರಕುಗಳನ್ನು ತಲುಪಿಸುವ ಇಡೀ ಸರಪಳಿಯಲ್ಲಿ ಒಟ್ಟು 8 ಕೋಟಿ ಜನರು ಕೆಲಸ ಮಾಡುತ್ತಿದ್ದಾರೆಂದು ಹೇಳಲಾಗುತ್ತಿದೆ. ಈ ಅಂದಾಜನ್ನು ಉತ್ಪ್ರೇಕ್ಷೆ ಎನ್ನುವುದಾದರೆ 2009-10ರ ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ಸಂಸ್ಥೆಯ (ಎನ್‌ಎಸ್‌ಎಸ್‌ಓ) ಸರ್ವೇ ಪ್ರಕಾರ 4.4 ಕೋಟಿ ಜನರು ಚಿಲ್ಲರೆ ವ್ಯಾಪಾರದಲ್ಲಿ ಉದ್ಯೋಗ ಕಂಡುಕೊಂಡಿದ್ದಾರೆ.

ಇಂದು ವಿದೇಶೀ ನೇರ ಬಂಡವಾಳವು ಈ ಕ್ಷೇತ್ರವನ್ನು ಪ್ರವೇಶಿಸಿದರೆ ಅದರಿಂದ ಉಂಟಾಗುವ ಪರಿಣಾಮವೆಂದರೆ, ಬಿಡಿ ಬಿಡಿಯಾಗಿದ್ದ ಇಂತಹ ಲಕ್ಷಾಂತರ ವ್ಯಾಪಾರಿಗಳ ಜಾಗದಲ್ಲಿ ಬೆರಳೆಣಿಕೆಯ ಭಾರೀ ಬೃಹತ್ ಮಧ್ಯವರ್ತಿಗಳು ಬಂದು ಸ್ಥಾಪನೆಯಾಗುತ್ತಾರೆ. ಎಷ್ಟು ಬೃಹತ್ ಎಂದರೆ, ಇಂದು ಎಲ್ಲರ ಬಾಯಲ್ಲಿ ಕೇಳಿಬರುತ್ತಿರುವ ವಾಲ್‌ಮಾರ್ಟ್ ಎಂಬ ಅಮೆರಿಕನ್ ಚಿಲ್ಲರೆ ವ್ಯಾಪಾರ ಸಂಸ್ಥೆಯ ವಾರ್ಷಿಕ ವಹಿವಾಟು ಸುಮಾರು 420 ಬಿಲಿಯನ್ ಡಾಲರ್‌ಗಳು! ಕರ್ನಾಟಕ ಸರ್ಕಾರದ ವಾರ್ಷಿಕ ಬಜೆಟ್‌ನ 20 ಪಟ್ಟು ಅಷ್ಟೆ. ಅಂತಹ ದೊಡ್ಡ ಮಧ್ಯವರ್ತಿಗಳ ಪವರ್ ಎಷ್ಟಿರುತ್ತದೆ? ಅವರು ಈ ದೇಶದ ಸರ್ಕಾರಗಳ ಎದುರು ಎಷ್ಟು ಪವರ್‌ಫುಲ್ ಆಗಿರುತ್ತಾರೆ ಎಂಬುದನ್ನು ಊಹಿಸಿ ಕೊಳ್ಳುವುದು ಅಷ್ಟೇನೂ ಕಷ್ಟವಲ್ಲ ಅಲ್ಲವೇ?

ಇಂತಹ ದೊಡ್ಡ ಜನರು ಚಿಲ್ಲರೆ ವ್ಯಾಪಾರಕ್ಕೆ ಯಾಕೆ ಬರುತ್ತಾರೆ? ಭಾರತದ ಯೋಜನಾ ಆಯೋಗವು ಅಂದಾಜಿಸಿರುವಂತೆ 2015ರ ಹೊತ್ತಿಗೆ ಭಾರತದ ಒಟ್ಟು ವಾರ್ಷಿಕ ಚಿಲ್ಲರೆ ವ್ಯಾಪಾರವು 815 ಬಿಲಿಯನ್ ಡಾಲರ್‌ಗಳು ಇರುತ್ತದೆ. ಈ ಪಾಟಿ ವ್ಯವಹಾರವಿರುವ ಕಡೆ ಯಾವುದೇ ರೊಕ್ಕಸ್ಥ ಕೈ ಹಾಕದಿರುವುದುಂಟೇ? ಅವರಿಲ್ಲಿ ಬಂದಮೇಲೆ ಈ ದೇಶದ ತೀರಾ ಸಣ್ಣ ವ್ಯಾಪಾರಸ್ಥರು ಉಳಿದಾರೇ? ಈ ರೀತಿಯಾಗಿ ಕೈ ಹಾಕಲಿರುವ ದೊಡ್ಡ ಚಿಲ್ಲರೆ ವ್ಯಾಪಾರಸ್ಥರು ಸೃಷ್ಟಿಸಲಿರುವ ಉದ್ಯೋಗಗಳು ಎಷ್ಟು ಗೊತ್ತೆ? ಅವರುಗಳೇ ಮಾಡಿರುವ ಅಂದಾಜು 56 ಲಕ್ಷ ಉದ್ಯೋಗಗಳು. ಭಾರತ ಸರ್ಕಾರವು ಹೇಳುವುದೇನೆಂದರೆ ತಮ್ಮ ಹೊಸ ನಿರ್ಧಾರದಿಂದ ಸುಮಾರು ಅರ್ಧ ಕೋಟಿಗೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗುತ್ತದೆ, ಇದು ಭಾರತದ ಆರ್ಥಿಕತೆಗೆ ಒಳಿತನ್ನು ಮಾಡುತ್ತದೆ ಎಂದು. ಆದರೆ ಕನಿಷ್ಠ 5 ಕೋಟಿ ಉದ್ಯೋಗಗಳನ್ನು ನಾಶ ಮಾಡುವ ಜಾಗದಲ್ಲಿ ಹುಟ್ಟಿಕೊಳ್ಳುವ 'ಪರ್ಯಾಯ' ಉದ್ಯೋಗಗಳಿವು ಎಂಬುದನ್ನು ಮರೆಮಾಚಲಾಗುತ್ತದೆ ಅಷ್ಟೇ.

ಸರ್ಕಾರದ ಸಮಜಾಯಿಷಿ ಏನು?

ತಾವು ವಿದೇಶೀ ದೊರೆಗಳಿಗೆ ಏಜೆಂಟ್‌ಗಿರಿ ಮಾಡುತ್ತಿರುವುದರಿಂದಲೇ ಇಂತಹ ನೀತಿಗಳನ್ನು ತರುತ್ತೇವೆ ಎಂದು ಯಾವ ಪಕ್ಷವೂ ಹೇಳಿಕೊಳ್ಳುವುದಿಲ್ಲ, ಬದಲಿಗೆ ಈ ದೇಶದ ಅಭಿವೃದ್ಧಿಗೆ ಇದು ಅತ್ಯುತ್ತಮ ಪರಿಹಾರ ಎಂದೇ ಹೇಳುತ್ತವೆ. ದೇಶದ ಆರ್ಥಿಕತೆ ಬಿಕ್ಕಟ್ಟಿಗೆ ಹೋಗದಂತೆ ತಡೆಯುವ ಸಲುವಾಗಿಯೇ ಈ ಕೆಲಸವನ್ನು ಮಾಡಬೇಕಾಗಿದೆ. 'ದೇಶವನ್ನು ಸದೃಢ ಸಲುವಾಗಿ ಕೆಲವು ಸಾರಿ ಅಷ್ಟು ಜನಪ್ರಿಯವಲ್ಲದ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗುತ್ತದೆ' ಎಂದು ಮಾತಾಡುತ್ತಿದ್ದಾರೆ. ಏಕೆಂದರೆ ಭಾರತದ ದೊಡ್ಡ ದೊಡ್ಡ ಬಂಡವಾಳಿಗರು ನಿಜಕ್ಕೂ ಬಿಕ್ಕಟ್ಟಿನಲ್ಲಿದ್ದಾರೆ. ತಮ್ಮ ಲಾಭದ ದರವನ್ನು ಇನ್ನೂ, ಇನ್ನೂ ಏರಿಸಿಕೊಳ್ಳಲು ಅವರಿಗೆ ಸಾಧ್ಯವಾಗದಿರುವುದೇ ಬಿಕ್ಕಟ್ಟು. ಅಂತಹುದೇ ಬಿಕ್ಕಟ್ಟು ಅಮೆರಿಕದ ಮತ್ತು ಯೂರೋಪ್‌ನ ದೊಡ್ಡ ಬಂಡವಾಳಿಗರಿಗೂ ಎದುರಾಗಿದೆ.

ಭಾರತದ ದೊಡ್ಡ ಬಂಡವಾಳಶಾಹಿಗಳು ಈಗಾಗಲೇ ಚಿಲ್ಲರೆ ವ್ಯಾಪಾರಕ್ಕೆ ಕೈ ಹಾಕಿಯಾಗಿದೆ. ಅಂಬಾನಿ (ರಿಲಯನ್ಸ್ ಫ್ರೆಶ್), ಬಿರ್ಲಾ (ಮೋರ್), ಟಾಟಾ (ಟಾಟಾ ಸ್ಟಾರ್)ಗಳಲ್ಲದೆ, ಬಿಯಾನಿಗಳು, ಬಿಗ್ ಬಜಾರ್ ಇತ್ಯಾದಿಗಳ ಹೆಸರಿನಲ್ಲಿ ಸಂತೆಯಲ್ಲಿದ್ದಾರೆ. ಏರ್‌ಟೆಲ್‌ನ ಮಾಲೀಕ ಮಿತ್ತಲ್ ಸಹ ವಾಲ್‌ಮಾರ್ಟ್-ಭಾರ್ತಿ ಹೆಸರಿನಲ್ಲಿ ಅಂಗಡಿ ತೆಗೆದಿದ್ದಾನೆ. 815 ಬಿಲಿಯನ್ ಡಾಲರ್‌ಗಳ ಮಾರುಕಟ್ಟೆಯು ಅವರ ಬಿಕ್ಕಟ್ಟನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡುತ್ತದೆ.

ಇದರಾಚೆಗೆ ಸರ್ಕಾರವು ಹೇಳುತ್ತಿರುವುದು - 'ಭಾರತದ ಗ್ರಾಮೀಣ ಆರ್ಥಿಕತೆಯಲ್ಲಿನ ಬಡವರಿಗೆ ಅನುಕೂಲ



ಮಾಡಿಕೊಡಲು ಇದು ಅತ್ಯುತ್ತಮ ನಿರ್ಧಾರವಾಗಿದೆ. ಜೊತೆಗೆ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಉದ್ಯೋಗ ಸೃಷ್ಟಿಯಾಗುತ್ತದೆ ಮತ್ತು ಗ್ರಾಹಕರಿಗೆ ಒಳ್ಳೆಯದಾಗುತ್ತದೆ. ಏಕೆಂದರೆ ಭಾರತದ ರೈತರಿಗೆ ಕಟಾವಿನ ನಂತರದ ನಷ್ಟ ಒಂದು ಪ್ರಮುಖ ಸಮಸ್ಯೆಯಾಗಿದೆ. ಸಾಗಾಣಿಕೆ ಮತ್ತು ಸಂಗ್ರಹಾಗಾರ (ಸ್ಟೋರೇಜ್) ಹಾಗೂ ಸೂಕ್ತ ವಿತರಣಾ ವ್ಯವಸ್ಥೆಯ ಕೊರತೆಯೇ ಇದಕ್ಕೆ ಪ್ರಮುಖ ಕಾರಣವಾಗಿದೆ. ಜೊತೆಗೆ 3-4 ಸ್ತರದ ಮಧ್ಯವರ್ತಿಗಳಿಂದಲೂ ನಷ್ಟ ಅನುಭವಿಸುತ್ತಾರೆ. ಇವೆಲ್ಲಕ್ಕೂ ದೊಡ್ಡ ಬಂಡವಾಳಿಗರ ಪ್ರವೇಶ ಪರಿಹಾರ ಒದಗಿಸುತ್ತದೆ. ಈಗಾಗಲೇ ಭಾರತದ ದೊಡ್ಡ ವ್ಯಾಪಾರಿಗಳು ಈ ಕ್ಷೇತ್ರದಲ್ಲಿ ಇಳಿದ ಮೇಲೆ ಶೇ 6ರಿಂದ 7ರಷ್ಟು ಮಾರುಕಟ್ಟೆ ಮಾತ್ರ ಅವರ ಪಾಲಾಗಿದೆ. ವಿದೇಶೀ ನೇರ ಬಂಡವಾಳವು ಶೇ.51ರಷ್ಟು ಬರುವುದರಿಂದ ಇವರಿಗೂ ಹೂಡಲು ಬಂಡವಾಳ ಸಿಗುತ್ತದೆ.'

ಭಾರತದ ವ್ಯಾಪಾರಿಗಳ ಹಾಗೂ ರೈತರ ಪಾಲಿಗೆ ಸಾಗಾಣಿಕೆ ಮತ್ತು ಸಂಗ್ರಹ ಒಂದು ಸಮಸ್ಯೆಯೇನೋ ಹೌದು. ಅದಕ್ಕೆ ತಾನು ಏನು ಮಾಡಬೇಕೆಂದು ಕನಿಷ್ಠ ಯೋಚಿಸದ ಸರ್ಕಾರವು, ಈಗ ಖಾಸಗಿಯವರು ಬಂದು ಅದನ್ನು ಪರಿಹರಿಸಿಕೊಂಡು ಲಾಭ ಮಾಡಿಕೊಳ್ಳಲಿ ಎಂದು ಹೇಳುತ್ತಿದೆ. ಜೊತೆಗೆ ಭಾರತದ ಜನರೇ ಆಗಿರುವ ಕೋಟ್ಯಾಂತರ ವ್ಯಾಪಾರಿಗಳ ಬದಲಿಗೆ ಲಾಭವನ್ನು ವಿದೇಶೀ ಕಂಪೆನಿಗಳು ಕೊಂಡೊಯ್ದರೆ ಒಳ್ಳೆಯದೇ ಎಂದು ಯಾವ ನಾಚಿಕೆಯಿಲ್ಲದೇ ಹೇಳುತ್ತಾರೆ. ಮೇಲಿನ ಮಾತುಗಳನ್ನಾಡಿದ್ದು ಕೇಂದ್ರ ಸಚಿವ ಆನಂದ್ ಶರ್ಮಾ 2011ರ ನವೆಂಬರ್‌ನಲ್ಲಿ.

'ಆದರೆ ನಾವೇನೂ ಇಡೀ ಸಣ್ಣ ವ್ಯಾಪಾರಿಗಳಿಗೆಲ್ಲಾ ತೊಂದರೆಯಾಗುವಂತಹ ನೀತಿಯನ್ನು ಅನುಸರಿಸಿಲ್ಲ, ಉದಾಹರಣೆಗೆ 10 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ನಗರಗಳಲ್ಲಿ ಮಾತ್ರ ಎಫ್‌ಡಿಐಗೆ ನಾವು ಅವಕಾಶ ಕೊಡುತ್ತಿರುವುದು, ಜೊತೆಗೆ ಶೇ.30ರಷ್ಟು ಸರಕುಗಳನ್ನು ದೇಶದೊಳಗಿನ ಉತ್ಪಾದಕರಿಂದಲೇ ಖರೀದಿಸಬೇಕು. ಶೇ.30ರಷ್ಟನ್ನು ಸಣ್ಣ ಹಾಗೂ ಮಧ್ಯಮ ಉತ್ಪಾದಕರಿಂದಲೇ ಖರೀದಿಸಬೇಕು ಎಂಬ ಷರತ್ತನ್ನು ಹಾಕಿದ್ದೇವೆ. ಇದರಿಂದ ದೇಶದೊಳಗಿನ ಉತ್ಪಾದಕರು ಮತ್ತು ವ್ಯಾಪಾರಿಗಳಿಗೆ ರಕ್ಷಣೆ ಸಿಗುತ್ತದೆ' ಈ ಮಾತನ್ನೂ 2011ರಲ್ಲಿ ಹೇಳಲಾಗಿತ್ತು.

ಆದರೆ ಕಳೆದ ವಾರ ಕೇಂದ್ರ ಸಂಪುಟ ಅನುಮೋದಿಸಿದ ಕರಡಿನಲ್ಲಿ 10 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯ ನಗರಗಳ ಷರತ್ತನ್ನು ತೆಗೆದುಹಾಕಲಾಗಿದೆ. ಇನ್ನು ಶೇ.30ರಷ್ಟು ಸಣ್ಣ ಹಾಗೂ ಮಧ್ಯಮ ಉತ್ಪಾದಕರು ಭಾರತದವರೇ ಆಗಿರಬೇಕೆಂದೇನೂ ಇಲ್ಲ, ಉಳಿದ ಶೇ.30ರಷ್ಟು ಭಾರತದ ಉತ್ಪಾದಕರಾಗಿರಬೇಕೆಂಬುದಕ್ಕೆ ಯಾವ ಕಿಮ್ಮತ್ತು ಇರುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಯಾರ ಲಾಭಕ್ಕೆ, ಯಾರ್‍ಯಾರು ಬಲಿ?

ಲಾಭ ಮಾಡಿಕೊಳ್ಳಲು ಈಗಾಗಲೇ ತುದಿಗಾಲಲ್ಲಿ ನಿಂತಿರುವ ಅಮೆರಿಕ ಮತ್ತು ಯೂರೋಪ್‌ನ ದೈತ್ಯ ವ್ಯಾಪಾರಸ್ಥರ ಜೊತೆ ಟಾಟಾ-ಬಿರ್ಲಾ-ಅಂಬಾನಿಗಳು ಕೈ ಜೋಡಿಸಲಿದ್ದಾರೆ. ಯಾವ ಪ್ರಮಾಣದಲ್ಲಿ ಈ ದೈತ್ಯರು ಚಿಲ್ಲರೆ ವ್ಯಾಪಾರವನ್ನು ಆಕ್ರಮಿಸಿಕೊಳ್ಳಬಹುದೆಂಬುದಕ್ಕೆ ಅಮೆರಿಕದ ಉದಾಹರಣೆ ನೋಡೋಣ. ಅಮೆರಿಕದ ಚಿಲ್ಲರೆ ವ್ಯಾಪಾರದಲ್ಲಿ ಆ ದೇಶದ 20 ದೈತ್ಯ ಕಂಪೆನಿಗಳ ಪಾಲು 1992ರಲ್ಲಿ ಶೇ.39ರಷ್ಟಿದ್ದರೆ, 2009ರ ಹೊತ್ತಿಗೆ ಅದು ಶೇ.64ಕ್ಕೇರಿತ್ತು, ಅದರಲ್ಲಿ ದೊಡ್ಡ 8 ಕಂಪೆನಿಗಳದ್ದು ಶೇ.26ರಿಂದ ಶೇ.50ಕ್ಕೇರಿತ್ತು. ಅಂದರೆ ಹೆಚ್ಚೆಚ್ಚು ಏಕಸ್ವಾಮ್ಯವನ್ನು ದೊಡ್ಡ ಕಂಪೆನಿಗಳು ಸಾಧಿಸಿರುವುದನ್ನೂ ಮತ್ತು ಅವುಗಳಲ್ಲೇ ಅತೀ ದೊಡ್ಡವರೂ ಮತ್ತಷ್ಟು ಪ್ರಬಲರಾಗಿರುವುದನ್ನು ಈ ಅಂಕಿ-ಸಂಖ್ಯೆಗಳು ತೋರುತ್ತವೆ.

ಭಾರತದ ಒಟ್ಟು ಚಿಲ್ಲರೆ ಮಾರಾಟದಲ್ಲಿ ನೇರ ಹಾಗೂ ಪರೋಕ್ಷ ಕೃಷಿ ಉತ್ಪನ್ನಗಳ ಪಾಲು ಶೇ.70. ಆದರೆ ಚಿಲ್ಲರೆ ವ್ಯವಹಾರದಿಂದ ಅತ್ಯಂತ ದೊಡ್ಡ ನಷ್ಟ ಅನುಭವಿಸಲಿರುವುದು ಈ ದೇಶದ ಕೃಷಿ ಸಮುದಾಯವೇ. ಕಳೆದ 3-4 ದಶಕಗಳಿಗೂ ಹೆಚ್ಚಿನ ಕಾಲದಿಂದ ಭಾರತದ ಕೃಷಿ ಎದುರಿಸುತ್ತಿರುವ ಬಿಕ್ಕಟ್ಟಿಗೆ ಹಲವು ಮುಖಗಳಿವೆ. ಇಂದು ಇಡೀ ದೇಶದ ಕೃಷಿಯ ಒಂದು ಪ್ರಮುಖ ಸಮಸ್ಯೆಯಾಗಿ ಕೃಷಿ ಭೂಮಿಯ ವಿಭಜೀಕರಣವಾಗಿ ಹೊರ ಹೊಮ್ಮುತ್ತಿದೆ. ಆದರೆ ಕೌಟುಂಬಿಕ ಆಸ್ತಿಯಾದ ಭೂಮಿಯು ಎಷ್ಟೇ ವಿಭಜನೆಯಾದರೂ, ಭೂಮಿಯ ಮಾರಾಟ ಹಾಗೂ ಕೊಳ್ಳುವುದು (ಕೃಷಿಯ ಉದ್ದೇಶಕ್ಕಾಗಿ) ನಡೆಯುತ್ತಿರುವುದು ಕಡಿಮೆಯೇ ಇದೆ. ಅಂದರೆ ಕೃಷಿಗಾಗಿ ಭೂಮಿಯ ಕೇಂದ್ರೀಕರಣ ನಡೆಯುತ್ತಿಲ್ಲ. ಕೃಷಿ ಕ್ಷೇತ್ರದ ಒಳಸುರಿಗಳ ಮೇಲೆ ಹತೋಟಿ ಸಾಧಿಸಿ ಉತ್ಪಾದನಾ ವೆಚ್ಚವನ್ನು ಅತೀವವಾಗಿ ಹಿಗ್ಗಿಸಿರುವ ಬಂಡವಾಳಶಾಹಿ ವ್ಯವಸ್ಥೆಯು ಅದೇ ರೀತಿಯಲ್ಲಿ ಈಗ ಕೃಷಿಯ ಹೊರಸುರಿಯ ಮೇಲೆ ನಿಯಂತ್ರಣ ಸಾಧಿಸಲಿದೆ. ಅದಕ್ಕೊಂದು ಸಾಧನವೇ ಈ ದೊಡ್ಡ ಬಂಡವಾಳ.

ನೇರವಾಗಿ ಗ್ರಾಹಕರ ಜೊತೆ ಸಂಪರ್ಕ ಹೊಂದಿ... ಚಿಲ್ಲರೆ ಮಾರಾಟ ಉದ್ದಿಮೆಯು, ಗ್ರಾಹಕರನ್ನು ಆಕರ್ಷಿ... ಕಡಿಮೆ ದರಕ್ಕೆ ಸರಕುಗಳನ್ನು ನೀಡುವುದರ ಜೊ... 'ಅತ್ಯುತ್ತಮ ಗುಣಮಟ್ಟವನ್ನು ಖಾತರಿಗೊಳಿಸುವ ಸಲುವ... ಸರಕುಗಳ ಗುಣಮಟ್ಟಕ್ಕೆ ಕೆಲವು ಮಾನದಂಡಗಳನ್ನು ನಿ... ಮಾಡುತ್ತದೆ. ಅದೇ ರೀತಿಯ ವಸ್ತುವನ್ನು ಉತ್ಪಾದಿಸುವ... ಉತ್ಪಾದಕರ ಕರ್ತವ್ಯವಾಗಿರುತ್ತದೆ. ಅಂದರೆ ನಿರಂತರ... ಬದಲಾಗಲಿರುವ ಮಾರುಕಟ್ಟೆಯ ಅಗತ್ಯಗಳಿಗೆ ಸೂಕ್ತ... ರೀತಿಯಲ್ಲೇ ರೈತರು, ಎಲ್ಲಾ ಸಮಸ್ಯೆಗಳ ನಡುವೆ... ಬೆಳೆಯನ್ನು ಬೆಳೆಯಬೇಕು. ಇಲ್ಲವಾದಲ್ಲಿ ಅಂತಹ ಬೆಳೆ... ತಿರಸ್ಕೃತವಾಗುತ್ತದೆ. ಇದಕ್ಕೊಂದು ಉದಾಹರಣೆಯ... ಥೈಲ್ಯಾಂಡ್‌ನಲ್ಲಿ ಚಿಲ್ಲರೆ ಉದ್ದಿಮೆಯಲ್ಲಿ ದೊಡ್ಡ ಬಂಡ... ಬಂದ 5 ವರ್ಷಗಳಲ್ಲಿ ಬಂದ ಒಂದು ಬೆಳವಣಿಗೆ... ನೋಡಬಹುದು. ಅಂತಹ ಒಂದು ದೊಡ್ಡ ಕಂಪೆನಿ... ಮೊದಲ ವರ್ಷದಲ್ಲಿ 250 ಉತ್ಪಾದಕರಿಂದ ವಸ್ತುಗ... ಖರೀದಿ ಮಾಡುತ್ತಿದ್ದರೆ, 5ನೆಯ ವರ್ಷದಲ್ಲಿ ಕೇವಲ... ಉತ್ಪಾದಕರಿಂದ ಖರೀದಿ ಮಾಡುತ್ತಿದೆ. ಅಲ್ಲಿ... ಹೊರಹಾಕಲ್ಪಟ್ಟ 140 ಉತ್ಪಾದಕರು ಸಣ್ಣ ಮತ್ತು ಮ... ಪ್ರಮಾಣದ ರೈತರಾಗಿದ್ದರು! ಅದಕ್ಕಿಂತ ಅಪಾಯ... ಯಾದದ್ದು ಇನ್ನೊಂದಿದೆ. ಈ ದೊಡ್ಡ ಕಂಪೆನಿಗಳು ಕ... ದರದಲ್ಲಿ ತಮಗೆ ಮಾರಾಟ ಮಾಡುವ ಉತ್ಪಾದ... ಜಗತ್ತಿನ ಯಾವುದೇ ಭಾಗದಲ್ಲಿದ್ದರೂ ಅವರಿ... ಕೊಂಡುಕೊಂಡು ಇಲ್ಲಿ ಮಾರಬಹುದು. ಆ ಹೊ... ರೈತರ ಕೈ ಅಳತೆಯಲ್ಲಿ ಸಿಗುತ್ತಿದ್ದ ಎಲ್ಲಾ 'ಮಧ್ಯವರ್ತಿಗ... ದೊಡ್ಡ ಕಂಪೆನಿಗಳ ಸೇಲ್ಸ್‌ಬಾಯ್‌ಗಳಾಗಿ ಬದಲಾಗಿರು...

ಇಷ್ಟಲ್ಲದೇ ಕಂಪೆನಿಗಳು ಭೂಮಿಯ... ಕೊಂಡುಕೊಳ್ಳುವ ಮೂಲಕ ಅಥವಾ ಗುತ್ತಿಗೆ ಕೃಷಿ ಮಾ... ಮೂಲಕ ಹತ್ತಾರು ಸಾವಿರ ಎಕರೆಗಳಲ್ಲಿ ತಾ... ಬೇಸಾಯಕ್ಕಿಳಿಯುತ್ತವೆ. ಇವರ ಜೊತೆ ಸ್ಪರ್ಧಿಸಿ ಗೆ... ನಮ್ಮ ತುಂಡುಭೂಮಿಯ ರೈತರಿಗೆ ಸಾಧ್ಯವೇ... ಅಂದರೆ ತುಂಡುಭೂಮಿ ಕೃಷಿಯ ಸಮಸ್ಯೆಯನ್ನು... ಕಂಪೆನಿಗಳು ನೀಗಿಸುತ್ತವೆ. ಆ ರೈತರನ್ನು ಕೃಷಿಯಿಂ... ಹೊರದೂಡುವ ಮೂಲಕ.

ಇನ್ನು ಗ್ರಾಹಕರಿಗೆ ಅತ್ಯುತ್ತಮ ಗುಣಮಟ್ಟದ ಸ... ಅತ್ಯಂತ ಕಡಿಮೆ ಬೆಲೆಯಲ್ಲಿ ಸಿಗುತ್ತದೆ ಎಂಬ ಭ್ರಮೆ... ಆರಂಭಿಕ ವರ್ಷಗಳಲ್ಲಿ ಎಲ್ಲರನ್ನೂ ಮರುಳು ಮಾಡುವುದ... ಸಂಶಯವಿಲ್ಲ. ಆದರೆ ಎಲ್ಲಾ ಅಂಕಿ-ಅಂಶಗಳು ಸ್ಪಷ್ಟ... ತೋರಿಸುವಂತೆ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಉಂಟಾ... ಬೆಲೆಗಳು ಹೆಚ್ಚಾಗುತ್ತಾ ಹೋಗುತ್ತವೆ. ಅದರಲ್ಲೂ ನಿ... ಸರಕಿನ ಕೊರತೆ ಉಂಟಾದ ಸಂದರ್ಭದಲ್ಲಂತೂ, ... ಮೇಲೆ ಹಿಡಿತ ಹೊಂದಿರುವ ಕಂಪೆನಿಯು ಹೇ... ಬೆಲೆಯಾಗಿರುತ್ತದೆ.

ನೇರವಾಗಿ ಹಾಗೂ ತಕ್ಷಣದಲ್ಲಿ ಹೊಡೆತ ತಿನ್ನು... ಈ ದೇಶದ ಕೋಟ್ಯಾಂತರ ಸಂಖ್ಯೆಯ ಸಣ್ಣ ಹಾ... ಮಧ್ಯಮ ಪ್ರಮಾಣದ ವ್ಯಾಪಾರಸ್ಥರಾಗಿರುತ್ತಾರೆ. ಈಗಾ... ವ್ಯಾಪಾರಸ್ಥರ ಒಕ್ಕೂಟಗಳು ಎಫ್‌ಡಿಐಅನ್ನು ವಿರೋಧಿ... ರಾದರೂ, ಸಂಘಟಿತವಾದ ದೇಶವ್ಯಾಪಿ ಹೋರಾಟ... ವರ್ಗದಿಂದ ಮೂಡಿ ಬರುತ್ತಿಲ್ಲ. ರೈತಸಂಘಟನೆಗಳ... ತಮ್ಮ ನಿರ್ದಿಷ್ಟ ಬೆಳೆಗಳಿಗೆ ಬೆಲೆ ಕೇಳುವ ... ಹೋರಾಟಗಳಲ್ಲೇ ಮಗ್ನವಾಗಿವೆ. ವಾಲ್‌ಮಾರ್ಟ್‌ನ... ಕಂಪೆನಿಗಳು ತಮ್ಮ ಇದುವರೆಗಿನ ಎಲ್ಲಾ ಚಳವಳಿಗ... ಅಸಂಗತಗೊಳಿಸುವ ರೀತಿಯಲ್ಲಿ ನುಗ್ಗಿ ಬರುತ್ತಿರು... ಅವಕ್ಕೆ ಕಾಣುತ್ತಿದ್ದಂತಿಲ್ಲ.

ಈಗಲೇ ಇಂತಹ ನಿರ್ಧಾರ ತೆಗೆದುಕೊಂಡಿದ್ದು ...??

ಯುಪಿಎ ಸರ್ಕಾರವು ತನ್ನ ಎರಡೂ ಅವಧಿಗ... ಅತ್ಯಂತ ಕೆಟ್ಟ ಪರಿಸ್ಥಿತಿಯಲ್ಲಿದೆ. ಹಗರಣಗಳು, ಭ್ರಷ್ಟಾ... ಆರೋಪಗಳು, ನಾಯಕತ್ವದ ಬಿಕ್ಕಟ್ಟು ಎಲ್ಲವೂ ... ಸಂದರ್ಭದಲ್ಲೇ, ಅದೂ ಒಂದೇ ಸಭೆಯಲ್ಲಿ ಮ... ಪ್ರಮುಖ ಜನವಿರೋಧಿ ತೀರ್ಮಾನಗಳಿಗೆ ಕೈ ಹಾಕಿ...? ಮೊದಲ ಮತ್ತು ನೇರ ಕಾರಣವೆಂದರೆ ಭಾ... ಯೂರೋಪ್ ಹಾಗೂ ಅಮೆರಿಕದ ದೊಡ್ಡ ಬಂಡ... ಶಾಹಿಗಳು ಲಾಭ ನಿರಂತರವಾಗಿ ಹೆಚ್ಚಾಗುತ್ತಿಲ್ಲದ ... ನಲ್ಲಿವೆ. ಅವುಗಳ ಒತ್ತಡ ಮತ್ತು ಅವುಗಳಿಗೆ ಸಂ... ನೌಕರರಿಗಿಂತ ಹೆಚ್ಚು ನಿಷ್ಠೆಯನ್ನು ತೋರುವ ಭಾ... ಆಳುವ ವರ್ಗದ ದಲ್ಲಾಳೀ ಸ್ವಭಾವ ಎದ್ದು ಕಾಣ... ಈ ಬಿಕ್ಕಟ್ಟು ಇನ್ನೂ ಹಲವು ಜನವಿರೋಧಿ ಕ್ರಮ... ಕಾರಣವಾಗಲಿದೆ. 2014ರ ಲೋಕಸಭಾ ಚುನಾ... ಒಂದು ವರ್ಷಕ್ಕೆ ಮುಂಚೆ ಇಂತಹ ಹಲವು ಯೋಜನ... ಕೈ ಹಾಕಿ ಮುಗಿಸಿಬಿಡಬೇಕೆಂದು ಕಾಂಗ್ರೆಸ್ ... ನಿರ್ಧರಿಸಿದಂತಿದೆ. ಅದರಿಂದ ಸಂಚಯವಾಗುವ ಒ... ಬಂಡವಾಳವು, ಕೆಲವು ಜನಪ್ರಿಯ ಪುಗಸಟ್ಟೆ ಕಾಯ... ಗಳನ್ನು ಜಾರಿಗೆ ತರಲೂ ದಾರಿ ಮಾಡಿಕೊಡುತ್ತದೆ. ... ಕಾರ್ಯಕ್ರಮಗಳನ್ನು ಬಜೆಟ್‌ನಲ್ಲೋ ಅಥವಾ ... ವಾಗಲೋ ಮಂಡಿಸಿ ಚುನಾವಣೆಗೆ ಸಿದ್ಧವಾಗಬೇ... ಅದು ತೀರ್ಮಾನಿಸಿದೆ.


ಹೇಗೂ ವಿರೋಧ ಪಕ್ಷಗಳ ಪ್ರ... ನೆಯು ಸಾಂಕೇತಿಕ ಮಾತ್ರ ಆಗಿರುತ್ತ... ಪಕ್ಷಗಳ ಸಾಂಕೇತಿಕ ಹೋರಾಟ ... ದೊಡ್ಡದೊಂದು ಚಳವಳಿಯ ತಯಾರಿ ... ಬೇಕಾದ ತುರ್ತು ಜನಪರ ಶಕ್ತಿಗಳ ಮು...

• ಡಾ.ವಾಸು ಎಚ್...

ಎಡ-ಬಲಪಂಥೀಯರ ವಿರೋಧದ ಸಂದರ್ಭದಲ್ಲಿ...

'ಪತ್ರಿಕೆ' ಅಚ್ಚಿಗೆ ಹೋಗುತ್ತಿರುವ ಸಂದರ್ಭದಲ್ಲಿ ಯುಪಿಎ ಸರ್ಕಾರದ ಈ ನೀತಿಗಳ ವಿರುದ್ಧ ಕರೆನೀಡಲಾದ ಭಾರತ್ ಬಂದ್ ಯಶಸ್ವಿಯಾಗಿದೆ. ದೆಹಲಿಯ ಜಂತರ್‌ಮಂತರ್‌ನಲ್ಲಿ ಸಿಪಿಎಂ ಮತ್ತು ಬಿಜೆಪಿ ನಾಯಕರು ಒಂದೇ ವೇದಿಕೆಯ ಮೇಲೆ ಮಾತಾಡಿದ್ದಾರೆ. ತೃಣಮೂಲ ಕಾಂಗ್ರೆಸ್‌ನ ನಾಯಕಿ ಮಮತಾ ಬ್ಯಾನರ್ಜಿ ಯುಪಿಎದಿಂದ ಹೊರಬರುವ ಧಮಕಿ ಹಾಕಿ ಗದ್ದಲವೆಬ್ಬಿಸಿದ್ದಾರೆ. ಆದರೆ ಇವೆಲ್ಲಾ ಪಕ್ಷಗಳು ಚಿಲ್ಲರೆ ವ್ಯಾಪಾರ ಕುರಿತು ಎಷ್ಟು ಗಂಭೀರವಾಗಿವೆ?

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವಿದ್ದಾಗಲೇ ಈ ಎಫ್‌ಡಿಐ ಬೀಜ ಮೊದಲು ಬಿದ್ದದ್ದು. ಅದು ನೇಮಿಸಿದ್ದ ಸಚಿವರುಗಳ ಸಮಿತಿ ಸಿದ್ಧಪಡಿಸಿದ್ದ ಟಿಪ್ಪಣಿಗಳೇ ಯುಪಿಎ ಸರ್ಕಾರದ ನೀತಿಗೆ ಆಧಾರವಾಗಿರುವುದು. ಇನ್ನು ಎಡಪಕ್ಷಗಳ ವಿಚಾರಕ್ಕೆ ಬಂದರೆ, ಈ ದೇಶದ ಮೊದಲ ವಾಲ್‌ಮಾರ್ಟ್ ಅಂಗಡಿ ಬಂದಿದ್ದು ಕಲ್ಕತ್ತಾದಲ್ಲಿ, ಸಿಪಿಎಂ ಸರ್ಕಾರ ಇದ್ದಾಗ. ಇನ್ನೂ ಶೇ.51 ವಿದೇಶೀ ಬಂಡವಾಳಕ್ಕೆ ಅನುಮತಿ ಇಲ್ಲದಿದ್ದಾಗ, ವಾಲ್‌ಮಾರ್ಟ್-ಭಾರ್ತಿ ಬೃಹತ್ ಮಳಿಗೆಯ ರೂಪದಲ್ಲಿ...!!



...ತ್ಮಹತ್ಯೆ ಕಡೆಗೆ ಕಾಂಗ್ರೆಸ್, ಜನರನ್ನು ಸಾವಿಗೆ ದೂಡುತ್ತಿರುವ ಯುಪಿಎ

ಕಂಡಹಾಗೆ



editorlankesh@gmail.com • ಗೌರಿ ಲಂಕೇಶ್

ಸೋನಿಯಾ ಗಾಂಧಿ ನೇತೃತ್ವದ ಕಾಂಗ್ರೆಸ್ ಪಕ್ಷ ...ಹತ್ಯೆ ಮಾಡಿಕೊಳ್ಳುವ ನಿರ್ಧಾರ ತೆಗೆದುಕೊಂಡಿರುವಂತೆ ...ಸುತ್ತಿರುವಾಗಲೇ ಮನಮೋಹನ್ ಸಿಂಗ್ ನೇತೃತ್ವದ ...ಪಿಎ ಸರ್ಕಾರ ಜನಸಾಮಾನ್ಯರನ್ನು ಸಾಮೂಹಿಕ ಸಾವಿನತ್ತ ...ದುತ್ತಿದೆ. ಇಲ್ಲವೆಂದರೆ ಕಾಂಗ್ರೆಸ್ ಪಕ್ಷವಾಗಲಿ, ಯುಪಿಎ ...ರವಾಗಲಿ ಯಾಕೆ ಇಷ್ಟು ಜನವಿರೋಧಿ ನಿರ್ಧಾರಗಳನ್ನು ...ಮುಕೊಳ್ಳುತ್ತಿದ್ದವು?

2004ರಲ್ಲಿ ಅನಿರೀಕ್ಷಿತವಾಗಿ ಮೊದಲ ಬಾರಿಗೆ ಗೆದ್ದ ...ಗ್ರೆಸ್ ನೇತೃತ್ವದ ಯುಪಿಎ ಸಾಕಷ್ಟು ಎಡವಟ್ಟುಗಳನ್ನು ...ಡಿಕೊಂಡಿತ್ತು. ಆದರೆ ಬಿಜೆಪಿಯ ಕೋಮುವಾದಿ ...ಕೆ.ಅಡ್ವಾನಿಯ ಬದಲಾಗಿ ಸೌಮ್ಯಮುಖದ ಸಿಂಗ್ ... ಎಂದು ಮತದಾರರು ಭಾವಿಸಿದ್ದರಿಂದ 2009ರಲ್ಲಿ ...ಪಿಎ ಮತ್ತೊಮ್ಮೆ ಗೆದ್ದಿತು. ಹೀಗೆ ಎರಡನೆ ಬಾರಿಗೆ ...ನಂತರ ಯುಪಿಎ ಎಲ್ಲ ರೀತಿಯಲ್ಲೂ ಜನಸಾಮಾನ್ಯರ ...ರೋಧಿ ಸರ್ಕಾರವಾಗಿ ಪರಿವರ್ತನೆಗೊಂಡಿದೆ.

ಮೊದಲನೆಯದಾಗಿ ಈ ಸರ್ಕಾರ ಪೆಟ್ರೋಲ್, ...ಮೆಎಣ್ಣೆ ಮತ್ತು ಡೀಸೆಲ್‌ಗಳ ಬೆಲೆಗಳನ್ನು ಇನ್ನಿಲ್ಲದಂತೆ ...ವಾರು ಬಾರಿ ಹೆಚ್ಚಿಸುವ ಮೂಲಕ ಜನಸಾಮಾನ್ಯರಿಂದ ...ವನ್ನು ಕಿತ್ತು ತಿಂದಿದೆ. ಅದೇ ಹೊತ್ತಿಗೆ ಬೃಹತ್ ...ದ್ಯಮಿಗಳಿಗೆ ಮತ್ತು ಕಂಪನಿಗಳಿಗೆ ಲಕ್ಷಾಂತರ ಕೋಟಿ ...ಪಾಯಿಗಳ ಸವಲತ್ತು ಹಾಗೂ ತೆರಿಗೆ ವಿನಾಯತಿಯನ್ನು



...ಟ್ಟು ಅವರ ಹಿತಾಸಕ್ತಿಗಳನ್ನು ರಕ್ಷಿಸಿದೆ.

ಎರಡನೆಯದಾಗಿ, ಯುಪಿಎ ಸರ್ಕಾರ ಅಮೆರಿಕದ ...ಕಂಪನಿಗಳ ಮಸಲತ್ತಿಗೆ ಶರಣಾಗಿ **Civil Liability ...Nuclear Damage Bill** (ನಾಗರಿಕ ಅಣುಶಕ್ತಿ ...ಷ್ಟದ) ಎಂಬ ಮಸೂದೆಗೆ ಎಡಪಕ್ಷಗಳ ತೀವ್ರ ವಿರೋಧದ ...ನಡುವೆಯೂ ಸಹಿ ಹಾಕಿತು. ಈ ಮಸೂದೆ ಅದೆಷ್ಟು ...ಷ್ಟದ್ದೆಂದರೆ ನಮ್ಮ ಶಿವಸುಂದರ್ ಅವರು ತಮ್ಮ 'ಚಾರ್ವಾಕ' ...ಅಂಕಣದಲ್ಲಿ ಇದರ ಬಗ್ಗೆ ಹೀಗೆ ಬರೆದಿದ್ದರು: "ಮುಠಾಳರು ...ತಿಥ್ಯ ನಡೆಸುವಾಗ ಕುತಂತ್ರಿ ಅತಿಥಿಗಳು ಮನೆ ಹೊಕ್ಕರೆ ...ಉಂಡೂ ಹೋಗುತ್ತಾರೆ, ಹೋಗುವಾಗ ಸಿಕ್ಕಿದ್ದನ್ನೆಲ್ಲ ...ಕೊಂಡೂ ಹೋಗುತ್ತಾರೆ. ಹಾಗೆಯೇ ಭಾರತ ಈಗ ...ಅಮೆರಿಕಕ್ಕೆ ಕೊಡುತ್ತಿರುವ ಆತಿಥ್ಯದಲ್ಲಿ ಅಮೆರಿಕ ಉಂಡೂ ...ಹೋಗುತ್ತಿದೆ, ಭಾರತದ ತಿಜೋರಿಯನ್ನು ಕೊಂಡೂ ...ಹೋಗುತ್ತಿದೆ. ಅದರ ಜೊತೆಗೆ ಭಾರತೀಯರನ್ನು ಕೊಂಡೂ ಹೋಗುತ್ತಿದೆ. ಅಮೆರಿಕ ಇಷ್ಟೆಲ್ಲ ಮಾಡಿದರೂ ಅವರ ವಿರುದ್ಧ ಸಣ್ಣ ಕೇಸನ್ನೂ ದಾಖಲಿಸಬಾರದೆಂದು **Civil Liability of Nuclear Damage Bill** ಎಂಬ ಹೊಸ ಕಾಯಿದೆಯನ್ನು ಸರ್ಕಾರ ಜಾರಿಗೆ ತಂದಿದೆ."

ಶಿವಸುಂದರ್ ಅವರ ಮಾತು ಉತ್ಪ್ರೇಕ್ಷೆ ಅಲ್ಲ, ಏಕೆಂದರೆ ಈ ಕಾಯಿದೆಯ ಪ್ರಕಾರ ಅಮೆರಿಕದ ಅಣುವಿದ್ಯುತ್ ಕಂಪನಿಗಳಿಗೆ ಭಾರತ ಸರ್ಕಾರ 150 ಕ್ಕೂ ಹೆಚ್ಚು ಸ್ಥಾವರಗಳನ್ನು ಸ್ಥಾಪಿಸಲು ಅನುಮತಿ ನೀಡುತ್ತದಲ್ಲದೆ ಅದಕ್ಕೆಂದು ಆ ಕಂಪನಿಗಳಿಗೆ ಭಾರತದ ತೆರಿಗೆದಾರರ 1,50,000 ಕೋಟಿ ರೂಪಾಯಿಗಳನ್ನು ಕೊಡಬೇಕು. ಅದಕ್ಕಿಂತ ಆಘಾತಕಾರಿ ಅಂಶ ಯಾವುದೆಂದರೆ ಆ ಕಂಪನಿಗಳು ಸ್ಥಾಪಿಸುವ ಸ್ಥಾವರದಲ್ಲಿ ಆಕಸ್ಮಾತ್ ಅನಾಹುತ ಸಂಭವಿಸಿ ಭಾರತೀಯರಿಗೆ ಪ್ರಾಣಹಾನಿ, ಆಸ್ತಿಹಾನಿ ಆದರೂ ಅಂತಹ ಕಂಪನಿ ವಿರುದ್ಧ ಕ್ರಿಮಿನಲ್ ದೂರನ್ನು ದಾಖಲಿಸುವಂತಿಲ್ಲ; ಹೆಚ್ಚೆಂದರೆ ಸಿವಿಲ್ ಮೊಕದ್ದಮೆಯನ್ನು ದಾಖಲಿಸಬಹುದು. ಆಕಸ್ಮಾತ್ ಆ ಸಿವಿಲ್ ದೂರಿನ ವಿಚಾರಣೆಯಲ್ಲಿ ಸ್ಥಾವರವೇ ಅನಾಹುತಕ್ಕೆ ಕಾರಣ ಎಂದು ಸಾಬೀತಾದರೆ ಸ್ಥಾವರ ಸ್ಥಾಪಿಸಿದ ಕಂಪೆನಿಯು ಕೇವಲ 300 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಪರಿಹಾರಧನವನ್ನು ನೀಡುವಂತಿಲ್ಲ, ಬದಲಾಗಿ ಭಾರತ ಸರ್ಕಾರವೇ 2,300 ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ನೀಡಬೇಕಾಗುತ್ತದೆ. ಇದರ ಅರ್ಥ: ಅಣುಸ್ಥಾವರದಲ್ಲಿ ಅನಾಹುತ ಸಂಭವಿಸಿ ಭಾರತೀಯರು ಸತ್ತರೆ ಅವರ ಶವದ ಮೇಲಿರುವ ಅಂಗಿಯ ಜೇಬಿನಿಂದಲೇ ಹಣ ತೆಗೆದು ಅವರ ಕುಟುಂಬಕ್ಕೆ ಸರ್ಕಾರ ಪರಿಹಾರವಾಗಿ ನೀಡುತ್ತದೆ.

ನಮ್ಮ ಜನ ಸತ್ತರೂ ಪರವಾಗಿಲ್ಲ, ಇಲ್ಲಿ ಹತ್ತಾರು ಅಣುಸ್ಥಾವರಗಳನ್ನು ಸ್ಥಾಪಿಸುವ ಮೂಲಕ ಅಮೆರಿಕದ ಮತ್ತು ಇತರೆ ದೇಶಗಳ ಅಣುವಿದ್ಯುತ್ ಕಂಪನಿಗಳನ್ನು ಉದ್ಧಾರ ಮಾಡಲು ಹೊರಟಿರುವ ಯುಪಿಎ ಸರ್ಕಾರದ ಅವಮಾನವೀಯ ಧೋರಣೆಯನ್ನು ಜನ ಅರ್ಥಮಾಡಿಕೊಂಡಿದ್ದಾರೆ. ಆದ್ದರಿಂದಲೇ ಕಳೆದ ಹಲವು ವರ್ಷಗಳಿಂದ ಜೈತಾಪುರ ಮತ್ತು ಕೂಡಂಕುಲಂ ಸೇರಿದಂತೆ ವಿವಿಧ ಕಡೆ ಜನರು ಇದನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ.

ಯುಪಿಎ ಸರ್ಕಾರದ ಮೂರನೆ ಜನವಿರೋಧಿ ನೀತಿ ಚಿಲ್ಲರೆ ಮಾರಾಟ ಕ್ಷೇತ್ರದಲ್ಲಿ ವಿದೇಶಿ ಕಂಪನಿಗಳಿಗೆ ನೇರ ಬಂಡವಾಳ ಹೂಡಲು ಅವಕಾಶ ಮಾಡಿಕೊಟ್ಟಿರುವುದು. ನಮ್ಮ ದೇಶದಲ್ಲಿ ಚಿಲ್ಲರೆ ವ್ಯಾಪಾರವನ್ನು ಆಧರಿಸಿಯೇ ಲಕ್ಷಾಂತರ ಜನರು ತನ್ನ ಜೀವನವನ್ನು ನಡೆಸುತ್ತಿದ್ದಾರೆ. ಇಂತಹ ಕ್ಷೇತ್ರಕ್ಕೆ ವಿದೇಶಿ ಕಂಪನಿಗಳು ಕಾಲಿಟ್ಟರೆ ಅವರೆಲ್ಲ ಬೀದಿ ಪಾಲಾಗುತ್ತಾರೆ. ಇದು ಆರ್ಥಿಕ ತಜ್ಞರೆನಿಸಿಕೊಂಡಿರುವ ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಮತ್ತು ಆರ್ಥಿಕ ಮಂತ್ರಿ ಚಿದಂಬರಂ ಅವರಿಗೆ ಗೊತ್ತಿಲ್ಲ ಎಂದೇನಲ್ಲ. ಆದರೂ ಅವರಿಗೆ ಭಾರತೀಯರ ಹಿತಾಸಕ್ತಿಯನ್ನು ಕಾಪಾಡುವುದಕ್ಕಿಂತ ವಿದೇಶಿ ಕಂಪನಿಗಳ ಲಾಭಾಂಶ ಹೆಚ್ಚುವುದು ಮುಖ್ಯವಾದಂತೆ ಕಾಣಿಸುತ್ತಿದೆ.

ಯುಪಿಎ ಸರ್ಕಾರದ ಇಂತಹ ಜನದ್ರೋಹಿ ನೀತಿ ಸ್ಪಷ್ಟವಾಗಿ ವ್ಯಕ್ತವಾಗಿರುವುದು ತಮಿಳುನಾಡಿನಲ್ಲಿ ತಲೆ ಎತ್ತಿರುವ ಕೂಡಂಕುಲಂ ಅಣುಸ್ಥಾವರವನ್ನು ಕುರಿತಂತೆ. ಅಂದಹಾಗೆ ಈ ಸ್ಥಾವರ ವಿರುದ್ಧದ ಹೋರಾಟ ಇತ್ತೀಚೆಗೆ ಪ್ರಾರಂಭವಾಗಿದೆ ಎಂಬುದು ನಮ್ಮ ಬಹಳಷ್ಟು ಜನರ ಅನಿಸಿದೆ. ಆದರೆ ವಾಸ್ತವವಾಗಿ ಭಾರತ ಮತ್ತು ರಷ್ಯಾ ದೇಶಗಳು ಈ ಸ್ಥಾವರವನ್ನು ಸ್ಥಾಪಿಸುವ ಬಗ್ಗೆ 1989ರಲ್ಲಿ ಒಪ್ಪಿಗೆ ಮಾಡಿಕೊಂಡಾಗಲೇ ಅಲ್ಲಿನ ಜನ ಪ್ರತಿಭಟನೆಯನ್ನು ಪ್ರಾರಂಭಿಸಿದ್ದರು ಮತ್ತು ಆ ಪ್ರತಿಭಟನೆಯ ಮೇಲೆ ಪೊಲೀಸರು ಗುಂಡು ಹಾರಿಸಿದಾಗ ಇಗ್ನೇಶಿಯಲ್ ಎಂಬ 19 ವರ್ಷದ ಯುವಕ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದ. ಅವತ್ತಿನಿಂದ ಇವತ್ತಿನತನಕ ಕೂಡಂಕುಲಂ ಸುತ್ತಮುತ್ತಲಿನ ಸಾವಿರಾರು ಜನ ಈ ಸ್ಥಾವರದ ವಿರುದ್ಧ ದನಿ ಎತ್ತುತ್ತಲೇ ಬಂದಿದ್ದಾರೆ.

ವಿಚಿತ್ರ ನೋಡಿ, ಕಳೆದ ವಾರ ಹಲವಾರು ದೇಶಗಳು ಅಣುವಿದ್ಯುತ್ ಅನ್ನು ಇನ್ನು ಮುಂದೆ ಅವಲಂಬಿಸ ಬಾರದೆಂದು ನಿರ್ಧಾರ ತೆಗೆದುಕೊಂಡವು. ಅವುಗಳಲ್ಲಿ ಪ್ರಮುಖವಾದದ್ದು ಜಪಾನ್. ಆ ದೇಶದ ವಿದ್ಯುತ್ ಅಗತ್ಯದ ಶೇ. 30 ಭಾಗವನ್ನು ಪೂರೈಸುವುದು ಅಲ್ಲಿರುವ ಹಲವಾರು ಅಣುಸ್ಥಾವರಗಳು. ಆದರೆ ಹೋದ ವರ್ಷ ಸಂಭವಿಸಿದ ಭೂಕಂಪ ಮತ್ತು ಸುನಾಮಿಯಿಂದಾಗಿ ಫುಕುಶಿಮಾ ಎಂಬ ಅಣು ಸ್ಥಾವರದಲ್ಲಿ ಆದ ಅಪಘಾತದ ಬಗ್ಗೆ ಎಲ್ಲರಿಗೂ ಗೊತ್ತಿದೆ. ಆ ಅಪಘಾತದಿಂದ ಜಪಾನ್ ಇನ್ನೂ ಚೇತರಿಸಿಕೊಂಡಿಲ್ಲ, ಇವತ್ತಿಗೂ ಆ ಸ್ಥಾವರದಿಂದ ಸುಮಾರು 800 ಕಿಲೋಮೀಟರ್ ದೂರವಿರುವ ಭೂಮಿ, ನೀರು, ವಾಯು ಎಲ್ಲವೂ ವಿಷಮಯವಾಗಿದ್ದು ಒಂದೂವರೆ ಲಕ್ಷಕ್ಕಿಂತ ಹೆಚ್ಚು ಜನ ನಿರಾಶ್ರಿತರಾಗಿದ್ದಾರೆ, ಮಾತ್ರವಲ್ಲ ಜಪಾನಿನ ಜನ ಅಣುವಿದ್ಯುತ್ ವಿರುದ್ಧ ತಿರುಗಿ ಬಿದ್ದಿದ್ದಾರೆ. ಇದೆಲ್ಲದರ ಪರಿಣಾಮವಾಗಿ ಹೋದ ವಾರ ಜಪಾನ್ ಸರ್ಕಾರ 2030ರೊಳಗೆ ಎಲ್ಲಾ ಅಣುಸ್ಥಾವರಗಳನ್ನು ಮುಚ್ಚಲಾಗು ವುದೆಂದೂ, ವಿದ್ಯುತ್ ಉತ್ಪಾದಿಸಲು 33,000 ಹೊಸ ಅಸಂಪ್ರದಾಯಿಕ ವಿದ್ಯುತ್ ಉತ್ಪನ್ನ ಘಟಕಗಳನ್ನು ಸ್ಥಾಪಿಸಲಾಗುವುದೆಂದು ನಿರ್ಧಾರ ತೆಗೆದುಕೊಂಡಿದೆ.

ಹಾಗೆಯೇ ಕಳೆದ ವಾರ ಬೆಲ್ಜಿಯಂ ದೇಶ ಕೂಡ ತನ್ನ ಎರಡು ಅಣುಸ್ಥಾವರಗಳನ್ನು ಮುಚ್ಚಿತು. ಸ್ಪೇನ್ ದೇಶ ಮುಂದಿನ ವರ್ಷ ಒಂದು ಅಣು ಸ್ಥಾವರವನ್ನು ಮುಚ್ಚುವುದಾಗಿ ಘೋಷಿಸಿದೆ. ಫ್ರಾನ್ಸ್ ದೇಶದ ಅಧ್ಯಕ್ಷ ಹೊಲ್ಲಾಂಡೆ ಅವರೂ ಅತಿ ಹಳೆಯದಾದ ಅಣುಸ್ಥಾವರವನ್ನು ಸದ್ಯದಲ್ಲೇ ಮುಚ್ಚಲಾಗುವುದೆಂದೂ, 2015ರೊಳಗೆ ಅಣು ವಿದ್ಯುತ್ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲಾಗು ವುದೆಂದೂ ಹೇಳಿದ್ದಾರೆ. ಕೆನಡಾ ಮತ್ತು ಅಮೆರಿಕ ಕೂಡ ತಮ್ಮಲ್ಲಿರುವ ಎರಡು ಅಣುಸ್ಥಾವರಗಳನ್ನು ಸ್ಥಗಿತಗೊಳಿಸು ವುದಾಗಿ ಪ್ರಕಟಿಸಿವೆ.

ನೆನಪಿಡಿ, ಇವೆಲ್ಲಾ ಭಾರತಕ್ಕಿಂತ ಹೆಚ್ಚಾಗಿ ಅಣುವಿದ್ಯುತ್ ಅನ್ನು ಅವಲಂಬಿಸಿರುವ ದೇಶಗಳು. ಅವುಗಳಿಗೆ ಹೋಲಿಸಿ ದರೆ ಭಾರತದ ವಿದ್ಯುತ್ ಪೂರೈಕೆಯಲ್ಲಿ ಅಣು ಸ್ಥಾವರಗಳ ಕೊಡುಗೆಯ ಪ್ರಮಾಣ ಕೇವಲ ಶೇ 3 ಅಷ್ಟೇ ಅಲ್ಲ, ಜಪಾನಿನಿಂದ ಅಮೆರಿಕದ ತನಕ ವಿವಿಧ ದೇಶಗಳು ಅಸಂಪ್ರದಾಯಿಕ ವಿದ್ಯುತ್ ಉತ್ಪಾದನೆಯತ್ತ ಚಿಂತಿಸುತ್ತಿರು ವಾಗಲೇ ನಮ್ಮ ದೇಶದ ಸರ್ಕಾರ ಕೂಡಂಕುಲಂ ವಿರುದ್ಧ ಪ್ರತಿಭಟಿಸುತ್ತಿರುವ ಜನರನ್ನು ದಮನ ಮಾಡಿಯಾದರೂ ಅದನ್ನು ಪ್ರಾರಂಭಿಸಲಾಗುತ್ತದೆ ಎಂದು ಹಟ ಹಿಡಿದಿದೆ.

ಹಾಗೆ ಹಟ ಹಿಡಿದಿರುವ ಸರ್ಕಾರ ಮೊನ್ನೆ ಸಮುದ್ರದಲ್ಲಿ ಜಲ ಸತ್ಯಾಗ್ರಹದಲ್ಲಿ ತೊಡಗಿದ್ದ ಜನರ ಮೇಲೆ ಹೆಲಿಕಾಪ್ಟರ್‌ಗಳನ್ನು ಹತ್ತಿರದಿಂದ ಹಾರಿಸಿತು. ಆಗ ಆಯ ತಪ್ಪಿ ಸಹಾಯಂ ಎಂಬ ಮೀನುಗಾರ ತನ್ನ ಜೀವವನ್ನೇ ಕಳೆದುಕೊಂಡರು. ಇಷ್ಟಾದ ಮೇಲೂ ಸರ್ಕಾರ ಸುಮ್ಮನಾಗಿಲ್ಲ, ಮಹಿಳೆಯರು, ಮುದುಕರು, ಮಕ್ಕಳು ಎಂದೆಲ್ಲ ನೋಡದೆ ಸಾವಿರಾರು ಜನರ ವಿರುದ್ಧ ಖೊಟ್ಟಿ ಕೇಸುಗಳನ್ನು ದಾಖಲಿಸುತ್ತಿದೆ. ಕೆಲ ದಿನಗಳ ಹಿಂದೆ 15-16 ವರ್ಷ ವಯಸ್ಸಿನ ನಾಲ್ಕಾರು ಯುವಕರ ವಿರುದ್ಧ 'ದೇಶದ್ರೋಹ'ವೆಸಗಿದ ಕೇಸುಗಳನ್ನು ಜಡಿಯಲಾಗಿದೆ.

ಕೂಡಂಕುಲಂ ಸುತ್ತಮುತ್ತಲಿನ ಪ್ರದೇಶದ ಜನ ತಮ್ಮ ಬದುಕಿನ ಹಕ್ಕಿಗಾಗಿ ಹೋರಾಡುತ್ತಿರುವುದು ದೇಶದ್ರೋಹವೋ, ನಮ್ಮ ದೇಶದ ಜನ ಸತ್ತರೂ, ಪರಿಸರ ನಾಶವಾದರೂ, ಉದ್ಯೋಗಗಳು ನಾಪತ್ತೆ ಆದರೂ ಪರವಾಗಿಲ್ಲ, ವಿದೇಶಿ ಕಂಪನಿಗಳ ಉದ್ಧಾರವೇ ಮುಖ್ಯ ಎನ್ನುವ ಸರ್ಕಾರವೇ ದೇಶದ್ರೋಹಿಯೋ? •

...ವಾರ್ತಾಭಾರತಿಗೆ ಹತ್ತು ವರ್ಷ

ಕರ್ನಾಟಕದ ವಿಶಿಷ್ಟ ದಿನಪತ್ರಿಕೆ ವಾರ್ತಾ ಭಾರತಿಗೆ ಈಗ ಹತ್ತನೇ ಜನ್ಮ ...ದಿನದ ಸಂಭ್ರಮ. ಒಂದು ದಿನಪತ್ರಿಕೆ ಚಾಲೂ ಮಾಡಿ ನಡೆಸುವುದೆಂದರೆ ...ದು ನೂರಾರು ಕೋಟಿ ರೂಪಾಯಿ ಇದ್ದವರಿಗೆ ಮಾತ್ರ ಸಾಧ್ಯ ಎಂಬ ...ವಾತಾವರಣ ಹಾಗೂ ತೀವ್ರಸ್ಪರ್ಧೆ ತುಂಬಿರುವ ಈ ಕಾಲಘಟ್ಟದಲ್ಲೂ ವಾರ್ತಾ ಭಾರತಿ ತನ್ನ ನ್ಯಾಯಪರತೆ, ಜನಪರ ನಿಲುವು ಹಾಗೂ ಪ್ರೊಫೆಷನಲ್ ...ಗುಣಗಳಿಂದಲೇ ಓದುಗರ ಮನಗೆದ್ದಿದೆ. ವಾರ್ತಾ ಭಾರತಿಯಲ್ಲಿ ಪ್ರಕಟವಾಗುವ ಸುದ್ದಿ, ವಿಶ್ಲೇಷಣೆ, ಅಂಕಣಗಳು ಹಾಗೂ ಬಹಳ ಮುಖ್ಯವಾಗಿ ಅದರ ...ಸಂಪಾದಕೀಯ ಬರವಣಿಗೆಗಳು ಪತ್ರಿಕೆಯ ಮೌಲ್ಯವನ್ನು ಸದಾ ಹೆಚ್ಚಿಸುತ್ತಿವೆ.

ಒಂದು ವಿದ್ಯಮಾನವನ್ನು ಕೇವಲ ಸುದ್ದಿಯಾಗಷ್ಟೇ ಬಿಂಬಿಸದೆ ಆ ಮೂಲಕ ಓದುಗರ ಒಟ್ಟಾರೆ ವಿವೇಕ ಹಾಗೂ ವಿವೇಚನಾ ಶಕ್ತಿಯನ್ನು ಬೆಳೆಸುವ ಗುಣ ವಾರ್ತಾ ಭಾರತಿಗೆ ಇದೆ. ಕರ್ನಾಟಕದ ಇಂದಿನ ಕೆಟ್ಟ ಪರಿಸ್ಥಿತಿಯಲ್ಲಿ ಪತ್ರಿಕೆಗಳ ...ಪಾತ್ರ ಹಿರಿದು. ಇಲ್ಲಿ ಜನಸಮುದಾಯಕ್ಕೆ ಶಕ್ತಿಯಾಗಿ ಒದಗಬೇಕಾಗಿರುವುದು ಪತ್ರಿಕೆ ಮತ್ತು ಮಾಧ್ಯಮಗಳು. ಆದರೆ, ಇಂದಿನ ಇಂಡಿಯಾದ ಸಂದರ್ಭದಲ್ಲಿ ...ಎಂದರೆ ಪತ್ರಿಕೆಗಳು ಮತ್ತು ಮಾಧ್ಯಮಗಳೇ ಮನುಷ್ಯ ವಿರೋಧಿ ಛಾತುಕಶಕ್ತಿಗಳನ್ನು ...ಪೋಷಿಸುತ್ತಿರುವ ಅಪರಾಧಗಳಲ್ಲಿ ತೊಡಗಿವೆ. ಜನಸಮುದಾಯಗಳ ನಡುವೆ ...ಬಿರುಕ ಸೃಷ್ಟಿಸುತ್ತಿರುವ ಕೋಮುವಾದಿ ಸಿದ್ಧಾಂತಕ್ಕೆ ಪೂರಕವಾದ ಜನಾಭಿಪ್ರಾಯ ...ರೂಪಿಸುವ ಹೀನಕೃತ್ಯಗಳಿಗೆ ಕೈಹಾಕಿವೆ.

ದಿನಪತ್ರಿಕೆಗಳನ್ನು ಹರವಿ ನೋಡುತ್ತಿದ್ದರೆ, ಇದು ಯಾವ ಗುಂಪಿನ, ...ಯಾವ ಪಕ್ಷದ ಅಥವಾ ಮತ್ತ್ಯಾವ ಉದ್ಯಮಿ-ರಾಜಕಾರಣಿ, ಜಾತಿ-ಜನಾಂಗದ ...ಮುಖವಾಣಿಯಾಗಿದ್ದಿರಬಹುದು ಎಂಬುದನ್ನು ಗ್ರಹಿಸಿ ಓದುಗ ...ಕಳವಳಿಸುತ್ತಿದ್ದಾನೆ. ಅಷ್ಟಟ ಎನ್ನಬಹುದಾದ, ನಿಷ್ಠುರ, ನ್ಯಾಯಯುತ, ...ಸಮಾಜಮುಖಿ, ಪ್ರಾಮಾಣಿಕ ಎನ್ನಬಹುದಾದ ವಿಶ್ವಾಸಾರ್ಹ ದಿನಪತ್ರಿಕೆಗಳ ಕಾಲ ಕನ್ನಡದ ಮಟ್ಟಿಗೆ ಮುಗಿದುಹೋಗಿದೆಯೇನೋ ಎಂದೆನಿಸದಿರದು. ಹೀಗೆಂದುಕೊಂಡು ತೀರಾ ಹತಾಶರಾಗಬೇಕಾದ ಸಂದರ್ಭ ಇನ್ನೂ ಬಂದಿಲ್ಲ, ಕೆಲವಾದರೂ ಪತ್ರಿಕೆ, ನಿಯತಕಾಲಿಕೆಗಳು ಇನ್ನೂ ತಮ್ಮ ಪ್ರಗತಿಪರತೆ ಮತ್ತು ನ್ಯಾಯಪರತೆಯೊಂದಿಗೆ ಜೀವಂತಿಕೆ ಉಳಿಸಿಕೊಂಡಿರುವುದು ನಮ್ಮ ಕಾಲದ ಸೌಭಾಗ್ಯ. ಕನ್ನಡದ ಕೆಲವು ಪತ್ರಿಕೆಗಳು ಇಂದಿಗೂ ಸಮಾಜಮುಖಿಯಾದ ಆಶಯಗಳೊಂದಿಗೆ ನಮ್ಮ ನಡುವೆ ಬದುಕುಳಿದಿರುವುದು ಸಮಾಧಾನದ ಸಂಗತಿಯಾಗಿದೆ.

ಜನದನಿಯ ಸಾರಥಿ

ವಾರ್ತಾಭಾರತಿ

ಜನದನಿಯ ಸಾರಥಿ 'ವಾರ್ತಾ ಭಾರತಿ' ಇಂಥಾ ಪತ್ರಿಕೆಗಳಲ್ಲಿ ಪ್ರಮುಖವಾದುದು ಎಂದು ನಾಡಿನ ಪ್ರಜ್ಞಾವಂತ ಸಮುದಾಯ ನಂಬಿಕೊಂಡಿದೆ. ಈ ನಂಬಿಕೆಗೆ ವಾರ್ತಾ ಭಾರತಿಯ ನ್ಯಾಯಪರತೆ ಮತ್ತು ವಸ್ತುನಿಷ್ಠತೆ ಪುಷ್ಟಿಯೊದಗಿಸುತ್ತಿದೆ.


ಕ್ಷಣಕ್ಷಣಕ್ಕೂ ಸುದ್ದಿ ಬಿತ್ತರಿಸುವ ಮತ್ತು ಬಿತ್ತರಿಸುವ ಸಲುವಾಗಿಯೇ ಕ್ಷುಲ್ಲಕ ಸಂಗತಿಗಳನ್ನು ಸುದ್ದಿ ಎಂಬಂತೆ ಬಿಂಬಿಸುತ್ತಿರುವ 24X7 ಚಾನೆಲ್‌ಗಳ ವಿಶ್ವಾಸಾರ್ಹತೆಯ ಕುರಿತು ಯಾವ ಮಾನದಂಡದೊಂದಿಗೆ ಮಾತನಾಡಲು ಸಾಧ್ಯ? ಇದೇ ಹಾದಿಯಲ್ಲಿ ಬಹಳಷ್ಟು ಪತ್ರಿಕೆಗಳೂ ನಡೆಯುತ್ತಿರುವುದು ಪತ್ರಿಕಾಲೋಕಕ್ಕೆ ಒದಗಿರುವ ಕೇಡುಗಾಲವೇ ಸರಿ.

ಈ ಎಲ್ಲಾ ಹಿನ್ನಡೆಗಳ ನಡುವೆಯೂ ಮುನ್ನೆಲೆಗೆ ಬಂದು ಜನದನಿಗೆ ಸಾರಥಿಯಾಗುವುದು ಸಲೀಸಾದ ವಿಷಯವಲ್ಲ, ಮತ್ತು ತಾನೇ ಒಂದು ವಿಶಿಷ್ಟ ದನಿಯಾಗಿ ರೂಪುಗೊಳ್ಳುವುದು ಖಂಡಿತಾ ಸುಲಭದ್ದಲ್ಲ. ವಾರ್ತಾ ಭಾರತಿ ದನಿಯಡಗಿದ ಜನರ ದನಿಯಾಗಿ ರೂಪುಗೊಂಡಿದೆ. ಕಿನಾರೆಯ ಮೆತ್ತನೆ ಮರಳಿನ ಮೇಲೆ ನಿಂತು ಅಲೆಗಳ ಅಬ್ಬರವನ್ನು ದಿಟ್ಟಿಸುತ್ತಾ ರಮ್ಯವಾಗಿ ಕಲ್ಪಿಸಿಕೊಳ್ಳುವುದು ಬೇರೆ ಮಾತಾದರೆ, ಆ ಅಲೆಗಳಿಗೆ ಎದೆಯೊಡ್ಡಿಕೊಂಡು ಕಡಲ ನಡುವಲ್ಲಿ ಈಸು ಬೀಳುವ ಎದೆಗಾರಿಕೆಯೇ ಬೇರೆ. ಅಂಥ ಎದೆಗಾರಿಕೆ ವಾರ್ತಾ ಭಾರತಿಯದ್ದು. ಹಾಗಾಗೇ ಅದರ ಪ್ರಕಟಣೆ ವರದಿಗಾರಿಕೆಗಳಲ್ಲಿ ಖಚಿತತೆ, ನಿಷ್ಠುರತೆ ಮತ್ತು ನ್ಯಾಯಪರತೆ ಎದ್ದು ಕಾಣುವುದು.


ಅರಬೀ ಕಡಲಿನ ಕಿನಾರೆ ಮಂಗಳೂರು ಹಾಗೂ ಬೆಂಗಳೂರಿನಿಂದ ಪ್ರಕಟಗೊಳ್ಳುತ್ತಿರುವ ವಾರ್ತಾ ಭಾರತಿಗೆ ಈಗ ಹತ್ತು ವರ್ಷಗಳು ತುಂಬಿರುವ ಸಂಭ್ರಮ. ವಾರ್ತಾ ಭಾರತಿ ಪ್ರಸಾರ ಆರಂಭಿಸಿ ಹತ್ತು ವರ್ಷಗಳು ಕಳೆದಿವೆ ಎಂದಾಗ "ಅರೆ, ಹೌದಾ!" ಎಂದವರೇ ಹೆಚ್ಚು. ವಾರ್ತಾಭಾರತಿ ಮೆಚ್ಚಿನ ಓದುಗವಲಯವನ್ನು ತಲುಪಬೇಕಿದೆ.

ಕನ್ನಡದ ಪ್ರಗತಿಪರರು ಗುಂಪುಗೂಡಿದಾಗ ಬಹಳಷ್ಟು ಸಲ 'ಜನವಾಹಿನಿ'ಯ ಕುರಿತಂತೆ ನೆನಪುಗಳನ್ನು ಮೆಲುಕು ಹಾಕುತ್ತಿರುತ್ತಾರೆ. 'ಮುಂಗಾರು'ವಿನಲ್ಲಿ ಪ್ರಕಟಗೊಳ್ಳುತ್ತಿದ್ದ ಸೂಜಿಮೊನೆಯಂಥ ಸಂಪಾದಕೀಯಗಳ ಕುರಿತಂತೆ ಆಗಾಗ ನಮ್ಮ ಚಿಂತಕ-ಬುದ್ಧಿಜೀವಿಗಳು ಉದಾಹರಿಸುತ್ತಿರುತ್ತಾರೆ. ಈಗ ಇವೆರಡೂ ಪ್ರಕಟಗೊಳ್ಳುತ್ತಿಲ್ಲವಾದರೂ ತಮ್ಮ ಛಾಪನ್ನು ಓದುಗರ ನೆನಪಲ್ಲಿ ಈಗಲೂ ಉಳಿಸಿವೆ. 'ವಾರ್ತಾ ಭಾರತಿ'ಯ ಒಂದು ದಶಕದ ಈ ಯಶೋಯಾನ ಓದುಗವಲಯದ ಮೆಚ್ಚುಗೆ-ಮನ್ನಣೆಗಳಿಂದ ಸಾರ್ಥಕವಾಗಿ ಮುಂದುವರೆಯುತ್ತಿದೆ. ಇದು ಹೀಗೆ ನಿರಂತರವಾಗಿರಲಿ ಎಂದು ಆಶಿಸುತ್ತಾ ವಾರ್ತಾ ಭಾರತಿಗೆ ಪತ್ರಿಕೆಯ ಶುಭ ಹಾರೈಕೆಗಳು. . . . . .


• ಲಂಕೇಶ್ ಬಳಗ


ದೇಶಪಾಂಡೆ

ಟಿಕೆಟ್‌ಗಾಗಿ ಡಾನ್ ದೇಶಪಾಂಡೆ ಡಾಕೂ ಅಸ್ನೋಟಿಕರ್ ಕಿತ್ತಾಟ


ಆನಂದ್ ಅಸ್ನೋಟಿಕರ್

ಸಮುದ್ರ ತೀರದಲ್ಲಿರುವ ಕಾರವಾರ-ಅಂಕೋಲಾ ಅಸೆಂಬ್ಲಿ ಕ್ಷೇತ್ರದ ರಾಜಕಾರಣದ ಕಡಲಲ್ಲಿ "ತುಫಾನ್" ಎದ್ದಿದೆ! ಇನ್ನೇನು ವಿಧಾನಸಭಾ ಇಲೆಕ್ಷನ್ ಬಂದೇಬಿಟ್ಟಿತೆಂಬ ಗಡಿಬಿಡಿಯಲ್ಲಿ ತರಹೇವಾರಿ ಛದ್ಮವೇಷ ತೊಡುತ್ತಿದ್ದ ಅಷ್ಟೂ ಪಕ್ಷದ ಪುಢಾರಿಗಳನ್ನು ಈ ಬಿರುಗಾಳಿ ದೋಣಿಯಂತೆ ಹೊಯ್ದಾಡಿಸುತ್ತಿದೆ. ಬಿಜೆಪಿ-ಕಾಂಗ್ರೆಸ್ ಮತ್ತು ಜೆಡಿಎಸ್‌ನ ಎಮ್ಮೆಲ್ಲೆಗಿರಿ ಉಮೇದುವಾರರಿಗಂತೂ ತಾವಿರುವ ಪಾರ್ಟಿಯಲ್ಲಿ ಟಿಕೆಟ್ ಸಿಗುತ್ತದೆಂಬ ನಂಬಿಕೆಯೇ ಇಲ್ಲ, ಹಾಗಾಗಿ ಎಲ್ಲಿ ಅಭ್ಯರ್ಥಿಯಾಗುವ ಅವಕಾಶ ಇದೆಯೋ ಅಲ್ಲಿಗೆ ಹಾರುವ ಸ್ಕೆಚ್ ಹಾಕಿಕೊಂಡು ಸಮಯ ಸಾಧಿಸುತ್ತಿದ್ದಾರೆ.


ಸುನಿಲ್ ಹೆಗಡೆ

ಕಾರವಾರ ಕ್ಷೇತ್ರದ ರಾಜಕಾರಣವೆಂದರೇನೇ ಸದಾ ಗೊಂದಲದ ಗೂಡು; ಇಲ್ಲಿಯ ರಾಜಕಾರಣಿಗಳಿಗೆ ಪಕ್ಷನಿಷ್ಠೆ ಸೈದ್ಧಾಂತಿಕ ಬದ್ಧತೆ ಅಥವಾ ಜನಪರ ನೀತಿ-ನಿಲುವೇ ಇಲ್ಲ, ಗಾಳಿ ಬಂದಂತೆ ತೂರಿಕೊಳ್ಳುವುದೇ ಇವರ ಸಿದ್ಧಾಂತ. ನಿರ್ಲಜ್ಜ ಗಂಡಾ ಗುಂಡಿ ಪುಂಡ ಆನಂದ್ ಅಸ್ನೋಟಿಕರ್ ಬಿಜೆಪಿಯ "ಸಿಜರಿನ್ ಸಚಿವ"ನಾದಾಗ ಕುಲಗೆಟ್ಟದ ಕಾರವಾರದ ರಾಜಕಾರಣ ಇವತ್ತಿಗೂ ಸರಿಯಾಗಿಲ್ಲ, ಕಪ್ಪು ಕಾಸಿನ ಸೊಕ್ಕಿನಿಂದ ಎಂಥ ಪಾತಕ ಮಾಡಲಿಕ್ಕೂ ಹೇಸದ ಅಸ್ನೋಟಿಕರ್‌ನ ಹಾರಾಟ-ಪಕ್ಷಾಂತರಕ್ಕೆ, ತಕ್ಕಂತೆ ಸ್ಥಳೀಯ ರಾಜಕಾರಣ ಸ್ಥಿತ್ಯಂತರಗೊಳ್ಳುತ್ತಿರುವುದು ಕಾರವಾರ- ಅಂಕೋಲೆಯ ದೊಡ್ಡ ದುರಂತ!!

ಭ್ರಷ್ಟ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದರೂ ಒಂಥರಾ ಅಂತರ್‌ಪಿಶಾಚಿಯಂತಾಗಿರುವ ಅಸ್ನೋಟಿಕರ್ ಚುನಾವಣೆ ಹತ್ತಿರ ಬಂದಾಗ ಆ ಪಕ್ಷಕ್ಕೆ ಗುಡ್‌ಬೈ ಹೇಳೋ ದಂತೂ ಗ್ಯಾರಂಟಿಯಾಗಿ ಹೋಗಿದೆ! ಆತನ ಕಣ್ಣಿರುವುದು ಪ್ರಬಲ ಕಾಂಗ್ರೆಸ್ ಮೇಲೆ. ಆದರೆ ಕಾಂಗ್ರೆಸ್ ಶಾಸಕನಾಗಿದ್ದ ಆತ ಪಕ್ಷಕ್ಕೆ ದ್ರೋಹ ಬಗೆದು ಆಪರೇಷನ್ ಕ-ಮಲ ಮಾಡಿಸಿಕೊಂಡಿದ್ದರಿಂದ ಸ್ಥಳೀಯ ಕಾಂಗ್ರೆಸ್‌ನಲ್ಲಿ ಆತನಿಗೆ ದೊಡ್ಡಮಟ್ಟದ ವಿರೋಧ ಎದುರಾ ಗುತ್ತಿದೆ. ಮ್ಯಾಗಿ ಲೋಕಸಭೆಗೆ ಕೆನರಾ ದಿಂದ ಚುನಾವಣೆಗೆ ನಿಂತಾಗ ಆಕೆಯನ್ನು ಸೋಲಿಸಲು ಶ್ರಮಿಸಿದ್ದಕ್ಕಾಗಿ ಇನಾಮಾಗಿ ಕಾಂಗ್ರೆಸ್ ಎಮ್ಮೆಲ್ಲೆ ಟಿಕೆಟ್ ಅಸ್ನೋಟಿಕರ್‌ಗೆ ದೇಶಪಾಂಡೆ ಶತಾಯಗತಾಯ ಹೋರಾಡಿ ಕೊಡಿಸಿದ್ದರು. ಆದರೆ ಗೆದ್ದ ನಲ್ವತ್ತೈದೇ ದಿನಕ್ಕೆ ಗುರುವಿಗೇ ತಿರುಮಂತ್ರ ಹಾಕಿ ಬಿಜೆಪಿ ಪಾಲಾಗಿದ್ದ ಅಸ್ನೋಟಿಕರ್‌ನನ್ನು ಮುಗಿಸಲು ದೇಶಪಾಂಡೆ ಈಗ ಟೊಂಕಕಟ್ಟಿ ನಿಂತಿದ್ದಾರೆ.

ಉತ್ತರ ಕನ್ನಡ ಕಾಂಗ್ರೆಸ್‌ನ "ಡಾನ್" ದೇಶಪಾಂಡೆಯನ್ನು ಎದುರು ಹಾಕಿಕೊಂಡಿರುವ ಅಸ್ನೋಟಿಕರ್‌ಗೆ ಸಹಜವಾಗೇ ಮಾರ್ಗರೆಟ್ ಆಳ್ವ ಎಂಬ ಕಾಂಗ್ರೆಸ್ ಹೈಕಮಾಂಡ್ ಪರಿಚಾರಿಕೆಯ ಕೃಪಾಶೀರ್ವಾದ ಸಿಕ್ಕಿದೆ. ಈ ಮ್ಯಾಗಿ-ಆರ್ವಿಡಿ ಹಾವು-ಮುಂಗುಸಿ. ಹಾಗಾಗಿ ದೇಶಪಾಂಡೆ ದಿಲ್ಲಿಯಲ್ಲಿ ತನಗಿರುವ ಬಲ ಬಳಸಿ ಅಸ್ನೋಟಿಕರ್‌ನ ಕಾಂಗ್ರೆಸ್ ಪ್ರವೇಶಕ್ಕೆ ಅಡ್ಡಿಯೊಡ್ಡುತ್ತಲೇ ಇದ್ದಾರೆ. ಮ್ಯಾಗಿ ಆತನನ್ನು ಕಾಂಗ್ರೆಸ್‌ಗೆ ತೂರಿಸಲು ಶತಪ್ರಯತ್ನ ನಡೆಸಿದ್ದಾರೆ. ಇದಕ್ಕೆ ಸಮಾನಾಂತರವಾಗಿ ಅಸ್ನೋಟಿಕರ್ ಕೇಂದ್ರ ಮಂತ್ರಿ ವೀರಪ್ಪ ಮೊಯ್ಲಿಯಂಥವರ ಸುಬ್ಬವ್ವಾ ಕುದುರಿಸಿಕೊಂಡಿದ್ದಾನೆ. ದೇಶಪಾಂಡೆ ಅದೆಷ್ಟೇ ಪ್ರತಿರೋಧ ಒಡ್ಡಿದರೂ ಬಿಜೆಪಿ ರೆಬೆಲ್ ಬಾಲಚಂದ್ರ ಜಾರಕಿಹೊಳಿ ಗ್ಯಾಂಗ್‌ಗೆ ಕಾಂಗ್ರೆಸ್ ಎಂಟ್ರಿ ಹೋಲ್‌ಸೇಲ್ ಆಗಿಯೇನಾದರೂ ಸಿಕ್ಕರೆ ಅಸ್ನೋಟಿಕರ್ ಕಾಂಗ್ರೆಸ್‌ನ ಕಾರವಾರದ ಕ್ಯಾಂಡಿಡೇಟಾಗೋದು ಖಾತ್ರಿ.


ಮಾರ್ಗರೆಟ್ ಆ...

ಆಕಸ್ಮಾತ್ ಕಾಂಗ್ರೆಸ್ ಸೇರ್ಪಡೆ ಸಾಧ್ಯವಾಗದಿದ್ದರೆ ಅಸ್ನೋಟಿಕರ್‌ನ ಎರಡನೇ ಆಯ್ಕೆ ಜೆಡಿಎಸ್. ಕಾಂಗ್ರೆಸ್‌ಗೆ ಹೋಗಲಿ ಅಥವಾ ಜೆಡಿಎಸ್‌ಗೇ ಸೇರಲಿ ತನಗೆ ಅನುಕೂಲ ಆಗುವಂತೆ ಕ್ಷೇತ್ರ "ಹದ"ಗೊಳಿಸಿಕೊಳ್ಳುವ ಉಳುಮೆಗೆ ಈಗ ಅಸ್ನೋಟಿಕರ್ ತೊಡಗಿದ್ದಾನೆ. ಕಾಂಗ್ರೆಸ್ ಕ್ಯಾಂಡಿಡೇಟೆಂದು ಬಿಂಬಿತವಾಗಿರುವ ಅದಿರು ಕಳ್ಳ ಸತಿ... ಸೈಲ್‌ನ ರೆಕ್ಕೆ-ಪುಕ್ಕ ಕತ್ತರಿಸುವ ಕಿತಾಪತಿ ಅಸ್ನೋಟಿ... ಆರಂಭಿಸಿದ್ದಾನೆ. ತನ್ನಪ್ಪ ದಿವಂಗತ ರೌಡಿ ಎಮ್ಮೆಲ್ಲೆ ವಸ... ಅಸ್ನೋಟಿಕರ್‌ನ ಪರಮ ವೈರಿ ಆಗಿದ್ದ ಮಾಜಿ ಮ... ಪ್ರಭಾಕರ ರಾಣೆ ಜತೆ ಈಗ ಅಸ್ನೋಟಿಕರ್ ರಾಜಿ ಮ... ಕೊಂಡಿದ್ದಾನೆ. ವಸಂತ್ ಎದುರು ಸೋತು ಕಾರವಾರ... ನೆಲೆ-ಬೆಲೆ ಕಳಕೊಂಡಿದ್ದ ರಾಣೆ ಕಾಂಗ್ರೆಸ್‌ನಿಂದ ಬಿ... ಬಿಜೆಪಿಯಿಂದ ಜೆಡಿಎಸ್, ಜೆಡಿಎಸ್‌ನಿಂದ ಮತ್ತೆ ಕಾಂಗ್ರೆ... ಪ್ರದಕ್ಷಿಣೆ ಹಾಕಿದರೂ ಬರ್ಕತ್ತಾಗಲೇ ಇಲ್ಲ, ಸ್ವಜ... (ಕೊಂಕಣ ಮರಾಠ) ಸತೀಶ್ ಸೈಲ್‌ನ ಪರ ನಿಂ... ರಾಣೆ ಕಾಂಗ್ರೆಸ್‌ನಿಂದ ಹೊರಹೋಗುವಂಥ ಮಸಲ... ಅಸ್ನೋಟಿಕರ್ ತುಂಬ ಯಶಸ್ವಿಯಾಗಿ ಮಾಡಿ ಮುಗಿಸಿದ...

ರಾಣೆ ಈಗ ಜೆಡಿಎಸ್ ಸೇರಿಕೊಂಡಿದ್ದಾರೆ. ಚಲಾ... ಕಳೆದುಕೊಂಡಿದ್ದರೂ ಈ ಎಡಬಿಡಂಗಿ ಹಪಾಹಪಿಗ... ಜೋಯಿಡಾ ಮತ್ತು ಕಾರವಾರದ ಕೊಂಕಣ ಮರಾ... ಒಂದು ಹಿಡಿಯಷ್ಟಾದರೂ ಓಟು ತಾನಿರುವ ಪ... ತರಬಲ್ಲಾತ. ಹೀಗಾಗಿ ರಾಣೆ ಪಕ್ಷಾಂತರದಿಂದ ಹಳಿಯ... ಕ್ಷೇತ್ರಕ್ಕೆ ಸೇರಿದ ಜೋಯಿಡಾದಲ್ಲಿ ದೇಶಪಾಂಡೆಗೆ ತ... ಮಾಡಿದರೆ, ಇತ್ತ ಕಾರವಾರದಲ್ಲಿ ಸೈಲ್‌ಗೆ ಖೋ... ಮಾಡೋದು ಗ್ಯಾರಂಟಿ. ಅಂದರೆ ಒಂದೇ ಕಲ್ಲಿ... ದೇಶಪಾಂಡೆ ಮತ್ತು ಸೈಲ್ ಎಂಬೆರಡು ವೈರಿಗಳ... ಅಸ್ನೋಟಿಕರ್ ಚಚ್ಚಿದಂತಾಗಿದೆ! ಈ ಏಟಿಗೆ ದೇಶಪಾ... ಮತ್ತು ಸೈಲ್ ಇಬ್ಬರೂ ಕಂಗಾಲಾಗಿರುವುದಂತೂ ... ತಾನು ಜೆಡಿಎಸ್ ಅಭ್ಯರ್ಥಿಯಾದರೆ ರಾಣೆಯಿ... ಒಂಚೂರು ಅನುಕೂಲವೆಂಬ ದೂರಾಲೋಚ... ಅಸ್ನೋಟಿಕರ್‌ದು. ಇದಕ್ಕೆ ಪ್ರತಿಫಲವಾಗಿ ರಾಣೆಗೆ ಜೆಡಿಎ... ಎಂಪಿಗಿರಿ ಟಿಕೆಟ್ ಕೊಡಿಸುವ ಆಸೆ ಅಸ್ನೋಟಿ... ಹುಟ್ಟಿಸಿದ್ದಾನೆ. ರಾಜಕೀಯ-ಸಾಮಾಜಿಕ ಮತ್ತು ಆರ್ಥಿಕ... ದಿವಾಳಿ ಆಗಿರುವ ರಾಣೆಯ ಅಂತಿಮ ಆಟ ಇದಾ... ದೆಯಂತೆ. ಗತಿಗೇಡಿ ರಾ... ಅನಾಹುತಕಾರಿ ಅಸ್ನೋಟಿಕರ್‌ನ... ಮುದ್ದಾಡುತ್ತಿರುವುದು ಕಾರವಾ... ಜೋಯಿಡಾದ ಜನರಿಗೆ ವಾಕ... ಮೂಡಿಸಿಬಿಟ್ಟಿದೆ!


ಅದಿರು ಕಳ್ಳ ಸೈಲ್‌ನನ್ನು ಸಿ... ಜೈಲಿಗೆ ದಬ್ಬಿದರೆ ಅಸ್ನೋಟಿಕ... ಕಾಂಗ್ರೆಸ್ ಯಾತ್ರೆಗೆ ಅನುಕೂಲ ಹೊ... ಚುನಾವಣೆಯೊಳಗೆ ಜಾಮೀನಿನ ಮೇ... ಹೊರಬಂದರೂ ಆತ "ಡೀಮೊರಲೈ... ಆಗಿರುತ್ತಾನೆ. ಇಂಥವನಿಗೆ ಕಾಂ... ಟಿಕೆಟ್ ಕೊಟ್ಟೀತಾ? ... ಅಸ್ನೋಟಿಕರ್‌ನ ಕಾಂಗ್ರೆಸ್ ಕ್ಯಾಂಡಿಡೇಟಾಗುವ ಪ್ರಯ... ಬಿರುಸು ಬಂದೇಬರುತ್ತದೆ. ಆದರೆ ಅಷ್ಟು ಸುಲ... ಆತನನ್ನು ಕಾಂಗ್ರೆಸ್ ಒಳಗೆ ಬಿಟ್ಟುಕೊಳ್ಳಲು ದೇಶಪಾ... ತಯಾರಿಲ್ಲ. ಜೋಯಿಡಾದಲ್ಲಿರುವ ತನ್ನ ಇಮೇ... ಪ್ರಯೋಗಿಸಿ ನಿಮ್ಮನ್ನು ಗೆಲ್ಲಿಸುತ್ತೇನೆಂದು ಅಸ್ನೋಟಿ... ದೇಶಪಾಂಡೆಗೆ ಭರವಸೆ ಕೊಟ್ಟರೂ ಆತ ಮನ... ಬದಲಿಸುವ ಸಾಧ್ಯತೆ ಕಡಿಮೆ.


ಏಕೆಂದರೆ, ಬಂದರು ಮಾಫಿಯಾದಿಂದ ಕೊಪ್ಪರಿಗೆಗ... ಕಾಸು ಮಾಡಿಕೊಂಡಿರುವ ಅಸ್ನೋಟಿಕರ್ ಅದನ್ನು ದಿಲ್ಲಿ... ಕಾಂಗ್ರೆಸ್‌ನ ಪವರ್ ಬ್ರೋಕರ್‌ಗಳಿಗೆ ಹಂಚಿ ಮಂತ್ರಿ... ಕೊಂಡುಕೊಂಡರೆ ತಾನು ಬೀದಿ ಪಾಲಾಗಬೇಕಾಗುತ್ತದೆ... ಭಯ ದೇಶಪಾಂಡೆಯದು! ದುಡ್ಡಿನ ತಾಕತ್ತಿನಿಂದ... ಬಿಜೆಪಿಯಲ್ಲಿ ರಂಗುರಂಗಿನ ಆಟ ಆಡಿದ ಅಸ್ನೋಟಿ... ಕಾಂಗ್ರೆಸ್‌ನಲ್ಲಿ ತನ್ನನ್ನು ಓವರ್‌ಟೇಕ್ ಮಾಡಬಹುದೆ... ಲೆಕ್ಕಾಚಾರ ಕರಾರುವಾಕ್ಕಾಗಿ ಈ ಹಳೆ ಹುಲಿ ಹಾಕಿ... ಹಾಗಾಗಿ ಹಳಿಯಾಳ-ಜೋಯಿಡಾದಲ್ಲಿ ದುಬ... ಗೊಂಡಿರುವ ದೇಶಪಾಂಡೆ ತಾನೇ ಏಕೆ ಕಾರವಾರದ... ಸ್ಪರ್ಧಿಸಬಾರದೆಂಬ ಯೋಚನೆಯಲ್ಲಿದ್ದಾರೆ. ಅಸ್ನೋಟಿಕ... ನುರಾ-ಬಾರಾ ಭಾನ್ಗಡಿ-ಡಿಂಗ್‌ಡಾಂಗ್‌ಗಳಿಂದ ಬೇಸತ್ತಿ... ಜನ ತನ್ನನ್ನು ಗೆಲ್ಲಿಸುತ್ತಾರೇನೋ ಎಂಬ "ಹಬ್ಬ... ದೇಶಪಾಂಡೆ ಸಾಹೇಬರದು, ಪಾಪ!!


ದೇಶಪಾಂಡೆ ಅದೆಷ್ಟೇ ಪ್ರಯತ್ನಿಸಿದರೂ ತವರು ಕ್ಷೆ... ಹಳಿಯಾಳ-ಜೋಯಿಡಾದಲ್ಲಿ ಮೊದಲಿದ್ದ ಅಖ... ಜನಬೆಂಬಲ ಪಡೆಯಲು ಸಾಧ್ಯವಾಗುತ್ತಿಲ್ಲ, ದೇಶಪಾಂಡೆ... ಗರಡಿಯಲ್ಲೇ ಇದ್ದ ಹಾಲಿ ಶಾಸಕ ಜೆಡಿಎಸ್‌ನ ಸುನಿ... ಹೆಗಡೆಗೆ ಆತನ ಕಂತ್ರಿ ಪಟ್ಟುಗಳೆಲ್ಲ ಕರಗತವಾಗಿಹೋಗಿ... ಹಾಗಾಗಿ ದೇಶಪಾಂಡೆ ಏನೇ ಗಿಮಿಕ್ ಮಾಡಿದರೂ ... ಸುನಿಲ್ ಮತ್ತವನ ಅಪ್ಪ-ದೇಶಪಾಂಡೆಯ ಮ... ಗುರು-ಮಾಜಿ ಎಮ್ಮೆಲ್ಸಿ ವಿ.ಡಿ. ಹೆಗಡೆ-ಅದಕ್ಕೆ ಪ್ರತಿತ... ಹೂಡುತ್ತಿದ್ದಾರೆ. ಕಳೆದ ಮೂರು ದಶಕದಿ... ಮಂತ್ರಿಗಿರಿ-ಶಾಸಕಗಿರಿ ಅನುಭವಿಸುತ್ತ ಪಾಳೆಗಾರಿ ಪ್ರೊಗ... ರಾಜಕಾರಣ ಮಾಡಿಕೊಂಡು ಬಂದಿದ್ದ ದೇಶಪಾಂಡೆ ಇ... ಜುಜುಬಿ ಮಸಲತ್ತು ಮಾಡಿ ಜನರನ್ನು ಮರುಳುಗೊಳಿ... ದುರಂತ ತಲುಪಿದ್ದಾರೆ. ಸಂತೆಗಳಿಗೆ ಹೋಗಿ ಮಿ... ಭಜ್ಜಿ-ಚುರುಮುರಿ ತಿನ್ನೋದು-ತರಕಾರಿ ಖರೀದಿಸೋ... ಅಪ್ಪನ ಹೆಸರಿನ ಟ್ರಸ್ಟ್‌ನಿಂದ ಪಾಠಿ-ಪಟ್ಟಿ-ಪೆನ್...

ಮೊದ್ದು ಮಧು ಪೆದ್ದಾಟ!!

ದಿವಂಗತ 'ಬಂ'ರ ಮುದ್ದಿನ ಮಗ, ಮಣ್ಣಿನ ಮೊಮ್ಮಗ ಕುಮ್ಮಿಯ ಜೆಡಿಎಸ್‌ನ ಯುವ ಘಟಕದ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪ ಉತ್ತರ ಕನ್ನಡದಲ್ಲಿ ಜೆಡಿಎಸ್ ಕಟ್ಟುತ್ತೇನೆಂದು ವೀರಾವೇಶದಿಂದ ಓಡಾಡುತ್ತಿದ್ದಾನೆ. 'ಬಂ' ಜೀವಂತ ಇರುವಾಗಲೇ ತನ್ನ ಪ್ರಭಾವವಿರುವ ರಾಜ್ಯದ ಆರೆಂಟು ಜಿಲ್ಲೆಯಲ್ಲಿ ಜೆಡಿಎಸ್‌ನ ಶಾಸಕರನ್ನು ತಯಾರಿಸಿ ಕೊಡ್ತೇನೆ, ಪಾರ್ಟಿ ವರ್ಕಿಗೆ ತನ್ನ ಮಗ ಮಧುನನ್ನೇ ಧಾರೆ ಎರೀತೇನೆ ಎಂದು 18 ಕೋಟಿ ರೂಪಾಯಿ ಕುಮ್ಮಿಯಿಂದ ಪಡೆದಿದ್ದರಂತೆ. ದೊಡ್ಡ ಸಾಲದ-ಸೂಲದಲ್ಲಿದ್ದ 'ಬಂ' ಹಣ ಪಡೆದಿದ್ದರೆಂದು ಆಗ ವದಂತಿಗಳು ಜೋರಾಗಿಯೇ ಎದ್ದಿತ್ತು. ಈ ಋಣ ತೀರಿಸಲು ಮಧು ಈಗ ಉತ್ತರ ಕನ್ನಡದಲ್ಲಾದರೂ ಕೊನೇ ಪಕ್ಷ ಜೆಡಿಎಸ್ ಬೆಳೆಸಲು ಬೆವರಿಳಿಸಬೇಕಾಗಿದೆ. ಪಾಪ!







ಈ ಮಧುನ ಅಜ್ಜನ ಮನೆ ಉತ್ತರ ಕನ್ನಡ. ಅವನಪ್ಪ 'ಬಂ'ಗೂ ಇಲ್ಲಿ ಬಲುದೊಡ್ಡ ಅಭಿಮಾನಿ ಬಳಗವಿದೆ. ಹಾಗೆಂದು ಮೊದ್ದಣಿ ಮಧುಗೆ ಸ್ಥಳೀಯ ರಾಜಕಾರಣದ ನಾಡಿಮಿಡಿತವಾಗಲಿ, ಅಪ್ಪ ಇಲ್ಲಿ ಮಾಡುತ್ತಿದ್ದ ರಾಜಕೀಯದ ಸ್ಟೈಲಾಗಲಿ ಗೊತ್ತಿಲ್ಲ, ತಾನೇ ಅಪ್ಪನ ಅಪರಾವತಾರ ಎಂದು ಭ್ರಮಿಸಿಕೊಂಡಿರುವ ಮಧು ಕಂಡ-ಕಂಡ ಪಾರ್ಟಿಯ ಪುಂಡ-ಗೂಂಡಾಗಳನ್ನೆಲ್ಲ ಜೆಡಿಎಸ್‌ಗೆ ಸೇರಿಸಿಕೊಳ್ಳಲು ತಿಪ್ಪರಲಾಗ ಹಾಕುತ್ತಿದ್ದಾನೆ. ಆತ ಮೊನ್ನೆ-ಮೊನ್ನೆ ಕಾರವಾರದ ಔಟ್‌ಡೇಟೆಡ್ ಪುಢಾರಿ ಪ್ರಭಾಕರ ರಾಣೆಯನ್ನು ಜೆಡಿಎಸ್‌ಗೆ ಆಹ್ವಾನಿಸಲು ಖುದ್ದು ಆತನ "ಸಿದ್ಧರ" ಎಂಬ ಹಳ್ಳಿಮನೆಗೇ ಬಿಜಯಂಗೈದಿದ್ದ. ರಾಣೆಯನ್ನು ಜೆಡಿಎಸ್‌ಗೆ ಸೇರಿಸುವ ಡೀಲಿನ ಫಿಕ್ಸರ್ ಮಂತ್ರಿ ಆನಂದ್ ಅಸ್ನೋಟಿಕರನಾದರೂ ಆ ಪಕ್ಷಾಂತರದ ಕ್ರೆಡಿಟ್ ತನಗೇ ಬಂದೀತೆಂದು ಈ ಪೆದ್ದು ಪೋರ ಹಪಹಪಿಸಿದ್ದ.


ರಾಣೆ ಮನೆಗೆ ಹೋಗಿದ್ದ ಮಧು "ರಾಣೆ ನನ್ನಪ್ಪನ ಶಿಷ್ಯ... ಅವರ ಒಡನಾಡಿ.... ಪ್ರೀತಿಯ ಮನುಷ್ಯ....." ಎಂದೆಲ್ಲ ಏನೇನೋ ಹಲುಬಿದ್ದ. ವಾಸ್ತವವೆಂದರೆ, ಈ ರಾಣೆ 'ಬಂ' ಸಿಎಂ ಆಗಿದ್ದಾಗಾಗಲಿ, ಆದರ ಆಚೀಚೆಯ ಕಾಲಘಟ್ಟದಲ್ಲಾಗಲಿ 'ಬಂ'ಗೆ ಬೆಂಬಲಿಸಿದವರಲ್ಲ; ಶಾಸಕನಾಗಿದ್ದಾಗ ಈ ರಾಣೆ 'ಬಂ'ರ ಕಡು ಟೀಕಾಕಾರನಾಗಿ ಆತನ ವಿರೋಧಿ ಪಾಳೆಯದಲ್ಲಿ ಮಿಂಚಿದಾತ, 'ಬಂ' ವೈರಿಗಳಾದ ದೇವರಾಯ ನಾಯ್ಕ್, ಮ್ಯಾಗಿ ಮಸಲತ್ತಿನ ದಾಳಗಳಾಗಿದ್ದಾತ. ಇಂಥ ಕೆಲಸಕ್ಕೆ ಬಾರದ ದಂಡಪಿಂಡಗಳ ಬೆನ್ನಿಗೆ ಬಿದ್ದು ಜೆಡಿಎಸ್‌ಗೆ ಸೇರಿಸಲು ಮಧು ಮಾಡುತ್ತಿರುವ ಮಸಲತ್ತು ಮಾತ್ರ ಮೋಜಾಗಿದೆ.

ಮಧು ತನ್ನ ಸೋದರ ಮಾವನಾದ-ಡಿಸಿಸಿ ಅಧ್ಯಕ್ಷ ಭೀಮಣ್ಣ ನಾಯ್ಕರ ಮೇಲೆ ದೊಡ್ಡ ಕಣ್ಣಿಟ್ಟಿದ್ದಾನೆ. ಕೌಟುಂಬಿಕ ಕಲಹದಲ್ಲಿ ಅಣ್ಣ 'ಕುಬಂ'ನನ್ನು ಹಣಿಯಲು ತಂತ್ರಗಳನ್ನೆಲ್ಲ ಕಲಿಸಿದ್ದ ಈ ಶಕುನಿ ಮಾಮ ತನ್ನನ್ನು ಬೆಂಬಲಿಸಿ ಜೆಡಿಎಸ್‌ಗೆ ಬರಬೇಕೆಂಬ ಆಸೆ ಮಧುದು. ಮೊದಮೊದಲು ಜಿಲ್ಲೆಗೆ ಬಂದಾಗೆಲ್ಲ ಮಾವನಿಗೆ ತನ್ನ ಪಕ್ಷಕ್ಕೆ ಬರುವಂತೆ ಆಹ್ವಾನಿಸುತ್ತಿದ್ದ ಮಧು. ಆದರೆ ಕಾಂಗ್ರೆಸ್ ಯಜಮಾನ ದೇಶಪಾಂಡೆ ಶಿರಸಿ ಕ್ಷೇತ್ರ ಟಿಕೆಟ್ ಕೊಡಿಸುವ ಆಸೆ ಹುಟ್ಟಿಸಿ ಭೀಮಣ್ಣನನ್ನು ಕಟ್ಟಿಹಾಕಿದ್ದಾರೆ. ಮಾವ ಬರುತ್ತಿಲ್ಲ; ಅಳಿಯ ಬಿಡುತ್ತಿಲ್ಲ, ಈಗ ಇದು ಜಗಳ-ಮೂದಲಿಕೆ ಹಂತ ತಲುಪಿ ಹಾಸ್ಯಾಸ್ಪದ ರಾಜಕಾರಣ ಆಗಿಹೋಗಿದೆ.

ಕಾಗೇರಿ ಪ್ರತಿನಿಧಿಸುತ್ತಿರುವ ಶಿರಸಿ-ಸಿದ್ದಾಪುರದಲ್ಲಿ 'ಬಂ' ಅನುಯಾಯಿಗಳು ಅಪಾರ ಇದ್ದಾರೆ. ಇಲ್ಲಿ ಕಾಂಗ್ರೆಸ್-ಬಿಜೆಪಿಗೆ ಪರ್ಯಾಯವಾಗಿ ಜೆಡಿಎಸ್ ಬೆಳೆಸಲು ಅವಕಾಶವೂ ಇತ್ತು. ಆದರೆ ರಾಜಕಾರಣದ ಸೈದ್ಧಾಂತಿಕತೆ, ಬದ್ಧತೆಗಳು ಗೊತ್ತಿಲ್ಲದ ಮಧು ಇಲ್ಲಿಗೆ ಬಂದರೆ ಉಂಡಾಡಿ ಗುಂಡಣ್ಣರ ಕಟ್ಟಿಕೊಂಡು ಓಡಾಡುತ್ತಾನೆ; ಓಸಿ-ಮಟ್ಕಾ-ಬಡ್ಡಿ ಮಾಫಿಯಾದವರೇ ಮಧುನನ್ನು ಸುತ್ತುವರಿದಿರುತ್ತಾರೆ. 'ಬಂ' ಕಾಲದ ಪಳೆಯುಳಿಕೆಗಳಾದ ಬಿ.ಆರ್. ನಾಯ್ಕ, ಹಸ್ಲಂತೆ ನಾಯ್ಕನಂಥವರು ಆತನ ಹಾದಿ ತಪ್ಪಿಸುತ್ತಿದ್ದಾರೆ. ಮಧುನ ಈ ಹುಚ್ಚಾಟ ಪುರೋಹಿತಶಾಹಿ ಬಿಜೆಪಿ ಭೂಪ ಕಾಗೇರಿ ಮಾಣಿಗೆ ಅನುಕೂಲಕರವಾಗಿ ಪರಿಣಮಿಸಿದೆ. ಮಧುನ ರಾಜಕಾರಣ ಜೆಡಿಎಸ್‌ಗೆ ಶಾಪವಾಗಿ ಪರಿಣಮಿಸಿದೆ.

ಇದಕ್ಕೆ ಸಮಾನಾಂತರವಾಗಿ ಮಧುನ "ವೈರಿ ಅಣ್ಣ" ಕುಬಂ ಕೂಡ ತಾನೇ 'ಬಂ'ರ ಉತ್ತರಾಧಿಕಾರಿ ಎಂದು ಪೋಸು ಕೊಡುತ್ತ ಉತ್ತರ ಕನ್ನಡದಲ್ಲಿ ಅಂಡಲೆಯಲಾರಂಭಿಸಿದ್ದಾನೆ. ಈತನ ಟಾರ್ಗೆಟ್-ಕೌಟುಂಬಿಕ ಕಲಹದಲ್ಲಿ ತನ್ನ ವಿರುದ್ಧ ಪಿಕಮತ್ತು ಮಾಡಿದ್ದ ಮಾವ ಭೀಮಣ್ಣನನ್ನು ಡಿಸಿಸಿ ಅಧ್ಯಕ್ಷತೆಯಿಂದ ಇಳಿಸುವುದು! ಹೀಗಾಗಿ ಆತ "ಭೀಮಣ್ಣ ಉತ್ತರ ಕನ್ನಡದಲ್ಲಿ ಕಾಂಗ್ರೆಸ್, ಶಿವಮೊಗ್ಗದಲ್ಲಿ ಜೆಡಿಎಸ್, ಹೆಂಡದ ವ್ಯಾಪಾರ-ವಹಿವಾಟಿಗೆ ಬಿಜೆಪಿ" ಎಂದು ಮೂದಲಿಸುತ್ತಿದ್ದಾನೆ. ಈ ಭೀಮಣ್ಣನಿಗೆ ಮಧು-ಕುಬಂ ಹೇಗೆ ಅಕ್ಕನ ಮಕ್ಕಳೋ ಹಾಗೇ ಮಾಜಿ ಮಂತ್ರಿ-ರೇಪಿಸ್ಟ್ ಹಾಲಪ್ಪನೂ ಇನ್ನೊಂದು ಸಹೋದರಿಯ ಮಗ. ಹಾಗಾಗಿ ಆತನೊಂದಿಗೆ ಭೀಮಣ್ಣನಿಗೆ ವ್ಯವಹಾರಿಕ ಲಿಂಕ್‌ಗಳಿವೆ.


ಒಟ್ಟಿನಲ್ಲಿ 'ಬಂ' ಮಕ್ಕಳ ಮಕ್ಕಳಾಟಿಕೆ ಉತ್ತರ ಕನ್ನಡದ ಮಟ್ಟಿಗೆ ಚಡ್ಡಿ-ಕಾವಿ ಪಡೆಯ ಹೈಗರ ಶೂದ್ರ ವಿರೋಧಿ ರಾಜಕಾರಣಕ್ಕೆ ಅನುಕೂಲ ಕಲ್ಪಿಸುತ್ತಿರುವುದು ವಿಪರ್ಯಾಸವೇ ಸರಿ!!


ಪ್ರಭಾಕರ ರಾಣೆ

ಹಂಚೋದು, ಐ ಕ್ಯಾಂಪ್ ಮಾಡೋದು, ಜೋಯಿಡಾದ ದುರ್ಗಮ ಕಣಿವೆಯಲ್ಲಿರುವ ಹಳ್ಳಿಗಳಿಗೆ ನಡೆದೇ ಹೋಗೋದು ಇವತ್ತು ದೇಶಪಾಂಡೆಗೆ ಅನಿವಾರ್ಯ ಕರ್ಮದಂತಾಗಿದೆ. ಇಲ್ಲದಿದ್ದರೆ ಎಮ್ಮೆಲ್ಲೆ ಆಗೋದೇ ಅನುಮಾನ ಎಂಬ ನಿರ್ಧಾರಕ್ಕಾತ ಬಂದಿದ್ದಾರೆ.

ಹಳಿಯಾಳದಲ್ಲಿ ಅದೆಷ್ಟೇ ದುಡ್ಡು ಚೆಲ್ಲಿದರೂ ಅಲ್ಲಿಯ ಜನ ತನ್ನನ್ನು ನಂಬೋದಿಲ್ಲ ಎಂಬುದು ಶಪಾಂಡೆ ಸಾಹೇಬರಿಗೆ ಖಾತ್ರಿಯಾಗಿದೆ. ಜತೆಗೆ ತರುಣ ಸುನಿಲ್ ಗಡೆಯ ಚಾಲಾಕಿತನದ ಎದುರು ದೇಶಪಾಂಡೆ ಪ್ರತಿ ಹಂತದಲ್ಲೂ ಾಯುಧರಾಗುತ್ತಿದ್ದಾರೆ. ದೇಶಪಾಂಡೆಗೆ ಆತನ ಬಲಗೈ ಬಂಟ ಎಮ್ಮೆಲ್ಸಿ ೋಟನೇಕರ್‌ನ ಹೊಲಸು ನಾಲಿಗೆಯೂ ಮಾರಕವಾಗಿದೆ! ಈ ಘೋಟನೇಕರ್ ಮ್ಮೆಲ್ಸಿಯಾಗಿದ್ದರೂ ಕ್ಷೇತ್ರದ ಬಹುಸಂಖ್ಯಾತ ಮರಾಠರ ಪ್ರೀತಿ-ವಿಶ್ವಾಸ ಳಿಸಲಾಗಿಲ್ಲ. ಇದು ಸುನಿಲ್‌ಗೆ ವರವಾಗಿದೆ. ಜೋಯಿಡಾದಲ್ಲಂತೂ ಶಪಾಂಡೆಗೆ ಜನಪ್ರಿಯತೆಯೇ ಇಲ್ಲ. ಅಲ್ಲಿದ್ದ ರವಿರೇಡ್ಕರ್ ಎಂಬ ಜನಬಳಕೆಯ ುಣನೂ ಈಚೆಗೆ ಕಾಂಗ್ರೆಸ್ ಬಿಟ್ಟು-ರಾಮುಲು ಪಕ್ಷ ಸೇರಿಕೊಂಡಿದ್ದಾನೆ. ರಿಗಳಾದ ರಾಣೆ-ಅಸ್ನೋಟಿಕರ್‌ಗೆ ಇರುವಷ್ಟು ಜನಬಳಕೆಯ ಕಾಲು ಪಾಲೂ ೇಶಪಾಂಡೆಗೆ ಜೋಯಿಡಾದಲ್ಲಿಲ್ಲ. ಜೋಯಿಡಾದ ವಾತಾವರಣ ಜೆಡಿಎಸ್‌ನ ಚಕ ಸುನಿಲ್ ಹೆಗಡೆಗೆ ಅಡಿಗಡಿಗೆ ಅನುಕೂಲಕರವಾಗಿ ರೂಪುಗೊಳ್ಳುತ್ತಿದೆ.

ಈ ಹಲವು ತೊಂದರೆ-ತೊಡಕುಗಳಿಂದ ಗಾಬರಿಗೊಂಡಿರುವ ದೇಶಪಾಂಡೆ ರಕ್ಷಿತ ಕ್ಷೇತ್ರಕ್ಕಾಗಿ ತಡಕಾಡುತ್ತಿದ್ದಾರೆ. ಆತನ ಕಣ್ಣು ಮೊದಲು ಕುಮಟಾ ೇತ್ರದ ಮೇಲೆ ಬಿದ್ದಿತ್ತು. ಅತೀ ಅಲ್ಪಸಂಖ್ಯಾತ ಕೊಂಕಣಿ ಬ್ರಾಹ್ಮಣ ಕುಲದ ೇಶಪಾಂಡೆಗೆ ಕುಮಟಾ-ಹೊನ್ನಾವರದ ಬಹುಸಂಖ್ಯಾತ ಹಾಲಕ್ಕಿ ಕ್ಕಲಿಗರು-ಬ್ರಾಹ್ಮಣರು ಮತ್ತು ದೀವರ ನಡುವೆ ಏಗಲಾಗದೆಂದು ಅನಿಸಿತು. ುಮಟೆಗಿಂತಲೂ ಕಾರವಾರವೇ ಸುರಕ್ಷಿತ ಎಂಬ ತೀರ್ಮಾನಕ್ಕೆ ದೇಶಪಾಂಡೆ ಸದ್ಯಕ್ಕೆ ಬಂದಿದ್ದಾರೆ. ಸೈಲನೇ ಕಾರವಾರದ ಕ್ಯಾಂಡಿಡೇಟ್ ಎಂದಾತ ಹೇಳುತ್ತ ಅಂಡಲೆಯುತ್ತಲೇ ತನಗೆಷ್ಟು ಅನುಕೂಲಕರ ಈ ಕ್ಷೇತ್ರ ಎಂದು ರಹಸ್ಯ ಸರ್ವೆ ನಡೆಸಿದ್ದಾರೆ!


ಸತೀಶ್ ಸೈಲ್

ಈ ಕ್ಷೇತ್ರದ ಬಹುಸಂಖ್ಯಾತ ಕೋಮಾರಪಂತ ಸಮಾಜದ ಉದಯ ನಾಯ್ಕನನ್ನು ಜಿಪಂ ಉಪಾಧ್ಯಕ್ಷತೆಗೆ ದೇಶಪಾಂಡೆ ಏರಿಸಿದ್ದೇ ಮುಂದೊಂದು ದಿನ ತನಗದು ಹೆಲ್ಪ್ ಆದೀತೆಂಬ ಪ್ಲಾನ್‌ನಿಂದಾಗಿತ್ತು. ಇಲ್ಲಿ ಜಾತಿ ಫ್ಯಾಕ್ಟರ್ ಅಷ್ಟಾಗಿ ಕೆಲಸ ಮಾಡದು. ಅತೀ ಸಣ್ಣ ಜಾತಿಯಾದ "ದೇವಳಿ" ಸಮುದಾಯದ ಅಸ್ನೋಟಿಕರ್ ತೋಳ್ಬಲ-ಹಣಬಲದಿಂದ ಗೆಲ್ಲುತ್ತಿರುವಾಗ ಆವನಿಗಿಂತ ಹೆಚ್ಚು ಹಣ-ವರ್ಚಸ್ಸಿನ ತಾನೇಕೆ ಒಂದು ಕೈನೋಡಬಾರದು ಎಂಬ ತೀರ್ಮಾನಕ್ಕೆ ದೇಶಪಾಂಡೆ ಬಂದಿದ್ದಾರೆ. ಹಳಿಯಾಳದಲ್ಲಿ ಸುನಿಲ್ ಹೆಗಡೆ ಎಂಬ ಹುಡುಗನನ್ನು ಸೋಲಿಸುವುದಕ್ಕಿಂತ ಕಾರವಾರದಲ್ಲಿ ಅಸ್ನೋಟಿಕರ್ ಎಂಬ ಅಧಿಕಪ್ರಸಂಗಿ ಪೋರನನ್ನು ಹಣಿದರೆ ಹಲವು ರೀತಿಯ ಪ್ರಯೋಜನ ಆಗುತ್ತದೆಂಬುದು ದೇಶಪಾಂಡೆಯ ಸ್ಟ್ರೇಟಜಿ! ಸುನಿಲ್ ಹಳಿಯಾಳದಲ್ಲಿ ಶಾಸಕನಾದರೆ ದೇಶಪಾಂಡೆಯ ಮಂತ್ರಿಗಿರಿ ಪಡೆಯುವಿಕೆಗೇನೂ ತೊಂದರೆಯಿಲ್ಲ; ಅಸ್ನೋಟಿಕರ್ ಶಾಸಕನಾದರೆ ದೇಶಪಾಂಡೆಗೆ ಗಂಡಾಂತರ ಜಾಸ್ತಿ!! ಇಂಥ ಲಾಭ-ನಷ್ಟ ತೂಗಿ-ತೂಗಿ ನೋಡಿದ ದೇಶಪಾಂಡೆಗೆ ಕಾರವಾರವೇ ಅನುಕೂಲಕರ ಕ್ಷೇತ್ರವಾಗಿ ಕಂಡಿದೆ.

ದೇಶಪಾಂಡೆ-ಸೈಲ್-ಆನಂದ್ ಅಸ್ನೋಟಿಕರ್‌ಗಳ ಕಾಂಗ್ರೆಸ್ ಟಿಕೆಟ್ ಪಡೆಯುವ ಪ್ರಯತ್ನಕ್ಕೆ ಸಮಾನಾಂತರವಾಗಿ ಬೆಂಗಳೂರು-ದಿಲ್ಲಿ ಮಟ್ಟದಲ್ಲಿ ಗೋಪಾಲಕೃಷ್ಣ ನಾಯಕ ಎಂಬ ಅನಾಮಧೇಯ ಕಾರವಾರದಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟಾಗುವ ಕಟಿಪಿಟಿ ನಡೆಸಿದ್ದಾನೆ. ಈತ ಕಲಘಟಗಿ ಶಾಸಕ (ಕಾಂಗ್ರೆಸ್) ಸಂತೋಷ್ ಲಾಡ್ ಎಂಬ ಅದಿರು ವ್ಯವಹಾರಿಯ ಪರಿಚಾರಕ. ಬೆಂಗಳೂರು ಸೇರಿ ಲಾಡ್‌ನ ಚಾಕರಿ ಮಾಡಲು ಶುರುಮಾಡಿ ಅದೆಷ್ಟೋ ವರ್ಷ ಕಳೆದಿದೆ. ಈತ ಯಾರೆಂಬುದೇ ಅಂಕೋಲಾ-ಕಾರವಾರದ ಜನರಿಗೆ ಗೊತ್ತಿಲ್ಲ. ಅಂಕೋಲೆಯ "ಆಗಸೂರು" ಎಂಬ ಹಳ್ಳಿಮೂಲದ ಗೋಪು ಲಾಡ್‌ನ ಹಣ ಹರಿಸಿಯೇ ರಾಜ್ಯ ಯೂತ್ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿದ್ದಾನೆ. ಬಾಸ್ ಲಾಡ್‌ನೇ ತನಗೆ ಕಾಂಗ್ರೆಸ್ ಟಿಕೆಟ್ ಕೊಡಿಸುತ್ತಾನೆಂದು ನಂಬಿರುವ ಈ ಹಿಂಡಪ ತರುಣ ಕಾರವಾರ-ಅಂಕೋಲೆಯಲ್ಲಿ ಆಗಾಗ ಠಳಾಯಿಸಲಾರಂಭಿಸಿದ್ದಾನೆ. ಯೂತ್ ಕಾಂಗ್ರೆಸ್ ಕೋಟಾದಲ್ಲಿ ಈ ಗೋಪು ಟಿಕೆಟ್ ತರಬಹುದೆಂಬ ಭೀತಿ ಅಸ್ನೋಟಿಕರ್-ಸೈಲ್‌ಗಷ್ಟೇ ಅಲ್ಲ ದೇಶಪಾಂಡೆಗೂ ಶುರುವಾಗಿದೆ. ಈತ ಅಭ್ಯರ್ಥಿಯಾದರೆ ಕಾಂಗ್ರೆಸ್‌ಗೆ ಸೋಲು ಕಟ್ಟಿಟ್ಟ ಬುತ್ತಿ!!


ಕಾರವಾರ-ಅಂಕೋಲಾದ ಟಿಕೆಟ್ ರಾಜಕಾರಣ ಗಮನಿಸಿದರೆ, ತಬ್ಬಲಿ ಆಗುವುದು ಮಾತ್ರ ಬಿಜೆಪಿ ಎಂಬುದು ಎದ್ದು ಕಾಣಿಸುತ್ತದೆ. ಇಲ್ಲಿ ಆಗಾಮ್ನಿಂದಲೂ ಬಿಜೆಪಿಗೆ ಬೆಲೆ-ನೆಲೆ ಎರಡೂ ಇಲ್ಲ. ಜಿಲ್ಲಾ ಬಿಜೆಪಿ ಅಧ್ಯಕ್ಷ ಪ್ರಸಾದ್ ಕಾರವಾರ್ಕರ್‌ನಂಥವರಿಗೆ ಜನರನ್ನು ಎದುರಿಸುವ ತಾಕತ್ತಿಲ್ಲ; ಅಂಕೋಲೆಯ ಅರುಣ ನಾಡಕರ್ಣಿ ಸಮರ್ಥನಾದರೂ ಆತ ಗೆಲ್ಲೋದು ಕಷ್ಟ. ಏಕೆಂದರೆ ಬಿಜೆಪಿಯೇ ಕ್ಷೇತ್ರದಲ್ಲಿ ಇಲ್ಲ.

ಒಂದಂತೂ ಖರೆ. ಕಾರವಾರದ ಕಾಂಗ್ರೆಸ್ ಟಿಕೆಟ್‌ಗಾಗಿ ನೇರಾನೇರ ಸ್ಪರ್ಧೆ ಏರ್ಪೋಟ ಇರುವುದು ಡಾನ್ ದೇಶಪಾಂಡೆ ಮತ್ತು ಡಾಕೂ ಅಸ್ನೋಟಿಕರ್ ನಡುವೆ. ಈ ಟಿಕೆಟ್ ತಗಾದೆಯಲ್ಲಿ ದೇಶಪಾಂಡೆಯ ದೈನೇಸಿತನ ಮತ್ತು ಅಸ್ನೋಟಿಕರ್‌ನ ಅಟ್ಟೆಕಾರಿತನ ಇಡೀ ಜಿಲ್ಲೆಯ ಕುತೂಹಲ ಕೆರಳಿಸಿದೆ!!

● ನಹುಷ


ತಿಪ್ಪೆಯಾಗುತ್ತಿರುವ ತಿಪ್ಪಗೊಂಡನಹಳ್ಳಿ ಜಲಾಶಯ

ಜಲ್ಲಿ ಕ್ರಷರ್ ಎಂಬ ಮಾಫಿಯಾ!


ಕ್ರಷರ್ ದಂಧೆಯಿಂದ ಅಪಾಯಕ್ಕೀಡಾಗುತ್ತಿರುವ ಜಲಾಶಯ ಮತ್ತು ಸುತ್ತಮುತ್ತಲಿನ ಪ್ರದೇಶ

ಧೂಳು ಮಗಾ ಧೂಳ್
ಇಲ್ಲಿ ಕೇಳೋರಿಲ್ಲ ಗೋಳ್
ಯಾರ್ಗೂ ಬ್ಯಾಡ ನಮ್ ಬಾಳ್

ಅಕ್ರಮ ಜಲ್ಲಿ ಕ್ರಷರ್‌ಗಳಿಂದ ಜಜ್ಜಿ ಹೋಗುತ್ತಿರುವ ತಿಪ್ಪಗೊಂಡನಹಳ್ಳಿ ಜಲಾಶಯದ ಸುತ್ತಮುತ್ತಲಿನ ಜನರ ಸಂಕಷ್ಟದ ತ್ರಿಪದಿ ಇದು. ಕಲ್ಲು ಕೀಳುವ ಖದೀಮರ ಡೈನಾಮೈಟ್ ಸ್ಫೋಟ, ಪುಡಿ ಮಾಡುವ ಕ್ರಷರ್‌ಗಳು ಎಬ್ಬಿಸುವ ಧೂಳು, ರಾತ್ರಿಪೂರ್ತಿ ಕಲ್ಲು ಕುಟ್ಟುವ ಸದ್ದು, ಸ್ಫೋಟದಿಂದಾಗಿ ಬಿರುಕುಬಿಟ್ಟ ಮನೆ, ಸಿಡಿದು ಬರುವ ಕಲ್ಲುಚೂರುಗಳಿಗೆ ಮೈಯೊಡ್ಡಿ ಪ್ರಾಣ ಬಿಡುತ್ತಿರುವ ದನಕರುಗಳು, ಕಲ್ಲಿನ ಧೂಳಿನಿಂದಾಗಿ ಫಲವತ್ತತೆಯನ್ನೇ ಕಳೆದುಕೊಂಡು ಬರಡಾದ ಭೂಮಿ......... ಹೀಗೆ ಸಂಕಷ್ಟದ ಲಿಸ್ಟು ಬೆಳೆಯುತ್ತಲೇ ಸಾಗುತ್ತದೆ.


ಮಾಫಿಯಾದ ಬೆನ್ನೆಲುಬಾಗಿರುವ ಕಾಂಗ್ರೆಸ್ ಜಿ.ಪಂ.ಸದಸ್ಯ ಹನುಮಂತಯ್ಯ

ಕಾಂಕ್ರೀಟ್ ನರಕ ಬೆಂಗಳೂರಿನ 'ಕನ್‌ಸ್ಟ್ರಕ್ಷನ್' ದಾಹವನ್ನು ನೀಗಿಸುವ ಸಲುವಾಗಿ ನಗರದ ಸುತ್ತ ಬೀಡುಬಿಟ್ಟ ಸುಮಾರು ಸಾವಿರಕ್ಕೂ ಹೆಚ್ಚು ಜಲ್ಲಿ ಕ್ರಷರ್‌ಗಳು ಪರಿಸರಕ್ಕೆ ಇನ್ನಿಲ್ಲದಂತೆ ಧಕ್ಕೆ ಮಾಡುತ್ತಿವೆ. ಅದರಲ್ಲೂ ತಿಪ್ಪಗೊಂಡನಹಳ್ಳಿ ಜಲಾಶಯದ ಸುತ್ತಲಿನ ಗ್ರಾಮಗಳಲ್ಲಿ ನಡೆಯುತ್ತಿರುವ ಅಕ್ರಮ, ಅವ್ಯಾಹತ ಜಲ್ಲಿ ಕ್ರಷಿಂಗ್ ದಂಧೆಗಳಂತೂ ಜನರ ಜೀವಕ್ಕೇ ಸಂಚಕಾರ ತಂದೊಡ್ಡುವ ಮಟ್ಟಕ್ಕೆ ವ್ಯಾಪಿಸಿ ನಿಂತಿವೆ. ಈ ವ್ಯಾಪ್ತಿಯ ಮಾದಾಪಟ್ಟಣ, ಹುಲುವೇನಹಳ್ಳಿ, ಸೂಲಿವಾರ, ಚಿಕ್ಕನಹಳ್ಳಿ ಮೊದಲಾದ ಊರುಗಳಲ್ಲಿ ಸುಮಾರು ಅರವತ್ತು ಎಕರೆಯಲ್ಲಷ್ಟೆ ಜಲ್ಲಿ ಕ್ರಷಿಂಗ್ ನಡೆಸಲು ಲೈಸೆನ್ಸ್ ಇತ್ತಾದರೂ ನೂರೈವತ್ತರಿಂದ ಇನ್ನೂರು ಎಕರೆಗಳಲ್ಲಿ ಏನಿಲ್ಲವೆಂದರೂ ಸುಮಾರು 120 ರಿಂದ 150 ಕ್ರಷರ್‌ಗಳು ಅಕ್ರಮವಾಗಿ ತಲೆಎತ್ತಿವೆ. ದಿನವೊಂದಕ್ಕೆ ನೂರಾರು ಕೋಟಿಯ ವಹಿವಾಟು ನಡೆಸುವ ಮೂಲಕ ಅಪಾರ ಲಾಭದ ನಿಕ್ಷೇಪವನ್ನೇ ಕಂಡುಕೊಂಡಿರುವ ಈ ಕ್ರಷರ್ ಮಾಲೀಕರುಗಳು ಸರ್ಕಾರದ ನೀತಿನಿಯಮಗಳನ್ನೇ ಧಿಕ್ಕರಿಸಿ ಭೂಮಿಯ ಒಡಲು ಬಗೆದು ದ್ರೋಹವೆಸಗುತ್ತಿದ್ದರೂ ಅಧಿಕಾರಿಗಳ್ಯಾರೂ ಕ್ಯಾರೇ ಎನ್ನುತ್ತಿಲ್ಲ. ಇಂತಹ ಅಕ್ರಮ ಕಲ್ಲು ಗಣಿಗಾರಿಕೆಯ ವಿರುದ್ಧ ಮುಗಿಬೀಳಬೇಕಾದ ಮಾಲಿನ್ಯ ನಿಯಂತ್ರಣ ಮಂಡಳಿಗಾಗಲಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಗಾಗಲಿ, ಜಿಲ್ಲಾಧಿಕಾರಿಗಾಗಲಿ ಇದರ ಉಸಾಬರಿಯೇ ಇದ್ದಂತಿಲ್ಲ.


ಈ ದಂಧೆಗಳಲ್ಲಿರುವ ಬಹುತೇಕರು ಒಂದಿಲ್ಲೊಂದು ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿರುವ ಲೋಕಲ್ ಪುಢಾರಿಗಳೋ, ರಿಯಲ್ ಎಸ್ಟೇಟ್ ಕ್ರಿಮಿಗಳೋ ಆಗಿದ್ದು ಕೆಲ ಭ್ರಷ್ಟ ಅಧಿಕಾರಿಗಳೊಟ್ಟಿಗೆ ಡೀಲ್ ಕುದುರಿಸಿಕೊಂಡು ಮೆರೆಯುತ್ತಿರುವುದು ಇಲ್ಲಿನ ಸಾಮಾನ್ಯ ಸನ್ನಿವೇಶ. ಜಿಲ್ಲಾ ಪಂಚಾಯತಿ, ಗ್ರಾಮಪಂಚಾಯತಿ, ಎಪಿಎಂಸಿಗಳ ಸದಸ್ಯರುಗಳೇ ಈ ಅಕ್ರಮ ಕ್ರಷರ್ ದಂಧೆಗೆ ನಿಂತಿರುವುದು ಬಲುದೊಡ್ಡ ವಿಪರ್ಯಾಸ. ಇವರಲ್ಲಿ ಪ್ರಮುಖವಾಗಿ ಜಿಲ್ಲಾ ಪಂಚಾಯತ್‌ನ ಸದಸ್ಯನಾಗಿರುವ ಕಾಂಗ್ರೆಸ್‌ನ ಹನುಮಂತಯ್ಯ, ತನ್ನ ತಮ್ಮಂದಿರಾದ ಆನಂದ್‌ಸ್ವಾಮಿ ಮತ್ತು ಸಿದ್ದರಾಜು ಮೂಲಕ ವಿನಾಯಕ ಸ್ಟೋನ್ ಕ್ರಷರ್ ಹೆಸರಿನ ಏನಿಲ್ಲವೆಂದರೂ 7-8 ಅಕ್ರಮ ಕ್ರಷರ್‌ಗಳ ಒಡೆಯನಾಗಿದ್ದಾನೆ. ಆತನ ಎಲ್ಲಾ ಕ್ರಷರ್‌ಗಳು ಅಕ್ರಮ ಮಾತ್ರವಲ್ಲ, ಅಲ್ಲಿ ನಡೆಯುವ ಕ್ರಷಿಂಗ್ ಕಾಮಗಾರಿಗಳು ಅವೈಜ್ಞಾನಿಕತೆಯಿಂದ ಕೂಡಿದ್ದು ಅಪಾರ ಪ್ರಮಾಣದ ಪರಿಸರ ಹಾನಿ ಮಾಡುತ್ತಿದ್ದರೂ ತನ್ನ ಪೊಲಿಟಿಕಲ್ ಪ್ರಭಾವದಿಂದಾಗಿ ಯಾರಿಗೂ ಕೇರ್ ಮಾಡುತ್ತಿಲ್ಲ. ಲಕ್ಷ್ಮಿ ಸ್ಟೋನ್ ಕ್ರಷರ್‌ನ ಒಡೆಯ ಕೆಂಚಪ್ಪ ಎಂಬಾತನೂ ಎಪಿಎಂಸಿ ಮತ್ತು ಗ್ರಾಮಪಂಚಾಯತಿ ಸದಸ್ಯನೆಂಬ ಗತ್ತಿನ ಪ್ರಭಾವಿ ಕುಳ. ಇನ್ನುಳಿದಂತೆ ಶ್ರೀದೇವಿ ಸ್ಟೋನ್ ಕ್ರಷರ್, ಜಯಲಕ್ಷ್ಮಿ ಸ್ಟೋನ್ ಕ್ರಷರ್, ಐಶ್ವರ್ಯ ಸ್ಟೋನ್ ಕ್ರಷರ್ಸ್-ಹೀಗೆ ಸಾಲುಗಟ್ಟಿದ ಧೂಳೆಬ್ಬಿಸುವ ಕ್ರಷರ್‌ಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿ ಆಸಾಮಿಗಳ ಕೈಯಲ್ಲಿರುವುದರಿಂದ ದಂಧೆ ಎಗ್ಗಿಲ್ಲದಂತೆ ಸಾಗುತ್ತಿದೆ.

ಆದೇಶ ಸಂಖ್ಯೆ **FEE/215/ENV/2002 dated** ರನ್ವಯ **2009**ರಿಂದೀಚೆಗೆ ಮಾದಾಪಟ್ಟಣದ ಸರ್ವೆ ನಂಬರ್ **20**ನ್ನು ಸುರಕ್ಷಿತ ವಲಯದಿಂದ ಹೊರಗಿದೆ ಎಂದು ಘೋಷಿಸಿದ ಸರ್ಕಾರ ಇಲ್ಲಿ ಕೃಷಿ ಚಟುವಟಿಕೆಯಲ್ಲದೆ ಮತ್ತೇನನ್ನೂ ನಡೆಸುವಂತಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿಸಿ, ಎಲ್ಲಾ ಕ್ರಷರ್‌ಗಳ ಲೈಸೆನ್ಸ್ ರದ್ದು ಮಾಡಿದ್ದರೂ ರಾಜಕೀಯ ಪ್ರಭಾವಿ ವ್ಯಕ್ತಿಗಳ ಕುಮ್ಮಕ್ಕಿನಿಂದ ಕ್ರಷಿಂಗ್ ದಂಧೆ ನಡೆಯುತ್ತಲೇ ಇದೆ. ತೀರಾ ಇತ್ತೀಚೆಗೆ ಬೆಸ್ಕಾಂ ಈ ಕ್ರಷರ್‌ಗಳಿಗೆ ನೀಡಿದ್ದ ಪವರ್ ಸಪ್ಲೈಯನ್ನು ನಿಲ್ಲಿಸಿದ್ದರೂ ಸಹಾ ಜನರೇಟರ್ ಮೂಲಕ ಕಲ್ಲು ಕುಟ್ಟುವ ಅಕ್ರಮವನ್ನು ಮುಂದುವರೆಸಿ ಸರ್ಕಾರಕ್ಕೇ ಸೆಡ್ಡು ಹೊಡೆದಿರುವುದು ಅವರ ದಬ್ಬಾಳಿಕೆಯ ಒಂದು ಸ್ಯಾಂಪಲ್ ಅಷ್ಟೆ.

ಕ್ರಷರ್‌ಗಳ ದುರಾಸೆಯೂ, ಜಲಾನಯದ ದುಸ್ಥಿತಿಯೂ

ಜೆಲ್ಲಿ ಕ್ರಷರ್‌ಗಳ ಅಕ್ರಮ ಕಲ್ಲು ಗಣಿಗಾರಿಕೆಯಿಂದಾಗಿ ತಿಪ್ಪಗೊಂಡನಹಳ್ಳಿ ಜಲಾಶಯವೇ ಪಳಿಯುಳಿಕೆಯಾಗುವ ಅಪಾಯದಲ್ಲಿದೆ. ಪಶ್ಚಿಮ ಭಾಗದ ಬೆಂಗಳೂರಿನ ಬಹುತೇಕ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜಾಗುವುದೇ ಈ ಜಲಾಶಯದಿಂದ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೆಂಗಳೂರಿಗರ ದಾಹ ತಣಿಸಲು ಪ್ರತಿದಿನ 3.5 ಕೋಟಿ ಲೀಟರ್ ನೀರನ್ನು ಇಲ್ಲಿಂದ ಬಳಸಿಕೊಳ್ಳುತ್ತಿದೆ. ಅರ್ಕಾವತಿ, ಕುಮದ್ವತಿ ಹಾಗೂ ಕೆಲ ಸಣ್ಣಪುಟ್ಟ ತೊರೆಗಳೇ ಇದರ ನೀರಿನ ಮೂಲ.


ಸ್ಫೋಟದಿಂದಾಗಿ ಸತ್ತು ಬಿದ್ದಿರುವ ಜಾನುವಾರುಗಳು....


ಬಿರುಕುಬಿಟ್ಟಿರುವ ಮನೆಯ ಗೋಡೆ

ಬಂಡೆಗಳನ್ನು ಸಿಡಿಸಲು ಬಳಸುವ ಡೈನಾಮೈಟ್ ಮತ್ತು ಏಳುವ ಧೂಳಿನಿಂದಾಗಿ ತೊರೆಗಳ ಹರಿವಿನ ಪಾತ್ರವೇ ಬದಲಾಗಿ ಜಲಾಶಯಕ್ಕೆ ನೀರು ಬರುವುದೇ ಕಡಿಮೆಯಾಗಿ ಹೋಗಿದೆ. ಅರ್ಕಾವತಿ, ಕುಮದ್ವತಿ ನದಿಗಳ ಅಸ್ತಿತ್ವವೇ ಅಳಿಸಿ ಹೋಗುತ್ತಿರುವುದರಲ್ಲೂ ಈ ಕ್ರಷರ್‌ಗಳ ಪಾತ್ರ ದೊಡ್ಡದು. ಇನ್ನು ಅಳಿದುಳಿದ ನೀರಿಗೆ ಅಮೋನಿಯಮ್ ನೈಟ್ರೇಟ್, ಪೊಟಾಸಿಯಮ್ ಕ್ಲೋರೈಡ್, ಜಿಲೆಟಿನ್ ಮೊದಲಾದ ಸ್ಫೋಟಕದ ರಾಸಾಯನಿಕಗಳನ್ನು ಸೇರಿಸುತ್ತಿರುವ ಈ ಕ್ರಷರ್‌ಗಳಿಂದಾಗಿ ಕುಡಿಯುವ ನೀರೂ ವಿಷವಾಗಿ ಬದಲಾಗುತ್ತಿದೆ.

▶7

ನಮ್ಮ ಮಾಲ್ಗುಡಿ ವಿರುದ್ಧ ಚಿಮೂ ರಾಡಿ

ಪಾರ್ವತೀಶ


ನಾರಾಯಣ್‌ರ ಮೈಸೂರಿನ ಮನೆ


ನಾರಾಯಣ್

ಪ್ರಸಿದ್ಧ ಬರಹಗಾರ ಆರ್.ಕೆ. ನಾರಾಯಣ್ ಕುರಿತಂತೆ ಕರ್ನಾಟಕದ ಕೆಲವು ಹಿರಿಯ ವಿದ್ವಾಂಸರು ಹಾಗೂ ಬರಹಗಾರರು ಒಂದು ಆಕ್ಷೇಪಣೆಯ ಜಗಳ ತೆಗೆದಿದ್ದಾರೆ.

ಅದು ನಾರಾಯಣ್ ವಾಸವಿದ್ದ ಮೈಸೂರಿನ ಮನೆಯ ಬಗ್ಗೆ.

ಕರ್ನಾಟಕ ಸರ್ಕಾರವು ಇತ್ತೀಚೆಗೆ ಒಂದು ಆದೇಶ ಹೊರಡಿಸಿ ನಾರಾಯಣ್ ವಾಸವಿದ್ದ ಬಂಗಲೆಯನ್ನು ಒಂದು ಪಾರಂಪರಿಕ ಮಹತ್ವದ ಕಟ್ಟಡವೆಂದು ಪರಿಗಣಿಸಿ ರಕ್ಷಿಸಬೇಕೆಂದು ಹೇಳಿ ಆ ಕಟ್ಟಡ ಖರೀದಿಗೆ ಎರಡು ಕೋಟಿ ರೂಪಾಯಿಯಷ್ಟು ಅನುದಾನವನ್ನು ನೀಡಿದೆ. ಅದರಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ನಾರಾಯಣ್‌ರ ಬಂಧುಗಳೊಂದಿಗೆ ಒಂದು ಒಪ್ಪಂದಕ್ಕೆ ಬಂದು ಮಾರುಕಟ್ಟೆ ಬೆಲೆ ನೀಡಿ ಆ ಕಟ್ಟಡವನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಅದನ್ನು ಮೊದಲು ಹೇಗಿತ್ತೊ ಹಾಗೆಯೇ ಉಳಿಸಿಕೊಳ್ಳಲು ಮುಂದಾಗಿದೆ.

ಇದು ಈ ವಿವಾದದ ಒಂದು ಆಯಾಮ.

ಈಗ ಇದನ್ನು ವಿರೋಧಿಸಿ ಕೆಲ ವಿದ್ವಾಂಸರು ಪತ್ರಿಕಾ ಹೇಳಿಕೆಗಳನ್ನು ನೀಡುತ್ತಿದ್ದಾರೆ. "ಆರ್.ಕೆ. ನಾರಾಯಣ್ ಹುಟ್ಟಾ ತಮಿಳರು. ಅವರು ಹುಟ್ಟಿದ್ದು ಮದ್ರಾಸ್‌ನಲ್ಲಿ, ಬಾಲ್ಯದ ವಿದ್ಯಾಭ್ಯಾಸವೂ ನಡೆದದ್ದು ಮದ್ರಾಸ್‌ನಲ್ಲೇ. ಬರೆದದ್ದೆಲ್ಲಾ ಇಂಗ್ಲಿಷ್‌ನಲ್ಲಿ. ಪ್ರಕಟವಾಗುವುದೆಲ್ಲಾ ಅಮೆರಿಕದಿಂದ. ಅವರಿಗೆ ಕನ್ನಡ ಬರುತ್ತಿರಲಿಲ್ಲ, ನಾರಾಯಣ್ ಕನ್ನಡ ಸಾಹಿತ್ಯದ ಬೆಳವಣಿಗೆಗೆ ಯಾವುದೇ ಕೊಡುಗೆ ನೀಡಲಿಲ್ಲ.... ಇಂಥವರು ವಾಸವಿದ್ದ ಮನೆಯನ್ನು ಕನ್ನಡಿಗರ ತೆರಿಗೆ ಹಣ ವ್ಯಯಿಸಿ ಖರೀದಿಸಿ ಸ್ಮಾರಕ ಭವನ ನಿರ್ಮಿಸುವ ಅಗತ್ಯವಿಲ್ಲ".

–ಇದು ಇವರ ವಿರೋಧದ ಸಾರಾಂಶ.

ಈ ವಿರೋಧದ ಹೇಳಿಕೆಗೆ ಸಹಿ ಮಾಡಿರುವವರು ಡಾ. ಡಿ.ಪಿ. ಶಂಕರ್, ಪ್ರೊ. ಜಿ. ವೆಂಕಟಸುಬ್ಬಯ್ಯ, ಡಾ. ಎಂ. ಚಿದಾನಂದಮೂರ್ತಿ, ಡಾ. ಜಿ.ಎಸ್. ಶಿವರುದ್ರಪ್ಪ, ಪ್ರೊ. ಸುಮತೀಂದ್ರ ನಾಡಿಗ, ಪ್ರೊ. ಜಿ.ಎಸ್. ಸಿದ್ದಲಿಂಗಯ್ಯ, ಡಾ. ಎಸ್.ಎಲ್. ಭೈರಪ್ಪ ಎಲ್.ಎಸ್. ಶೇಷಗಿರಿರಾವ್ ಎಂಬುದಾಗಿ ಸೆಪ್ಟೆಂಬರ್ 18 ರ ಪ್ರಜಾವಾಣಿ ಪತ್ರಿಕೆಯ ವರದಿ ಹೇಳಿದೆ.

ಹೀಗೆ ಸಹಿ ಮಾಡಿರುವವರ ಪೈಕಿ ಒಂದಿಬ್ಬರು ಕೊಳಕು ಮನಸ್ಸಿನವರ ಜೊತೆಗೆ ಅನೇಕ ಸಜ್ಜನಿಕೆಯುಳ್ಳವರ ಹೆಸರುಗಳೂ ಕಾಣಿಸಿಕೊಂಡಿರುವುದು ಆಶ್ಚರ್ಯ ತರಿಸುವಂತಿದೆ. ಒಬ್ಬ ಬರಹಗಾರನ ಬದುಕು ಹಾಗೂ ಕೊಡುಗೆಯನ್ನು ಆತನ ಹುಟ್ಟು, ಭಾಷೆಯನ್ನೇ ಮಾನದಂಡವಾಗಿಟ್ಟುಕೊಂಡು ಅಳೆಯುವ, ಪುರಸ್ಕರಿಸುವ ಅಥವಾ ತಿರಸ್ಕರಿಸುವ ಗಲೀಜು ತರ್ಕವಿದು.


ಮನೆಯೊಳಗೆ ನಾರಾಯಣ್

ಆರ್.ಕೆ. ನಾರಾಯಣ್ ಹುಟ್ಟಾ ಕನ್ನಡಿಗರಲ್ಲ ನಿಜ. ಅವರೆಂದೂ ಕನ್ನಡದಲ್ಲಿ ಬರೆಯಲೂ ಇಲ್ಲ, ಅದೂ ನಿಜ. ಹಾಗೆಂದಮಾತ್ರಕ್ಕೆ ಅವರು ನಮ್ಮ ಕರ್ನಾಟಕಕ್ಕೆ ಏನೂ ಅಲ್ಲವೆ?

ತೊಂಭತ್ತೈದು ವರ್ಷ ಕಾಲ ಬದುಕಿದ್ದ ನಾರಾಯಣ್ ತಮ್ಮ ಬದುಕಿನ ಎಪ್ಪತ್ತು ವರ್ಷಗಳನ್ನು ಮೈಸೂರಿನಲ್ಲೇ ಕಳೆದವರು. ಒಂದು ನಗರದ ಅಥವಾ ಸಮಾಜದ ಇತಿಹಾಸವನ್ನು ಸಾಂಸ್ಕೃತಿಕ ಪರಂಪರೆಯನ್ನು ಅವಲೋಕಿಸುವಾಗ ಆ ಪ್ರದೇಶದ ಭಾಗವಾಗಿರುವ ಎಲ್ಲ ಜನಸಮುದಾಯಗಳ ಪಾತ್ರವನ್ನು ಪರಿಗಣಿಸಬೇಕಾಗುತ್ತದೆ. ಆ ಮಾನದಂಡದಲ್ಲಿ ನಾರಾಯಣ್ ಮೈಸೂರು ಸೀಮೆಯ ಪರಂಪರೆಯ ಭಾಗವೇ ಹೌದು. ಅವರು ಕನ್ನಡದಲ್ಲಿ ಬರೆಯದಿದ್ದರೇನಾಯಿತು ಅವರ ಬದುಕು ಹಾಗೂ ಬರವಣಿಗೆಗಳು ಈ ನೆಲದ ಅನೇಕ ಜನರನ್ನು ಪ್ರಭಾವಿಸಿರುವುದು ಸುಳ್ಳಲ್ಲವಲ್ಲ. ನಾರಾಯಣ್ ಕನ್ನಡಿಗರಲ್ಲ ಎನ್ನುವ ಕುಹಕಿಗಳಿಗೆ ಅವರು ಸೃಷ್ಟಿಸಿದ ಕಲ್ಪನೆಯ 'ಮಾಲ್ಗುಡಿ' ತಾಣ ನಮ್ಮದಲ್ಲ ಎನ್ನಲು ಸಾಧ್ಯವೆ? ಸ್ವಾಮಿ ಅಂಡ್ ಫ್ರೆಂಡ್ಸ್, ಬ್ಯಾಂಕರ್ ಮಾರ್ಗಯ್ಯ ಮುಂತಾದ ಬರಹ-ಸಿನಿಮಾಗಳು ಈ ನೆಲದ ಬದುಕಿನಿಂದಲೇ ಮೈದಾಳಿದವೆಂಬುದನ್ನು ಯಾರಾದರೂ 'ಇಲ್ಲ' ಎನ್ನಲಾದೀತೆ?

ಓದಿನ ಅಭಿರುಚಿ ಇರುವ ಸಾವಿರಾರು ಜನರಿಗೆ ನಾರಾಯಣ್‌ರ ಬರಹ ಮುದ ನೀಡುತ್ತಿರುವುದು ಸುಳ್ಳೆ?

ನಾವೆಲ್ಲಾ ಚಿಕ್ಕವರಾಗಿದ್ದಾಗ ಎನ್. ನರಸಿಂಹಯ್ಯರಿಂದ ಪುಸ್ತಕಗಳ ಗೀಳು ಹಚ್ಚಿಕೊಂಡು ಅದರ ಮುಂದಿನ ಸಾಹಿತ್ಯದ ಪ್ರಾಥಮಿಕ ಶಾಲಾ ಹಂತವೆಂಬಂತೆ ಸಾಯಿಸುತೆ, ಉಷಾ ನವರತ್ನರಾಂ, ತ.ಪು. ವೆಂಕಟಾರಂ, ಎಸ್.ಎಲ್. ಭೈರಪ್ಪನವರನ್ನು ಓದುತ್ತಾ ಮುಂದೆ ಸಾಗಿ ಬಂದೆವು.

ನಮಗೆಲ್ಲಾ ಭೈರಪ್ಪನವರ ಬರಹ ಕುರಿತಾದ ಪ್ರಗತಿಪರರ ಟೀಕೆ, ವಿಮರ್ಶೆಗಳು ಗೊತ್ತಾದ ಮೇಲಷ್ಟೇ ಆತನ ಕೊಳಕುತನ ಗ್ರಹಿಸಲು ಸಾಧ್ಯವಾಗಿದ್ದು.


ಅದೇರೀತಿ ಇಂಗ್ಲಿಷ್‌ನಲ್ಲಿ ಜೇಮ್ಸ್ ಹ್ಯಾಡ್ಲಿ ಚೇಸ್, ಜಾಕಿ ಕಾಲಿನ್ಸ್‌ರ Pulp ಪುಸ್ತಕಗಳಿಂದ ಪ್ರಾರಂಭಿಸಿ ರಸ್ಕಿನ್ ಬಾಂಡ್‌ರನ್ನು ಹಾದು ಥಾಮಸ್ ಹಾರ್ಡಿ ಚಾರ್ಲ್ಸ್ ಡಿಕನ್ಸ್, ಬಾಲ್ಜಾಕ್, ಡ್ಯೂಮಾಸ್, ಸರ್ವಾಂಟೀಸ್ ಜೊತೆಗೆ ಮುಂದೆ ಸಾಗುತ್ತಿದ್ದಾಗ ಅದೇ ಹಾದಿಯಲ್ಲಿ ನಮಗೆ ಸಿಕ್ಕವರು ಆರ್.ಕೆ. ನಾರಾಯಣ್.

ತಣ್ಣನೆಯ, ನಿರುದ್ವಿಗ್ನ ಶೈಲಿಯ ನಾರಾಯಣ್‌ರ ಬರಹಗಳು ನಮಗೆಲ್ಲಾ ಆಗಲೂ ಇಷ್ಟವಾಗಿದ್ದವು. ಈಗಲೂ ಇಷ್ಟವೆ. ಆಪ್ತದನಿಯಲ್ಲಿ ಭಾವುಕವಾಗಿ ಬಹಳ ಮುಖ್ಯವಾಗಿ **harmless** ಆಗಿ ಬರೆಯುತ್ತಿದ್ದ ನಾರಾಯಣ್ ಅದೇ ಮೈಸೂರಿನ ಕನ್ನಡಿಗ ಭೈರಪ್ಪನವರಿಗಿಂತ ದೊಡ್ಡತನ ಹೊಂದಿದ್ದ ವ್ಯಕ್ತಿ.

ಈ ಆರ್.ಕೆ. ನಾರಾಯಣ್‌ರ ಬಗ್ಗೆ ಹೇಳಬೇಕಾದ ಇನ್ನೊಂದಿಷ್ಟು ವಿಚಾರಗಳಿವೆ.

ರಸಿಪುರಂ ಕೃಷ್ಣಸ್ವಾಮಿ ಅಯ್ಯರ್ ನಾರಾಯಣಸ್ವಾಮಿ ಎಂಬ ಸುದೀರ್ಘ ಹೆಸರಿನವರಾಗಿದ್ದ ನಾರಾಯಣ್ ಖ್ಯಾತ ಜರ್ಮನ್ ಲೇಖಕ ಗ್ರಾಹಂ ಗ್ರೀನ್‌ರ ಸಲಹೆಯಂತೆ ತಮ್ಮ ಹೆಸರನ್ನು ಆರ್.ಕೆ. ನಾರಾಯಣ್ ಎಂದಾಗಿ ಕಿರಿದು ಮಾಡಿಕೊಂಡರು. ತಂದೆ ತಮಿಳುನಾಡಿನಲ್ಲಿ ಶಾಲಾ ಶಿಕ್ಷಕರಾಗಿದ್ದರು. ಆಗೆಲ್ಲಾ ಮೈಸೂರು ಒಡೆಯರ್ ಆಸ್ಥಾನದ ತುಂಬ ಹಾಗೂ ಆಡಳಿತದ ಬಹುಪಾಲು ಜಾಗಗಳಲ್ಲಿ ಬ್ರಾಹ್ಮಣರೇ ತುಂಬಿಕೊಂಡಿದ್ದರು. ಅದರಲ್ಲೂ ತಮಿಳು ಬ್ರಾಹ್ಮಣರ ಸಂಖ್ಯೆ ಹೆಚ್ಚೇ ಇತ್ತು. ಮಹಾರಾಜ ಹೈಸ್ಕೂಲ್‌ನ ಹೆಡ್‌ಮಾಸ್ಟರ್ ಆಗಿ ನಾರಾಯಣ್‌ರ ತಂದೆ 1920 ರ ಸುಮಾರಿಗೆ ಮೈಸೂರಿಗೆ ಬಂದಾಗ ನಾರಾಯಣ್ ಸಹ ಮೈಸೂರಿಗೇ ಬಂದರು. ನಾರಾಯಣ್‌ರ ಹೈಸ್ಕೂಲ್ ಹಾಗೂ ಕಾಲೇಜು ವಿದ್ಯಾಭ್ಯಾಸವೆಲ್ಲಾ ನಡೆದದ್ದು ಮೈಸೂರಲ್ಲೆ. ಅಲ್ಲಿಂದಾಚೆಗೆ ಎಪ್ಪತ್ತು ವರ್ಷ ಕಾಲ ನಾರಾಯಣ್ ಮೈಸೂರಲ್ಲೇ ಇದ್ದರು. ಅವರಿಗೆ ಕನ್ನಡ ಬರುತ್ತಿರಲಿಲ್ಲ ಎಂಬ ಆರೋಪ ಕೇವಲ ನೀಚ ಮನಸ್ಸಿನವರ ಕಲ್ಪನೆಯಷ್ಟೇ.

ಕೆಲಕಾಲ ಮಹಾರಾಜಾ ಕಾಲೇಜಿನಲ್ಲಿ ಶಿಕ್ಷಕರಾಗಿದ್ದ ನಾರಾಯಣ್ ಅದು ಒಗ್ಗದೆ ಕೆಲಸ ಬಿಟ್ಟು ಫುಲ್‌ಟೈಂ ಬರಹಗಾರನಾಗಿ ತಮ್ಮ ಕೆರಿಯರ್ ಅನ್ನು ಆರಿಸಿಕೊಂಡರು. ನಾರಾಯಣ್‌ರ ಸೋದರ ಪ್ರಸಿದ್ಧ ಕಾರ್ಟೂನಿಸ್ಟ್ ಆರ್.ಕೆ. ಲಕ್ಷ್ಮಣ್ ಹೇಳಿದಂತೆ ಅವರ ಮನೆಯ ಮಾತು ಇಂಗ್ಲಿಷ್ ಆಗಿತ್ತು. ಜೊತೆಗೆ ಸುಶಿಕ್ಷಿತ ಆಧುನಿಕ ಬ್ರಾಹ್ಮಣ ಕುಟುಂಬಗಳ ಪದ್ಧತಿಯಂತೆ ಸಂಗೀತ, ಸಂಸ್ಕೃತ, ಇಂಗ್ಲಿಷ್ ಇತ್ಯಾದಿಗಳ ಪ್ರಭಾವಳಿ ಮನೆಯಲ್ಲಿ ಹರಡಿತ್ತು. ಅಜ್ಜಿ ಪಾರ್ವತಿಯ ಕಣ್ಗಾವಲು, ಪೋಷಣೆಯಲ್ಲಿ ಬೆಳೆದ ನಾರಾಯಣ್ 1935 ರಲ್ಲಿ ತಮ್ಮ ಮೊದಲ ಪುಸ್ತಕ 'ಸ್ವಾಮಿ ಅಂಡ್ ಫ್ರೆಂಡ್ಸ್' ಬರೆದರು. ಗ್ರಹಾಂಗ್ರೀನ್ ನೆರವಿನಿಂದಾಗಿ ಅದು ಪ್ರಕಟವಾಯಿತು. ಅದರ ಹಿಂದೆಯೇ ದಿ ಬ್ಯಾಚುಲರ್ ಆಫ್ ಆರ್ಟ್ಸ್, ದಿ ಇಂಗ್ಲಿಷ್ ಟೀಚರ್, ದಿ ಗೈಡ್, ದಿ ಫೈನಾನ್ಶಿಯಲ್ ಎಕ್ಸ್‌ಪರ್ಟ್‌ಗಳೂ ಬಂದವು. ಇವೆಲ್ಲಾ ನಾರಾಯಣ್‌ರಿಗೆ ಬ್ರಿಟಿಷ್ ವಸಾಹತಾಗಿದ್ದ ಕಾಲೋನಿಗಳಲ್ಲಿ ಹಾಗೂ ಇಂಗ್ಲಿಷ್ ಬಳಕೆಯ ದೇಶಗಳಲ್ಲಿ ಭಾರಿ ಹೆಸರು-ಹಣ ತಂದುಕೊಟ್ಟವು. 20 ನೇ ಶತಮಾನ ಭಾರತೀಯ ಪ್ರಮುಖ ಬರಹಗಾರರಾಗಿದ್ದ ಮುಲ್ಕ್‌ರಾಜ್ ಆನಂದ್ ಹಾಗೂ ಹಾಸನ ರಾಜಾರಾವ್‌ರ ಹೆಸರಿ ಜೊತೆ ಮೈಸೂರಿನ ಆರ್.ಕೆ. ನಾರಾಯಣ್‌ರ ಹೆಸರ ಸೇರಿತು. ನಾರಾಯಣ್ ಯುರೋಪ್ ಹಾಗೂ ಅಮೆರಿಕದ ಎಷ್ಟು ಮನ್ನಣೆ ಪಡೆದಿದ್ದರೆಂದರೆ ಅಮೆರಿಕೆಯ ಪ್ರಸಿ ಲೇಖಕ ಸಾಮರ್‌ಸೆಟ್ ಮಾಮ್ 1935 ರಲ್ಲಿ ಮೈಸೂರಿಗ ಬಂದಿದ್ದಾಗ 'ನಾನು ನಾರಾಯಣ್‌ರನ್ನು ನೋಡಬೇಕು ಎಂದು ಹಂಬಲಿಸಿದ್ದರಂತೆ. ಆದರೆ ಆ ಭೇಟಿ ಕೂಡಿಬರಲಿಲ್ಲ ಬಾಲ್ಯ ಕಾಲದ ತಮ್ಮ ಹಿಂದೂ ಪುರಾಣಗಳ ಓದಿ ಪ್ರಭಾವದಿಂದ ನಾರಾಯಣ್, **God, Demons & Others** ಎಂಬ ಪುಸ್ತಕ ಬರೆದು ಪ್ರಕಟಿಸಿದ ನಂತ ಒಮ್ಮೆ ಅಮೆರಿಕೆಗೆ ಹೋಗಿದ್ದರು. ಆಗ ಹಾಲಿವುಡ್‌ ವಿಶ್ವಖ್ಯಾತ ನಟಿ ಸ್ವೀಡನ್‌ನ ಗ್ರೇಟಾ ಗಾರ್ಬೋ ಅದನ್


ಕುಟುಂಬದೊಂದಿಗೆ ಸಂತೋಷದ ದಿನಗಳು...



ಬಾಲಕ ನಾರಾಯಣ್


ಓದಿ ನಾರಾಯಣ್‌ರನ್ನು ಭೇಟಿಯಾಗಿ **Spiritualis** ಕುರಿತಂತೆ ಚರ್ಚೆಗೆ ಮುಂದಾಗಿದ್ದಳು. ಆದರೆ ನಾರಾಯ ಅದಕ್ಕೆ ಸ್ಪಂದಿಸದೆ "ನನಗೆ ಅಷ್ಟು ಪರಿಣತಿ ಇಲ್ಲ" ಎಂ ವಿನಯದಿಂದ ತಮ್ಮ ಮಿತಿ ಹೇಳಿಕೊಂಡಿದ್ದರು.

ಅದರ ಜೀವನದ ಇನ್ನೊಂದು ಮುಖ್ಯಾಂಶವೆಂದ ನಾರಾಯಣ್ ಆಗ ಮದ್ರಾಸಿನಿಂದ ಪ್ರಕಟವಾಗುತ್ತಿದ್ದ 'Th Justice' ಪತ್ರಿಕೆಗೆ ವರದಿಗಾರನಾಗಿದ್ದರು...! ಬ್ರಾಹ್ಮ ವಿರೋಧಿ ನಿಲುವು ಹೊಂದಿದ್ದ ಆ ಪತ್ರಿಕೆಗೆ ಸ್ವ ಬ್ರಾಹ್ಮಣರಾಗಿದ್ದ ನಾರಾಯಣ್ ಬರೆಯುತ್ತಾ ಆ ಗುಂಪಿ ಸಾಮಾಜಿಕ ನ್ಯಾಯದ ಪರ ತಮ್ಮ ದನಿಗೂಡಿಸಿದ್ದ ಬಹುಶ ಆ ಪ್ರಭಾವದಿಂದಲೇ ಇರಬೇಕು ನಾರಾಯಣ ತಾವು ಮೊದಲ ಭೇಟಿಯಲ್ಲೇ ಮೆಚ್ಚಿಕೊಂಡಿದ್ದ ರಾಜ ಎಂಬ ಯುವತಿಯನ್ನು ಆಕೆಯ ಜಾತಕ ಸರಿಯಿಲ್ಲವೆಂ ಹಿರಿಯರ ವಿರೋಧವನ್ನು ಲೆಕ್ಕಿಸದೆ ಮದುವೆಯಾದರ



ನಾರಾಯಣ್ ಸ್ಮರಣ ಅಂಚೆಚೀಟಿ....


ನೆಹರೂ ಜೊತೆ....



ಗ್ರಹಾಂ ಗ್ರೀನ್‌ರೊಂದಿಗೆ.....


ನಟವರ್ ಸಿಂಗ್ ಮತ್ತು ಮುಲ್ಕರಾಜ ಆನಂದ್‌ರೊಂದಿಗ



ಕಲಾವಿದರ ಕಲ್ಪನೆಯಲ್ಲಿ ಮಾಲ್ಗುಡಿ ನಕ್ಷೆ.....



ಮಾಲ್ಗುಡಿಯ ಬ್ರಿಟಿಷ್ ಪ್ರಜೆ ಫೆಡ್ರಿಕ್‌ನ ಪ್ರತಿಮೆ.......




ಆರೇಳು ದಶಕಗಳ ಹಿಂದಿನ ಮೈಸೂರಿನ ಒಂದು ಚಿತ್ರ

...ತರ ಭಾರತೀಯ ಸಮಾಜದೊಳಗೆ ಮದುವೆಗಳನ್ನು ...ರ್ಧರಿಸುವಾಗ, ಜಾತಕ, ಗಣಕೂಟಗಳನ್ನು ಲೆಕ್ಕ ಹಾಕುವ ...ಾನದಿಂದಾಗಿ ವಧುವರ ಮನಸ್ಸಿನ ಮೇಲಾಗುವ ...ಮಗಳ ಬಗ್ಗೆಯೂ The Bachelor of Arts ...ಬ ಕಾದಂಬರಿಯಲ್ಲಿ ಬರೆದರು.

ಮೈಸೂರನ್ನು ಬಹಳ ಇಷ್ಟಪಡುತ್ತಿದ್ದ ...ರಾಯಣ್ 1953 ರಲ್ಲಿ ಯಾದಗಿರಿ ...ಲ್ಲಿ ತಮಗಾಗಿ ಒಂದು ಮನೆ ಕಟ್ಟಿ ...ಂಡರು. ಎರಡನೇ ವಿಶ್ವಮಹಾಯುದ್ಧ ...ಯುತ್ತಿದ್ದಾಗ ವಿದೇಶಿ ಪ್ರಕಾಶನ ಸಂಸ್ಥೆಗಳ ...ತೆಗೆ ಸಂಯೋಜನೆ ಅಸಾಧ್ಯವಾದಾಗ ...ಮ್ಮದೇ ಸ್ವಂತದ ಇಂಡಿಯನ್ ಥಾಟ್ ...ಬ್ಲಿಕೇಷನ್ ಎಂಬ ಪ್ರಕಾಶನ ಸಂಸ್ಥೆ ಶುರು ...ಮಾಡಿದರು. ಅದು ಈಗಲೂ ...ತ್ವದಲ್ಲಿದೆ. 1970 ರಲ್ಲಿ ಕರ್ನಾಟಕದ ...ಂಪರೆ ಹಾಗೂ ಪ್ರವಾಸಿತಾಣಗಳ ...ರಿಚಯ ಮಾಡಿಕೊಡುವ 'ದಿ ...ಮರಾಲ್ಸ್ ಟೂರಿಸಂ' ಎಂಬ ಪುಸ್ತಕ ...ರೆದಿದ್ದಾರೆ. ನಾರಾಯಣ್ ಅದೆಂತಹ ಸರಳ ಮನುಷ್ಯ ...ಗೂ ಜೀವನ ಪ್ರೀತಿಯವರಾಗಿದ್ದರೆಂದರೆ ಪ್ರತಿದಿನ ...ಧ್ಯಾಹ್ನ ತಮ್ಮ ಮನೆ ಹತ್ತಿರದ ತರಕಾರಿ ಮಾರ್ಕೆಟ್‌ಗೆ ...ೋಗಿ ತಮಗೆ ಬೇಕಾದ್ದನ್ನು ಕೊಂಡು ಆ ಬಡ ...ರೊಂದಿಗೆ ಗಂಟೆಗಟ್ಟಲೆ ಮಾತುಕತೆಯಾಡಿ ಬರುತ್ತಿದ್ದರು. ...ತರ ಅವರಿಂದ ಪಡೆದದ್ದೇ ನಾರಾಯಣ್‌ರ ಬರಹಗಳಲ್ಲಿ ... ಘಟನೆ ಹಾಗೂ ಸಂಭಾಷಣೆಗಳಾಗಿ ಮೈದಾಳುತ್ತಿದ್ದವು. ...ಹಳ ಜನರಿಗೆ ಗೊತ್ತಿರದ ಇನ್ನೊಂದು ವೈಶಿಷ್ಟ್ಯ ಏನೆಂದರೆ ...ವರು ಸ್ವತಃ ರೈತರಾಗಿದ್ದ ವಿಷಯ!

ಮೈಸೂರಿನ ಸಮೀಪ ಒಂದು ಎಕರೆ ಭೂಮಿ ...ೊಂದಿದ್ದ ನಾರಾಯಣ್ ಕೃಷಿಯನ್ನು ಮಾಡಲು ಪ್ರಯತ್ನಿಸಿದ್ದರು.



ಮನೋರೋಗಿ ಚಿಮೂ


ಎಪ್ಪತ್ತು ವರ್ಷ ಮೈಸೂರಿನಲ್ಲೇ ಬದುಕಿದ್ದ, ನಿತ್ಯದ ಬದುಕಿನಲ್ಲಿ ತರಕಾರಿ ಮಾರುವವರೊಂದಿಗೆ, ರೈತ ಕೂಲಿಗಳೊಂದಿಗೆ ಒಡನಾಟ ಹೊಂದಿದ್ದ ನಾರಾಯಣ್‌ರಿಗೆ ಕನ್ನಡದ ಕಂಪು ಕನ್ನಡಿಗರ ಬದುಕು ಗೊತ್ತಿರಲಿಲ್ಲ ಎನ್ನುವವರನ್ನು ಗಾಂಪರೆನ್ನಬೇಕು ಅಷ್ಟೆ.

1980 ರಲ್ಲಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ನಾರಾಯಣ್ ತಮ್ಮ ಸಂಸತ್ ಸದಸ್ಯತನದ ಅವಧಿಯುದ್ದಕ್ಕೂ ಶಿಕ್ಷಣ ವ್ಯವಸ್ಥೆಯ ಸುಧಾರಣೆಗಾಗಿ ಬಿಟ್ಟೂಬಿಡದೆ ಕೆಲಸ ಮಾಡಿದ್ದಾರೆ. ಅವರ ಒತ್ತಾಸೆಯಿಂದಾಗಿಯೇ ಕೇಂದ್ರ ಸರ್ಕಾರವು 'ಯಶಪಾಲ್ ಸಮಿತಿ' ರಚಿಸಿತು. ಇದರಿಂದಾಗಿ ಕೊನೆಗೆ ಶಾಲಾ ಪಠ್ಯಗಳು ಸರಳಗೊಂಡು, ಮಕ್ಕಳ ಪುಸ್ತಕದ ಹೊರೆ ಕಡಿಮೆಯಾಗಬೇಕೆಂಬ ನಿಯಮ ಬಂದು ಒಟ್ಟಾರೆಯಾಗಿ ಶಾಲಾಶಿಕ್ಷಣ ಪದ್ಧತಿಯಲ್ಲಿ ಗಮನಾರ್ಹ ಬದಲಾವಣೆಗಳು ಬಂದಿವೆ. ಇದನ್ನು ನಾವು ಕನ್ನಡ-ತಮಿಳು ಎಂದು ವಿಭಜಿಸಿ ನೋಡಲು ಸಾಧ್ಯವೆ?

ಆರ್.ಕೆ. ನಾರಾಯಣ್ ಚಿಲ್ಲರೆ ಚಿಂತಕರಿಗೆ ಅರ್ಥವಾಗುವವರಲ್ಲ. ಅಪ್ಪಟ ಕನ್ನಡಿಗರಾಗಿದ್ದ ಹಾಸನ ರಾಜಾರಾವ್ ತಮ್ಮ ಜೀವನದ ಕ್ರಿಯಾಶೀಲ ಅವಧಿಯನ್ನು ಇಂಗ್ಲಿಷ್‌ನಲ್ಲಿ ಬರೆಯುತ್ತಾ, ಬೋಧಿಸುತ್ತಾ ಫ್ರಾನ್ಸ್ ಹಾಗೂ ಅಮೆರಿಕದಲ್ಲಿ ವ್ಯಯಿಸಿದರು. ಆದರೆ ಅವರನ್ನು 'ನಮ್ಮವನಲ್ಲ' ಎಂದು ಅಲ್ಲಿನ ಜನ ತಿರಸ್ಕರಿಸಲಿಲ್ಲ. ಪಂಡಿತ್ ಭೀಮಸೇನ್ ಜೋಷಿ ಹಿಂದೂಸ್ತಾನಿ ಸಂಗೀತ ಹಾಡುತ್ತಾ ಪೂನಾದಲ್ಲೇ ನೆಲೆಸಿದ್ದಾಗಲೂ ಅವರ ಬದುಕು ಹಾಗೂ ಕೊಡುಗೆಗಳು ರಾಜ್ಯ-ಜಾತಿ-ಭಾಷೆಗಳ ಮಿತಿ ದಾಟಿ ಹರಡಿಕೊಂಡಿತ್ತು. ಪ್ರಖ್ಯಾತ ನಾಟಕಕಾರ ಸ್ಯಾಮುಯೆಲ್ ಬೆಕೆಟ್ ಐರ್‌ಲೆಂಡ್‌ನವನಾದರೂ ಫ್ರಾನ್ಸ್ ಅವನನ್ನು ಆದರಿಸಿ ಪೋಷಿಸಿತು.

ನಮ್ಮ ಗೋವಿಂದ ಪೈರನ್ನು ರಾಷ್ಟ್ರಕವಿ ಎಂದು ಮೊದಲು ಗೌರವಿಸಿದ್ದು ಆಗಿನ ಮದ್ರಾಸ್ ಸರ್ಕಾರ. ಕೇರಳದ ಮಂಜೇಶ್ವರದಲ್ಲಿ ಈಗಲೂ ಗೋವಿಂದ ಪೈ ಮೆಮೋರಿಯಲ್ ಕಾಲೇಜ್ ಇದೆ.

ಹೀಗಿರುವಾಗ ನಮ್ಮ ನಾರಾಯಣ್‌ರ ಬಗ್ಗೆ ನಾವೇಕೆ ವಕ್ರವಾಗಿ ಯೋಚಿಸಬೇಕು?



ರಾಷ್ಟ್ರಕವಿ ಬಿರುದಾಂಕಿತ ಜಿಎಸ್ಸೆಸ್

ಆಶ್ಚರ್ಯ ಅಂದರೆ ನಾರಾಯಣ್‌ರ ಒಂದು ಕಾದಂಬರಿಯಲ್ಲಿ ಇಂತದ್ದೇ ಒಂದು ಪ್ರಸಂಗ ಬರುತ್ತದೆ.

ಅವರ ಕಲ್ಪನೆಯ ಮಾಲ್ಗುಡಿಯಲ್ಲಿ ಒಮ್ಮೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅಲ್ಲಿದ್ದ ಫ್ರೆಡರಿಕ್ ಲಾಲೆ ಎಂಬ ಬ್ರಿಟಿಷ್‌ನ ಪ್ರತಿಮೆ ತೆಗೆದು ಹಾಕಬೇಕೆಂದು ಮಾಲ್ಗುಡಿಯ ಮುನಿಸಿಪಾಲಿಟಿ ನಿರ್ಣಯ ಮಾಡಿರುತ್ತದೆ.

ಆಗ ಇದನ್ನು ವಿರೋಧಿಸಿ ಇತಿಹಾಸ ಸೊಸೈಟಿಯ ಕೆಲವರು ಬಂದು "ಆ ಫೆಡರಿಕ್ ಲಾಲೆ ಮಾಲ್ಗುಡಿಯ ಮೊದಲ ಪೀಳಿಗೆಯ ಪ್ರಜೆಗಳಲ್ಲಿ ಒಬ್ಬ ಹಾಗೂ ಆತ ಬ್ರಿಟಿಷರ ವಿರುದ್ಧ ಭಾರತೀಯರ ಸ್ವಾತಂತ್ರ ಹೋರಾಟವನ್ನು ಬೆಂಬಲಿಸಿದ್ದ" ಎಂಬುದನ್ನು ನಿರೂಪಿಸುತ್ತಾರೆ.

ಆಗ ಮಾಲ್ಗುಡಿಯ ನಾಯಕರು ತಮ್ಮ ಸಂಕುಚಿತ, ದುಡುಕಿನ ತೀರ್ಮಾನದ ಬಗ್ಗೆ ಪಶ್ಚಾತ್ತಾಪ ಪಟ್ಟು ಫೆಡರಿಕ್ ಬಗೆಗಿನ ನಿಲುವನ್ನು ಬದಲಿಸಿಕೊಳ್ಳುತ್ತಾರೆ.

-ಹೀಗೆ ಸ್ಥಳೀಯ-ಪರಕೀಯವೆಂಬ ವಿಚಾರವನ್ನು ಹೇಗೆ ಅರ್ಥೈಸಬೇಕೆಂಬುದನ್ನು ಬರೆದಿದ್ದ ನಾರಾಯಣ್‌ರ ಬಗ್ಗೆಯೇ ಈಗ ಅದೇ ತರದ ವಿವಾದ ಹುಟ್ಟಿದೆ.

ಇಲ್ಲಿ ಇನ್ನೊಂದು ವಿಚಾರ ಸ್ಪಷ್ಟಪಡಿಸಬೇಕಿದೆ.

ಅದು ಅವರ ಮನೆಗೆ ಸರ್ಕಾರ ನೀಡುತ್ತಿರುವ ಹಣದ ಬಗ್ಗೆ.

ಸುಮಾರು ಹತ್ತು ಸಾವಿರ ಚದರಡಿಯ, ಬಂಗಲೆಯನ್ನು ಒಳಗೊಂಡ ಆ ಜಾಗದ ಇವತ್ತಿನ ಮಾರುಕಟ್ಟೆ ಬೆಲೆಯೇ ಹತ್ತಿರತ್ತಿರ ಎರಡು ಕೋಟಿ ರೂಪಾಯಿದೆ. ಸರ್ಕಾರ ಅದಕ್ಕಿಂತ ಹೆಚ್ಚಿನದೇನನ್ನು ತೆರುತ್ತಿಲ್ಲ. ಕರ್ನಾಟಕದ ಸಾಹಿತ್ಯ ಹಾಗೂ ಸಾಂಸ್ಕೃತಿಕ ವಲಯದ ಹಿರಿಯರು ಇಂತಹ ಪ್ರಸಂಗ ಎದುರಾದಾಗ ಕೊಂಚ ವಿವೇಚನೆಯಿಂದ ಯೋಚಿಸಿ ನಿಲುವು ಪ್ರಕಟಿಸಬೇಕು. ಚಿದಾನಂದ ಮೂರ್ತಿಯಂತಹ ಮನೋರೋಗಿಗಳು ಬರೆದುಕೊಂಡು ಬಂದ ಅರ್ಜಿಗಳಿಗೆಲ್ಲಾ ಜಿ.ಎಸ್. ಶಿವರುದ್ರಪ್ಪ ಜಿ. ವೆಂಕಟಸುಬ್ಬಯ್ಯ, ಕಂಬಾರ ತರದವರು ಹೀಗೆ ಸಹಿ ಹಾಕಿಬಿಟ್ಟರೆ ಒಂದು ಅಸಹ್ಯಕರ ಟ್ರೆಂಡ್‌ಗೆ ಚಾಲನೆ ನೀಡಿದಂತಾಗುತ್ತದೆ ಅಷ್ಟೆ. ನಾರಾಯಣ್ ಬಗ್ಗೆ ಯು.ಆರ್. ಅನಂತಮೂರ್ತಿಯವರು ನಿಲುವು ಸರಿಯಾಗಿದೆ.

ಕೊನೆಯದಾಗಿ,

ಆರ್.ಕೆ. ನಾರಾಯಣ್ ಬಗ್ಗೆ ವಿರೋಧ ಹೇಳುತ್ತಿರುವವರು ಅವರ ಕೃತಿಗಳ ಮೌಲ್ಯಮಾಪನ ಮಾಡುತ್ತಿಲ್ಲ ಅಥವಾ ಬದುಕಿನ, ಒಟ್ಟಾರೆ ಜೀವನ ಮೌಲ್ಯಗಳ ಬಗ್ಗೆಯೂ ಪ್ರಸ್ತಾಪಿಸುತ್ತಿಲ್ಲ.

ಅದರ ಬದಲಾಗಿ ನಾರಾಯಣ್‌ರು ಎಲ್ಲಿ ಹುಟ್ಟಿದರು, ಯಾವ ಭಾಷೆಯಲ್ಲಿ ಬರೆದರು ಇತ್ಯಾದಿಯನ್ನಷ್ಟೇ ಪ್ರಸ್ತಾಪಿಸಿ ರಾಡಿ ಎಬ್ಬಿಸಲು ನೋಡುತ್ತಿದ್ದಾರೆ.

ಈ ಕೊಳಕ ಚಿಮೂ, ಶೇಷಗಿರಿ ರಾವ್ ತರಹದವರಿಂದ ಸಜ್ಜನರು ದೂರ ನಿಲ್ಲುವುದು ಉತ್ತಮ. ●


▸5 ತಿಪ್ಪೆಯಾಗುತ್ತಿರುವ ತಿಪ್ಪಗೊಂಡನಹಳ್ಳಿ...

1980-90ರ ದಶಕದಲ್ಲಿ ಇಲ್ಲಿ ಸಿಗುವ ಕಲ್ಲುಗಳು ...ಟ್ಟಡ ನಿರ್ಮಾಣಕ್ಕೆ ಸೂಕ್ತವಾದಂತವು ಎಂಬುದು ...ಿಯುತ್ತಿದ್ದಂತೆಯೆ ಕಲ್ಲು ಗಣಿಗಾರಿಕೆ ಅಥವಾ ಕ್ವಾರಿಗಳು ...ೆ ಎತ್ತಿದ್ದವು. 2000 ರಿಂದೀಚೆಗಂತು ಜಲ್ಲಿ ಕ್ರಷರ್‌ಗಳು ...ಲ್ಲೊದರಲ್ಲಿ ಕಲ್ಲು ಕುಟ್ಟಲು ಶುರುಮಾಡಿವೆ.

ಅಸಲಿಗೆ ಸರ್ಕಾರದ ನಿಯಮದಂತೆ ಈ ಕ್ರಷರ್‌ಗಳನ್ನು ...ರಕ್ಷಿತ ವಲಯದಲ್ಲಿ ಮಾತ್ರವೇ ಸ್ಥಾಪಿಸಬೇಕು. ಈ ...ರಕ್ಷಿತ ವಲಯಕ್ಕೂ ಒಂದಷ್ಟು ನಿಬಂಧನೆಗಳಿವೆ. ಅದರಂತೆ ...ೆ ಕ್ರಷರ್‌ಗಳು ರಾಷ್ಟ್ರೀಯ ಹೆದ್ದಾರಿಗಳು, ವಸತಿ ...ದೇಶಗಳು, ದೇವಾಲಯಗಳು, ಶಾಲೆಗಳು ಮತ್ತು ...ದಿಗಳಿಂದ ಎರಡು ಕಿಲೋಮೀಟರ್ ದೂರದಲ್ಲಿರಬೇಕು. ...ೊತೆಗೆ ರಾಜ್ಯ ಹೆದ್ದಾರಿಯಿಂದ ಒಂದೂವರೆ ಕಿಮೀ ...ೂರದಲ್ಲಿರಬೇಕು, ಪಾಲಿಕೆ ಪರಿಮಿತಿಯಿಂದ ಎಂಟು ...ಮೀ ದೂರದಲ್ಲಿರಬೇಕು, ವ್ಯವಸಾಯ ಯೋಗ್ಯ ಭೂಮಿ ...ದು ತೋರಿಸಲ್ಪಟ್ಟ ಕೃಷಿ ಭೂಮಿಯಿಂದ ಒಂದೂವರೆ ...ಲೋಮೀಟರ್ ದೂರದಲ್ಲಿರಬೇಕು ಮತ್ತು ಐವತ್ತು ...ಲೋಮೀಟರ್ ವ್ಯಾಸದೊಳಗೆ ಯಾವುದೇ ಎರಡು ...ರಕ್ಷಿತ ಕ್ರಷಿಂಗ್ ವಲಯಗಳಿರಬಾರದು ಎಂಬೆಲ್ಲ ...ಯಮಗಳಿವೆ. ಆದರೆ ಮಾದಾಪಟ್ಟಣದ ಸುತ್ತಮುತ್ತ ...ಡೆಯುತ್ತಿರುವ ಕ್ರಷರ್‌ಗಳಂತು ಸರ್ಕಾರದ ಒಂದೇ ಒಂದು ...ಯಮವನ್ನೂ ಪಾಲಿಸುತ್ತಿಲ್ಲ. ಊರಿನಿಂದ ಕೂಗಳತೆಯಲ್ಲಿ, ...ನೆಗಳಿಂದ ತುಸುವೇ ಅಂತರದಲ್ಲಿ, ಕೃಷಿ ಜಮೀನಿನ ...ನಲ್ಲೇ ಬಾಯಿಕೊಡೆಯಂತೆ ಬೀಡುಬಿಟ್ಟಿವೆ.

...ಷ್ಟಗಳು ನಡೆಸುವ ಸ್ಫೋಟಕ್ಕೆ ಮನೆಯ ಗೋಡೆಗಳು ...ರುಕು ಬಿಟ್ಟಿದ್ದು ಯಾವ ಕ್ಷಣದಲ್ಲಾದರೂ ಮನೆಯವರ ...ಜೀವ ತೆಗೆದುಕೊಳ್ಳಲು ಬಾಯ್ತೆರೆದು ಕೂತಿವೆ. ಇನ್ನು ...ಕ್ಕಳು ಕಲಿಯುವ ಶಾಲೆಯ ಮೇಲ್ಚಾವಣಿಯಂತೂ ...ಿಸಿದು ಬೀಳಲು ರೆಡಿಯಾಗಿದೆ. ಕೃಷಿ ಭೂಮಿಯ ...ಾನಲ್ಲೇ ಕ್ರಷಿಂಗ್ ನಡೆಯುತ್ತಿರುವುದರಿಂದ ಧೂಳು ...ತ್ತು ಕಲ್ಲಿನ ಚೂರುಗಳಿಂದಾಗಿ ಜಮೀನು ತನ್ನ ...ಫಲವತ್ತತೆಯನ್ನು ಕಳೆದುಕೊಂಡಿದ್ದು, ರೈತ ...ಸಮುದಾಯವಿಂದು ನಿರುದ್ಯೋಗಿಯಾಗಬೇಕಾಗಿದೆ. ಪರಿಸರ ...ಮಾಲಿನ್ಯಕ್ಕಂತೂ ಮಿತಿಯೇ ಇಲ್ಲ.

ಮೊದಮೊದಲು ಉದ್ದಿಮೆಯಂತೆ ಆರಂಭವಾದ ಈ ಜಲ್ಲಿ ಕ್ರಷಿಂಗ್ ನಂತರ ದಂಧೆಯಾಗಿ ಈಗ ದೊಡ್ಡದೊಂದು ಮಾಫಿಯಾವೇ ಆಗಿಹೋಗಿದೆ. ಸರ್ಕಾರಿ ಜಾಗದಲ್ಲಿ ಒಂದಷ್ಟು ಕಲ್ಲುಬಂಡೆಗಳ ರಾಶಿ ಕಂಡಿತೆಂದರೆ ಸಾಕು, ಯಾರ ಅಪ್ಪಣೆಯೂ ಇಲ್ಲದೆ ರಾತ್ರೋರಾತ್ರಿ ಒಂದು ಕ್ರಷರ್ ತಲೆ ಎತ್ತಿ ಬಿಡುತ್ತದೆ. ಆರಂಭದಲ್ಲಿ ರೈತರು ತಮ್ಮ ಜಮೀನಿಗೆ ಇದರಿಂದ ಹಾನಿಯಾಗುತ್ತದೆಂದು ಪ್ರತಿಭಟಿಸಲು ಮುಂದಾದಾಗ ಒಂದಷ್ಟು ದುಡ್ಡಿನ ಆಮಿಷ ತೋರಿಸಿ ಸುಮ್ಮನಾಗಿಸುವ ಪರಿಪಾಠ ರೂಢಿಸಿಕೊಂಡಿದ್ದರು. ಆದರೆ ಒಂದಷ್ಟು ಕಾಸಿನ ರುಚಿ ನೋಡಿ ರಾಜಕೀಯ ಮತ್ತು ರೌಡಿ ಜಗತ್ತಿನ ಸಾಮೀಪ್ಯ ಸಿಕ್ಕ ಮೇಲಂತು ಕ್ರಷರ್‌ನ ಮಾಲೀಕರು ರೈತರನ್ನು ಹೆದರಿಸಿ, ಬೆದರಿಸಿ ಭೂಮಿಯಿಂದ ಓಡಿಸಿ ಆಕ್ರಮಿಸಿಕೊಳ್ಳುವ ಗೂಂಡಾಗಿರಿಗಿಳಿದಿದ್ದಾರೆ. ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿನ ಕೆಲ ಭ್ರಷ್ಟ ಅಧಿಕಾರಿಗಳು ಕ್ರಷರ್ ದಂಧೆಗೆ ಅನುಕೂಲವಾಗುವಂತೆ ಜಲಾನಯನ ಪ್ರದೇಶದ ವ್ಯಾಪ್ತಿಯ ನಕಾಶೆಯನ್ನೆ ತಿರುಚಿ ಈ ಅಕ್ರಮಗಳಿಗೆ ರಕ್ಷಣೆಯಾಗಿ ನಿಂತಿರುವುದು ಮತ್ತೊಂದು ವಿಪರ್ಯಾಸ. ಒಟ್ಟಿನಲ್ಲಿ ಬೇಲಿಯೇ ಎದ್ದು ಹೊಲ ಮೇಯುತ್ತಿರುವ ಗಾದೆಯಂತಾಗಿ ಹೋಗಿದೆ.



ಮಾಫಿಯಾದ ವಿರುದ್ಧ ಹೋರಾಟಕ್ಕಿಳಿದು ಜೀವ ಭಯ ಎದುರಿಸುತ್ತಿರುವ ರೈತ ಮುಖಂಡರಾದ ರಂಗಸ್ವಾಮಿ, ಲಕ್ಷ್ಮಿನಾರಾಯಣ, ನಂಜುಂಡಪ್ಪ, ನರಸೇಗೌಡ...

ಇಷ್ಟಕ್ಕೂ ಗ್ರಾಮಸ್ಥರೇನು ಸುಮ್ಮನೆ ಕೂತಿಲ್ಲ. ರಂಗಸ್ವಾಮಿ, ಎಂ.ಕೆ. ಲಕ್ಷ್ಮಿನಾರಾಯಣ, ನರಸೇಗೌಡ, ನಾರಾಯಣ, ನಂಜುಂಡಪ್ಪ ಮೊದಲಾದ ಸ್ಥಳೀಯ ಜನಪರ ಹೋರಾಟಗಾರರ ಮುಂದಾಳತ್ವದಲ್ಲಿ ಅಷ್ಟೂ ಹಳ್ಳಿಯ ಜನ ಈ ದಂಧೆಯಿಂದಾಗುತ್ತಿರುವ ಪರಿಸರ ನಾಶ ಮತ್ತು ಜೀವಭಯದ ಕುರಿತು ಸಾಧ್ಯವಾದ ಎಲ್ಲಾ ಸಹಾಯ ಮೂಲಗಳನ್ನು ಎಡತಾಕುತ್ತಲೇ ಇದ್ದಾರೆ. ಡಿಸಿಯಿಂದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರವರೆಗೆ ಎಲ್ಲರಿಗೂ ಮನವಿ ಕೊಟ್ಟಿದ್ದರೂ ಯಾರೊಬ್ಬರೂ ಈ ಸಂಗತಿಯನ್ನು ಇದುವರೆಗೆ ಗಂಭೀರವಾಗಿ ಪರಿಗಣಿಸಿಲ್ಲ. ಬದಲಾಗಿ ಕ್ರಷರ್ ಮಾಫಿಯಾಕ್ಕೆ ಮೇಲಿಂದ ಮೇಲೆ 'ಫೇವರ್'ಗಳಾಗುತ್ತಲೇ ಇವೆ. ಗ್ರಾಮಸ್ಥರ ಹೋರಾಟವನ್ನು ದಮನ ಮಾಡಲು ಈ ಕ್ರಷರ್ ಮಾಫಿಯಾದವರು ಹೋರಾಟದ ಮುಂಚೂಣಿಯಲ್ಲಿರುವ ಮೇಲ್ಕಂಡ ರೈತ ಮುಖಂಡರಿಗೆ ಜೀವ ಬೆದರಿಕೆ ಹಾಕಲೂ ಹಿಂಜರಿದಿಲ್ಲ. 'ನಮ್ಮ ಮತ್ತೊಂದು ಮುಖವನ್ನು ನೀವಿನ್ನೂ ನೋಡಿಲ್ಲ, ನಮ್ಮನ್ನು ಎದುರಾಕಿಕೊಂಡರೆ ಸದ್ಯದಲ್ಲೇ ಆ ಮುಖದ ದರ್ಶನವನ್ನೂ ನಿಮಗೆ ಮಾಡಿಸಬೇಕಾಗುತ್ತದೆ' ಎಂಬ ಸಿಲ್ಲಿ ಡೈಲಾಗುಗಳ ಮೂಲಕ ಗ್ರಾಮಸ್ಥರಲ್ಲಿ ತಮ್ಮ ಬಗ್ಗೆ ಭಯ ಬಿತ್ತುವ ಕಾರ್ಯಕ್ರಮಕ್ಕೂ ಆ ಮಂದಿ ಚಾಲನೆ ನೀಡಿರುವುದು ಸಾಕು ಅವರ ದೌರ್ಜನ್ಯದ ವರಸೆಯನ್ನು ಸಾಬೀತುಮಾಡಲು.

ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮತ್ತು ಸರ್ಕಾರದ ಪ್ರತಿನಿಧಿಗಳು ಈಗಲಾದರೂ ಈ ಅಕ್ರಮ ಜಲ್ಲಿ ಕ್ರಷರ್ ದಂಧೆಯನ್ನು ನಿಯಂತ್ರಿಸದೇ ಹೋದಲ್ಲಿ ತಿಪ್ಪಗೊಂಡನಹಳ್ಳಿ ಜಲಾನಯನದ ನೀರು ಮ್ಯೂಸಿಯಂ ಸೇರಬೇಕಾಗುತ್ತದಷ್ಟೆ. ಎಡೆಬಿಡದ ಸ್ಫೋಟಗಳಿಂದಾಗಿ ಬಿರುಕು ಬಿಟ್ಟ ಮನೆಯೊಳಗಿನ ಜನತೆಯ ಆತಂಕಕ್ಕೆ ಸ್ಪಂದಿಸುವ ಪುರಸೊತ್ತು ಇನ್ನಾದರೂ ಅಧಿಕಾರಿಗಳಿಗೆ ಸಿಗುವಂತಾದರೆ ಅಷ್ಟು ಸಾಕು.

● ಗಿರೀಶ್ ತಾಳಿಕಟ್ಟೆ

ಅಪಾಯಕಾರಿ ಸ್ಫೋಟಕಗಳ ಬಳಕೆ

ಅಕ್ರಮವಾಗಿ ತಲೆ ಎತ್ತಿರುವ ಜಲ್ಲಿ ಕ್ರಷರ್‌ಗಳು ಸರ್ಕಾರ ವಿಧಿಸಿದ ಒಂದೇ ಒಂದು ಮಾಲಿನ್ಯ ನಿಯಂತ್ರಣ ನಿಬಂಧನೆಯನ್ನೂ ಪಾಲಿಸುತ್ತಿಲ್ಲ. ಇಲ್ಲಿ ದುಡಿಯುವ ಕಾರ್ಮಿಕರಾದರು ಉತ್ತರ ಕರ್ನಾಟಕದ ದೂರದ ಜಿಲ್ಲೆಗಳಿಂದ ಬದುಕನ್ನರಸಿ ಬಂದವರು. ಹಾಗಾಗಿ ಮಾಲೀಕರುಗಳಿಗೆ ಹೆಚ್ಚೇನು ಕಾರ್ಮಿಕ ಡಿಮ್ಯಾಂಡುಗಳ ಭಾರವಿಲ್ಲ. ದುಡಿಯುವವರಿಗೆ ಅಲ್ಲಿ ಕಿಂಚಿತ್ತೂ ಸುರಕ್ಷತೆಯಿಲ್ಲ. ಅವನ್ನು ಕಲ್ಪಿಸಿಕೊಡಬೇಕೆಂಬ ಮಾನವೀಯತೆಯೂ ಈ ಕ್ರಷರ್ ಮಾಫಿಯಾಕ್ಕಿಲ್ಲ. ಬಂಡೆ ಸ್ಫೋಟಿಸುವಾಗ ಆಕಸ್ಮತ್ತಾಗಿ ಕಾರ್ಮಿಕರು ಮೃತಪಟ್ಟರೆ ಸ್ಥಳೀಯ ಪೋಲೀಸರೊಂದಿಗೆ ಡೀಲ್ ಕುದುರಿಸಿಕೊಂಡು ಪ್ರಕರಣವನ್ನೇ ಮುಚ್ಚು ಹಾಕುವ ಪ್ರಯತ್ನಗಳು ನಡೆಯುತ್ತಲೇ ಇರುತ್ತವೆ. ಆತನ ಮನೆಯವರ ಕೈಗೆ ಒಂದಷ್ಟು ಸಣ್ಣ ಮೊತ್ತವನ್ನಿಟ್ಟು ಅವರನ್ನು ಬೆಂಗಳೂರಿನಿಂದಲೇ ಓಡಿಸಿ ತಾವು ಮಾತ್ರ ಸೇಫ್ ಆಗಿಬಿಡುತ್ತಾರೆ.

ಹಾಗೆ ನೋಡಿದರೆ ಡೈನಾಮೈಟ್ ಸ್ಫೋಟವನ್ನು ಲೈಸೆನ್ಸ್ ಹೊಂದಿರುವ ಸಾಕಷ್ಟು ಅನುಭವ ಉಳ್ಳ ತಾಂತ್ರಿಕರ ಸಮ್ಮುಖದಲ್ಲೇ ನಡೆಸಬೇಕೆನ್ನುವ ನಿಯಮವನ್ನು ಸರ್ಕಾರ ರೂಪಿಸಿದ್ದರೂ ಈ ಕ್ರಷರ್ ಮಾಲೀಕರುಗಳು ಕೌಶಲ್ಯವಿಲ್ಲದ ಕಾರ್ಮಿಕರ ಕೈಗೆ ಡೈನಾಮೈಟ್ ಕೊಟ್ಟು ದುಡಿಯುವ ಜೀವಗಳೊಟ್ಟಿಗೆ ಚೆಲ್ಲಾಟವಾಡುತ್ತಿದ್ದಾರೆ.


ಅಸಲಿಗೆ ಮಂಗಳೂರಿನ ಪೆದ್ದಣ್ಣನೆಂಬ ಏಕೈಕ ಪರವಾನಗಿ ಉಳ್ಳ ವ್ಯಕ್ತಿಯ ಹೆಸರೇಳಿಕೊಂಡು ಈ ಎಲ್ಲಾ ಅಕ್ರಮ ಕ್ರಷರ್‌ಗಳು ಕಲ್ಲು ಸಿಡಿಸುವ ದುಸ್ಸಾಹಸ ಮಾಡುತ್ತಿವೆ. ಒಂದೇ ಸಮಯಕ್ಕೆ ಹತ್ತಾರು ಕ್ರಷರ್‌ಗಳಿಗೆ ಸಂಬಂಧಿಸಿದ ನೂರಾರು ಡೈನಾಮೈಟ್‌ಗಳು ಸ್ಫೋಟಿಸುತ್ತವೆ. ಅವೆಲ್ಲಕ್ಕೂ ಒಬ್ಬನೇ ವ್ಯಕ್ತಿ ಏಕಕಾಲಕ್ಕೆ ಮದ್ದಿಡುವುದು ಸಾಧ್ಯವೇ ಇಲ್ಲ. ಕೇವಲ ಆತನ ಲೈಸೆನ್ಸ್ ಬಳಸಿಕೊಂಡು ಅವೈಜ್ಞಾನಿಕ ರೀತಿಯಲ್ಲಿ ಬಂಡೆಗಳನ್ನು ಸ್ಫೋಟಿಸಲಾಗುತ್ತಿದೆ. ಅದೃಷ್ಟವಶಾತ್ ಇದುವರೆವಿಗೂ ಅಂತಹ ಭಾರೀ ಅನಾಹುತವೇನೂ ಸಂಭವಿಸಿಲ್ಲ. ಹಾಗಂತ ಈ ಅದೃಷ್ಟ ಹೀಗೇ ಮುಂದುವರೆಯುತ್ತದೆ ಎನ್ನಲಿಕ್ಕೆ ಸಾಧ್ಯವಿಲ್ಲ..... ಯಾವುದಕ್ಕೂ ಸರ್ಕಾರ ಎಚ್ಚೆತ್ತುಕೊಳ್ಳುವುದು ಒಳ್ಳೆಯದು.

ವಿಷ್ಣು ಸಮಾಧಿಯ ದುರ್ಗತಿಗೆ ಯಾರು ಹೊಣೆ?

ಸತ್ತ ಮೇಲೂ ಸುಖವಿಲ್ಲ...!

ಸೌಜನ್ಯವೂ ಬಗೆಹರಿಯುವಂತೆ ಕಾಣುತ್ತಿಲ್ಲ.

ರೆಬೆಲ್ ಅಂಬಿಯೇ ಒಂದಲ್ಲ ಎರಡು ಬಾರಿ ಕೂತು ಪಂಚಾಯ್ತಿ ಮಾಡಿದ್ದಾಯ್ತು, ನೈಸ್ ಖೇಣಿಯ ಬಂಟ ರುದ್ರೇಶನ ಧಮಕಿ, ತೋಳು ಬಲಕ್ಕೂ ಬರಕತ್ತಾಗದೇ ಹೋಯ್ತು. ವಿಷ್ಣು ಭಕ್ತರ ಪೌರುಷ, ಹಿರಿಯ ನಟ ಭಾರತಿಯರ ಗೋಳು, ಸರ್ಕಾರದ ಒತ್ತಡ ಯಾವುದಕ್ಕೂ ಜಗ್ಗದ ಆ ಒಂಟಿ ಹೆಣ್ಣು ಮಗಳ ಛಲದ ಮುಂದೆ ಕನ್ನಡ ಚಿತ್ರರಂಗದ ಯಾವ ದೊಗ್ಗೆ ನಾಯಕನ ಮಾತೂ ನಡೆಯುತ್ತಿಲ್ಲ.



ಇದು ಮೇರುನಟ ದಿವಂಗತ ವಿಷ್ಣು ಸಮಾಧಿಗೊದಗಿದ ದುರ್ಗತಿಯ ಒಂದು ಮುಖ ಮಾತ್ರ. ಇದೇ ಡಿಸೆಂಬರ್ ಬಂತೆಂದರೆ ಸಾಹಸಸಿಂಹ ವಿಷ್ಣು ಇಹಲೋಕ ತೊರೆದು ಮೂರು ವರ್ಷಗಳಾಗುತ್ತವೆ. ಒಬ್ಬ ಮೇರುನಟ ತೀರಿಕೊಂಡು ಮೂರು ವರ್ಷಗಳಾದರೂ ಆತನಿಗೊಂದು ಗೋರಿಕಟ್ಟಲಾಗದ ದುರ್ಗತಿಯನ್ನು ಸರ್ಕಾರ ತಂದಿಟ್ಟಿದೆ. ಅಧಿಕಾರಿಗಳ ಅವಿವೇಕ, ಆಗ ಮುಖ್ಯಮಂತ್ರಿಯಾಗಿದ್ದ ಯಡ್ಡಿಯ ದುಡುಕು ಬುದ್ಧಿ ಮತ್ತು ರಿಯಲ್ ಎಸ್ಟೇಟ್ ಖದೀಮರ ಮರ್ಜಿ ಕಾಯಲು ಹೋಗಿ ಸತ್ತ ನಂತರವೂ ಮಹಾನ್ ನಟನೊಬ್ಬ ಏನೆಲ್ಲಾ ಫಜೀತಿ, ಪೇಚಾಟಗಳಿಗೆ ಬಲಿಯಾಗಬೇಕೆಂಬುದಕ್ಕೆ ವಿಷ್ಣು ಸಮಾಧಿಯೇ ಮೂಕಸಾಕ್ಷಿಯಾಗಿ ನಿಂತಿದೆ.



ವಿಷ್ಣು ಸಮಾಧಿ ಹಿಂದೆ ಅಭಿಮಾನ್ ಸ್ಟುಡಿಯೋ

ಮೊನ್ನೆಯಷ್ಟೇ ವಿಷ್ಣು ಹುಟ್ಟುಹಬ್ಬದ ಪ್ರಯುಕ್ತ ಕೆಂಗೇರಿಯ ವಿಷ್ಣು ಸಮಾಧಿಯೆದುರು ನೆರೆದ ಸಾವಿರಾರು ಭಕ್ತರ ಆಕ್ರೋಶಕ್ಕೆ ತಲೆಕೊಡುವವರೇ ದಿಕ್ಕಿರಲಿಲ್ಲ. ನೆರೆದ ಕೆಲ ವಿಷ್ಣು ಅಭಿಮಾನಿಗಳು ಬಿಜೆಪಿ ಸರ್ಕಾರಕ್ಕೆ ಹಿಡಿಶಾಪ ವಿಟ್ಟರೆ, ಇನ್ನೂ ಕೆಲವರು ಮುಖ್ಯಮಂತ್ರಿ ಶೆಟ್ಟರ್ ವಿರುದ್ಧ ಕಿಡಿಕಾರುತ್ತಿದ್ದರು. ವಿಷ್ಣು ಆಪ್ತ ಗೆಳೆಯ ಅಂಬಿಗೇ ಈ ಬಗ್ಗೆ ಆಸಕ್ತಿಯಿಲ್ಲವೆಂದು ಕೆಲವರು, ಸರ್ಕಾರ ನೆಲಗಳ್ಳರ ಜೊತೆ ಕೈಜೋಡಿಸಿದ್ದರಿಂದಲೇ ಹೀಗಾಯಿತೆಂದು ಹಲವರು, ಹಿರಿಯ ನಟ ದಿ. ಬಾಲಕೃಷ್ಣರ ಮಕ್ಕಳೇ ವಿಷ್ಣು ಸಮಾಧಿಗೆ ಅಡ್ಡಗಾಲಿಟ್ಟಿದ್ದಾರೆಂದು ಮಿಕ್ಕವರು; ಹೀಗೆ ವಿಷ್ಣು ಸಮಾಧಿಯ ಸುತ್ತ ನೆರೆದ ಸಹಸ್ರಾರು ಅಭಿಮಾನಿಗಳ ಆಕ್ರೋಶ ಪ್ರತ್ಯಕ್ಷವೋ ಪರೋಕ್ಷವೋ ಬಿಜೆಪಿ ಸರ್ಕಾರದ ವಿರುದ್ಧವೇ ಮೊಳಗುತ್ತಿದೆ.




ಗೀತಾ ಬಾಲಿ

ಬಾಲಕೃಷ್ಣರ ಆಸ್ತಿ

ವಿಷ್ಣು ಸಮಾಧಿ ಮತ್ತು ವಿಷ್ಣು ಸ್ಮಾರಕಗಳ ವಿಷಯಕ್ಕೆ ಬಂದರೆ ಪ್ರತಿಯೊಬ್ಬರೂ ತಪ್ಪು ಹೊರಿಸುವುದು ಕನ್ನಡದ ಮತ್ತೊಬ್ಬ ಹಿರಿಯ ನಟ ದಿವಂಗತ ಟಿ.ಎನ್. ಬಾಲಕೃಷ್ಣರ ಮಗಳು ಗೀತಾ ಬಾಲಿಯತ್ತ. ಇದೇನಿದ್ದರೂ ಸರ್ಕಾರ ಮತ್ತು ವಿಷ್ಣು ಸ್ಮಾರಕದ ಅಧಿಕೃತ ವಕ್ತಾರರ ಮಟ್ಟದ ತಿಳಿವಳಿಕೆಯಾದರೆ, ಇದ್ಯಾವುದರ ಬಗ್ಗೆ ತಲೆಕೆಡಿಸಿಕೊಳ್ಳದ ಅಭಿಮಾನಿಗಳಿಗಿದು ಸರ್ಕಾರದ ನಿರಾಸಕ್ತಿ ಮತ್ತು ಕುತಂತ್ರವಾಗಿ ಕಾಣಿಸುತ್ತದೆ.

ವಿಷ್ಣು ಕೊನೆಯುಸಿರೆಳೆದದ್ದು ಮೈಸೂರಿನ ವಿಕ್ರಮ್ ಆಸ್ಪತ್ರೆಯಲ್ಲಿ. ಬೆಂಗಳೂರಿಗಿಂತಲೂ ವಿಷ್ಣುಗೆ ಪ್ರಿಯವಾಗಿದ್ದದ್ದು ಮೈಸೂರು. ಮೈಸೂರಿನಲ್ಲೇ ವಿಷ್ಣು ಅಂತ್ಯಕ್ರಿಯೆ ನಡೆದಿದ್ದರೆ ಅವರ ಕೊನೆಯಾಸೆಯೂ ಈಡೇರುತ್ತಿತ್ತು. ಸಮಸ್ಯೆಯಿರುತ್ತಿರಲಿಲ್ಲ. ಆಗ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪಗೆ ಅದೇನು ಉದ್ದೇಶವಿತ್ತೋ, ಅದ್ಯಾರು ತಲೆಕೆಡಿಸಿದರೋ, ಏಕಾಏಕಿ ಬಾಲಕೃಷ್ಣರ ಅಭಿಮಾನ್ ಸ್ಟುಡಿಯೋದಲ್ಲೇ ವಿಷ್ಣು ಅಂತ್ಯಕ್ರಿಯೆ ನಡೆಸುವಂತೆ ಆದೇಶ ನೀಡಿದ್ದೇ ಇಡೀ ಸಮಸ್ಯೆಯ ಮೂಲ!



ಗಣೇಶ್


ಕೆಂಗೇರಿ ಹೋಬಳಿಯ ತುರಗುಡ್ಡ ಹಳ್ಳಿಯ ಸರ್ವೆ ನಂ. 68 ರಲ್ಲಿರುವ ಅಭಿಮಾನ್ ಸ್ಟುಡಿಯೋ ಹೇಳಿಕೇಳಿ ಕನ್ನಡದ ಹಿರಿಯ ಹಾಸ್ಯನಟ ದಿ. ಟಿ.ಎನ್. ಬಾಲಕೃಷ್ಣರ ಸೊತ್ತು. ಒಂದಾನೊಂದು ಕಾಲಕ್ಕದು 20 ಎಕರೆಗಳಷ್ಟು ವಿಶಾಲವಾಗಿತ್ತು. ಅದು ಕನ್ನಡ ಚಿತ್ರರಂಗದ ಅಭಿವೃದ್ಧಿಗೆಂದು ಸರ್ಕಾರವೇ ಮಂಜೂರು ಮಾಡಿದ ಜಮೀನಾಗಿತ್ತು. ಬದುಕಿನ ಕೊನೆತನಕ ಜಂಜಾಟದಲ್ಲೇ ಹೈರಾಣಾದ ವಯೋವೃದ್ಧ ಬಾಲಕೃಷ್ಣ ಅಲ್ಲೊಂದು ಶೆಡ್ ನಿರ್ಮಿಸಿದ್ದು ಬಿಟ್ಟರೆ ಸ್ಟುಡಿಯೋ ಕನಸು ಮಾತ್ರ ಕನಸಾಗಿಯೇ ಉಳಿಯಿತು.

ಯಾವತ್ತು ಬಾಲಕೃಷ್ಣ ಕೊನೆಯುಸಿರೆಳೆದರೋ ಸ್ಟುಡಿಯೋದ ಇಪ್ಪತ್ತೆಕರೆ ಆಸ್ತಿಯ ಮೇಲೆ ರಿಯಲ್ ಎಸ್ಟೇಟ್ ಕಣ್ಣು ಬಿತ್ತು. ಬಾಲಕೃಷ್ಣರ ಐವರು ಮಕ್ಕಳ ಪೈಕಿ ಚಿತ್ರರಂಗದ ನಂಟಿದ್ದದ್ದು ಕೊನೇ ಮಗ ಶ್ರೀನಿವಾಸ್‌ನಿಗೆ. 2003 ರಲ್ಲಿ ಇದೇ ಶ್ರೀನಿವಾಸ್ ಅಭಿಮಾನ್ ಸ್ಟುಡಿಯೋದ 20 ಎಕರೆಗಳ ಪೈಕಿ ಹತ್ತಕರೆಯನ್ನು ಬಿಲ್ಡರ್ ಮಂಜುನಾಥ್ ಎಂಬಾತನಿಗೆ ಮಾರಿಬಿಟ್ಟ. ಇದಕ್ಕೆ ಬಾಲಕೃಷ್ಣರ ಮತ್ತೊಬ್ಬ ಪುತ್ರ ಗಣೇಶ್ ಕೂಡ ಕೈಜೋಡಿಸಿದ್ದ. ಹೆಸರಿಗಷ್ಟೇ ಬಿಲ್ಡರ್ ಮಂಜುನಾಥ್ ಹತ್ತೆಕರೆಯನ್ನು ಖರೀದಿಸಿದ್ದನಾದರೂ ಆತನಿಗೆ ಪಾಲುದಾರರಾಗಿದ್ದದ್ದು ಬಿಜೆಪಿಯ ಕೆಲ ಲೋಕಲ್ ಪುಢಾರಿಗಳು.

ಮಗಳ ಹೋರಾಟ

ಬಾಲಕೃಷ್ಣರ ಮಕ್ಕಳ ಪೈಕಿ ದೊಡ್ಡವಳಾದ ಬೃಂದಾ, ಎರಡನೆಯವಳು ಭಾರತಿ ಮತ್ತು ಮೂರನೇ ಮಗಳು ಗೀತಾಬಾಲಿಗಿದು ಗೊತ್ತೇ ಇರಲಿಲ್ಲ. ತಂದೆಯ ಕನಸಾದ ಸ್ಟುಡಿಯೋದ ಅರ್ಧಭಾಗದಲ್ಲಿ ಯಾವತ್ತು ಕಟ್ಟಡಗಳೇಳತೊಡಗಿದವೋ ಮೂರನೇ ಮಗಳು ಗೀತಾಬಾಲಿ ತಲೆ ಕೆಡಿಸಿಕೊಂಡಿದ್ದಾರೆ. ಗೊತ್ತಾಗಿದ್ದೇನೆಂದರೆ ಹತ್ತೆಕರೆಯನ್ನು ತಮ್ಮಂದಿರಿಬ್ಬರೂ ಸೇರಿ ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿಕೊಂಡಿದ್ದು ಮತ್ತು ಅದರ ಅಷ್ಟೂ ಮೊತ್ತವನ್ನು ಅವರೇ ನುಂಗಿ ಹಾಕಿದ್ದು.

2004 ರಲ್ಲಿ ಗೀತಾಬಾಲಿ ಇದರ ವಿರುದ್ಧ ಕೋರ್ಟಿನ ಮೊರೆ ಹೊಕ್ಕರು. ತಂದೆಯ ಕನಸಿದ್ದದ್ದು ಅಲ್ಲೊಂದು ಸ್ಟುಡಿಯೋ ನಿರ್ಮಿಸಬೇಕೆಂಬುದು ಮಾತ್ರ. ತಮ್ಮಂದಿರಿಬ್ಬರೂ ಸೇರಿಕೊಂಡು ಹತ್ತೆಕರೆ ಮಾರಿದ್ದು ಕಾನೂನಿಗೆ ವಿರುದ್ಧ. ಏಕೆಂದರೆ ಸರ್ಕಾರ ಭೂಮಿ ಮಂಜೂರು ಮಾಡಿದ್ದೇ ಸ್ಟುಡಿಯೋ ನಿರ್ಮಾಣಕ್ಕೆ ಮತ್ತು ಕನ್ನಡ ಚಿತ್ರರಂಗದ ಏಳಿಗೆಗೆ. ಇದನ್ನೇ ಕಾರಣ ಕೊಟ್ಟು ಕೋರ್ಟು ಮೆಟ್ಟಿಲೇರಿದ ಬಾಲಕೃಷ್ಣರ ಮಗಳು ಗೀತಾಬಾಲಿಗೆ ಕನಿಷ್ಠ ಮಿಕ್ಕ ಹತ್ತೆಕರೆಯನ್ನಾದರೂ ಉಳಿಸಿಕೊಳ್ಳುವ ಆಶೆ. ಇಲ್ಲಿ ಗೀತಾ ಕೇಸು ಹಾಕಿರುವುದು ತನ್ನ ಖಾಸಾ ತಮ್ಮ ಗಣೇಶ್ ವಿರುದ್ಧ. ಈಗಾಗಲೇ ಹತ್ತೆಕರೆಯನ್ನು ಮಾರಿಹಾಕಿದ ಕೊನೇ ಮಗ ಶ್ರೀನಿವಾಸ್ ಮಾರಿದ ಬಹುಪಾಲು ದುಡ್ಡೆತ್ತಿಕೊಂಡು ನಾಪತ್ತೆಯಾಗಿದ್ದಾನೆ. ಉಳಿಕೆ ಹತ್ತೆಕರೆಯ ಉಸ್ತುವಾರಿಯನ್ನು ತನಗೇ ವಹಿಸಿಕೊಡಬೇಕೆಂದೂ ತನ್ನ ಹೆಸರಿಗೇ ಅಭಿಮಾನ್ ಸ್ಟುಡಿಯೋದ ಅಷ್ಟೂ ಆಸ್ತಿಯನ್ನು ಖಾತೆ ಮಾಡಿಕೊಡಬೇಕೆಂದೂ ಗಣೇಶ್ ಪಟ್ಟು ಹಿಡಿದರೆ, ಬಾಲಕೃಷ್ಣರ ಮೂವರೂ ಹೆಣ್ಣು ಮಕ್ಕಳಾದ ಬೃಂದಾ, ಭಾರತಿ ಮತ್ತು ತನ್ನನ್ನೂ ಸೇರಿಸಿ ತಲಾ ಎರಡೂವರೆ ಎಕರೆಯಂತೆ ಖಾತೆ ಮಾಡಿಕೊಡಬೇಕೆಂಬುದು ಗೀತಾ ಬಾಲಿಯ ಕೋರಿಕೆ.



ಬಾಲಕೃಷ್ಣರ ಕೌಟುಂಬಿಕ ದುರಂತ ಮತ್ತು ಮಗಳು ಗೀತಾಬಾಲಿಯ ಹೋರಾಟ

ಪ್ರಾರಬ್ಧವೋ ಕರ್ಮವೋ ವಿಷ್ಣು ಸಮಾಧಿಯ ಪ್ರಶ್ನೆಯ ಜೊತೆ ಕನ್ನಡ ಹಿರಿಯ ನಟ ದಿ|| ಬಾಲಕೃಷ್ಣರ ಕೌಟುಂಬಿಕ ಕ್ಷೋಭೆಯೂ ಕೊಂಡಿಯಂತೆ ಥಳುಕಿಕೊಂಡಿದೆ. ಅದು ಬಗೆಹರಿಯದೆ ವಿಷ್ಣು ಸ್ಮಾರಕ ರೂಪುಗೊಳ್ಳುವುದು ಸಾಧ್ಯವೇ ಇಲ್ಲ.


ಹಾಸ್ಯಬ್ರಹ್ಮ ಬಾಲಕೃಷ್ಣರ ಕೊನೆಯ ದಿನಗಳಲ್ಲಿ ಹಾಸಿಗೆ ಹಿಡಿದಿದ್ದ ಅವರ ಆರೈಕೆ, ಚಿಕಿತ್ಸೆಗಳೆಲ್ಲವನ್ನೂ ನಿಭಾಯಿಸಿದ್ದು ಮೂರನೇ ಮಗಳು ಗೀತಾಬಾಲಿ. ಕೊನೇ ಮಗ ಶ್ರೀನಿವಾಸ್ ಶುದ್ಧ ಕುಡುಕ ಮತ್ತು ಸೋಂಭೇರಿ. ಹಿರಿಯ ಮಗ ಗಣೇಶ್ ಪಕ್ಕಾ ಶೋಕಿಲಾಲ ಮತ್ತು ಹೊಣೆಗೇಡಿ. ದೊಡ್ಡ ಮಗಳಾದ ಬೃಂದಾ ಮತ್ತು ಎರಡನೇ ಪುತ್ರಿ ಮದುವೆಯಾಗಿ ತಮ್ಮ ಪಾಡಿಗೆ ತಾವಿದ್ದು ಬಿಟ್ಟರು. ಬಾಲಕೃಷ್ಣ ತೀರಿಕೊಂಡ ಮೇಲಂತೂ ಅವರವರ ಬದುಕೇ ಜಂಜಾಟವಾಗಿ ಐದೂ ಮಕ್ಕಳ ಮಧ್ಯೆ ಪರಸ್ಪರ ಸಂಪರ್ಕವೇ ಕ್ಷೀಣಿಸಿತು.

ಇಂಥ ಅವ್ಯವಸ್ಥೆಯತ್ತ ಲಾಭ ಪಡೆದದ್ದು ಗಂಡು ಮಕ್ಕಳಾದ ಶ್ರೀನಿವಾಸ್ ಮತ್ತು ಗಣೇಶ್. 2003ರಲ್ಲಿ ಅಭಿಮಾನ್ ಸ್ಟುಡಿಯೋದ ಇಪ್ಪತ್ತೆಕರೆಯನ್ನು ತಲಾ ಹತ್ತೆಕರೆಯಂತೆ ಹಂಚಿಕೊಂಡು ಸ್ಟುಡಿಯೋ ಅಭಿವೃದ್ಧಿಪಡಿಸಲು ಹತ್ತೆಕರೆಯನ್ನು ಮಾರಿಯೇ ಹಣ ಹೊಂಚಬೇಕಾದ ಅನಿವಾರ್ಯತೆಯಿದೆ ಎಂದು ಸರ್ಕಾರದಿಂದ ಅನುಮತಿಯನ್ನೂ ಗಿಟ್ಟಿಸಿಬಿಟ್ಟರು. ಶ್ರೀನಿವಾಸ್ ತನ್ನ ಪಾಲಿನ ಹತ್ತೆಕರೆಯನ್ನು ಕೆಂಗೇರಿಯ ಪ್ರಭಾವಿ ರಿಯಲ್ ಎಸ್ಟೇಟ್ ಖದೀಮರಿಗೆ ಮಾರಿ ಒಂದು ಪಾಲನ್ನು ತಮ್ಮ ಗಣೇಶ್‌ಗೂ ಬಹುಪಾಲನ್ನು ತಾನಿಟ್ಟುಕೊಂಡು ತಮಿಳುನಾಡಿನ ಚೆನ್ನೈ ಸೇರಿಕೊಂಡ.

2004ರ ಹೊತ್ತಿಗಿದು ಮೂರನೇ ಮಗಳು ಗೀತಾಬಾಲಿಗೆ ಗೊತ್ತಾಗಿ ಆಕೆ ತಲೆಕೆಡಿಸಿಕೊಂಡರೆ ಅರ್ಧ ಆಸ್ತಿ ಮಾರಿದ್ದರಲ್ಲಿ ತಮ್ಮಂದಿರಿಬ್ಬರೂ ಪರಸ್ಪರ ಕೈಜೋಡಿಸಿದ್ದಷ್ಟೇ ಅಲ್ಲ ಒಡಹುಟ್ಟಿದ ಅಕ್ಕಂದಿರನ್ನೂ ವಂಚಿಸಿದ್ದರು. ತಂದೆಯ ಕನಸಿಗೂ ಕೊಳ್ಳಿಯಿಟ್ಟಿದ್ದರು. ಆಗ ಕೋರ್ಟಿನ ಮೊರೆ ಹೊಕ್ಕ ಗೀತಾಬಾಲಿಯ ಬೆನ್ನಿಗೆ ಉಳಿದ ಹೆಣ್ಣುಮಕ್ಕಳು ನಿಂತರೆ ಪರಾರಿಯಾದ ಶ್ರೀನಿವಾಸ್‌ನ ಅನುಪಸ್ಥಿತಿಯಲ್ಲಿ ಗಣೇಶ್ ಉಳಿಕೆ ಹತ್ತೆಕರೆಯನ್ನು ತನ್ನ ಹೆಸರಿಗೇ ಖಾತೆ ಮಾಡಬೇಕೆಂದು ಹಠಕ್ಕೆ ಬಿದ್ದ.

ತಂದೆ ಬದುಕಿದ್ದಷ್ಟೂ ದಿನ ಒಮ್ಮೆಯೂ ಅವರ ಯೋಗಕ್ಷೇಮ ವಿಚಾರಿಸಲಿಲ್ಲ, ದುಡಿದು ನಯಾಪೈಸೆ ಕೊಡಲಿಲ್ಲ. ಸತ್ತಮೇಲೆ ಅವರ ಆಸ್ತಿಯನ್ನೇ ಕದ್ದೂ ಮುಚ್ಚಿ ಮಾರಿಕೊಂಡವರು ಬಂದ ದುಡ್ಡಲ್ಲಿ ಸ್ಟುಡಿಯೋ ಅಭಿವೃದ್ಧಿ ಮಾಡುವುದಿರಲಿ, ಒಡಹುಟ್ಟಿದ ಅಕ್ಕತಂಗಿಯರಿಗೂ ಕವಡೆ ಕಾಸು ಕೊಡಲಿಲ್ಲ. ಇಂಥವರ ಕೈಗೆ ಅಭಿಮಾನ್ ಸ್ಟುಡಿಯೋದ ಉಳಿಕೆ ಹತ್ತೆಕರೆ ಬಂತೆಂದರೆ ಅಪಾಯ ತಪ್ಪಿದ್ದಲ್ಲ. ಆದ್ದರಿಂದ ಇಡೀ ಸ್ಟುಡಿಯೋ ಮತ್ತು ಅದರ ಸೊತ್ತನ್ನು ನನಗೇ ವಹಿಸಿಕೊಡಿ, ನಾನಲ್ಲಿ ಅತ್ಯಾಧುನಿಕ ಸ್ಟುಡಿಯೋ ನಿರ್ಮಿಸುತ್ತೇನೆಂಬುದು ಮಗಳು ಗೀತಾಬಾಲಿಯ ಕೋರಿಕೆ. ಅದು ನ್ಯಾಯಯುತವಾದದ್ದು ಮತ್ತು ಗೀತಾಗೆ ಜವಾಬ್ದಾರಿಯಿದೆ ಎಂಬುದು ಕೋರ್ಟ್‌ಗೂ ಗೊತ್ತಿದೆ. ಸದ್ಯ ವಾದ-ವಿವಾದ ಮುಂದುವರಿದಿದೆಯಾದ್ದರಿಂದ ಇದು ಬಗೆಹರಿಯದೇ ವಿಷ್ಣು ಸ್ಮಾರಕಕ್ಕೆ ಮುಕ್ತಿಯಿಲ್ಲ.

ಅಲ್ಲಿಗೆ ಇಡೀ ಅಭಿಮಾನ್ ಸ್ಟುಡಿಯೋದ ಆಸ್ತಿ ವಿವ[...] ನ್ಯಾಯಾಲಯದ ಸುಪರ್ದಿಗೊಳಪಟ್ಟಿದೆ ಎಂದೇ ಅರ್ಥ[...] ಇಂಥ ಪರಿಸ್ಥಿತಿಯಲ್ಲಿ ಅಲ್ಲಿ ಬೇರೆ ಯಾರದ್ದೋ ಸ್ಮಾ[...] ನಿರ್ಮಿಸುವುದಾಗಲಿ, ಸಮಾಧಿ ಕಟ್ಟುವುದಾಗ[...] ನ್ಯಾಯಾಲಯದ ಉಲ್ಲಂಘನೆಯಾಗುತ್ತದೆ. ಇದ್ಯಾವುದ[...] ಬಗ್ಗೆಯೂ ಪರಿಜ್ಞಾನವಿಲ್ಲದ ಯಡ್ಡಿ ಸರ್ಕಾರ ವಿ[...] ಕೊನೆಯುಸಿರೆಳೆದ ಸುದ್ದಿ ಗೊತ್ತಾಗಿದ್ದೇ ವೀರಾವೇಶದ[...] ಅಭಿಮಾನ್ ಸ್ಟುಡಿಯೋದಲ್ಲಿ ಅಂತ್ಯಕ್ರಿಯೆಗೆ ಮುಂದಾಯಿ[...]



ಕಾಟಾಚಾರದ......!

ಇಡೀ ಆಸ್ತಿ ವಿವಾದ ನ್ಯಾಯಾಲ[...] ದಲ್ಲಿರುವ ಬಗ್ಗೆ ಅಧಿಕಾರಿಗಳಿಗೆ ಗೊತ್ತಿ[...] ಲ್ಲವೋ ಅಥವಾ ಗೊತ್ತಿದ್ದೂ ಯಡ್ಡಿ ಸರ್ಕಾ[...] ದುಡುಕಿತೋ ಅಂತೂ ಅಭಿಮಾ[...] ಸ್ಟುಡಿಯೋಕ್ಕೆ ವಿಷ್ಣು ಕಳೇಬರವ[...] ತಂದಿದ್ದೇ ಆತುರಾತುರವಾಗಿ ಅಂತ್ಯಕ್ರಿ[...] ಮುಗಿಸಲಾಯ್ತು. ವಿಷ್ಣು ಕೊನೆಯು[...] ರೆಳೆದದ್ದು ಮೈಸೂರಿನಲ್ಲಾದ್ದರಿಂ[...] ಮೈಸೂರಿನಲ್ಲೇ ಅಂತ್ಯಕ್ರಿಯೆ ನೆರವೇರಿಸಿ[...] ವಿಷ್ಣು ಕೊನೆಯಾಸೆಯೂ ಪೂರೈ[...] ದಂತಾಗುತ್ತಿತ್ತು. ಮೈಸೂರು ಸುತ್ತಮುತ್ತ ಬೇಕಾಬಿಟ್ಟಿ ಸರ್ಕಾ[...] ಭೂಮಿಯೂ ಇತ್ತು. ಇನ್ನು ಬೆಂಗಳೂರಲ್ಲೇ ವಿಷ್ಣು ಸಮಾ[...] ನಿರ್ಮಿಸಬೇಕೆಂದಿದ್ದರೆ ಜ್ಞಾನಭಾರತಿ ಸುತ್ತಮುತ್ತ ಉತ್ತರ[...] ಅಕ್ಕಪಕ್ಕ, ಕನಕಪುರ ರಸ್ತೆ, ಮೈಸೂರು ರಸ್ತೆ, ತುಮಕೂ[...] ರಸ್ತೆ ಹೆಬ್ಬಾಳದ ಆಸುಪಾಸು ಹತ್ತಾರು ಎಕರೆಗಳ ವಿಶಾ[...] ಸರ್ಕಾರಿ ಭೂಮಿಯಿತ್ತು.


ಮತ್ತಿಕೆರೆಯ ಜಾಲಹಳ್ಳಿ ಕೆರೆ ಉದ್ಯಾನವನದಲ್ಲೋ[...] ಜೆಪಿನಗರದ ವಿಶಾಲ ಪಾರ್ಕಿನಲ್ಲೋ ವಿಷ್ಣು ಸಮಾ[...] ನಿರ್ಮಿಸಿದ್ದರೆ ಅದೊಂದು ಶಾಶ್ವತ ಸ್ಮಾರಕವಾಗಿ ವಿ[...] ಗರಿಮೆಗೆ ತಕ್ಕ ಗೌರವವಾಗುತ್ತಿತ್ತು. ಆದರೆ ಯಡ್ಡಿ ಸರ್ಕಾ[...] ಒಟ್ನಾಸೆ ವಿಷ್ಣು ಅಂತ್ಯಕ್ರಿಯೆ ಮುಗಿಸಬೇಕು ಮ[...] ಅದಕ್ಕೆಂದೇ ಮುಖ್ಯಮಂತ್ರಿ ಮೈಸೂರಿಗೆ ಹೋಗಬೇಕ[...] ತಾಪತ್ರಯ ತಪ್ಪಬೇಕು. ಕಾಟಾಚಾರದ ಅಂತಿಮ ಸಂಸ[...] ಮುಗಿಸಲು ಅಣಿಯಾದ ಯಡ್ಡಿ ಸರ್ಕಾರಕ್ಕೆ ವಿಷ್ಣು ಬ[...] ಗೌರವ, ಅವರ ಮಹತ್ವ, ಸಲ್ಲಿಸಬೇಕಾದ ಗೌ[...] ಯಾವುದೂ ಮುಖ್ಯವಾಗಲಿಲ್ಲ. ಅಭಿಮಾನ್ ಸ್ಟುಡಿಯೋ[...] ಭೂಮಿ ಬಾಲಕೃಷ್ಣರ ಕುಟುಂಬಕ್ಕೆ ಸೇರಿದ್ದೆಂದು ಗೊತ್ತಿದ[...] 20 ಎಕರೆಯಲ್ಲಿ ಉಳಿದಿರುವುದು ಬರೇ ಹತ್ತೆಕರೆ ಮ[...] ಎಂದು ತಿಳಿದೂ, ಈ ಬಗ್ಗೆ ನ್ಯಾಯಾಲಯದ[...] ವ್ಯಾಜ್ಯವಿರುವುದನ್ನು ಅರಿತೂ, ಸೌಜನ್ಯಕ್ಕೂ ಬಾಲಕೃ[...] ಮಕ್ಕಳ ಅನುಮತಿ ಯಾಚಿಸದೆ ಆತು[...] ತುರವಾಗಿ ವಿಷ್ಣು ಕಳೇಬರವನ್ನು ತಂದಿ[...] ಅಭಿಮಾನ ಸ್ಟುಡಿಯೋ ಆವರಣ[...] ಅಂತ್ಯಕ್ರಿಯೆ ಮುಗಿಸಲಾಯ್ತು.

ಹೀಗೆ ಯಾರದೋ ಸೊತ್ತಿ[...] ಇನ್ನಾರದೋ ಶವ ತಂದು ಸುಟ್ಟುಹಾ[...] ಯಡ್ಡಿ ಸರ್ಕಾರದ ಅವಿವೇಕಕ್ಕೂ ಬೀ[...] ಅನಾಥ ಹೆಣವನ್ನು ಸಿಕ್ಕಲ್ಲಿ ಹೂ[...] ಹಾಕಿ ಕೈತೊಳೆದುಕೊಳ್ಳುವ ಪೊಲೀ[...] ಕರ್ಮಕ್ಕೂ ಹೆಚ್ಚೇನೂ ವ್ಯತ್ಯಾಸವಿರಲಿ[...]


ಸರ್ಕಾರವೇ ಅಪರಾಧಿ?

ಕನ್ನಡ ಜನಮಾನಸದ ಪ್ರಶ್ನಾತೀತ ನಾಯಕರಂ[...] ವಿಷ್ಣು ಸಾವಿಗಿದು ಸರ್ಕಾರ ಎಸಗಿದ ಅಪಚಾರ ಮ[...] ಅನ್ಯಾಯ ಎರಡೂ ಆಗಿತ್ತು. ಮೊದಮೊದಲು ವಿ[...] ಸಮಾಧಿ ಮಾತ್ರವೆಂದು ತೆಪ್ಪಗಿದ್ದ ಬಾಲಕೃಷ್ಣರ ಮಗ[...] ಗೀತಾಬಾಲಿಗೆ ಯಾವತ್ತು ಸಮಾಧಿ ಸ್ಥಳದಲ್ಲಿ ಎರಡೆಕರೆ[...] ವಿಷ್ಣು ಸ್ಮಾರಕ ನಿರ್ಮಿಸಲು ಸರ್ಕಾರ ಯತ್ನಿಸುತ್ತಿದೆ ಎಂಬು[...] ಗೊತ್ತಾಯಿತೋ, ಇಡೀ ಅಭಿಮಾನ್ ಸ್ಟುಡಿಯೋ[...] ಆಸ್ತಿಯೇ ಬಾಲಕೃಷ್ಣರ ಕುಟುಂಬದ ಕೈತಪ್ಪುತ್ತಿದೆಯೆ[...] ಆತಂಕ ಶುರುವಾಗಿದೆ.

ವಿಷ್ಣು ಮೇಲಿನ ಗೌರವಕ್ಕೆ ಹೆಣ ಸುಡಲು ಜ[...] ಕೊಟ್ಟರೆ ಈಗ ಸ್ಮಾರಕಕ್ಕೆಂದು ಮತ್ತೆ ಎರಡೆಕರೆಯ[...] ಸರ್ಕಾರ ಕಿತ್ತುಕೊಳ್ಳುವುದು ಅನ್ಯಾಯವೆಂದು ಕೋರ್ಟಿ[...] ತಕರಾರು ಅರ್ಜಿ ಸಲ್ಲಿಸಿಬಿಟ್ಟರು. ಇದರಿಂದಾಗಿ ಸರ್ಕಾ[...] ಮತ್ತು ವಿಷ್ಣು ಕುಟುಂಬ ಎಂಥಾ ಫಜೀತಿಗೆ ಸಿಲುಕಿದವೆಂ[...] ಬಾಲಕೃಷ್ಣರ ಮಗಳು ಜಮೀನು ಕೊಡಲು ಒಪ್ಪ[...] ಹೋದರೆ ವಿಷ್ಣು ಸ್ಮಾರಕವನ್ನೇ ಬೇರೆಡೆಗೆ ಸ್ಥಳಾಂತರಿಸಬೇ[...] ಸಮಾಧಿಯೇ ಒಂದೆಡೆ, ಸ್ಮಾರಕ ಮತ್ತೊಂದೆಡೆಯಾ[...] ಎರಡೂ ಮಹತ್ವ ಕಳೆದುಕೊಳ್ಳುತ್ತವೆ. ಸಮಾಧಿ ಸ್ಥಳದ[...]




ಭಾರತಿಯವರ ಏಕಾಂಗಿ ಆರ್ತನಾದ



"ಬದುಕಿರುವಾಗ ಜೊತೆಗಿದ್ದವರೆಲ್ಲ ಈಗೇಕಿಲ್ಲ?

ಹೀಗಾಗ್ತದೆ ಅಂತ ಯಾರಿಗೆ ಗೊತ್ತಿತ್ತು? ಇದೆಲ್ಲ ಅವಾಂತರಗಳಿಂದಾಗಿ ಅವರ ಆತ್ಮಕ್ಕೆ ಶಾಂತಿಯಂತೂ ಸಿಕ್ಕಲ್ಲ. ಅವರಿಗೆ ಮೈಸೂರೆಂದರೆ ಪಂಚಪ್ರಾಣ. ಅಲ್ಲೇ ಅಂತ್ಯಕ್ರಿಯೆ ಮಾಡಿ ವಿನೂತನ ಸ್ಮಾರಕ ನಿರ್ಮಿಸಬೇಕೆಂಬ ಆಸೆ ನನಗೂ ಇತ್ತು. ಆದರೆ ಸರ್ಕಾರದ ನಿರ್ಧಾರವನ್ನು ಯಾಕೆ ಪ್ರಶ್ನಿಸಬೇಕೆಂದು ಬೆಂಗಳೂರಲ್ಲಿ ಅಂತ್ಯಕ್ರಿಯೆಗೆ ಒಪ್ಪಿಕೊಂಡೆ. ಈಗ ನೋಡಿದ್ರೆ ಸಮಾಧಿ ಸ್ಥಳವೇ ವಿವಾದದಲ್ಲಿದೆ. ಸರ್ಕಾರ ನಿವೇಶನದ ಬೆಲೆಯೆಂದು ಎರಡು ಕೋಟಿ ಎತ್ತಿಟ್ಟಿದೆ ನಿಜ. ಆದರೆ ಅದನ್ನು ಆ ಹೆಣ್ಣುಮಗಳು (ಗೀತಾಬಾಲಿ) ಒಪ್ಪಬೇಕಲ್ಲ.

"ಹಾಗಂತ ಕೇವಲ ಸಮಾಧಿಯನ್ನಷ್ಟೇ ನಿರ್ಮಿಸಿ ಸ್ಮಾರಕದ ವಿಚಾರ ಕೈಬಿಟ್ಟು ಮೈಸೂರಲ್ಲಿ ವಿಶಿಷ್ಟ ಸ್ಮಾರಕವೊಂದನ್ನು ನಿರ್ಮಿಸುವ ಬಗ್ಗೆ ನಾನೇ ನಿರ್ಧರಿಸಿದರೆ ಅದನ್ನು ಅಭಿಮಾನಿಗಳು ಒಪ್ಪುತ್ತಿಲ್ಲ. ಎಲ್ಲಿ ಅಂತ್ಯಕ್ರಿಯೆಯಾಯ್ತೋ ಅಲ್ಲೇ ಸ್ಮಾರಕವಿದ್ದರೇನೇ ಸಾರ್ಥವೆನ್ನುವ ಅಭಿಮಾನಿಗಳ ಬಯಕೆಯನ್ನು ಗೌರವಿಸಬೇಕಲ್ಲವೇ?



ವಿಷ್ಣು ಅಭಿನಯಿಸಿದ ಚಿತ್ರಗಳು, ಅವರ ಬದುಕಿನ ಫೋಟೋಗಳು, ಅವರು ಬಳಸುತ್ತಿದ್ದ ವಸ್ತುಗಳು, ಅವರ ಆಧ್ಯಾತ್ಮಿಕ ಸಾಧನೆ ಎಲ್ಲವನ್ನೂ ಪ್ರತಿಬಿಂಬಿಸುವ ಸ್ಮಾರಕವಾಗಬೇಕೆಂದರೆ ಅದಕ್ಕೆ ಎರಡು ಎಕರೆ ಯಾವ ಲೆಕ್ಕ ಹೇಳಿ. ಆದರೂ ಅನುಸರಿಸಿಕೊಳ್ಳಬೇಕಲ್ಲವೇ? ಈಗ ನೋಡಿದರೆ ಯಾರಿಗೂ ಈ ಬಗ್ಗೆ ಆಸಕ್ತಿಯಿಲ್ಲ, ನಾನು ಅದೆಷ್ಟು ಅಂತ ಹೆಣಗಾಡಲಿ? ಪ್ರಾರಂಭದಲ್ಲಿ ಎಲ್ಲರೂ ವಿಷ್ಣು ಬಗ್ಗೆ ದೊಡ್ಡ ದೊಡ್ಡ ಮಾತಾಡಿ ಈಗ ಎಲ್ಲರೂ ಕೈಬಿಟ್ಟಿದ್ದಾರೆ. ಒಂದು ಕಡೆ ಅಭಿಮಾನಿಗಳ ಒತ್ತಾಯವಾದರೆ, ಇನ್ನೊಂದು ಕಡೆ ಸರ್ಕಾರದ ನಿರಾಸಕ್ತಿ, ಬಹುಶಃ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದರೇನೇ ಕೆಲಸ ಬೇಗ ಆಗುತ್ತಿತ್ತೇನೋ. ನನಗಂತೂ ಹೆಣಗಾಡಿ ಸಾಕಾಗಿಹೋಗಿದೆ. ಎಲ್ಲವನ್ನೂ ಆ ದೇವರೇ ನೋಡಿಕೊಳ್ಳಲಿ ಎಂದು ದೇವರ ಮೇಲೆ ಭಾರ ಹಾಕಿದ್ದೇನೆ. ಅವನಿಚ್ಛೆಯಿದ್ದರೆ ಸ್ಮಾರಕವಾಗುತ್ತೆ ಇಲ್ಲಾ ಅಂದ್ರೆ ಯಾರು ತಾನೇ ಏನು ಮಾಡಲು ಸಾಧ್ಯ?"

ಇದು ಭಾರತಿ ವಿಷ್ಣುವರ್ಧನ್ ಹತಾಶೆಯಿಂದ ಪತ್ರಿಕೆಯೊಡನೆ ತೋಡಿಕೊಂಡ ಬೇಗುದಿ. ವಿಷ್ಣು ಆಪ್ತ ಗೆಳೆಯ ಅಂಬಿ ಮನಸ್ಸು ಮಾಡಿದರೆ ಚಿಟಿಕೆ ಹೊಡೆದಂತೆ ಇಡೀ ಸಮಸ್ಯೆ ಬಗೆಹರಿಸಬಹುದು. ಆದರೆ ಅಂಬಿಗೆ ಹಿಂದಿನ ಆಸಕ್ತಿ ಉಳಿದಿಲ್ಲ. ಮೊನ್ನೆ ನಡೆದ ಅಂಬಿಯ 60ನೇ ಹುಟ್ಟುಹಬ್ಬದ ಸಮಾರಂಭದುದ್ದಕ್ಕೂ ವಿಷ್ಣು ಬಗ್ಗೆ ಚಕಾರವಿರಲಿಲ್ಲ. ಇದಕ್ಕೆ ಅಂಬಿಯ ಅನಾರೋಗವೂ ಕಾರಣವಿರಬಹುದು. ಉಳಿದಂತೆ ವಿಷ್ಣು ಆಪ್ತವಲಯದ ಕೆ. ಮಂಜು, ಸೂರಪ್ಪ ಬಾಬು, ವಿಜಯ್‌ಕುಮಾರ್ ಮುಂತಾದವರೀಗ ವಿಷ್ಣು ಮನೆಯತ್ತ ಸುಳಿಯುತ್ತಿಲ್ಲ. ದ್ವಾರಕೀಶ್ ಕೂಡ ಇದೇ ಸಾಲಿಗೆ ಸೇರುತ್ತಾರೆ. ಅಸಂಖ್ಯಾತ ಅಭಿಮಾನಿಗಳಿರಬಹುದು. ಆದರೆ ಅವರದ್ದೇ ಆದ ಸಂಘಟಿತ ಜಾಲ, ವ್ಯವಸ್ಥಿತ ನಾಯಕತ್ವವಿಲ್ಲ. ಹೆಚ್ಚೆಂದರೆ ವಿಷ್ಣು ಅಳಿಯ ನಟ ಅನಿರುದ್ಧ ಈ ಬಗ್ಗೆ ತಲೆಕೆಡಿಸಿಕೊಳ್ಳಬೇಕು.

ಇದೆಲ್ಲವನ್ನೂ ಕಂಡೇ ಭಾರತಿ ತನ್ನ ಅಸಹಾಯಕತೆ ಮತ್ತು ಏಕಾಂಗಿತನವನ್ನು ವ್ಯಕ್ತಪಡಿಸುತ್ತಿರಬಹುದೇ? ಬದುಕಿರುವಾಗ ಜೊತೆಗಿದ್ದವರ್‍ಯಾರೂ ಸತ್ತ ಮೇಲೆ ತಲೆಕೆಡಿಸಿಕೊಳ್ಳುವುದಿಲ್ಲವಲ್ಲ? ಮನುಷ್ಯ ಬದುಕಿನ ನಿರರ್ಥಕತೆಗೆ ವಿಷ್ಣು ಕೂಡ ಹೇಗೆ ಹೊರತಾಗಲು ಸಾಧ್ಯ?

...ಸ್ಮಾರಕವಿರಬೇಕೆಂಬುದು ಅಭಿಮಾನಿಗಳ ಬಯಕೆ. ಆದರೆ ಸರ್ಕಾರ ಮಾಡಿದ ಯಡವಟ್ಟಿನಿಂದಾಗಿ ಇಡೀ ವಿಷ್ಣು ಸ್ಮಾರಕದ ಪ್ರಶ್ನೆಯೇ ಅಂತರಪಿಶಾಚಿಯಂತಾಗಿದೆ.

ಇಂಥದೊಂದು ತ್ರಿಶಂಕು ಸ್ಥಿತಿಗೆ ವಿಷ್ಣು ಕುಟುಂಬವನ್ನೂ, ಲಕ್ಷಾಂತರ ಅಭಿಮಾನಿಗಳನ್ನೂ, ಚಿತ್ರರಂಗದ ವಿಷ್ಣು ಬೆಂಬಲಿಗರನ್ನು ತಳ್ಳಿದ್ದೇ ಸರ್ಕಾರ. ಯಾರದೋ ಭೂಮಿಯಲ್ಲಿ ವಿಷ್ಣು ಸ್ಮಾರಕ ನಿರ್ಮಿಸುವುದು ಕಾನೂನುರೀತ್ಯವೂ ತಪ್ಪಾಗುತ್ತದೆ. ಅಭಿಮಾನ್ ಸ್ಟುಡಿಯೋದ ಒಡೆತನಕ್ಕೆ ಸಂಬಂಧಪಟ್ಟಂತೆ ವಿವಾದವಿರುವುದು ಬಾಲಕೃಷ್ಣರ ಮೂವರು ಹೆಣ್ಣುಮಕ್ಕಳು ಮತ್ತು ಪುತ್ರ ಗಣೇಶ್ ಮಧ್ಯೆಯಾದರೂ ಅಲ್ಲಿ ವಿಷ್ಣು ಸ್ಮಾರಕವಾಗಬೇಕೆಂದರೆ ಎರಡೂ ಪಾರ್ಟಿಗಳು ಒಪ್ಪಬೇಕು. ಸದ್ಯ ಗಣೇಶ್ ಒಪ್ಪಿದರೂ ಬಾಲಕೃಷ್ಣರ ಹೆಣ್ಣುಮಕ್ಕಳು ಒಪ್ಪುತ್ತಿಲ್ಲ.

ಕೇಸರಿ ಧೋರಣೆ

ಬಾಲಕೃಷ್ಣರ ಮಗಳು ಗೀತಾಬಾಲಿಯನ್ನು ಒಪ್ಪಿಸಲೆಂದು ಚಲನಚಿತ್ರ ನಿಗಮದ ಅಧ್ಯಕ್ಷ ...ಶ್ ತನ್ನ ರೌಡಿ ಚಾಲು ಬಳಸಿದ್ದಾಯ್ತು, ...ರವ ಸ್ಟುಡಿಯೋದ ಅಧಿಕಾರಿ ರವಿಕುಮಾರ್ ...ಬೆದರಿದ್ದಾಯ್ತು, ಅಂತಿಮವಾಗಿ ಚಿತ್ರರಂಗದ ...ಯ ಅಂಬಿಯೇ ನಿಂತು ಗೀತಾಬಾಲಿ ಮತ್ತು ...ಕುಟುಂಬವನ್ನು ಕೂರಿಸಿ ಪಂಚಾಯ್ತಿ ನಡೆಸಿದ್ದೂ ...ಯ್ತು, ತಲಾ ಎಕರೆಗೆ ಕೋಟಿಯಂತೆ ಸರ್ಕಾರ ...ಡು ಕೋಟಿಯನ್ನೂ ಎತ್ತಿಟ್ಟದ್ದಾಗಿದೆ.

ಎಕರೆಗೆ ಐದೋ ಆರೋ ಕೋಟಿಯ ಬೆಲೆಯಿರುವಾಗ ಪುಡಿ 1 ಕೋಟಿಗೆ ಯಾರು ತಾನೇ ಒಪ್ಪಲು ಸಾಧ್ಯ? ಮಾರುಕಟ್ಟೆ ರೇಟು ಕೊಟ್ಟಿದ್ದರೆ ಬಾಲಕೃಷ್ಣರ ಮಗಳು ಒಪ್ಪುತ್ತಿದ್ದರೇನೋ. ಇದರರ್ಥ ವಿಷ್ಣು ಸ್ಮಾರಕಕ್ಕೆ ಗೌರವಯುತವಾದ ಜಮೀನು ದರ ನೀಡುವಷ್ಟೂ ಸರ್ಕಾರಕ್ಕೆ ದೊಡ್ಡ ಮನಸ್ಸಿಲ್ಲ.

ಯಾರದೋ ಸೊತ್ತಿನಲ್ಲಿ ವಿಷ್ಣು ಅಂತ್ಯಕ್ರಿಯೆ ಮುಗಿಸಿ, ಮಾಡಿದ ತಪ್ಪಿಗೀಗ ಅವರ ಭೂಮಿಯಲ್ಲೇ ಸ್ಮಾರಕ ನಿರ್ಮಿಸಲೆತ್ನಿಸಿ ಅಪರಾಧಿ ಸ್ಥಾನದಲ್ಲಿ ನಿಂತ ಬಿಜೆಪಿ ಸರ್ಕಾರದ ದೊರೆಗಳಿಗೆ ಕನಿಷ್ಠ ಮಾರುಕಟ್ಟೆ ದರವನ್ನಾದರೂ ಕೊಡಬೇಕೆಂಬ ಪ್ರಜ್ಞೆಯಿಲ್ಲವೆಂದರೆ ಅದು ಮೇರುನಟ ವಿಷ್ಣುಗೆ ಸರ್ಕಾರ ಬಗೆದ ಅಪಚಾರವಲ್ಲದೆ ಮತ್ತೇನು?

ಕಂಡೋರ ಸೊತ್ತಲ್ಲಿ ತನ್ನ ಸಮಾಧಿಯೆಬ್ಬಿಸಿ ಆಸ್ತಿ ಕೈತಪ್ಪಿದ್ದಕ್ಕಾಗಿ ಬಾಲಕೃಷ್ಣರ ಕುಟುಂಬ ಪ್ರತಿನಿತ್ಯ ವಿಷ್ಣು ಸಮಾಧಿಯನ್ನು ನೆನೆದು ಕೊರಗುತ್ತಿದ್ದರೆ ವಿಷ್ಣು ಆತ್ಮಕ್ಕೆ ತಾನೇ ಹೇಗೆ ಶಾಂತಿ ಸಿಕ್ಕೀತು?

ಕನ್ನಡ ಜನಮಾನಸದ ಅನಭಿಷಕ್ತ ದೊರೆ ವಿಷ್ಣುಗೆ ಸರ್ಕಾರವೊಂದು ಸಲ್ಲಿಸುವ ಗೌರವವಾ ಇದು? ಆರೆಸ್ಸೆಸ್ ಅಂಗಸಂಸ್ಥೆಗಳಿಗೆ ಸಿಕ್ಕಸಿಕ್ಕ ಸರ್ಕಾರಿ ಸೊತ್ತನ್ನು ಬರೆದುಕೊಡಲು ಭೂಮಿಯಿದೆ. ನಿಷ್ಕ್ರಿಯ ಮಠ, ಸ್ವಾಮಿಗಳಿಗೆ ನೀಡಲು ದುಡ್ಡಿದೆ. ಆದರೆ ವಿಷ್ಣು ಸಮಾಧಿಗೆ ಮಾತ್ರ ಸರ್ಕಾರದ ಕೈಕಟ್ಟುತ್ತದೆಯೆಂದರೆ ಬಿಜೆಪಿ ದೊರೆಗಳಿಗೆ ವಿಷ್ಣು ಬಗೆಗಿರುವ ತಾತ್ಸಾರಕ್ಕೆ ಇದಕ್ಕಿಂತ ಬೇಕೆ?

● ರಾ.ಸೋಮನಾಥ್

ದೆಹಲಿಯಲ್ಲಿ ಮುಖಭಂಗ ಬೆಂಗಳೂರಿನಲ್ಲಿ ಬಂಡಾಯ...

ಬಿಜೆಪಿಯ ಕಾಯಂ ಭಿನ್ನಮತೀಯ ನಾಯಕ ಯಡಿಯೂರಪ್ಪ ಈಗ ತಮ್ಮ ಪಕ್ಷದ ಹೈಕಮಾಂಡ್ ವಿರುದ್ಧ ಇನ್ನೊಂದು ಸುತ್ತಿನ ಸಮರ ಸಾರಿದ್ದಾರೆ. "ಉಪಮುಖ್ಯಮಂತ್ರಿ ಮತ್ತು ಪಕ್ಷದ ರಾಜ್ಯಾಧ್ಯಕ್ಷ - ಇವೆರಡೂ ಹುದ್ದೆಗಳನ್ನು ಏಕಕಾಲದಲ್ಲಿ ಈಶ್ವರಪ್ಪನವರು ಅಲಂಕರಿಸಿರುವುದು ಸರಿಯಲ್ಲ. ಚುನಾವಣೆ ಸಮೀಪಿಸುತ್ತಿರುವ ಈಗಿನ ಸಂದರ್ಭದಲ್ಲಿ ಅವರು ಪಕ್ಷದ ಸಂಘಟನೆ ಮಾಡಬೇಕಾಗಿದೆ. ಆ ಕಾರಣಕ್ಕಾಗಿ ಅವರು ಕೂಡಲೇ ಉಪ ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕು" ಎಂದು ಯಡ್ಡಿ ಮೊನ್ನೆ ಅಬ್ಬರಿಸಿದ್ದಾರೆ. ಅಷ್ಟೇ ಅಲ್ಲ "ಅವರ ನಾಯಕತ್ವದಲ್ಲೇ ನಾವೆಲ್ಲಾ ಚುನಾವಣೆಯನ್ನು ಎದುರಿಸಬಹುದು. ಸಾಮೂಹಿಕ ನಾಯಕತ್ವದ ಅಗತ್ಯವೇನೂ ಇಲ್ಲ" ಎಂದು ಯಡ್ಡಿ ಹೇಳಿದ್ದಾರೆ. ವಿಪರ್ಯಾಸ ಸಂಗತಿ ಯಾವುದೆಂದರೆ ಯಡ್ಡಿಯ ಈ ಮಾತುಗಳು ವ್ಯಂಗ್ಯವೋ ಅಥವಾ ಸತ್ಯವೋ ಎಂದು ಗೊತ್ತಾಗದೆ ಬಿಜೆಪಿ ಹೈಕಮಾಂಡ್ ಗೊಂದಲದಲ್ಲಿ ಸಿಲುಕಿದೆ.

ಈಶ್ವರಪ್ಪನವರ ವಿರುದ್ಧ ಬಾಣ ಬಿಡುವ ಕೆಲವೇ ದಿನಗಳ ಮೊದಲು ಯಡ್ಡಿ ಬಿಜೆಪಿ ಹೈಕಮಾಂಡ್ ಮೇಲೆ ಇನ್ನೊಂದು ಬಾಂಬ್ ಸಿಡಿಸಿದ್ದರು. ಅದೇನೆಂದರೆ "ನನಗೆ ಪಕ್ಷದಲ್ಲಿ ಗೌರವ-ಮರ್ಯಾದೆ ಸಿಗುತ್ತಿಲ್ಲ. ನನ್ನ ಸ್ವಾಭಿಮಾನಕ್ಕೆ ಸ್ವಲ್ಪವೂ ಧಕ್ಕೆ ಬಂದರೆ ನಾನು ಪಕ್ಷದಲ್ಲಿ ಒಂದು ಕ್ಷಣವೂ ಉಳಿಯುವುದಿಲ್ಲ" ಎಂದು ಗುಡುಗಿದ್ದರು. ರಾಜಕೀಯ ಪಂಡಿತರು ಯಡ್ಡಿಯ ಈ ಮಾತನ್ನು ಕೇಳಿ ಅವರು ಹೊಸ ರಾಜಕೀಯ ಪಕ್ಷ ಕಟ್ಟುತ್ತಾರೆ ಎಂದು ವ್ಯಾಖ್ಯಾನಿಸಲು ಪ್ರಾರಂಭಿಸಿದ್ದರು.

ವಾಸ್ತವವಾಗಿ ಸದ್ಯದ ಪರಿಸ್ಥಿತಿಯಲ್ಲಿ ಯಾವ ಕಾರಣಕ್ಕೂ ಒಂದು ಹೊಸ ಪಕ್ಷವನ್ನು ಕಟ್ಟಲು ಯಡ್ಡಿ ತಯಾರಿಲ್ಲ ಎಂದೂ, ಇದು ಆತನ ಮಾಮೂಲಿ ಬ್ಲಾಕ್‌ಮೇಲ್ ತಂತ್ರವೆಂದೂ ಅರಿಯದಷ್ಟು ಪೆದ್ದರಲ್ಲ ದೆಹಲಿಯಲ್ಲಿರುವ ಬಿಜೆಪಿಯ ನಾಯಕರು.



ನನ್ನ ನೆರವಿಲ್ಲದೆ ದೀಪ ಹಚ್ಚಲೂ ಸಾಧ್ಯವಿಲ್ಲ!-ಶೆಟ್ಟರ್‌ಗೆ ಯಡ್ಡಿ ಸಂದೇಶ?

ಹೀಗೆ ಯಡ್ಡಿ ಬಿಜೆಪಿ ನಾಯಕರ ವಿರುದ್ಧ ಗುಡುಗಲು ಒಂದು ಕಾರಣ ಇತ್ತು. ಅದೇನೆಂದರೆ ಕಳೆದ ವಾರ ಪಕ್ಷದ ರಾಜ್ಯಾಧ್ಯಕ್ಷ ಸ್ಥಾನವನ್ನು ಪಡೆಯುವ ಉದ್ದೇಶದಿಂದ ಯಡ್ಡಿ ದೆಹಲಿಗೆ ತೆರಳಿದ್ದರು. ಆದರೆ ಅಲ್ಲಿ ಅವರಿಗೆ ಗೌರವ, ಮರ್ಯಾದೆ, ಮನ್ನಣೆ ಸಿಗುವ ಬದಲು ಸಿಕ್ಕಿದ್ದು ಅವಮಾನ ಮತ್ತು ಮುಖಭಂಗ. ಯಡಿಯೂರಪ್ಪನ ದೂರನ್ನು ಮತ್ತು ಬೇಡಿಕೆಯನ್ನು ಆಲಿಸಲು ದೆಹಲಿಯ ಯಾವ ಬಿಜೆಪಿ ನಾಯಕರೂ ಸಿದ್ಧರಿರಲಿಲ್ಲ. ಮಾತ್ರವಲ್ಲ, ಯಡ್ಡಿಯ ಮುಖವನ್ನು ನೋಡಲೂ ಅವರು ತಯಾರಿರಲಿಲ್ಲ. ಬದಲಿಗೆ ಅವರೆಲ್ಲಾ ತಮ್ಮ ಸೆಕ್ರೆಟರಿಗಳ ಮುಖಾಂತರ ಯಡ್ಡಿಗೆ ಹೇಳಿದ್ದು ಇಷ್ಟೇ: "ನೋಡಿ, ನಿಮ್ಮ ಸಮಸ್ಯೆ ಏನಿದ್ದರೂ ಅದನ್ನು ನೀವು ಪಕ್ಷದ ಅಧ್ಯಕ್ಷ ಗಡ್ಕರಿ ಅವರ ಜೊತೆ ಮಾತನಾಡಿ ಬಗೆಹರಿಸಿಕೊಳ್ಳಿ. ಗಡ್ಕರಿ ಅವರ ಅಭಿಪ್ರಾಯಕ್ಕೆ ನಮ್ಮ ಸಹಮತವಿರುತ್ತದೆ."

ಯಡ್ಡಿಯ ಪರಮಾಪ್ತ ಎಂದೆನಿಸಿಕೊಂಡಿರುವ ಅರುಣ್ ಜೇಟ್ಲಿ ಒಬ್ಬರ ಹೊರತಾಗಿ ಉಳಿದ ಚಡ್ಡಿ ನಾಯಕರಾದ ಸುಷ್ಮಾ ಸ್ವರಾಜ್, ರಾಜನಾಥ್ ಸಿಂಗ್ ಮುಂತಾದವರ ಇಂತಹ ವರ್ತನೆಯಿಂದ ಯಡ್ಡಿಗೆ ದೊಡ್ಡ ಶಾಕ್ ಆಯಿತು. ಮಕಾಡೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎಂಬ ಜಾಯಮಾನದ ಯಡ್ಡಿ ಇದರಿಂದ ವಿಚಲಿತರಾಗಲಿಲ್ಲ. ಬದಲಾಗಿ ಮಾರನೆ ದಿನ ಪಾರ್ಲಿಮೆಂಟ್‌ಗೆ ಹೋಗಿ ಸೆಂಟ್ರಲ್ ಹಾಲ್‌ನಲ್ಲಿ ಕುಳಿತುಕೊಂಡರು. ಅಲ್ಲಿಯಾದರೂ ತಮ್ಮ ಪಕ್ಷದ ನಾಯಕರು ವಿರಾಮದ ವೇಳೆಯಲ್ಲಿ ತನ್ನನ್ನು ಮಾತನಾಡಿಸುತ್ತಾರೆ ಎಂಬುದು ಯಡ್ಡಿಯ ಲೆಕ್ಕಾಚಾರವಾಗಿತ್ತು. ಆದರೆ ಅವರು ಲೆಕ್ಕಾಚಾರಕ್ಕೆ ವಿರುದ್ಧವಾಗಿ ಅಲ್ಲಿಯೂ ಯಡ್ಡಿಯನ್ನು ಯಾರೂ ಮಾತನಾಡಿಸಲಿಲ್ಲ. ದೆಹಲಿ ನಾಯಕರ ಈ ವರ್ತನೆಯಿಂದ ಯಡ್ಡಿಯ ಸಿಟ್ಟು ನೆತ್ತಿಗೇರಿತು. ಬೆಂಗಳೂರಿಗೆ ವಾಪಸ್ ಬಂದ ಯಡ್ಡಿ ದೆಹಲಿ ನಾಯಕರ ವಿರುದ್ಧ ಅಬ್ಬರಿಸಿ "ನನ್ನ ಸ್ವಾಭಿಮಾನಕ್ಕೆ ಧಕ್ಕೆ ಆದರೆ ನಾನು ಪಕ್ಷ ಬಿಡಲು ತಯಾರು" ಎಂದರು.

ದೆಹಲಿಯಲ್ಲಿರುವ ಬಿಜೆಪಿ ನಾಯಕರು ಸಾರ್ವಜನಿಕವಾಗಿ ಯಡ್ಡಿಯ ಜೊತೆ ಮಾತನಾಡಲು ಅಥವಾ ಅವರ ಪರ ಲಾಬಿ ನಡೆಸಲು ಹಿಂಜರಿಯುತ್ತಿರುವುದಕ್ಕೆ ಕಾರಣವಿದೆ. ಅದೇನೆಂದರೆ ಯಡ್ಡಿ ಪರ ವಕಾಲತ್ತು ವಹಿಸಿದರೆ ಎಲ್ಲಿ ಪಕ್ಷದ ಹಿರಿಯ ನಾಯಕ ಅಡ್ವಾನಿಯವರಿಗೆ ಸಿಟ್ಟು ಬರುತ್ತದೋ ಎಂಬ ಆತಂಕ. ಇದರ ಅರ್ಥ ಬಿಜೆಪಿ ಮೇಲೆ ಇನ್ನೂ ಅಡ್ವಾನಿಯವರ ಹಿಡಿತವಿದೆ, ಅವರ ಮಾತಿಗೆ ಬೆಲೆ ಇದೆ ಎಂಬುದು. ಅಕಸ್ಮಾತ್ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಬದಲಾಗಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂದರೆ ಆಗ ಸರ್ಕಾರ ರಚಿಸುವ ಕಸರತ್ತಿನಲ್ಲಿ ಅಡ್ವಾನಿಯವರ ಮಾತೇ ಅಂತಿಮವಾಗಲಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ಕಾರಣಕ್ಕಾಗಿ ಸುಖಾಸುಮ್ಮನೆ ಯಡ್ಡಿ ಜೊತೆ ಕಾಣಿಸಿಕೊಂಡು ಅಡ್ವಾನಿಯವರ ಕೋಪಕ್ಕೆ ಯಾಕೆ ಬಲಿಯಾಗಬೇಕು ಎಂದು ದೆಹಲಿ ನಾಯಕರು ಸುಮ್ಮನಾಗಿ ನೀಡುತ್ತಿದ್ದಾರೆ.

ಅದೇನೇ ಇದ್ದರೂ, ಬಿಜೆಪಿ ಹೈಕಮಾಂಡಿಗೆ ಕರ್ನಾಟಕದಲ್ಲಿ ಪಕ್ಷದ ಘಟಕಕ್ಕೆ ಅಧ್ಯಕ್ಷನನ್ನು ಆಯ್ಕೆ ಮಾಡುವುದೂ ಒಂದೇ, ಕಲ್ಲನ್ನು ನುಂಗುವುದೂ ಒಂದೇ ಎಂಬಂತಾಗಿದೆ. ಇತ್ತ ಯಡ್ಡಿಯನ್ನು ಯಾವ ಕಾರಣಕ್ಕೂ ಅಧ್ಯಕ್ಷ ಗಾದಿಯಲ್ಲಿ ಕೂರಿಸಲು ಹೈಕಮಾಂಡ್ ರೆಡಿ ಇಲ್ಲ, ಅತ್ತ ಪದಚ್ಯುತ ಮುಖ್ಯಮಂತ್ರಿ ಸದಾನಂದ ಗೌಡರನ್ನು ಅಧ್ಯಕ್ಷರನ್ನಾಗಿ ಮಾಡಲು ಯಡ್ಡಿ ಯಾವ ಕಾರಣಕ್ಕೂ ಬಿಡುವುದಿಲ್ಲ. ಇಂತಹ ಗೊಂದಲದ ಮಧ್ಯೆಯೇ ತನಗೆ ಪಕ್ಷದ ಅಧ್ಯಕ್ಷ ಸ್ಥಾನ ಬೇಡ ಎಂದು ಈಶ್ವರಪ್ಪ ಉಪ ಮುಖ್ಯಮಂತ್ರಿ ಸ್ಥಾನವನ್ನು ಕಸಿದುಕೊಂಡಿದ್ದಾರೆ. ರಾಜ್ಯ ಚುನಾವಣೆ ಸಮೀಪಿಸುತ್ತಿರುವ ಇಂತಹ ಸಂದರ್ಭದಲ್ಲಿ ಯಾರನ್ನು ಅಧ್ಯಕ್ಷರನ್ನಾಗಿ ಮಾಡುವುದು ಎಂಬುದು ದೆಹಲಿ ನಾಯಕರಿಗೆ ತಲೆನೋವಿನ ಸಂಗತಿಯಾಗಿದೆ.

ಹೈಕಮಾಂಡ್ ಇಂತಹ ಬಿಕ್ಕಟ್ಟಿನಲ್ಲಿರುವ ಸಂದರ್ಭದಲ್ಲೇ ತನಗೆ ಅವಮಾನ ಮಾಡಿದ ದೆಹಲಿ ನಾಯಕರಿಗೆ ಬುದ್ಧಿ ಕಲಿಸಬೇಕೆಂದು ಯಡ್ಡಿ ಈಗ ದಿಢೀರನೆ "ಈಶ್ವರಪ್ಪನವರು ಉಪಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು" ಎಂಬ ಹೊಸ ರಾಗ ಎಳೆದಿದ್ದಾರೆ. ಈ ಬೆಳವಣಿಗೆಯ ನಂತರ ಅನಿವಾರ್ಯವಾಗಿ ದೆಹಲಿ ನಾಯಕರು ಬೆಂಗಳೂರಿಗೆ ಬರಲೇಬೇಕಿದೆ. ಹಾಗೆ ಬಂದಕೂಡಲೆ ಅವರು ರಾಜ್ಯಾಧ್ಯಕ್ಷ ಸ್ಥಾನಕ್ಕೆ ಈಶ್ವರಪ್ಪನವರ ಉತ್ತರಾಧಿಕಾರಿಯಾಗಿ ಹೊಸಬರಿಗೆ ಪಟ್ಟಾಭಿಷೇಕ ಮಾಡಬೇಕಿದೆ. ಆ ಸಂದರ್ಭದಲ್ಲಿ ಮತ್ತೆ ಯಡಿಯೂರಪ್ಪನವರ ಕೈ ಮೇಲಾಗುವುದರಲ್ಲಿ ಸಂಶಯವಿಲ್ಲ.

ತನ್ನ ಉತ್ತರಾಧಿಕಾರಿಯಾಗಿ ಮುಖ್ಯಮಂತ್ರಿ ಸ್ಥಾನದಲ್ಲಿ ಸದಾನಂದ ಗೌಡರನ್ನು ಕುಳ್ಳಿರಿಸಿದ್ದ ಹೈಕಮಾಂಡ್ ವಿರುದ್ಧ ಯಡ್ಡಿ ಸಾಧಿಸಿದ ಮೊದಲನೆ ಜಯ. ಅದಾದ ನಂತರ ಮತ್ತೆ ಬಂಡಾಯವೆದ್ದ ಯಡ್ಡಿ ಹೈಕಮಾಂಡ್ ಆಶೆಗೆ ವಿರುದ್ಧವಾಗಿ ಅದೇ ಸದಾನಂದ ಗೌಡರನ್ನು ಕೆಳಗಿಳಿಸಿ ಜಗದೀಶ್ ಶೆಟ್ಟರನ್ನು ಕೂರಿಸಿದ್ದು ಯಡ್ಡಿಯ ಎರಡನೆ ಜಯ. ಅಷ್ಟೇ ಅಲ್ಲದೆ, ತನ್ನ ನಿಕಟವರ್ತಿ ಪುಟ್ಟಸ್ವಾಮಿಯನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿದ್ದಲ್ಲದೆ ಆತನಿಗೆ ಮಂತ್ರಿ ಸ್ಥಾನವನ್ನೂ ಕೊಡಿಸಿದ್ದು ಯಡ್ಡಿಯ ಮೂರನೆ ಜಯ. ಈ ಜಯಗಳ ಮೂಲಕ ದೆಹಲಿ ನಾಯಕರು ಏನೇ ಮಾಡಿದರೂ ರಾಜ್ಯ ಬಿಜೆಪಿಯಲ್ಲಿ ಅಂತಿಮವಾಗಿ ನಡೆಯುವುದು ತನ್ನ ಮಾತು ಎಂಬುದನ್ನೂ, ರಾಜ್ಯ ಘಟಕದ ಮೇಲೆ ತನಗೆ ಹಿಡಿತವಿರುವುದನ್ನೂ ಯಡ್ಡಿ ಸಾಬೀತುಪಡಿಸಿದ್ದರು.

ದೆಹಲಿ ಮೂಲಗಳ ಪ್ರಕಾರ ಈ ತಿಂಗಳ ಅಂತ್ಯದೊಳಗೆ ರಾಜ್ಯಾಧ್ಯಕ್ಷರನ್ನು ನೇಮಿಸುವ ಬಗ್ಗೆ ನಾಯಕರು ಚಿಂತಿಸುತ್ತಿದ್ದಾರೆ. ಹಾಗೆ ನೇಮಿಸುವುದು ವಿಳಂಬವಾದರೆ ಚುನಾವಣೆ ಎದುರಾದಾಗ ಅನಗತ್ಯವಾಗಿ ಗೊಂದಲವಾಗುತ್ತದೆ ಮತ್ತು ಮತದಾರರಿಗೂ ತಪ್ಪು ಸಂದೇಶ ಹೋಗುತ್ತದೆ ಎಂಬುದು ನಾಯಕರ ಅನಿಸಿಕೆ. ಚುನಾವಣಾ ಸಂದರ್ಭದಲ್ಲಿ ಕೊನೆಕ್ಷಣದಲ್ಲಿ ಆಯ್ಕೆ ಮಾಡಿದರೆ ಅಧ್ಯಕ್ಷನಿಗೆ ಜಿಲ್ಲಾ ಘಟಕದ ಅಧ್ಯಕ್ಷರ ಜೊತೆ ಬಾಂಧವ್ಯ ಬೆಳೆಸಲು ಕೂಡಾ ಸಮಯವಿರುವುದಿಲ್ಲ. ಈ ಎಲ್ಲ ಕಾರಣಕ್ಕಾಗಿ ಈಗ ಬಿಜೆಪಿ ಪಕ್ಷಕ್ಕೆ ಹೊಸ ಸಾರಥಿಯನ್ನು ಆಯ್ಕೆ ಮಾಡುವುದು ದೆಹಲಿ ನಾಯಕರಿಗೆ ಅನಿವಾರ್ಯವಾಗಿದೆ.

ಯಾರೇ ಪಕ್ಷದ ಅಧ್ಯಕ್ಷನಾಗಬೇಕಾದರೆ ಅವರಿಗೆ ಯಡ್ಡಿಯ ಆಶೀರ್ವಾದ ಇಲ್ಲದಿದ್ದರೆ ಸಾಧ್ಯವೇ ಇಲ್ಲ. ಅಂದರೆ ಹೇಗೆ ಶೆಟ್ಟರ್ ಮುಖ್ಯಮಂತ್ರಿ ಸೀಟಿನಲ್ಲಿ ಕುಳಿತಿದ್ದರೂ ಯಡ್ಡಿ ಬ್ಯಾಕ್ ಸೀಟ್ ಡ್ರೈವಿಂಗ್ ಮಾಡುತ್ತಿದ್ದಾರೋ ಹಾಗೆಯೇ ಹೊಸ ಅಧ್ಯಕ್ಷ ಯಾರೇ ಆದರೂ ಅಲ್ಲೂ ಯಡ್ಡಿ ಬ್ಯಾಕ್ ಸೀಟ್ ಪ್ರೆಸಿಡೆಂಟ್ ಆಗಿರುತ್ತಾರೆ ಎಂಬುದರ ಬಗ್ಗೆ ಸಂಶಯವೇ ಇಲ್ಲ. ಹಾಗೊಮ್ಮೆ ಯಡ್ಡಿಯನ್ನು ಹಮ್ಮುಬಿಕ್ಕಿನಲ್ಲಿಡಲು ನಾಯಕರು ನಿರ್ಧರಿಸಿ ಯಡ್ಡಿಯ ವಿರೋಧಿ ಬಣದಿಂದ ಯಾರಾದರೊಬ್ಬರನ್ನು ಅಧ್ಯಕ್ಷನನ್ನಾಗಿಸಿದರೆ ಆಗ ಯಡ್ಡಿ ಬಂಡಾಯವೇಳುವ ಬಗ್ಗೆಯೂ ಸಂಶಯವಿಲ್ಲ.

ಆದರೆ ಅಂತಹ ಧೈರ್ಯ ಬಿಜೆಪಿ ಹೈಕಮಾಂಡ್‌ಗೆ ಇಲ್ಲದಿರುವುದರಿಂದ ಮತ್ತೊಂದು ಸುತ್ತಿನ ಯುದ್ಧದಲ್ಲಿ ಯಡ್ಡಿಯೇ ಜಯ ಸಾಧಿಸುವ ಸೂಚನೆಗಳು ಕಾಣಿಸುತ್ತಿವೆ. ಅದು ಸಿಗುವ ತನಕ ಯಡ್ಡಿ ದಿನಕ್ಕೊಂದು ಬಾಂಬನ್ನು ಸ್ಫೋಟಿಸುತ್ತಲೇ ಇರುತ್ತಾರೆ.

● ಶೇಕ್



ಉಕ್ಕಡ ಮಾರಮ್ಮನ ಹಣವನ್ನು ಮುಕ್ಕುತ್ತಿರುವ ಚಂದ್ರು

● ಮೊಡ್ಡಿಪಾಳ್ಯ ನರಸಿಂಹಮೂರ್ತಿ

ಮಾರಮ್ಮ ಎಂದರೆ ಸಾಕು, ನಮ್ಮ ಜನ ಭಕ್ತಿಗಿಂತಲೂ ಹೆಚ್ಚಾಗಿ ಭಯದಿಂದ ನಡುಗಿ ಕೈಯೆತ್ತಿ ಮುಗಿಯುತ್ತಾರೆ. ಹೀಗೆ ಕರ್ನಾಟಕದಲ್ಲಿರುವ ಪವರ್‌ಫುಲ್ ಮಾರಮ್ಮಗಳಲ್ಲಿ ಉಕ್ಕಡ ಮಾರಮ್ಮ ಬಹಳ ಪ್ರಸಿದ್ಧವಾದುದು. ಶ್ರೀರಂಗಪಟ್ಟಣದ ಬಳಿಯ ಕಡತನಾಳು ದಾಖಲೆ ಆರತಿ ಉಕ್ಕಡ ಎಂಬ ಪುಟ್ಟ ಗ್ರಾಮದಲ್ಲಿರುವ ಈ ದೇವಸ್ಥಾನಕ್ಕೆ ಕಳೆದ ಒಂದು ದಶಕದಿಂದೀಚೆಗೆ ಭಾರೀ ಬೇಡಿಕೆ ಸೃಷ್ಟಿಯಾಗಿದೆ. ಆದರೆ ಅದೇ ಸಂದರ್ಭದಲ್ಲಿ ಈ ಉಕ್ಕಡ ಮಾರಮ್ಮನ ಸ್ವತ್ತನ್ನು ಚಂದ್ರು ಮಲ್ಲು ಎಂಬ ಕಿರಾತಕನೊಬ್ಬ ಎರಡು ಕೈಯಲ್ಲೂ ಮುಕ್ಕುತ್ತಿದ್ದಾನೆ. ಈ ಚಂದ್ರು ಎಷ್ಟೊಂದು ಪ್ರಭಾವಶಾಲಿಯಾಗಿ ಬೆಳೆದುಬಿಟ್ಟಿದ್ದಾನೆಂದರೆ ಸ್ವತಃ ಮುಖ್ಯಮಂತ್ರಿಯೇ ಈತನ ಪರವಾಗಿ ಶಿಫಾರಸ್ಸು ಮಾಡುತ್ತಾರೆ. ದೇವರ ಹೆಸರನ್ನು ದುರ್ಬಳಕೆ ಮಾಡಿಕೊಂಡು ಕೊಬ್ಬುತ್ತಿರುವ ಈ ಘಾತುಕನ ವಿವರಗಳನ್ನು ನೋಡಿ.

ಈ ಆರತಿ ಉಕ್ಕಡ ಗ್ರಾಮದಲ್ಲಿ ಈ ಹಿಂದೆ ನಾಯಕ ಅಥವಾ ಬೆಸ್ತ ಸಮುದಾಯಕ್ಕೆ ಸೇರಿದ ಕೇವಲ 11 ಕುಟುಂಬಗಳಿದ್ದವು. ಕ್ರಮೇಣ ವಿಭಕ್ತಗೊಂಡು ಈಗ ಸುಮಾರು 40 ಕುಟುಂಬಗಳಷ್ಟಾಗಿವೆ. ಮೂಲತಃ ಮಾರಮ್ಮ ದೇವಿ ಈ ಜನಾಂಗದ ಆರಾಧ್ಯ ದೈವ. ಇಂದಿಗೂ ಮಾರಮ್ಮನ ಪೂಜೆ ಮಾಡುತ್ತಿರುವವರು ಇವರೇ. ಈ ಮಾರಮ್ಮನಿಗೆ ಅಹಲ್ಯಾದೇವಿ ಎಂಬ ಹೆಸರು ಅಂಟಿಕೊಂಡಿದೆ. ಅದಕ್ಕೆ ಕಾರಣವೇನೆಂದು ಉಕ್ಕಡ ಮಾರಮ್ಮನಿಗೇ ಗೊತ್ತು. ಕಳೆದ ಒಂದೆರಡು ದಶಕಗಳಿಂದೀಚೆಗೆ ಈ ದೇವಿಗೆ ಭಕ್ತಾದಿಗಳು ಹೆಚ್ಚುತ್ತಾ ಹೋದರು. ಜೊತೆಜೊತೆಗೆ ದೇವರ ಹೆಸರಿನಲ್ಲಿ ದುಡ್ಡು ವಸೂಲಿ ಮಾಡುವ ದಂಧೆಯೂ ಶುರುವಾಯಿತು. 1990ರಲ್ಲಿ ಶ್ರೀ ಅಹಲ್ಯಾದೇವಿ ಮಾರಮ್ಮ ಪೂಜಾ ಸೇವಾ ಟ್ರಸ್ಟ್ ಎಂಬ ಒಂದು ಟ್ರಸ್ಟ್ ರಿಜಿಸ್ಟರ್ ಆಯಿತು. ಇದು ಈ ಸಮುದಾಯದವರೆಲ್ಲರೂ ಸೇರಿ ಮಾಡಿಕೊಂಡಿದ್ದಾಗಿರಲಿಲ್ಲ, ಭಕ್ತಾದಿಗಳಿಗಂತೂ ಈ ಟ್ರಸ್ಟ್ ಬಗ್ಗೆ ಏನೇನೂ ತಿಳಿದಿರಲಿಲ್ಲ, ಇದೇ ಉಕ್ಕಡ ಗ್ರಾಮದ ಐನಾತಿ ಕಿಲಾಡಿ ಚಂದ್ರು ಮಲ್ಲು ಎಂಬಾತ ತನಗೆ ಬೇಕಾದವರದೊಂದು ಕೂಟ ರಚಿಸಿಕೊಂಡು ಈ ಟ್ರಸ್ಟನ್ನು ರಿಜಿಸ್ಟರ್ ಮಾಡಿಸಿಕೊಂಡಿದ್ದ. ಮಾರಮ್ಮನ ಹೆಸರಲ್ಲಿ ದುಡ್ಡು ಹೊಡೆಯೋದನ್ನು ಬಿಟ್ಟು ಬೇರೆ ಯಾವ ಘನ ಉದ್ದೇಶವೂ ಈ ಟ್ರಸ್ಟ್‌ಗೆ ಇರಲಿಲ್ಲ ಎಂಬುದು ಇಂದು ಸ್ಪಷ್ಟವಾಗಿದೆ.


ವಸೂಲಿ ದಂಧೆ

ಅನಾದಿಕಾಲದಿಂದಲೂ ಈ ದೇವರಿಗೆ ಪೂಜೆ ನಡೆಯುವುದು ಭಾನುವಾರ, ಮಂಗಳವಾರ ಮತ್ತು ಶುಕ್ರವಾರ ಮಾತ್ರ. ಪ್ರತಿ ಅಮಾವಾಸ್ಯೆಯಂದು ವಿಶೇಷ ಪೂಜೆ ಇರುವುದರಿಂದ ಅಂದು ಜನಜಂಗುಳಿ ಜಾಸ್ತಿಯಿರುತ್ತದೆ. ಭೀಮನ ಅಮಾವಾಸ್ಯೆಯ ದಿನ ಒಂದು ಲಕ್ಷಕ್ಕೂ ಹೆಚ್ಚು ಭಕ್ತಾದಿಗಳು ನೆರೆಯುತ್ತಾರೆ. ಅದರಲ್ಲೂ ಯುವಜೋಡಿಗಳೇ ಹೆಚ್ಚು. ಅಂದು ಬೆಳಗಿನ ಜಾವ 3 ಗಂಟೆಗೆ ಪೂಜೆ ಶುರುವಾಗುತ್ತೆ, ರಾತ್ರಿಯೆಲ್ಲಾ ಜನ ಸಾಲುಗಟ್ಟಿ ನಿಂತಿರುತ್ತಾರೆ. ಹೀಗೆ ಭಕ್ತರು ಹೆಚ್ಚಿದಷ್ಟೂ ಚಂದ್ರು ಅಂಡ್ ಗ್ಯಾಂಗ್‌ನ ಲೂಟಿಯೂ ಹೆಚ್ಚುತ್ತದೆ. ನಿಂಬೆ ಹಣ್ಣು ಒಡೆಯಲು, ಕೋಳಿ ಮೊಟ್ಟೆ ಒಡೆಯಲು, ತಡೆ ಒಡೆಯಲು, ಕುಂಬಳಕಾಯಿ ಪೂಜೆ ಮಾಡಿಸಲು ಎಲ್ಲದಕ್ಕೂ ಹಣ ತೆರಬೇಕು.

ಮೊದಲಿಗೆ ಭಕ್ತಾದಿಗಳು ರಸೀದಿ ಪಡೆದುಕೊಳ್ಳುವಲ್ಲಿ ತೆತ್ತ ಹಣ ನೇರವಾಗಿ ಚಂದ್ರು ಅಂಡ್ ಗ್ಯಾಂಗ್‌ನ ಟ್ರಸ್ಟ್‌ಗೆ ಸಂದಾಯವಾಗುತ್ತದೆ. ಅದಾದನಂತರ ಕಾಯಿ ಒಡೆಯಲು, ಮೊಟ್ಟೆ ಒಡೆಯಲು ಮಂಗಳಾರತಿ ಮಾಡಲು ನಿಂತಿರುವ ಭೂಪರಿಗೆ ಮತ್ತೊಮ್ಮೆ ಕಾಣಿಕೆ ಸಲ್ಲಿಸಲೇಬೇಕು. ದೇವಸ್ಥಾನದ ಬಳಿಯಿರುವ ಕಲ್ಯಾಣಿಯ ಬಳಿ ಕಟ್ಟೆ ಒಡೆಯುವ ಹರಕೆಯೊಂದಿದೆ. ಅಲ್ಲೂ ಒಬ್ಬ ವಕ್ಕರಿಸಿ ಭಕ್ತರ ಜೇಬಿಗೆ ಕತ್ತರಿ ಹಾಕುತ್ತಿರುತ್ತಾನೆ. ದೇವರ ಹೆಸರಿನಲ್ಲಿ ವಸೂಲಿ ದಂಧೆಗೆ ಇಳಿಯುವ ಮುಂಚೆಯೇ ಈ ಅಧಮರು ಮಾನಮರ್ಯಾದೆ, ಆಚಾರವಿಚಾರ ಎಲ್ಲವನ್ನೂ ಬಿಟ್ಟು ನಿಂತಿರುತ್ತಾರೆ. ಮಾರಮ್ಮ ತಾಯಿಯ ಮೇಲಿನ ಭಯಭಕ್ತಿಯಿಂದ ಜನರು ಈ ಗುಂಪಿನ ಅಟ್ಟಹಾಸವನ್ನು ಹೇಗೋ ಸಹಿಸಿಕೊಂಡಿದ್ದಾರೆ.

ಜನರಿಗೆ ಹಾಸಿ ಹೊದೆಯುವಷ್ಟು ಸಮಸ್ಯೆಗಳಿರುವುದೇ ಈ ಪಾಖಂಡಿಗಳ ಬಂಡವಾಳ. ಸಂಸಾರದ ತಾಪತ್ರಯ, ಮಗಳ ಮದುವೆ, ಆಸ್ತಿ ವಿವಾದ, ರೋಗ ರುಜಿನ, ವ್ಯವಹಾರದಲ್ಲಿ ನಷ್ಟ, ಸಾಲಸೋಲ, ಶತ್ರು ಬಾಧೆ ಹೀಗೆ ನಾನಾ ಕಷ್ಟಗಳಲ್ಲಿ ಜನ ಹೈರಾಣಾಗಿದ್ದಾರೆ. ಇಂಥಾ ಯಾವ ಸಮಸ್ಯೆಯೂ ಇಲ್ಲವೆಂದರೆ ರಸ್ತೆ ಅಪಘಾತವೋ ಇನ್ನಾವುದೋ ಅವಘಡವೋ ಸಂಭವಿಸಿ ತಮಗೆ ಏನಾದರೂ ಕೇಡಾಗಿಬಿಡಬಹುದೆಂಬ ಭೀತಿಯಂತೂ ಇದ್ದೇ ಇರುತ್ತದೆ ನೋಡಿ. ಹೀಗೆ ಸದಾಕಾಲ ಒಂದಲ್ಲಾ ಒಂದು ಆತಂಕದ ಬದುಕು ಸಾಗಿಸುತ್ತಿರುವ ಮಂದಿ ದೇವರಿಗೆ ಮೊ ಹೋಗುತ್ತಾರೆ. ಹೀಗೆ ಮಾರಮ್ಮ ದೇವರಿಗೆ ಮೊರೆಹೋಗು ಆತಂಕ ಪೀಡಿತರ ಪರಿಸ್ಥಿತಿಯನ್ನ ದುರುಪಯೋಗಪಡಿಸಿಕೊಂಡು ಅಕ್ರಮ ಹಣ ಗಳಿಸುವ ಉಕ್ಕಡದ ಚಂದ್ರು ಅಂಡ್ ಗ್ಯಾಂಗ್ ವಿಶೇಷ ಪರಿಣ ಪಡೆದುಕೊಂಡಿದೆ.

ಬಡಬಗ್ಗರು, ಜನಸಾಮಾನ್ಯರು ಮಾತ್ರ ಉಕ್ಕಡ ಮಾರಮ್ಮನ ಬಳಿಗೆ ಬರುತ್ತಾರೆ ಎಂದುಕೊಂಡರೆ ಅದ ತಪ್ಪು, ಶಾಸಕರು ಮಂತ್ರಿಗಳಿಂದ ಹಿಡಿದು ಸಿನಿಮಾ ನಟರವರೆಗೆ ಎಲ್ಲರೂ ಮಾರಮ್ಮನಿಗೆ ಹರಸಿಕೊಳ್ಳುತ್ತಾರೆ ಈ ಹಿಂದೆ ನಾಯಕನಟ ದರ್ಶನ್ ಹೆಂಡತಿಗೆ ಹಿಂ ಕೊಟ್ಟು ಜೈಲು ಸೇರಿದ್ದನಲ್ಲಾ? ಜೈಲಿನಿಂದ ಹೊರಬಂದನಂತರ ಹರಕೆ ಹೊತ್ತು ಮಾಫ್ ಮುನ್ನೆ



ಟ್ರಸ್ಟ್‌ನ ಅಧ್ಯಕ್ಷ ಚಂದ್ರು

ದಿನ ಮಂಗಳವಾರದಂದು ತನ್ನ ಪತ್ನಿ, ಮಗು, ತಾಯಿ ಹಾಗೂ ಸೋದರ ದಿನಕರ್ ಜೊತೆಗೂಡಿ ಹರಕೆ ತೀರಿಸಿದರು. ಗಂಡ-ಹೆಂಡತಿ ಇಬ್ಬರೂ ಗರ್ಭಗುಡಿ ಪ್ರವೇಶಿಸಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ದೇವಾಲಯ ಪಕ್ಕದ ಕಲ್ಯಾಣಿಯ ಬಳಿ ತಡೆ ಒಡೆಸಿಕೊಂಡರು. ಮಂತ್ರಿಸಿದ ತೆಂಗಿನಕಾಯಿ, ಮಂತ್ರಿಸಿದ ಕುಡಿಕೆ ದಾಟಿದರು. ಕಲ್ಯಾಣಿಯ ಬಳಿ ಕಟ್ಟೆ ಒಡೆದ ನಂತರ ಕೋಳಿ ಮೊಟ್ಟೆ ನಿವಾಳಿಸಿ ಒಡೆದರು. ಹೀಗೆ ಅಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಆಚರಣೆಗಳನ್ನೂ ಪಾಲಿಸಿದರು.

ಟ್ರಸ್ಟ್‌ನ ಅದ್ಯಕ್ಷ ಚಂದ್ರು ಸ್ವತಃ ತಾನೇ ಮುಂದೆ ನಿಂತು ದರ್ಶನ್‌ಗೆ ದರ್ಶನದ ವ್ಯವಸ್ಥೆ ಮಾಡಿದ. ಆದರೆ ಅದೇ ಸಂದರ್ಭದಲ್ಲಿ ಗಂಟೆಗಟ್ಟಳೆ ಕ್ಯೂನಲ್ಲಿ ಕಾಯುತ್ತಿದ್ದ ಕೆಲ ಭಕ್ತಾದಿಗಳು ದುಡ್ಡಿರೋರು, ದೊಡ್ಡೋರಿಗೆ ಹೀಗೆ ಮಣೆಹಾಕ

▶13

ರೈತ ಮುಖಂಡರ ಪಾತ್ರವೇನು?

ರೈತಸಂಘದ ಮುಖಂಡ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಹಾಗೂ ಇದೇ ಕಡತನಾಳು ಗ್ರಾಮದವರಾದ ರೈತಸಂಘದ ಮತ್ತೊಬ್ಬ ಮುಖಂಡ ನಂಜುಂಡೇಗೌಡ ಇಬ್ಬರೂ ತಮ್ಮ ಸಂಘಟನಾ ಜೀವನದುದ್ದಕ್ಕೂ ಇಂಥಾ ಅಕ್ರಮಗಳ ವಿರುದ್ಧ ದನಿಯೆತ್ತುತ್ತಾ ಬಂದವರೆಂಬುದು ನಮಗೆಲ್ಲಾ ಗೊತ್ತಿದೆ. ಈ ಹಿಂದೆ ಮಾರಮ್ಮನ ಸನ್ನಿಧಿಯಲ್ಲಿ ನಡೆಯುವ ಅಕ್ರಮಗಳ ಬಗ್ಗೆಯೂ ಇವರು ದನಿಯೆತ್ತಿದ್ದರು. ಆದರೆ ಈಗ ಇದ್ದಕ್ಕಿದ್ದಂತೆ ಈ ನಾಯಕರು ಚಂದ್ರುವಿನ ಪರ ವಹಿಸಿದ್ದಾರೆಂಬ ಸುದ್ದಿ ಎಲ್ಲೆಡೆ ಹಬ್ಬಿದೆ.



ಮಾಜಿ ಸಿಎಂ ಜೊತೆ ಪುಟ್ಟಣ್ಣಯ್ಯ

ಈ ಅಕ್ರಮ ಟ್ರಸ್ಟ್‌ನ್ನು ರದ್ದು ಮಾಡಿ, ದೇವಸ್ಥಾನದ ಉಸ್ತುವಾರಿಯನ್ನು ನೇರವಾಗಿ ಸರ್ಕಾರವೇ ವಹಿಸಿಕೊಳ್ಳಬೇಕೆಂಬುದು ಉಕ್ಕಡ ಹಾಗೂ ಸುತ್ತಮುತ್ತಲ ಗ್ರಾಮದ ಭಕ್ತಾದಿಗಳ ಒತ್ತಾಸೆ. ಅದರಂತೆ ಈ ಅಕ್ರಮಗಳನ್ನು ಬಯಲಿಗೆಳೆದ ಪರಿಣಾಮವಾಗಿ ದೇವಾಲಯವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂತೆ ಧಾರ್ಮಿಕ ಪರಿಷತ್ತಿನಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ದೇವಸ್ಥಾನ ತನ್ನ ಕೈ ತಪ್ಪುತ್ತದೆ ಎಂದು ಗೊತ್ತಾದಾಗಿನಿಂದ ಚಂದ್ರುವಿನ ಅಕ್ರಮ ಹಣ ಎಲ್ಲೆಲ್ಲಿ ಹರಿದಾಡಿತೋ ಉಕ್ಕಡ ಮಾರಮ್ಮನಿಗೇ ಗೊತ್ತು, ಏನೆಲ್ಲಾ ಕಸರತ್ತು ಮಾಡಿ ಆ ನಿರ್ಣಯವನ್ನು ತಾತ್ಕಾಲಿಕವಾಗಿ ತಡೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾನೆ.

ಮಾಜಿ ಮುಖ್ಯಮಂತ್ರಿ ಸದಾನಂದಗೌಡರಿಗೆ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಯ ಲೆಟರ್‌ಹೆಡ್‌ನಲ್ಲಿ ಪತ್ರ ಬರೆದು ಈ ದೇವಾಲಯವನ್ನು ಸದರಿ ಟ್ರಸ್ಟ್‌ನ ಆಡಳಿತದಲ್ಲೇ ಉಳಿಸಬೇಕೆಂದು ಮನವಿ ಮಾಡಿದ್ದಾರೆಂದು ಮುಜರಾಯಿ ಇಲಾಖೆಯ ಅಧಿಕಾರಿಗಳು ಕೊಡುತ್ತಿರುವ ಕಾರಣ. ಈ ರೈತ ನಾಯಕರು ಈ ಖದೀಮ ಚಂದ್ರುವಿನ ಬೆಂಬಲಕ್ಕೆ ನಿಂತಿದ್ದಾರೆಂಬ ವಿಷಯ ಸಾರ್ವಜನಿಕರಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ನಮ್ಮ ರೈತ ನಾಯಕರು ತಮ್ಮಿಂದ ತಪ್ಪಾಗಿದ್ದರೆ ಆತ್ಮಾವಲೋಕನ ಮಾಡಿಕೊಳ್ಳಲು ಇದು ಸಕಾಲ. ಕನಿಷ್ಟ ತಮ್ಮ ನಿಲುವನ್ನು ಬಹಿರಂಗಗೊಳಿಸಿ ಈ ಗೊಂದಲಕ್ಕೆ ತೆರೆ ಎಳೆಯಲಿ ಎಂಬುದು ನಮ್ಮ ಮನವಿ.

ಸದಾನಂದಗೌಡನ ಧರ್ಮಪಾಲನೆ?!

ದೇವಸ್ಥಾನ ಹಾಗೂ ಧಾರ್ಮಿಕ ವ್ಯವಹಾರಗಳ ಬಗ್ಗೆ ಮುಜರಾಯಿ ಸಚಿವರ ಅಧ್ಯಕ್ಷತೆಯಡಿ ಧಾರ್ಮಿಕ ಪರಿಷತ್ತು ಎಂಬ ಅಂಗವೊಂದು ಕಾರ್ಯನಿರ್ವಹಿಸುತ್ತಿದೆ. ಈ ಹಿಂದೆ ಮುಜರಾಯಿ ಸಚಿವರಾಗಿದ್ದ ವಿ.ಎಸ್.ಆಚಾರ್ಯ ತೀರಿಕೊಂಡ ನಂತರ ಇಲಾಖೆ ಸದಾನಂದಗೌಡರ ಕೈಗೆ ಬಂತು. ಹೀಗೆ ಸಿಎಂ ಸದಾನಂದರ ನೇತೃತ್ವದಲ್ಲೇ ದಿನಾಂಕ 23-04-2012ರಂದು ಸಭೆ ನಡೆಯಿತು. ಈ ಸಭೆ "ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ, ಮಂಡ್ಯ ಜಿಲ್ಲೆ ಜಿಲ್ಲಾಧಿಕಾರಿಗಳ ಕೋರಿಕೆಯಂತೆ ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ದಿನಾಂಕ 23.04.2012ರ ತೀರ್ಮಾನದಂತೆ ಶ್ರೀರಂಗಪಟ್ಟಣ ತಾಲ್ಲೂಕು, ಆರತಿ ಉಕ್ಕಡ ಗ್ರಾಮದ ಶ್ರೀ ಅಹಲ್ಯಾದೇವಿ (ಮಾರಮ್ಮ) ದೇವಾಲಯವನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997ರ ಸೆಕ್ಷನ್ 42 ಮತ್ತು 43ರನ್ವಯ ಘೋಷಿತ ಸಂಸ್ಥೆಯೆಂದು ಘೋಷಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ."



ಎಲ್ಲಾ ಮಾಮೂಲಿಯಂತೆ ನಡೆದಿದ್ದರೆ ಇಷ್ಟರಲ್ಲಾಗಲೇ ಉಕ್ಕಡ ಮಾರಮ್ಮನ ನಿರ್ವಹಣೆ ಸರ್ಕಾರದ ಕೈಗೆ ಬರಬೇಕಿತ್ತು, ಆದರೆ ವಿಪರ್ಯಾಸ ನೋಡಿ. ಇದೇ ಧರ್ಮೋದ್ಧಾರಕ ಸಿಎಂ ಸದಾನಂದಗೌಡರೇ ಈ ಖದೀಮ ಟ್ರಸ್ಟ್‌ನ ಲಾಬಿಗೆ ಮಣಿದುಬಿಟ್ಟಿದ್ದಾರೆ. ಪರಿಣಾಮವಾಗಿ ಸ್ವತಃ ತನ್ನ ಅಧ್ಯಕ್ಷತೆಯಲ್ಲೇ ನಡೆದ ಪರಿಷತ್ತಿನ ನಿರ್ಣಯವನ್ನು ಪುನರ್‌ಪರಿಶೀಲಿಸುವಂತೆ ಆದೇಶಿಸಿದ್ದಾರೆಂದು ಮುಜರಾಯಿ ಇಲಾಖೆ ಕೈಕಟ್ಟಿ ಕುಳಿತಿದೆ. ಇಷ್ಟೆಲ್ಲಾ ಬಹಿರಂಗವಾಗಿ ಸಿಕ್ಕಿಬಿದ್ದಿರುವ ಹಗಲುಕಳ್ಳರ ರಕ್ಷಣೆಗೆ ನಿಂತಿರುವ ಈ ಮಂದಿಗೆ ಏನು ಹೇಳಬೇಕು? ಬಿಜೆಪಿ ಪಕ್ಷದ ಧರ್ಮ ರಕ್ಷಣೆ ಎಂದರೆ ವಾಸ್ತವದಲ್ಲಿ ಧರ್ಮದ ಹೆಸರಿನಲ್ಲಿ ಬೇಳೆ ಬೇಯಿಸಿಕೊಳ್ಳುವವರ ಹಿತರಕ್ಷಣೆಯಾಗಿರುವುದರಿಂದ ತಮ್ಮ ಅಸಲಿ ನೀತಿಗೆ ತಕ್ಕಂತೆ ನಡೆದುಕೊಳ್ಳುತ್ತಿದ್ದಾರೆ ಎಂದುಕೊಳ್ಳುವುದು ಸೂಕ್ತ ಅಲ್ಲವೆ?



ಅಕ್ಟೋಬರ್‌ನಲ್ಲಿ... ಯಡ್ಡಿ ಬಿಜೆಪಿಗೆ ಬೈ-ಬೈ ಹೇಳ್ತಾರಾ?


ನಿತಿನ್ ಗಡ್ಕರಿ

...ಪುರುಷೋತ್ತಮ" ಯಡ್ಡಿ ಮಹಾರಾಜ್‌ನಲ್ಲಿ ...ಏನಾದರೂ ಸ್ವಾಭಿಮಾನ-ಸ್ವಂತಿಕೆ, ಮಾನ-ಮರ್ಯಾದೆ ...ಎಂದು ಉಳಿದಿದೆಯಾ? ಅದೇನಾದರೂ ಇದ್ದಿದ್ದೇ ...ಆದರೆ ಆತ ಅಕ್ಟೋಬರ್ ಮೊದಲ ವಾರದಲ್ಲಿ ಬಿಜೆಪಿಗೆ ...ಮ ವಿದಾಯ ಹೇಳಿ ಹೊಸ ಪಕ್ಷ ಕಟ್ಟುತ್ತಾರೆ; ...ಇದ್ದರೆ ಈಗಾತ ಪ್ರದರ್ಶಿಸುತ್ತಿರುವ ಭಂಡ ...ಯುವಿದೆಯಲ್ಲ, ಅದು ರಾಜ್ಯ ಬಿಜೆಪಿ ಯಜ ...ಕೆಗಾಗಿ ಬಿಜೆಪಿ ಲೋಕಮಾಂಡ್‌ಗೆ ಮಾಡುತ್ತಿರುವ ...ಮೇಲ್ ಅಷ್ಟೇ. ಹಾಗಂತ ಯಡ್ಡಿಯ ಆಸೆಬುರುಕ ...ಹೂಟದ ಗುಣ-ಧರ್ಮಬಲ್ಲ ಬೆಂಬಾಲಕರೇ ...ಡುತ್ತಿದ್ದಾರೆ!

...ಂದಂತೂ ಖರೆ; ರಾಜ್ಯ ಬಿಜೆಪಿ ಅಧ್ಯಕ್ಷತೆಗಾಗಿ ...ಹಿಡಿದು ಕೂತಿರುವ ಯಡ್ಡಿಯನ್ನು ಈ ಬಾರಿ ...ಕೋ ಬಿಜೆಪಿಯ ದಿಲ್ಲಿ ದೊರೆಗಳು ರಮಿಸುತ್ತಿಲ್ಲ. ...ಸುಮ್ಮನೆ ಜಾತಿ ಟ್ರಂಪ್ ಕಾರ್ಡ್ ಎಸೆದು ರಂಪ ...ಸದಾನಂದ ಗೌಡರನ್ನು ಸಿಎಂ ಪೀಠದಿಂದ ಕೆಳಗಿಳಿಸಿದ ...ಯ ತಂತ್ರಗಾರಿಕೆಗೆ ಮಣಿಯಬಾರದೆಂದೇ ಬಿಜೆಪಿಯ ...ಕಟ್ಟಿನ ಮುಂದಾಳುಗಳು ತೀರ್ಮಾನಿಸಿ ಬಿಟ್ಟಿದ್ದಾರೆ. ...ಪರಮ ಶತ್ರುಗಳಾದ-ಬಿಜೆಪಿ ಪ್ರಧಾನ ಕಾರ್ಯದರ್ಶಿ ...ತಕುಮಾರ್ ಮತ್ತು ಡಿಸಿಎಂ ಈಶ್ವರಪ್ಪರ ಚಾಡಿ ...ನಿಂದಲೇ ಕೇಂದ್ರ ನಾಯಕರು ತನ್ನನ್ನು ವ್ಯವಸ್ಥಿತವಾಗಿ ...ಯುತ್ತಿದ್ದಾರೆಂಬುದೂ ಯಡ್ಡಿಗೀಗ ಖಾತ್ರಿಯೂ ...ಹೋಗಿದೆ: ಹಾಗಾಗಿಯೇ ಆತ ಈಗ "ಬರ ...ಕೀಯು"ದ ನೆಪದಲ್ಲಿ ಪರೋಕ್ಷವಾಗಿ ...ಮಾಂಡ್ ಮಾಂಡಲೀಕರ ಮೇಲೆ ಜಗಳಕ್ಕೆ ...ಸುತ್ತಿದ್ದಾರೆ.

...ಜಗದೀಶ್ ಶೆಟ್ಟರ್ ಎಂಬ ಸ್ವಜಾತಿ "ಶತ್ರು-...ತ್ರ"ನನ್ನು ಸಿಎಂ ಪೀಠಕ್ಕೇರಿಸಿದ ನಂತರವೂ ...ಯ ಈಗೋ ತಣಿದಿಲ್ಲ. ಇಡೀ ರಾಜ್ಯ ಬಿಜೆಪಿ ...ಮಾಡಿಕೊಳ್ಳುವ ಇರಾದೆಯಲ್ಲಿ ಕೆರಳಿರುವ ...ಡ್ಡಿ ತುಂಬ ದಿನದಿಂದ ಒಂದು ಕಾಲು ಪಾರ್ಟಿ ...ದ ಹೊರಗಿಟ್ಟೇ ಹಿಕಮತ್ತು ನಡೆಸುತ್ತಿದ್ದಾರೆ. ...ಪೂರ್ತಿ ಹತಾಶರಾಗಿರುವ ಯಡ್ಡಿ ಎರಡೂ ...ಹೊಸಿಲಾಚೆ ಇಟ್ಟರೆ ಆಗುವ ಲಾಭ-...ಯ ಲೆಕ್ಕಾಚಾರವನ್ನು ಗಂಭೀರವಾಗಿ ನಡೆಸಿದ್ದಾರೆ. ...ಷ್ಯವಾಗಿ ಬೆಂಬಲಿಗರ ಸಭೆ-ಗುಪ್ತವಾಗಿ ದಿಲ್ಲಿ ಯಾತ್ರೆ ...ಡುತ್ತ ಬಿಜೆಪಿಯಿಂದ ಹೊರಹೊರಟರೆ ಕಾಂಗ್ರೆಸ್‌ನಿಂದ ...ವ ಅನುಕೂಲಗಳೇನು? ರಾಜ್ಯದ ಉತ್ತರ ಕರ್ನಾಟಕ ...ಗಾಯತ ಬಾಹುಳ್ಯದ ಏರಿಯಾದಿಂದಾದರೂ ...ದಿಷ್ಟೈದು ಶಾಸಕರನ್ನು ಗೆಲ್ಲಿಸಿಕೊಂಡು ಬಂದು ಕಿಂಗ್ ...ಕರ್ ಆಗಬಹುದಾ? ಎಂಬ ದೂರಾಲೋಚನೆಯಲ್ಲಿ ...ತೊಡಗಿದ್ದಾರೆ.

...ಯಡ್ಡಿ ಪರಮಾತ್ಮ ಈಗ ಎರಡು ಸಂಕಟದಲ್ಲಿದ್ದಾರೆ. ...ದು, ಅಸೆಂಬ್ಲಿ ಇಲೆಕ್ಷನ್ ಹೊತ್ತಲ್ಲಿ ಹಲ್ಲುಮುರಿದ ...ವಾಗಿ ಬುಟ್ಟಿಯಲ್ಲಿ ಮುದುಡಿಕೊಂಡಿರಲು ಸಾಧ್ಯವಿಲ್ಲ. ...ಒಂದು ಗಣಿ ಕಪ್ಪ ಹಗರಣದ ಪ್ರಮುಖ ...ಪಿಯಾಗಿ ಸಿಬಿಐ ತನಿಖೆಯಲ್ಲಿರುವ ಯಡ್ಡಿಗೆ ...ಂದ ಬಚಾವಾಗಲು ಕಾಂಗ್ರೆಸನ್ನು ಸಂಪ್ರೀತಗೊಳಿಸ ...ಕಾಗಿದೆ. ಸಿಬಿಐ ಚಾರ್ಜ್‌ಶೀಟ್ ಹಾಕುವ ಮೊದಲೆ ...ಬಿಡುತ್ತೇನೋ ಇಲ್ಲವೋ ಎಂಬ ನಿರ್ಧಾರವನ್ನು ...ಕಾಂಗ್ರೆಸ್‌ನ ಕಿಂಗ್‌ಗಳಿಗೆ ತಿಳಿಸಬೇಕಿದೆ. ಕೇಂದ್ರ ...ಗಳಾದ ಮೊಯ್ಲಿ, ಮುನಿಯಪ್ಪ ಮತ್ತು ಸೋನಿಯಾ ...ಆಪ್ತ ಆಸ್ಕರ್ ಫರ್ನಾಂಡಿಸ್‌ಗೆ ಆದಷ್ಟು ಬೇಗ ...ಪಾರ್ಟಿ ಕಟ್ಟುತ್ತೇನೆಂದು ಹೇಳಬೇಕಾದ ಸಂದಿಗ್ಧಕ್ಕೆ ...ದ್ದಾರೆ. ಇಲ್ಲದಿದ್ದರೆ ಕಾಂಗ್ರೆಸ್ ಮಂದಿ ಸಿಬಿಐ ...ನ್ನು ತನ್ನ ಕೊರಳಿಗೆ ಬಿಗಿಯಾಗಿಸುತ್ತಾರೆಂಬ ಭಯ ...ವು ನಿದ್ದೆಗೆಡಿಸುತ್ತಿದೆ.

...ಐ ಕೈಯಲ್ಲಿ ಸಿಕ್ಕಿಬಿದ್ದರೆ ತನ್ನಿಂದ ಕಪ್ಪಕಾಣಿಕೆ ...ಗಡ್ಕರಿ, ವೆಂಕಯ್ಯ ನಾಯ್ಡು, ಅರುಣ್ ಜೇಟ್ಲಿ ...ಇವರ್‍ಯಾರೂ ನೆರವಿಗೆ ಬಂದು ಬಚಾಯಿಸ ...ಸಂಬಿಕೆಯೂ ಯಡ್ಡಿಯಲ್ಲೀಗ ಉಳಿದಿಲ್ಲ. ...ಗೌಡರನ್ನು ಮುಖ್ಯಮಂತ್ರಿಸ್ಥಾನದಿಂದ ಉಚ್ಛಾಟಿಸ

ಬೇಕೆಂಬ ತನ್ನ ದಾದಾಗಿರಿಗೆ ಮಣಿದಿದ್ದ ದಿಲ್ಲಿ ಮುಖಂಡರು ಈಗ ರಾಜ್ಯಾಧ್ಯಕ್ಷತೆ ಕೇಳಿದರೆ ಕೈ ತಿರುಗಿಸುತ್ತಿರುವುದು ಯಡ್ಡಿಗೆ ತಾನೀಗ ಬಿಜೆಪಿಯಲ್ಲಿ ನಗಣ್ಯನಾದಂತೆ ನಿಸಿದೆ. ಇದರಿಂದ ಸ್ಥಿಮಿತ ಕಳಕೊಂಡಿರುವ ಯಡ್ಡಿ ರಾಜ್ಯ ಪ್ರವಾಸಕ್ಕೆ ಹೊರಟಿದ್ದಾರೆ. ಸ್ವಜಾತಿ ಬಂಧುಗಳ ಏರಿಯಾದಲ್ಲಿ ತನ್ನಿಂದ ಲಾಭ ಪಡೆದು ಕೊಂಡ ಮಠ-ಮಾನ್ಯರ ಒಳ ಫರ್ಮಾನಿ ನಂತೆ ಸೇರುತ್ತಿರುವ ಜನರನ್ನು ಕಂಡು ತಾನೊಬ್ಬ ಸರ್ವಶಕ್ತ ಜನನಾಯಕನೆಂದು ಭ್ರಮಿಸಿಕೊಂಡಿದ್ದಾರೆ.



ಅದ್ಯಾವುದೋ ಖಾಸಗಿ ವಾಹಿನಿಯ ಸಮೀಕ್ಷೆ ಕತ್ತಲಲ್ಲಿ ಕೋಲು ಕಳಕೊಂಡ ಕುರುಡನಿಗೆ ಸಿಕ್ಕ ಆಧಾರದಂತಾಗಿದೆ ಯಡ್ಡಿಯ ಅಸಹಾಯಕತೆಗೆ. ಎನ್‌ಡಿಟಿವಿ ಸರ್ವೆ ಹೇಳೋದು ಯಡ್ಡಿ ಇಲ್ಲದ ಬಿಜೆಪಿಗೆ ಹಾನಿಯೆಂದೇ ಹೊರತು ಯಡ್ಡಿಯೇ ನಿರ್ಣಾಯಕ ಎಂದೇನಲ್ಲ.

ಲಿಂಗಾಯತ ಮಠಗಳಿಗೆ ಬೊಕ್ಕಸದ ಹಣ ಕೋಟಿ-ಕೋಟಿ ಕೊಟ್ಟು-ಜಾತಿ ರಾಜಕಾರಣದ ಪರಾಕಾಷ್ಠೆ ತಲುಪಿದ್ದ ಯಡ್ಡಿಗೆ ಲಿಂಗಾಯತ ಏರಿಯಾದಲ್ಲಿ ಒಂಚೂರು ಬೆಂಬಲ ಸಿಗುತ್ತದೆಂದು ಹೇಳಲಿಕ್ಕೆ ಎನ್‌ಡಿಟೀವಿ ಸಮೀಕ್ಷೆಯೇ ಬೇಕೆಂತೇನಿಲ್ಲ. ಹಾಗಂತ ಈ ಯಡ್ಡಿ ಕನಿಷ್ಠ 'ಬಂ'ರಂಥ ರಾಜ್ಯಮಟ್ಟದ ಇಮೇಜಿನ ಪುಢಾರಿಯೂ ಅಲ್ಲ. ಆತ ಏನಿದ್ದರೂ ಜಾತಿರಾಜಕಾರಣಿ-ದೇವೇಗೌಡರಂತೆ! ಆದೇನೇ ಇರಲಿ, ಯಡ್ಡಿ ಟೀವಿ ವಾಹಿನಿಯ ಸರ್ವೆ ಮತ್ತು ಸ್ವಜಾತಿ ಬೆಂಬಲದಿಂದ ಇಡೀ ಬಿಜೆಪಿಯನ್ನೇ ಸರ್ವನಾಶ ಮಾಡುವ ತಾಕತ್ತುದಾರ ತಾನೆಂದು ಭಾವಿಸಿದ್ದಾರೆ.

ಈ ಅಮಲಲ್ಲೇ ಆತ ಬಿಜೆಪಿ ಹೈಕಮಾಂಡ್ ಧೀರರನ್ನು ಕಂಡ-ಕಂಡಲ್ಲಿ ಚುಚ್ಚುತ್ತಿದ್ದಾರೆ. ತನ್ನ ಹಿತಶತ್ರುಗಳಾದ ಈಶ್ವರಪ್ಪ-ಅನಂತಕುಮಾರ್‌ಗಳನ್ನು ಮೂದಲಿಸುತ್ತಿದ್ದಾರೆ. ಹಾವೇರಿ, ದಾವಣಗೆರೆ, ಹೊನ್ನಾಳಿ ಮುಂತಾದೆಡೆ ಆತ ಸ್ವಪಕ್ಷದ ವೈರಿಗಳನ್ನೇ ತಿವಿದಿದ್ದಾರೆ; ಹೈಕಮಾಂಡ್‌ಗೆ ಸವಾಲಿನ ಮೇಲೆ ಸವಾಲು ಹಾಕಿದ್ದಾರೆ; ಹಾಕುತ್ತಿದ್ದಾರೆ.

ಹೀಗೆ ಬಿಜೆಪಿ ಭೂಪರಿಗೇ ಬಹಿರಂಗವಾಗಿ ಚಾಟಿ ಬೀಸುವ ಮೂಲಕ ಯಡ್ಡಿ ಬಿಜೆಪಿಗೆ ವಿದಾಯ ಹೇಳಲು ಒಂದೊಂದು ಹೆಜ್ಜೆ ಇಡುತ್ತಿದ್ದಾರೆಂದೇ ವಿಶ್ಲೇಷಿಸಲಾಗುತ್ತಿದೆ. "ಬಿಜೆಪಿಯಲ್ಲಿರುವವರೇ ನನ್ನನ್ನು ವ್ಯವಸ್ಥಿತವಾಗಿ ಮುಗಿಸಲು ಕಿತಾಪತಿ ಸತತವಾಗಿ ನಡೆಸಿದರು; ನಮ್ಮವರೇ ಬೆನ್ನಿಗೆ ಚೂರಿ ಹಾಕಿ ಸಿಎಂ ಪಟ್ಟದಿಂದ ಕೆಳಗಿಳಿಸಿದರು" ಹಾಗೆಂದು ತಮ್ಮ ಆಪ್ತರ ಮುಂದೆ, ಸಾರ್ವಜನಿಕ ಸಭೆಯಲ್ಲಿ ಗೋಗರೆಯುತ್ತಿರುವ ಯಡ್ಡಿಗೆ ಬಿಜೆಪಿಯಲ್ಲಿ ಉಳಿಯುವ ಮನಸ್ಸು ಇಲ್ಲದಾಗಿದೆ. ರಾಜ್ಯ ಬಿಜೆಪಿ ಅಧ್ಯಕ್ಷತೆ ತನಗೆ ಕೊಡದಿದ್ದರೆ ಈ ತಿಂಗಳ ಅಂತ್ಯದಲ್ಲಿ ಅಥವಾ ಅಕ್ಟೋಬರ್ ಆರಂಭದಲ್ಲಿ ಬಿಜೆಪಿ ಬಿಡುವ ನಿರ್ಧಾರಕ್ಕಾತ ಬಂದಿದ್ದಾರೆ. ಅಧ್ಯಕ್ಷತೆಗೆ ಸೆಪ್ಟೆಂಬರ್ 30 ರ ಡೆಡ್‌ಲೈನ್ ಹೈಕಮಾಂಡ್‌ಗೆ ಕೊಟ್ಟಿರುವ ಯಡ್ಡಿ ಪಾರ್ಟಿ ಬಿಟ್ಟರೆ ಆಗಬಹುದಾದ ಸಾಧಕ-ಬಾಧಕದ ಬಗ್ಗೆ ತೀವ್ರ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ತನ್ನ ಒತ್ತಡದ ತಂತ್ರಕ್ಕೆ ಹೈಕಮಾಂಡ್ ಮಣಿಯದಿದ್ದರೆ ಶಾಸಕ ಸ್ಥಾನ ಮತ್ತು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ಬಿಸಾಕಲು ಯಡ್ಡಿ ಮಾನಸಿಕವಾಗಿ ಸಿದ್ಧವಾಗುತ್ತಿದ್ದಾರೆ. ಮೊದಲು ತಾನೊಬ್ಬನೇ ಬಿಜೆಪಿ ಬಿಡುವ ಯೋಚನೆ ಯಡ್ಡಿಜೇದು. ಏಕೆಂದರೆ ಸ್ವಜಾತಿ ಲಿಂಗಾಯತರ ಮತ್ತೊಂದು ಕುಡಿ ಜಗದೀಶ್ ಶೆಟ್ಟರ್ ಸರ್ಕಾರ ಉರುಳಿಸಿದ ಅಪಖ್ಯಾತಿ ಆತನಿಗೆ ಬೇಡವಾಗಿದೆ. ಜಾತಿಬಂಧುಗಳ ಸಿಂಪಥಿ ಪಡೆದು ಹುತಾತ್ಮನಾಗುವ ರಾಜಕೀಯ ಲೆಕ್ಕಾಚಾರ ಯಡ್ಡಿಯದು. ಯಡ್ಡಿ ಬಿಜೆಪಿ ತೊರೆದರೆ "ಜೀರೋ" ಎಂಬುದು ಆತನ ಬೆಂಬಲಿಗರಿಗೆ ಗೊತ್ತು. ಹಾಗಾಗಿ ಇಕ್ಕಟ್ಟಿಗೆ ಸಿಲುಕಿರುವ ಈ ಚೇಲಾಗಳು ಯಜಮಾನನನ್ನು ಬಿಜೆಪಿಯಲ್ಲೇ ಉಳಿಸಲು ಕಟಪಿಟಿ ನಡೆಸಿದ್ದಾರೆ. ಆದರೆ ಹೈಕಮಾಂಡ್‌ನ ಪವರ್ ಬ್ರೋಕರ್‌ಗಳು ಮಾತ್ರ ಕಣ್ಣು-ಕಿವಿ ಮುಚ್ಚಿಕೊಂಡು ಕೂತಿದ್ದಾರೆ; ಅಡ್ವಾಣಿ-ಸುಷ್ಮಾರಂಥ "ದೊಡ್ಡವ"ರಿಗೇ ಲೇವಡಿ ಮಾಡುವ ಯಡ್ಡಿಯ ರಗಳೆ ಬಿಜೆಪಿ ಹೈಕಮಾಂಡಿಗೂ ಸಾಕಾಗಿಹೋಗಿದೆ. ಆರೆಸ್ಸೆಸ್‌ನ ಸಂತೋಷ್, ಕಲ್ಲಡ್ಕ ಭಟ್ಟರಂಥ ಬ್ರಾಹ್ಮಣರಿಗಂತೂ ಯಡ್ಡಿಯ ಏಕಸಾಮ್ಯದ ಜಾತಿರಾಜಕಾರಣ ಕೋಪ ಉಕ್ಕಿಸುತ್ತಿದೆ!


ಒಂದು ಮೂಲದ ಪ್ರಕಾರ ಯಡ್ಡಿ ಜತೆಗೆ ಬಿಜೆಪಿ ಬಿಡಲು ಆತನ ಕಟ್ಟಾ ಅನುಯಾಯಿಗಳಾದ ಒಂದಿಷ್ಟು ಶಾಸಕರು-ಮಂತ್ರಿಗಳು-ಎಂಪಿಗಳು ರೆಡಿಯಾಗಿದ್ದಾರೆ. ಬಸವರಾಜ್ ಬೊಮ್ಮಾಯಿ, ಸಿ.ಎಂ. ಉದಾಸಿ, ರೇಣುಕಾಚಾರ್ಯ, ಮುರುಗೇಶ್ ನಿರಾಣಿ, ಶೋಭಾ ಕರಂದ್ಲಾಜೆ, ರಾಜೂಗೌಡ ಎಂಬ ಮಂತ್ರಿಗಳು, ಸುರೇಶ್ ಅಂಗಡಿ, ಶಿವಕುಮಾರ್ ಉದಾಸಿ ಮುಂತಾದ ಎಂಪಿಗಳು ಮತ್ತು ಸುಮಾರು 30 ಎಮ್ಮೆಲ್ಲೆಗಳು ಯಡ್ಡಿ ಜತೆ ಹೊರಹೋಗಲು ಮುಂದಾಗಿದ್ದಾರೆ. ಆದರೆ ಯಡ್ಡಿ ಇವರಿಗೆಲ್ಲ ಆದಷ್ಟು ದಿನ ಆಡಳಿತಾರೂಢ ಪಕ್ಷದಲ್ಲೇ ಇದ್ದು ಹಾಯಾಗಿ ತಿಂದುಂಡು ಕೊನೇ ಗಳಿಗೆಯಲ್ಲಿ ಬಂದರೆ ಸಾಕು ಎಂದು ಹೇಳಿದ್ದಾರಂತೆ. ಇದರಿಂದ ಲಿಂಗಾಯತ ಸರ್ಕಾರ ಉರುಳಿಸಿದ "ಪಾಪ"ವೂ ತನಗೆ ತಟ್ಟದೆಂಬ ಪ್ಲಾನ್ ಯಡ್ಡಿಜೇದು.


ಸದಾನಂದ ಗೌಡರ ಪರ್ವದಲ್ಲೇ ಬಿಜೆಪಿ ತೊರೆಯಲು ರೆಡಿಯಾಗಿದ್ದರು ಯಡ್ಡಿ. ಆಗ ಗಡ್ಕರಿಯಂಥ ಬಿಜೆಪಿಯ ವ್ಯಾಪಾರಸ್ಥ ರಾಜಕಾರಣಿಗಳು ಯಡ್ಡಿ ಎದುರು ಮಂಡಿಯೂರಿ ತಣ್ಣಗಾಗಿಸಿದ್ದರು. "ಸೂಕ್ತ" ಸ್ಥಾನಮಾನ ಕೊಡುವುದಾಗಿ ಮೊಣಕೈಗೆ ಜೇನು ತುಪ್ಪ ಎರಡೂ ಸವರಿದ್ದರು. ಇದರಿಂದ ಒಂಚೂರು ತಣ್ಣಗಾಗಿದ್ದ ಯಡ್ಡಿಯನ್ನು ಈಗ ಹೈಕಮಾಂಡ್ ತಾತ್ಸಾರ ಮಾಡುತ್ತಿದೆ. ಯಡ್ಡಿಯನ್ನು ದಿಲ್ಲಿಯಲ್ಲಿ ಬೆಂಬಲಿಸುತ್ತಿದ್ದ ಅರುಣ್ ಜೇಟ್ಲಿಯಂಥವರಿಗೂ ಆತನ ಮೊಂಡಾಟದಿಂದ ಬೇಸರ ಬಂದಿದೆಯಂತೆ. ಹೀಗಾಗಿ "ಮೊದಲು ಎಲ್ಲ ಆರೋಪದಿಂದ ಮುಕ್ತರಾಗಿ... ಅನಂತರ ಸ್ಥಾನಮಾನ ಕೇಳಿ....." ಎಂದು ಕಡ್ಡಿಮುರಿದಂತೆ ದಿಲ್ಲಿ ಧಣಿಗಳು ಯಡ್ಡಿಗೆ ರೋಪು ಹಾಕುತ್ತಿದ್ದಾರೆ.

ಇದರಿಂದ ಯಡ್ಡಿಯ ರಾಜ್ಯ ಬಿಜೆಪಿ ಬಾಸ್ ಆಗುವ ಆಸೆಗೆ ತಣ್ಣೀರು ಎರಚಿದಂತಾಗಿದೆ. ತಾನೇ ಬಿಜೆಪಿ-ತನ್ನಿಂದಲೇ ಬಿಜೆಪಿ ಎಂಬ ಅಹಂಕಾರದಲ್ಲಿರುವ ಯಡ್ಡಿ ತನ್ನ ಪರಾಕ್ರಮವನ್ನು ಸ್ವ-ಪಕ್ಷದ ವೈರಿಗಳಿಗೆ ತೋರಿಸುತ್ತೇನೆಂದು ಆಪ್ತರಲ್ಲಿ ಹೇಳುತ್ತಿದ್ದಾರೆ. ಸ್ವಾಭಿಮಾನಕ್ಕೆ ಧಕ್ಕೆ ಬರುವ ಈ ಬಿಜೆಪಿಯಲ್ಲಿ ಇರಲಾರೆ ಎನ್ನುತ್ತಿದ್ದಾರೆ. ಯಡ್ಡಿಗೆ ಅಂಥ "ಸ್ವಾಭಿಮಾನ" ಇರುವುದು ಅಕ್ಟೋಬರ್‌ವರೆಗೂ ಸಾಬೀತಾಗೋದಿಲ್ಲ. ಈ ಬಾರಿ ಯಡ್ಡಿ ಹೈಕಮಾಂಡ್‌ಗೆ ಹೈರಾಣು ಮಾಡುತ್ತಾರೋ? ಹೈಕಮಾಂಡೇ ಯಡ್ಡಿಯನ್ನು ಮಣಿಸಿ ತಾನಾಗೇ ತೊಲಗುವಂತೆ ಮಾಡುವುದೋ? ಖದರು ಕಳಕೊಂಡಿರುವ ಬಿಜೆಪಿಯ ಕೇಂದ್ರ ನಾಯಕತ್ವ ಮತ್ತು ಗತಿಗೇಡಿ ಯಡ್ಡಿ ನೈಚ್ಯಾನುಸಂಧಾನ ಮಾಡಿಕೊಂಡೀತೋ? ಈ ಪ್ರಶ್ನೆಗೆ ಉತ್ತರ ಸಿಗಬೇಕೆಂದರೆ, ಒಂದೋ ರಾಜ್ಯ ಬಿಜೆಪಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ಶುರುವಾಗಬೇಕು. ಇಲ್ಲವೇ ಸಿಬಿಐ ಯಡ್ಡಿಯ ಕತ್ತಿಗೆ ಗಣಿ ಹಗರಣದ ಉರುಳಾಗಿ ಚಾರ್ಜ್‌ಶೀಟ್ ರೆಡಿ ಮಾಡಬೇಕು!!


ವೀರಪ್ಪ ಮೊಯ್ಲಿ


ಆಸ್ಕರ್ ಫರ್ನಾಂಡಿಸ್


ಸುಬ್ರಮಣ್ಯ ಸ್ವಾಮಿ


ಸಿದ್ದರಾಮಯ್ಯ

ಕಾಂಗ್ರೆಸಿಗರೊಂದಿಗೆ ಚಕ್ಕಂದ!!


ಯಡ್ಡಿ ಆದೆಂಥ ಅಧಃಪತನಕ್ಕಿಳಿದಿದ್ದಾರೆ ನೋಡಿ! ಅಲ್ಪನಿಗೆ ಐಶ್ವರ್ಯ ಬಂದರೆ ಮಧ್ಯರಾತ್ರಿ ಕೊಡೆ ಹಿಡಿದಿದ್ದರಂತೆ. ಹಾಗಾಗಿತ್ತು ದಿಢೀರ್ ಅಧಿಕಾರಕ್ಕೇರಿದ ಯಡ್ಡಿ ಪರಿಸ್ಥಿತಿ. ಉದ್ದಕ್ಕೂ ಅನೈತಿಕ-ಅಕ್ರಮ-ಅಸಡ್ಡಾಳ ರಾಜಕಾರಣ ಮಾಡುತ್ತ ಹೋದ ಯಡ್ಡಿ ಎದುರು ಕಂಡದ್ದೆಲ್ಲ ನುಂಗಿ ನೊಣೆದರು. ತತ್ಪರಿಣಾಮವಾಗಿ ಸಿಬಿಐ ಉರುಳಿಗೆ ಕೊರಳೊಡ್ಡಬೇಕಾಗಿ ಬಂದಿದೆ. ಈ ಗಂಡಾಂತರದಿಂದ ಬಚಾವಾಗಲು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್‌ನ ದಲ್ಲಾಳಿಗಳು ಕಾಲು ಹಿಡಿಯಬೇಕಾಗಿದೆ.

ಕೇಂದ್ರ ರೈಲ್ವೆ ಸಹಾಯಕ ಮಂತ್ರಿ ಕೆ.ಎಚ್. ಮುನಿಯಪ್ಪರೊಂದಿಗೆ ನಿಕಟ ನೆಂಟಸ್ತನ ಸಾಧಿಸಿರುವ ಯಡ್ಡಿ ಕಾಂಗ್ರೆಸ್‌ನ ಡಿಸಿಷನ್ ಮೇಕರ್‌ಗಳ ಸಂಪರ್ಕಿಸುವುದೇ ಅವರ ಮೂಲಕ. ಹಾಗೆಯೇ ಕಾಂಗ್ರೆಸ್ ಅಧಿನಾಯಕಿ ಸೋನಿಯಾಗೆ ಹತ್ತಿರವಿರುವ ಆಸ್ಕರ್ ಫರ್ನಾಂಡಿಸ್ ಕೂಡ ಆಗಾಗ ಯಡ್ಡಿಯನ್ನು ಭೇಟಿಯಾಗುತ್ತಿರುತ್ತಾರೆ.

ಕಾಂಗ್ರೆಸ್‌ಗೆ ಕಳಂಕಿತ ಯಡ್ಡಿ ಪಕ್ಷ ಸೇರುವುದು ಬೇಕಿಲ್ಲ. ಆತ ಬಿಜೆಪಿ ಬಿಟ್ಟು ಆ ಪಾರ್ಟಿಗೆ ಹಾನಿ ಮಾಡಿದರಷ್ಟೇ ಸಾಕು. ಅಷ್ಟು ಡ್ಯಾಮೇಜ್ ಮಾಡಿದರೆ ಯಡ್ಡಿಗೆ ಸಿಬಿಐ ಕೇಸಿನಿಂದ ತೊಂದರೆ ದೊಡ್ಡ ಮಟ್ಟದಲ್ಲಾಗದಂತೆ ಕಾಂಗ್ರೆಸ್ ನಾಯಕರು ನೋಡಿಕೊಳ್ಳುತ್ತಾರೆ. ಇಲ್ಲದಿದ್ದರೆ ಯಡ್ಡಿಯ ರಾಜಕೀಯ ಭವಿಷ್ಯ ಮುಸುಕು ಮಾಡೋ ತಾಕತ್ತು ಕಾಂಗ್ರೆಸ್‌ನ ದಿಲ್ಲಿ ದೊರೆಗಳಿಗೆ ಇದೆ. ಯಡ್ಡಿ ಬಿಜೆಪಿ ಮುಗಿಸಿಕೊಟ್ಟರೆ ಕಾಂಗ್ರೆಸ್ ಚುನಾವಣೆಗೆ ಮೊದಲು ಅಥವಾ ನಂತರ ಆತನ ನೂತನ ಪಕ್ಷದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಛಾನ್ಸ್ ಬಗ್ಗೆ ಈಗಲೇ ಹೇಳಲಾಗದು. ಹಾಗೆಯೇ ಯಡ್ಡಿ ಈಚೆಗೆ ಸುಬ್ರಹ್ಮಣ್ಯಸ್ವಾಮಿ ಎಂಬ ಅವಾಂತರಿಯ ಜತೆಗೂ ಸ್ನೇಹ ಸಾಧಿಸಿ ಅಸ್ತಿತ್ವಕ್ಕೆ ಹೆಣಗಾಡುತ್ತಿದ್ದಾರೆ.

ಯಡ್ಡಿ ನಿರಂತರವಾಗಿ ಆಸ್ಕರ್-ಮುನಿಯಪ್ಪ-ಸುಬ್ರಹ್ಮಣ್ಯ ಸ್ವಾಮಿ-ಮೊಯ್ಲಿಯನ್ನು ಕದ್ದುಮುಚ್ಚಿ ಭೇಟಿಯಾಗುವುದು ರಾಜ್ಯ ರಾಜಕಾರಣದಲ್ಲಿ ಆಗಲಿರುವ ದೊಡ್ಡ ಸ್ಥಿತ್ಯಂತರಕ್ಕೆ ಸೂಚನೆಯಂತಿದೆ. ಹಾಗಾಗಿಯೇ ವಿರೋಧ ಪಕ್ಷದ ನಾಯಕ ಸಿದ್ದು ಒಬ್ಬರ ಬಿಟ್ಟರೆ ಬೇರ್‍ಯಾರೂ ಯಡ್ಡಿ ತಂಟೆಗೆ ಹೋಗುತ್ತಿಲ್ಲ. ಸಿದ್ದುಗೆ ಕಾಂಗ್ರೆಸ್ ಪಕ್ಷ ಭ್ರಷ್ಟ ಯಡ್ಡಿ ಜತೆ ಕೈ ಮಿಲಾಯಿಸುವುದು ಬೇಡವಾಗಿದೆ.

ಹೊನ್ನಾಳಿ : ರೇಣುಕಾಚಾರ್ಯನ ರಾಜಕೀಯ ಪುರಾಣ



ಹೊನ್ನಾಳಿ ವಿಧಾನಸಭಾ ಕ್ಷೇತ್ರದಲ್ಲಿ ಜಾತಿವಾರು ಮತಗಳ ಲೆಕ್ಕ ಹಾಕಿದರೆ ಸದ್ಯ ಹೆಂಡದ ಮಂತ್ರಿ ರೇಣುಕಾಚಾರ್ಯನ ಜಂಗಮ ಜಾತಿಯ ಮತಗಳು ಬೆರಳೆಣಿಕೆಯಷ್ಟಿವೆ. ಇಲ್ಲಿ ಸಾಧುಲಿಂಗಾಯತರು, ನೊಣಬರು, ಪಂಚಮಸಾಲಿಗಳ ಮತಗಳು 40 ಸಾವಿರದಷ್ಟಿದ್ದರೆ, ಕುರುಬರು 30 ಸಾವಿರ, ಮುಸ್ಲಿಮರು 15 ಸಾವಿರ ಇದ್ದಾರೆ. ಇವೆಲ್ಲದರೊಂದಿಗೆ ನಾಯಕರು ದಲಿತರು ಅಂತೆಲ್ಲ ಸೇರಿಸಿದರೆ ಒಟ್ಟು ಶೇಕಡ 70 ರಷ್ಟು ಮತಗಳ ನಡುವೆ ರೇಣುಕಾಚಾರ್ಯನ ಜಾತಿಯ ಮತಗಳು ಲೆಕ್ಕಕ್ಕಿಲ್ಲ. ಆದರೂ ಈತ ಎರಡು ಬಾರಿ ಇಲ್ಲಿಂದ ಗೆದ್ದಿದ್ದಾನೆ.

ಈ ಹಿಂದೆ ಹೊನ್ನಾಳಿಯಿಂದ ಶಾಂತನಗೌಡ (ಸಾಧುಲಿಂಗಾಯತ), ಗಂಗಪ್ಪ (ನೊಣಬ), ಕೃಷ್ಣಮೂರ್ತಿ (ಕುರುಬ) ಎಂಬುವವರು ಕಾಂಗ್ರೆಸ್‌ನಿಂದ ಗೆದ್ದು ಶಾಸಕರಾಗುತ್ತಿದ್ದರು. ಆದರೆ ಅದೆಲ್ಲ 2004ರಲ್ಲಿ ಬದಲಾಯಿತಲ್ಲದೆ ರೇಣುಕಾಚಾರ್ಯ ಗೆದ್ದು ಬರಲಾರಂಭಿಸಿದ. ಆದರೆ ಬರುವ ಚುನಾವಣೆಯಲ್ಲಿ ರೇಣುಕಾಚಾರ್ಯ ಅಷ್ಟು ಸುಲಭವಾಗಿ ಗೆಲ್ಲುತ್ತಾನೆಯೇ ಎಂಬ ಪ್ರಶ್ನೆ ಈಗ ಮುಖ್ಯವಾಗಿದೆ.

ವಲಸೆ ಬಂದವನು

ಮೊದಲು ರೇಣುಕಾಚಾರ್ಯನಿಗೂ ಹೊನ್ನಾಳಿಗೂ ಯಾವ ಸಂಬಂಧವೂ ಇರಲಿಲ್ಲ. ಈತ ಮೂಲತಃ ಚನ್ನಗಿರಿ ತಾಲ್ಲೂಕಿನ ಕುಂದೂರಿನವನು. ಇವನ ಹಿರಿಯ ಸಹೋದರ ಶಿವಶಂಕರಯ್ಯ ಹೊನ್ನಾಳಿಯ ಖಾಸಗಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು. ಆದರೆ ರೇಣು ಮಾತ್ರ ಕುಂದೂರಿನಲ್ಲಿ ನಿರುದ್ಯೋಗಿಯಾಗಿ ಅಂಡಲೆಯುತ್ತಿದ್ದ.

ಕುಂದೂರಿನ ಪಕ್ಕದಲ್ಲೇ ಕಾರಿಗನೂರು ಇದೆ. ಮಾಜಿ ಮುಖ್ಯಮಂತ್ರಿ ಜೆ.ಹೆಚ್.ಪಟೇಲರ ಮನೆತನಕ್ಕೆ ಪುರಾತನಕಾಲದಿಂದಲೂ ಈ ರೇಣುಕನ ಮನೆತನದವರೇ ಐಗಳಾಗಿದ್ದರು. ಆ ಪಾರಂಪರಿಕ ನಂಟಿಗೆ ಕಟ್ಟುಬಿದ್ದ ಪಟೇಲರು ರೇಣುಕನ ಅಣ್ಣ ಶಿವಶಂಕರಯ್ಯನವರನ್ನು ಭಕ್ತಿಯಿಂದಲೇ ಕಾಣುತ್ತಿದ್ದರು. ಶಿವಶಂಕರಯ್ಯ ತನ್ನ ಉಂಡಾಡಿ ಗುಂಡ ಸಹೋದರ ರೇಣುಕಾಚಾರ್ಯನನ್ನು ಕುಂದೂರಿನಿಂದ ಕಾರಿಗನೂರಿಗೆ ಕರೆತಂದು, ಖುದ್ದು ಪಟೇಲರನ್ನು ಕಂಡು ರೇಣುಕನಿಗೆ ಹೊನ್ನಾಳಿಯಲ್ಲಿ ಬೋರ್‌ವೆಲ್ ಏಜೆನ್ಸಿ ಕೊಡಿಸಿದರು. ಆಗ ಸರ್ಕಾರದ ವತಿಯಿಂದ ಕೊರೆಸುತ್ತಿದ್ದ ಕೊಳವೆಬಾವಿಗಳನ್ನೆಲ್ಲ ರೇಣುಕನ ಏಜೆನ್ಸಿಗೇ ಪಟೇಲರು ಕೊಡಿಸಿದರು. ಅವತ್ತಿನಿಂದಲೇ ಈ ರೇಣುಕಾಚಾರ್ಯ ಒಂದಿಷ್ಟು ರೊಕ್ಕ ನೋಡಲಾರಂಭಿಸಿದ್ದು.


ಶಾಂತನ ಗೌಡ

ಪಟೇಲರು ಉಪಮುಖ್ಯಮಂತ್ರಿಯಾದದ್ದೇ ತಡ, ರೇಣುಕಾಚಾರ್ಯ ಪಟೇಲರ ಬುಡಕ್ಕೆ ಅಂಟಿಕೊಂಡು ಬಿಟ್ಟ. ಪಟೇಲರೂ 'ಹೊನ್ನಾಳಿಯಲ್ಲಿ ನನ್ನವನೊಬ್ಬನಿರಲಿ' ಎಂದು ಈತನನ್ನು ಬೆಳೆಸಿದರು. ಶಿವಮೊಗ್ಗೆಯಲ್ಲಿ ಬಾಪೂಜಿ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಮಾಡಿಕೊಟ್ಟರು. ಯಾವಾಗ ರೇಣುಕಾಚಾರ್ಯನಿಗೆ ಕಾಲೇಜಿನ ರೊಕ್ಕ ಕೂಡ ಸಿಗಲಾರಂಭಿಸಿತೋ ಅವರ ಗೆಟಪ್ಪೇ ಬದಲಾಯಿತು. ಅಲ್ಲಿಯ ತನಕ ಕುಂದೂರಿನಲ್ಲಿದ್ದ ತನ್ನ ನಾಲ್ಕು ಜನ ನಿರುದ್ಯೋಗಿ ಸಹೋದರರನ್ನೂ ಹೊನ್ನಾಳಿಗೆ ಕರೆದುಕೊಂಡು ಬಂದ.

ರಾಜಕಾರಣಿಯ ಗೆಟಪ್ಪು

ಯಾವಾಗ ರೇಣುಕಾಚಾರ್ಯ ಆರ್ಥಿಕವಾಗಿ ಬೆಳೆಯತೊಡಗಿದನೋ ಸಹಜವಾಗಿಯೇ ರಾಜಕಾರಣದ ಗೀಳು ಆತನಿಗೆ ಅಂಟಿಕೊಂಡಿತು. ಕೆಲ ದಿನ ಆತ ಕಾಂಗ್ರೆಸ್, ಜೆಡಿಎಸ್ ಎಂದೆಲ್ಲ ಅಲೆದಾಡಿದ. ಆದರೆ ಅಷ್ಟುಹೊತ್ತಿಗೆ ಆ ಪಕ್ಷಗಳಲ್ಲಿ ಹಳಬರು ಕಿರೀಟ ಧರಿಸಿ ಕುಂತು ಬಿಟ್ಟಿದ್ದರು. ಆಗ ಖಾಲಿ ಇದ್ದದ್ದು ಬಿಜೆಪಿ ಒಂದೇ. ಜೊತೆಗೆ ರಾಜ್ಯದಲ್ಲಿ ಬಿಜೆಪಿ ಪರ ಒಂದಿಷ್ಟು ಹವಾ ಬೀಸುತ್ತಿತ್ತು, ಪಕ್ಕದ ಶಿಕಾರಿಪುರ ಕ್ಷೇತ್ರದಲ್ಲಿ ಯಡಿಯೂರಪ್ಪ ಪ್ರಭಾವ ಇದ್ದರೂ ಹೊನ್ನಾಳಿಯಲ್ಲಿ ಬಿಜೆಪಿಗೆ ನರಪಿಳ್ಳೆಯೂ ಗತಿ ಇರಲಿಲ್ಲ.

ಅದೇ ಹೊತ್ತಿಗೆ ಚೆನ್ನಗಿರಿಯಲ್ಲಿ ಪಟೇಲರ ಪ್ರಭಾವ ಕುಗ್ಗಲಾರಂಭಿಸಿತ್ತು. ಆಗ ಬಿಜೆಪಿಗೆ ಎಂಟ್ರಿ ಕೊಟ್ಟ ರೇಣುಕಾಚಾರ್ಯ ಕೇಸರಿ ಬಾವುಟ ಹಿಡಿದು, ತನ್ನ ಹಿಂದೆ ಒಂದಷ್ಟು ಪುಂಡರ ಹಿಂಡು ಕಟ್ಟಿಕೊಂಡು ಹೊನ್ನಾಳಿಯಲ್ಲಿ ಚೆಡ್ಡಿ ರಾಜಕೀಯ ಪ್ರಾರಂಭಿಸಿದ. ಆಗಾಗ ಯಡ್ಡಿ ಒಡ್ಡೋಲಗದಲ್ಲೂ ಕಾಣಿಸಿಕೊಂಡು ಯಡ್ಡಿಯ ಪರವಾಗಿ ಭೋಪರಾಕು ಹಾಕಲಾರಂಭಿಸಿದ. ಇದೆಲ್ಲದರ ಪರಿಣಾಮವಾಗಿ 2004ರ ಚುನಾವಣೆಯಲ್ಲಿ ರೇಣುಕಾಚಾರ್ಯನಿಗೆ ಬಿಜೆಪಿಯು ಬೇಕೋ ಬೇಡವೋ ಎಂಬ ಲೆಕ್ಕಾಚಾರದಲ್ಲೇ ಟಿಕೆಟು ನೀಡಿತು.

ಒಡಕು ಮನೆಯಾದ ಕಾಂಗ್ರೆಸ್


ರೇಣುಕಾಚಾರಿಯ ವಿರುದ್ಧ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಶಾಂತನಗೌಡರು ಒಮ್ಮೆ ಶಾಸಕರಾಗಿದ್ದರು. ಆದರೆ 2004ರ ಚುನಾವಣೆ ಹೊತ್ತಿಗೆ ಹೊನ್ನಾಳಿ ಕಾಂಗ್ರೆಸ್‌ನಲ್ಲಿ ಒಡಕು ಮೂಡಿತು. ಮಾಜಿ ಶಾಸಕರಾದ ಗಂಗಪ್ಪ ಮತ್ತು ಕೃಷ್ಣಮೂರ್ತಿಗಳೂ ಕಾಂಗ್ರೆಸ್ ಟಿಕೆಟಿಗೆ ಪ್ರಯತ್ನಿಸಿ ವಿಫಲರಾದರು. ತಮಗೆ ಟಿಕೆಟು ಸಿಗದ ಕಾರಣಕ್ಕೆ ಇವರಿಬ್ಬರೂ ಅಧಿಕೃತ ಅಭ್ಯರ್ಥಿ ಶಾಂತನಗೌಡರಿಂದ ದೂರ ಸರಿದುಬಿಟ್ಟರು. ಇವರಿಬ್ಬರೂ ಪ್ರಭಾವಿಗಳೆ. ಗಂಗಪ್ಪ ನೊಣಬ ಲಿಂಗಾಯತರ ನಾಯಕರಾದರೆ, ಕೃಷ್ಣಮೂರ್ತಿ ಕುರುಬರಿಗೆ ಲೀಡರಾಗಿದ್ದವರು. ಯಾವಾಗ ಇವರಿಗೆ ಟಿಕೆಟು ಸಿಗಲಿಲ್ಲವೋ ಆವಾಗಲೇ ನೊಣಬರು ಮತ್ತು ಕುರುಬರು ಕಾಂಗ್ರೆಸ್ ಕಡೆಯಿಂದ ಬಿಜೆಪಿ ಕಡೆ ಮುಖ ಹೊರಳಿಸಿದರು.

ಅದೇ ಸಮಯದಲ್ಲಿ ಸಾರೆಕೊಪ್ಪ ಬಂಗಾರಪ್ಪ ಕಾಂಗ್ರೆಸ್‌ನೊಂದಿಗೆ ಜಗಳ ಕಾದು ಪಾರ್ಟಿ ಬಿಟ್ಟು ಬಿಜೆಪಿ ಅಡ್ಡೆಯಲ್ಲಿ ಅಡ್ಡ ಮಲಗಿದ್ದರು. ಸಾಸ್ವೆಹಳ್ಳಿ, ಆನವೇರಿಯಂತಾ ದೊಡ್ಡ ಊರುಗಳು ಬಂಗಾರಪ್ಪನ ಪರವಾಗಿದ್ದವು. ಅಲ್ಲೆಲ್ಲ ಲಿಂಗಾಯತರು, ಕುರುಬರೇ ಬಹುಸಂಖ್ಯಾತರಾಗಿದ್ದರೂ ಅವರೆಲ್ಲ ಬಂಗಾರಪ್ಪನ ಬೆನ್ನ ಹಿಂದಿದ್ದರು. ಮತ್ತೊಂದು ಸಂಗತಿ ಎಂದರೆ ಬಂಗಾರಪ್ಪನ ಅಧಿಕಾರಾವಧಿಯಲ್ಲೇ ಅಪ್ಪರ್ ತುಂಗಾ ಯೋಜನೆ ಕೂಡ ಜಾರಿಯಾಗಿತ್ತು. ಹಾಗಾಗಿಯೇ ಹೊನ್ನಾಳಿಯಲ್ಲಿ ಬಂಗಾರಪ್ಪನಿಂದಾಗಿ ಬಿಜೆಪಿ ಪರ ಗಾಳಿ ಬೀಸುತ್ತಿತ್ತು.

ಇದೆಲ್ಲದರ ಮಧ್ಯೆ ರಾಜ್ಯದಲ್ಲಿ ಬಿಜೆಪಿ ಗೆದ್ದರೆ ಶಿಕಾರಿಪುರದಿಂದ ಸ್ಪರ್ಧಿಸುತ್ತಿದ್ದ ಯಡ್ಡಿಯೇ ಮುಂದಿನ ಮುಖ್ಯಮಂತ್ರಿ ಎಂಬ ಹವಾ ರಾಜ್ಯಾದ್ಯಂತ ಬೀಸಲಾರಂಭಿಸಿತು. ಅದನ್ನು ಕೇಳಿ ಹೊನ್ನಾಳಿಯ ಲಿಂಗಾಯತರೆಲ್ಲ ತಮ್ಮ ಒಳಪಂಗಡಗಳ ನಡುವಿನ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಬಿಜೆಪಿ ಪರ ನಿಂತರು.

ಹೀಗೆ 2004ರಲ್ಲಿದ್ದ ಕಾಂಗ್ರೆಸ್ ವಿರೋಧಿ ಅಲೆ, 'ಬಂ' ಬಲ ಮತ್ತು ಯಡ್ಡಿ ಪರ ಲಿಂಗಾಯತರ ನಿಲುವು, ಇವೆಲ್ಲ ಸೇರಿ ರೇಣುಕಾಚಾರ್ಯನ ಅದೃಷ್ಟ ಖುಲಾಯಿಸಿತು. ಹೊನ್ನಾಳಿಯಿಂದ ಶಾಂತನಗೌಡರು ಅಜಮಾಸು 6,100 ಮತಗಳಿಂದ ಸೋತರೆ ರೇಣುಕಾ ಗೆದ್ದುಬಿಟ್ಟ.

2004ರಲ್ಲಿ ಪ್ರಥಮ ಬಾರಿಗೆ ರೇಣುಕಾಚಾರ್ಯ ಶಾಸಕನಾದರೂ ತನ್ನ ಹುಟ್ಟುಗುಣಗಳನ್ನು ಬಿಡಲಿಲ್ಲ. ಒಂದು ಕಡೆ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಿಂದ ಬರುತ್ತಿದ್ದ ಕ್ಯಾಪಿಟೇಶನ್ ರೊಕ್ಕ, ಮತ್ತೊಂದು ಕಡೆ ಶಾಸಕನಾದ ಧಿಮಾಕು ಇವೆರಡೂ ಆತನ ನೆತ್ತಿಗೇರಿಬಿಟ್ಟಿತು. ಹೆಣ್ಣು-ಹೆಂಡ-ಮೋಜು-ಮಸ್ತಿಗೆ ತನ್ನನ್ನು ಅರ್ಪಿಸಿಕೊಂಡ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿಯೊಂದಿಗೆ ಡಿಂಗ್-ಡಾಂಗ್ ಆದಿ ನಗೆಪಾಟಲಿ ಗೀಡಾದ. ಕುಡಿದ ಅಮಲಿನಲ್ಲಿ ಅವನ 'ಡಿಸ್ಕೋ' ಅವತಾರವನ್ನು ನೋಡಿದ ಹೊನ್ನಾಳಿಯ ಮತದಾರರು ಇಂತಹವನ್ನು ತಮ್ಮ ಪ್ರತಿನಿಧಿ ಆಗಿಸಿದ್ದಕ್ಕೆ ಪಶ್ಚಾತ್ತಾಪ ಪಟ್ಟರು.



ಕಾಂಗ್ರೆಸ್-ಜೆಡಿಎಸ್ ಸರ್ಕಾರ ಪತನಗೊಂಡು ರಾಜ್ಯದಲ್ಲಿ 'ಕೋ-ಜಾ' ಸರ್ಕಾರ ಅಧಿಕಾರಕ್ಕೆ ಬಂತು. ಯಡಿಯೂರಪ್ಪ ಉಪಮುಖ್ಯಮಂತ್ರಿಯಾಗಿದ್ದೇ ತಡ ರೇಣುಕಾಚಾರ್ಯ ಯಡ್ಡಿಯ ಕುಂಡಿಬಿಟ್ಟು ಅಲ್ಲಾಡಲಿಲ್ಲ. ಆದರೆ ಪಾಪ, ರೇಣುಕನ ಗೂಟದ ಕಾರಿನ ಕನಸು ಕನಸಾಗಿಯೇ ಉಳಿಯಿತು.

2008ರಲ್ಲಿ ಅಕಾಲಿಕ ಚುನಾವಣೆ ಎದುರಾಗುವ ಹೊತ್ತಿಗೆ ರೇಣುಕಾಚಾರ್ಯ ತನ್ನ ಕೈ-ಬಾಯಿ-ಕಚ್ಚೆ ಮೂರನ್ನೂ ಹೇಸಿಗೆ ಮಾಡಿಕೊಂಡಿದ್ದ. ಮತದಾರರು ಮತ್ತು ಮಾಧ್ಯಮದವರು ಆತನ ಬಗ್ಗೆ ಗೇಲಿ ಮಾಡಿದರೂ, ಅಸಹ್ಯಪಟ್ಟುಕೊಂಡರೂ ರೇಣುಕನಿಗೆ ಮಾತ್ರ ಅದ್ಯಾವುದೂ ಅವಮಾನವಾಗಿ ಕಾಣಿಸಲಿಲ್ಲ.

ಹೊನ್ನಾಳಿಯ ದುರಂತವೋ, ರೇಣುಕಾಚಾರ್ಯನ ಅದೃಷ್ಟವೋ, 2008ರ ಚುನಾವಣೆ ಹೊತ್ತಿಗೆ ಕಾಂಗ್ರೆಸ್ ಪಕ್ಷದಲ್ಲಿ ಉಳಿದಿದ್ದ ಒಗ್ಗಟ್ಟು ಮೂರಾಬಟ್ಟೆ ಆಗಿತ್ತು. ಮಾಜಿ ಶಾಸಕರಾದ ಗಂಗಪ್ಪ ಮತ್ತು ಕೃಷ್ಣಮೂರ್ತಿಗಳು ಕಾಂಗ್ರೆಸ್ ತೊರೆದು ಬಿಜೆಪಿ ಪಡಸಾಲೆಯಲ್ಲಿ ಚಕ್ಕಳಮಕ್ಕಳ ಹಾಕಿ ಕುಂತುಬಿಟ್ಟಿದ್ದರು. ಇವರಿಬ್ಬರಿಂದಾಗಿ ಕುರುಬರು ಮತ್ತು ನೊಣಬ ಲಿಂಗಾಯತರು ರೇಣುಕಾನನ್ನು ಅನಿವಾರ್ಯವಾಗಿ ಬೆಂಬಲಿಸುವಂತಾಯಿತು.

2008 ರ ಚುನಾವಣೆಯಲ್ಲೂ ಚೆಡ್ಡಿ ರೇಣುಕನ ವಿರುದ್ಧ ಕಾಂಗ್ರೆಸ್‌ನಿಂದ ಶಾಂತನಗೌಡರು ಸ್ಪರ್ಧಿಸಿದರು. ಆದರೆ ದೇವೇಗೌಡ ಮತ್ತು ಕುಮಾರಸ್ವಾಮಿ ಬಿಜೆಪಿಯ ಯಡ್ಡಿಗೆ ಅಧಿಕಾರವನ್ನು ನಿರಾಕರಿಸಿದ್ದು ಲಿಂಗಾಯತರಿಗೆ ಮಹಾದ್ರೋಹದ ತರಹ ಕಾಣಿಸಿತು. ಮತ್ತೆ ಹೊನ್ನಾಳಿಯ ಲಿಂಗಾಯತರೆಲ್ಲ ತಮ್ಮ ಒಳಪಂಗಡಗಳ ಬಿರುಕುಗ[...] ಮರೆತು, ಜೊತೆಗೆ ರೇಣುಕಾಚಾರ್ಯನ ಕಚ್ಚೆ ಹರುಕತನ[...] ಬದಿಗೆ ಸರಿಸಿ, ರೇಣುಕನಿಗೇ ತಮ್ಮ ಮತಗ[...] ಗುದ್ದುಮಿದರು. ಶಾಂತನಗೌಡರು ಮತ್ತೊಮ್ಮೆ ರೇಣು[...] ಎದುರು 6,860 ಮತಗಳ ಅಂತರದಿಂದ ಸೋಲು ಕಂ[...]

ಎರಡನೆ ಬಾರಿ ಗೆಲ್ಲುತ್ತಿದ್ದಂತೆ ರೇಣುಕಾಚಾರ್ಯ[...] ನಾಲ್ವರು ಉಂಡಾಡಿಗುಂಡ ಸಹೋದರರನ್ನು ಹೊನ್ನಾ[...] ಕರೆದುಕೊಂಡು ಬಂದು ಅವರಿಗೆ ಕ್ಷೇತ್ರದ ಜವಾಬ್ದಾರಿಗ[...] ಹೊರಿಸಿದ. ಹೊನ್ನಾಳಿಯ ದುರಂತ ಎಂತಹದ್ದೆಂದರೆ[...] ಸಹೋದರರೆಲ್ಲಾ ಈಗ ಸಾಕ್ಷಾತ್ ಜನಪೀಡಕರಾಗಿ ನಿಂತಿ[...]

ಸಹೋದರರ ಅಟ್ಟಹಾಸ

ಎರಡು ಬಾರಿ ಗೆದ್ದು ಶಾಸಕನಾದ, ತನ್ನ 'ರಾಜಕೀ[...] ಗುರು' ಮತ್ತು 'ಮಾನಸಿಕ ತಂದೆ' ಯಡ್ಡಿಯ ವಿರು[...] ತಿರುಗಿಬಿದ್ದು ಮಂತ್ರಿ ಪದವಿಯನ್ನೂ ಗಿಟ್ಟಿಸಿಕೊ[...] ರೇಣುಕಾಚಾರ್ಯ ಹೊನ್ನಾಳಿ ಕ್ಷೇತ್ರದ ಅಭಿವೃದ್ಧಿಗೆ ಕಡ[...] ಕಟ್ಟೆ ಹಾಕಿರುವುದು ಅಷ್ಟರಲ್ಲೇ ಇದೆ. ಇದೂ ಸಾಲದೆಂಬ[...] ಆತನ ನಾಲ್ವರು ಸಹೋದರರೇ ಹೊನ್ನಾಳಿ ವಿಧಾನಸ[...] ಕ್ಷೇತ್ರದ ಅಧಿಪತಿಗಳಾಗಿ ಮೆರೆಯುತ್ತಿದ್ದಾರೆ. ಈಗ [...] ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ "ಹೊನ್ನಾ[...] ಐವರು ಜನ ಶಾಸಕರು ಇದ್ದಾರೆ" ಎಂಬ ಮಾ[...] ಚಾಲ್ತಿಯಲ್ಲಿದೆ.

ರೇಣುಕನ ತಮ್ಮಂದಿರಲ್ಲಿ ರ[...] ಎಂಬಾತನ ಮಾತೇ ಹೊನ್ನಾಳಿಯ[...] ವೇದವಾಕ್ಯವಾಗಿದೆ. ಯಾವ ಅಧಿಕ[...] ಯೂ ರಾಜನ ಅನುಮತಿ ಇ[...] ಕದಲುವಂತಿಲ್ಲ, ಮಾತ್ರವಲ್ಲ, [...] ರಾಜನ ಹಿಂದಿರುವ ಪಡೆಯ[...] ಸಮಾಜಕ್ಕೆ ಕಂಟಕವಾಗಿದೆ. ಶಾಸ[...] ಅನುದಾನದ ಕಾಮಗಾರಿ ನಡೆ[...] ವುದೆಲ್ಲ ಈ ರಾಜನ ಆಣತಿಯಂತೆಯ[...] ರಾಜ ಹೇಳಿದವರಿಗೆ ಮಾತ್ರ ಗು[...] ಕಾಮಗಾರಿ ಸಿಗುತ್ತದೆ.

ರೇಣುಕ ಅಬಕಾರಿ ಮಂತ್ರಿಯ[...] ಮೇಲಂತೂ ಈ ರಾಜ ದಾವಣಗೆರೆ ಮತ್ತು ಶಿವಮೊಗ[...] ಹೆಂಡದಂಗಡಿಗಳಿಂದ ಮಾಮೂಲು ಎತ್ತುವ ಜವಾಬ[...] ವಹಿಸಿಕೊಂಡಿದ್ದಾನೆ. ಈತನಿಗೆ ಬೇಡವಾದವರು, ಬಿಜೆಪಿ[...] ಸೇರದವರ ವೈನ್ ಶಾಪ್‌ಗಳ ಮೇಲೆ ಇಲಾಖೆ[...] ಅಧಿಕಾರಿಗಳನ್ನು ಛೂಬಿಡುವ ರಾಜನ ಚಟ ಮಿತಿಮೀರಿ[...] ಹೊನ್ನಾಳಿಯಲ್ಲಿ ಇವನ ಬೆಂಬಲಿಗರ ಮಕ್ಕಳೇ ಚೈನ[...] ಮಾಂಗಲ್ಯ ಕಳ್ಳರಾಗಿದ್ದಾರೆ. ಆದರೂ ಪೊಲೀಸರು ಇಂತ[...] ಸರಗಳ್ಳರನ್ನು ಬಂಧಿಸುವ ಧೈರ್ಯ ಮಾಡುವುದಿಲ್ಲ.

ತನ್ನ ತಮ್ಮಂದಿರ ಉಪಟಳ ಕಂಡರೂ ಕಾಣದಂತಿದ್ದಾ[...] ರೇಣುಕಾಚಾರ್ಯ. ತಮ್ಮಂದಿರನ್ನು ತಿದ್ದುವುದಿರಲಿ ಅವರನ್ನ[...] ಎದುರು ಹಾಕಿಕೊಳ್ಳಲೂ ರೇಣುಕಾಚಾರ್ಯ[...] ಹಿಂಜರಿಯುತ್ತಿದ್ದಾನೆ. ಇದಕ್ಕೆ ಕಾರಣ ತಾನು ಮಂ[...] ಆಗಿದ್ದರೂ ತಾನು ಅಕ್ರಮವಾಗಿ ಮಾಡಿರುವ ದುಡ್ಡಿಗಿಂ[...] ಹೆಚ್ಚು ಹಣವನ್ನು ಸಹೋದರ ರಾಜನೇ ಗಳಿಸಿದ್ದಾ[...] ಎಂಬುದು. ಜೊತೆಗೆ ರಾಜನನ್ನು ಹದ್ದುಬಸ್ತಿನಲ್ಲಿಡಲ[...] ರೇಣುಕಾ ನಿರ್ಧರಿಸಿದರೆ ರಾಜ ಆತನ ವಿರುದ್ಧ[...] ತಿರುಗಿಬೀಳುವ ಅಪಾಯವೂ ಇದೆ. ರಾ[...] ರಾಜಾರೋಷವಾಗಿಯೇ ರೇಣುಕನೆದುರು ಬಂದಾಯ ಎದ[...] ತನ್ನ ಸಹೋದರನಿಗೇ ಸವಾಲು ಹಾಕಿ ಹೆಯ್ಯಾರ್‌ಯ[...] ನಾಯಕನಾಗಿ ಬಿಡುವ ಭಯ ರೇಣುಕನನ್ನು ಇಕ್ಕಟ್ಟಿನ[...] ಸಿಲುಕಿಸಿದೆ.

ರೇಣುಕನ ಬಾಗಿನ ಪ್ರಚಾರ

ರೇಣುಕಾಚಾರ್ಯ ಹೊನ್ನಾಳಿಯಿಂದ ಮತ್ತೆ ಶಾಸಕನಾಗುವ ಮುಂದಾಲೋಚನೆಯಿಂದಲೇ ಮೊನ್ನೆ ಬಿಜೆಪಿಯ[...] ಮಹಿಳಾ ಸಮಾವೇಶವನ್ನು ಹೊನ್ನಾಳಿಯಲ್ಲಿ ಆಯೋಜಿಸಿದ್ದ. ಅದಕ್ಕಿಂತ ಮುಖ್ಯವಾಗಿ ಈ ಸಮಾವೇಶವನ್ನೇ ತ[...] ಚುನಾವಣಾ ಪ್ರಚಾರದ ತಂತ್ರವಾಗಿಯೂ ಉಪಯೋಗಿಸಿಕೊಂಡ.

ಈ ಮಹಿಳಾ ಸಮಾವೇಶದಲ್ಲಿ ಗೌರಿ ಹಬ್ಬದ ಪ್ರಯುಕ್ತ ಬಾಗಿನ ಅರ್ಪಿಸುವ ನೆಪದಲ್ಲಿ 25 ಸಾವಿ[...] ಮಹಿಳೆಯರಿಗೆ ಸೀರೆಗಳನ್ನು ಹಂಚಲಾಯಿತು. ಇದು ಚುನಾವಣಾ ತಂತ್ರವಲ್ಲದೆ ಮತ್ತೇನು? ಅಷ್ಟೇ ಅಲ್ಲ, ಬರು[...] ಚುನಾವಣೆ ಸಂದರ್ಭದಲ್ಲಿ ಜನರಿಗೆ ಹಂಚಲು ರೇಣುಕಾಚಾರ್ಯ ಈಗಾಗಲೇ ಅರ್ಧ ಗ್ರಾಮ್ ಚಿನ್ನದಿಂ[...] ತಯಾರಿಸಲಾಗಿರುವ ಎಂಬತ್ತೈದು ಸಾವಿರ ಉಂಗುರಗಳನ್ನು ರೆಡಿ ಮಾಡಿಟ್ಟುಕೊಂಡಿದ್ದಾನಂತೆ.

ಈ ರೇಣುಕಾಚಾರ್ಯ ಮತ್ತು ಯಡ್ಡಿಯ ಗ್ಯಾಂಗಿನಲ್ಲಿರುವ ಇತರೆ ಶಾಸಕರು ಮತ್ತು ಮಂತ್ರಿಗಳು ಇನ್ನೆಷ್ಟು ರೊಕ್ಕವನ್ನು ಅಕ್ರಮವಾಗಿ ಸಂಪಾದಿಸಿರಬಹುದು? ಅದೆಷ್ಟು ಪ್ರಮಾಣದಲ್ಲಿ ಸಾರ್ವಜನಿಕ ಸಂಪತ್ತನ್ನು ಲೂಟಿ ಮಾಡಿರಬಹುದು?

ಹೊನ್ನಾಳಿಯ ಜನ ಇದನ್ನು ಕುರಿತು ಯೋಚಿಸುವಂತಾಗಲಿ.

ರೇಣುಕನ ಅದೃಷ್ಟವೂ ಕಾಂಗ್ರೆಸ್ ದುರಂತವೂ

ರೇಣುಕಾಚಾರ್ಯನ ಅದೃಷ್ಟಕ್ಕೆ ದಾವಣಗೆರೆ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಕೋಮಾಸ್ಥಿತಿಯಲ್ಲಿದೆ. ಜಿಲ್ಲಾ ಕಾಂಗ್ರೆಸ್ ನಾಯಕ ಶಾಮನೂರು ಶಿವಶಂಕರಪ್ಪನವರು ತಾವೇ ಕೆಪಿಸಿಸಿ ಅಧ್ಯಕ್ಷರಾಗಬೇಕೆಂದು ಪಕ್ಷದ ಹೈಕಮಾಂಡ್ ಮೇಲೆ ಒತ್ತಡ ತರಲು ಯತ್ನಿಸುತ್ತಿದ್ದಾರೆ. ಅದರಲ್ಲಿ ಅವರೆಷ್ಟು ತಲ್ಲೀನರಾಗಿದ್ದಾರೆಂದರೆ ಅವರು ಜಿಲ್ಲೆಯಲ್ಲಿ ಪಕ್ಷದ ಸ್ಥಿತಿಗತಿ ಬಗ್ಗೆ ಸಂಪೂರ್ಣವಾಗಿ ತಾತ್ಸಾರ ತೋರುತ್ತಿದ್ದಾರೆ. ಪರಿಣಾಮವಾಗಿ ಈಗ ಜಿಲ್ಲೆಯ ಎಂಟು ತಾಲ್ಲೂಕುಗಳಲ್ಲೂ ಕಾಂಗ್ರೆಸ್ ನೆಲ ಕಚ್ಚಿಬಿಟ್ಟಿದೆ.

ಇಂತಹ ಪರಿಸ್ಥಿತಿ ಮುಂದುವರೆದರೆ ಬರುವ ಚುನಾವಣೆಯಲ್ಲೂ ಜಿಲ್ಲೆಯಲ್ಲಿ ಮತ್ತೆ ಕಾಂಗ್ರೆಸು ಧೂಳೀಪಟವಾಗುವುದು ಗ್ಯಾರಂಟಿಯಾಗಿದೆ.

ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲಿ ನಿದ್ರಾವಸ್ಥೆಯಲ್ಲಿರುವಾಗಲೇ ಬಿಜೆಪಿ ನಡುರಾತ್ರಿಯಲ್ಲೂ ಚುನಾವಣಾ ಪ್ರಚಾರದ ದಾಂಬಡಿಕೆ ಶುರುಮಾಡಿದೆ.

▶10
ಉಕ್ಕಡ ಮಾರಮ್ಮನ ಹಣ ಮುಕ್ಕುತ್ತಿರುವ...

ಬಡಬಗ್ಗರನ್ನು ಕಡೆಗಣಿಸುತ್ತಿದ್ದೀರಿ ಅಂತಾ ಆಕ್ಷೇಪಿಸಿದರು. ಆದರೆ ಅವರ ಮಾತಿಗೆ ಕಿವಿಗೊಡುವ ವ್ಯವಧಾನ ಯಾರಿಗೂ ಇರಲಿಲ್ಲ ಬಿಡಿ. ಹೀಗೆ ಸ್ಟಾರ್‌ಗಳು ಭೇಟಿಕೊಟ್ಟರೆ ಒಳ್ಳೆಯ ಪ್ರಚಾರ ಸಿಕ್ಕು ಆದಾಯ ಮತ್ತಷ್ಟು ಹೆಚ್ಚುವುದರಿಂದ ಅಂಥಾ ಅವಕಾಶವನ್ನು ಕಳೆದುಕೊಳ್ಳಲು ಟ್ರಸ್ಟಿಗಳೇನು ದಡ್ಡರೇ?

ಇನ್ನು ಇವರ ಸರ್ವವ್ಯಾಪಿ ವಸೂಲಿ ದಂಧೆಯ ಪರಿಯನ್ನು ನೋಡಿ. ಕುರಿ ಮೇಕೆ ಬಲಿಕೊಟ್ಟವರಿಂದ ತಲೆ ಮತ್ತು ಕಾಲುಗಳನ್ನು ಈ ಚಂದ್ರುನ ಬಂಟರು ದೇವರ ಹೆಸರಿನಲ್ಲಿ ಕಸಿದುಕೊಳ್ಳುತ್ತಾರೆ. ಹೀಗೆ ಕಸಿದುಕೊಂಡ ತಲೆ ಕಾಲುಗಳಿಗೆ ಒಂದು ಜೋಡಿಗೆ 300 ರಿಂದ 400 ರೂಪಾಯಿಗಳಂತೆ ಮಾರಿಕೊಳ್ಳುತ್ತಾರೆ. ಇಲ್ಲಿ ತೆಂಗಿನಕಾಯಿಗಳನ್ನು ಒಡೆದ ನಂತರ ಅವುಗಳನ್ನು ಹಾಗೇ ಬಿಟ್ಟುಬಿಡುವುದು ಇಲ್ಲಿನ ಪದ್ಧತಿ. ಅಮಾವಾಸ್ಯೆಗಳ ದಿನಗಳಲ್ಲಂತೂ ತೆಂಗಿನಕಾಯಿ ರಾಶಿಯೇ ಬೀಳುತ್ತದೆ. ಈ ತೆಂಗಿನಕಾಯಿಗಳನ್ನು ನಗರದ ಹೋಟೆಲ್‌ಗಳಿಗೆ ಹಾಗೂ ಫ್ಯಾಕ್ಟರಿಗಳಿಗೆ ಮಾರಿ ದಂಡಿಯಾಗಿ ಹಣ ಸಂಪಾದಿಸುತ್ತಿದ್ದಾರೆ. ಇನ್ನು ಹುಂಡಿ ಹಣದ ಲೆಕ್ಕಾಚಾರದ್ದು ಮತ್ತೊಂದು ಕತೆ. ಹುಂಡಿ ಹಣದ ಲೆಕ್ಕ ಪಾರದರ್ಶಕವಾಗಿರಬೇಕು; ಅದರಲ್ಲಿ ಬೀಳುವ ಹಣ ಹಾಗೂ ಒಡವೆಗಳಿಗೆ ಸರಿಯಾದ ಲೆಕ್ಕಪತ್ರ ಇಡಬೇಕು. ಆದರೆ ಕಿಲಾಡಿ ಚಂದ್ರು ಹುಂಡಿ ಲೆಕ್ಕಾಚಾರವನ್ನು ಆದಷ್ಟೂ ಗುಪ್ತವಾಗಿ ನಡೆಸಿಕೊಂಡು ಬಂದಿದ್ದಾನೆ. ಇಷ್ಟು ವರ್ಷಗಳಲ್ಲಿ ಅದೆಷ್ಟು ಹಣ, ಒಡವೆಗಳನ್ನು ಗುಳುಂ ಮಾಡಿದ್ದಾನೆ ಎಂಬುದು ಸ್ವತಃ ಚಂದ್ರುಗೂ ಲೆಕ್ಕ ಸಿಗಲಿಕ್ಕಿಲ್ಲ.

ಈ ಟ್ರಸ್ಟ್‌ನ ಲೆಕ್ಕಪತ್ರ ಬರೆಯಲಿಕ್ಕೆಂದು ನೇಮಿಸಿಕೊಂಡಿರುವ



ತಡೆ ಒಡೆದ ತೆಂಗಿನಕಾಯಿ ರಾಶಿ

ಕೇಶವ ಎಂಬಾತನೇ ಈಗ ಶ್ರೀರಂಗಪಟ್ಟಣದಲ್ಲಿ ಭಾರೀ ಕುಳವಾಗಿಬಿಟ್ಟಿದ್ದಾನೆ. ಆತ ಲಪಟಾಯಿಸಿದ ದೇವರ ಹಣವನ್ನು ಬಡ್ಡಿಗೆ ಬಿಟ್ಟು ಬಡಬಗ್ಗರನ್ನು ಮತ್ತಷ್ಟು ಸುಲಿಗೆ ಮಾಡುತ್ತಿರುವುದಾಗಿ ನೊಂದ ಭಕ್ತಾದಿಗಳು ತಮ್ಮ ಅಳಲು ತೋಡಿಕೊಳ್ಳುತ್ತಿದ್ದಾರೆ. ಅಷ್ಟು ಮಾತ್ರವಲ್ಲ, ಅಮಾವಾಸ್ಯೆಯ ದಿನ ಬಿಕ್ಷುಕರೂ ಸಹ ಒಳ್ಳೇ ಕಲೆಕ್ಷನ್ ಮಾಡಿಕೊಳ್ಳುತ್ತಾರಂತೆ. ಅಮಾವಾಸ್ಯೆಯ ದಿನ ಏನಿಲ್ಲವೆಂದರೂ 3ರಿಂದ 4 ಸಾವಿರ ರೂಗಳನ್ನು ಕಲೆಕ್ಷನ್ ಮಾಡಿಕೊಳ್ಳುತ್ತಾರೆ ಎಂದರೆ ಉಕ್ಕಡ ಮಾರಮ್ಮನ ಮಹಿಮೆ ಎಂಥದ್ದಿರಬಹುದು ನೀವೇ ಊಹಿಸಿ.

ಈ ಚಂದ್ರು ಎಂಬ ಶನಿ ಕೇವಲ ಭಕ್ತರನ್ನು ಮಾತ್ರ ಕಾಡುತ್ತಿಲ್ಲ, ಹಣದ ಮದ ಹೆಚ್ಚುತ್ತಿದ್ದಂತೆ ಗ್ರಾಮದ ಜನರನ್ನೂ ಕಾಡಲು ಶುರುವಿಟ್ಟುಕೊಂಡಿದ್ದಾನೆ. ಈ ಗ್ರಾಮದಲ್ಲಿ ಈತ ಕಟ್ಟಿಸಿರುವ ಎರಡು ಅಂತಸ್ತಿನ ಮನೆಯ ಮುಂದುಗಡೆ ಅನಾದಿಕಾಲದಿಂದಲೂ ಗ್ರಾಮಸ್ಥರು ಓಡಾಡುವ ದಾರಿಯೊಂದಿತ್ತು. ಆ ದಾರಿಯನ್ನು ಒತ್ತುವರಿ ಮಾಡಿಕೊಂಡ ಚಂದ್ರು ತನ್ನ ಮನೆಯ ಮುಂದೆ ಕಾಂಪೌಂಡ್ ಕಟ್ಟಿಸಿಯೇ ಬಿಟ್ಟ. ಅಷ್ಟು ಮಾತ್ರವಲ್ಲದೆ ಅದೇ ನಾಯಕ ಜನಾಂಗದವರು ತಲತಲಾಂತರಗಳಿಂದಲೂ ವಾಸಿಸುತ್ತಿದ್ದ ಮನೆಗಳ ಜಾಗದ ದಾಖಲೆ ತನ್ನ ಹೆಸರಿನಲ್ಲಿದೆಯೆಂದೂ ಆದ್ದರಿಂದ ಆ ಜಾಗ ತನಗೇ ಸೇರಬೇಕೆಂದು ಕ್ಯಾತೆ ತೆಗೆದ.

ಈತನ ದುಷ್ಕೃತ್ಯವನ್ನು ಗ್ರಾಮಸ್ಥರು ಅನಿವಾರ್ಯವಾಗಿ ವಿರೋಧಿಸಿದರು. ತನ್ನ ವಿರುದ್ಧ ತಿರುಗಿಬಿದ್ದವರನ್ನು ಮಣಿಸಲು ಈತ ಹೀನತಂತ್ರವೊಂದನ್ನು ಬಳಸುತ್ತಾನೆ. ಅದರಂತೆ ತನ್ನ ಪಟಾಲಂನಲ್ಲಿರುವ ಒಬ್ಬ ಮಹಿಳೆಯಿಂದ ತನ್ನ ವಿರೋಧಿಗಳ ಮೇಲೆ ಸುಳ್ಳು ಕೇಸು ಕೊಡಿಸಿ ಸರಗಳ್ಳತನದ ಆರೋಪ ಹೊರಿಸಿದ. ಹೇಗೂ ಪೊಲೀಸರಿಗೂ ಚಂದ್ರುವಿಗೂ ಬಹಳ ಆತ್ಮೀಯ ಸಂಬಂಧವಿರುವುದರಿಂದ ಜನರಿಗೆ ಕಿರುಕುಳ ಶುರುವಾಯಿತು. ಈ ಉಪಟಳ ತಾಳಲಾರದೆ ಜನರು ಪ್ರಭಾವಿ ರಾಜಕಾರಣಿ ರಮೇಶ್ ಬಂಡಿಸಿದ್ದೇಗೌಡರ ನಾಯಕತ್ವದಲ್ಲಿ ಪಟ್ಟಣ ಪೊಲೀಸ್ ಠಾಣೆಯ ಮುಂದೆ ಧರಣಿ ನಡೆಸಿ ಪ್ರತಿಭಟಿಸಬೇಕಾಯಿತು. ಪೊಲೀಸ್ ಕಿರುಕುಳವೇನೋ ನಿಂತಿತು. ಆದರೆ ರಸ್ತೆಯಿಲ್ಲದಂತಾಗಿ ಜನ ಇಂದಿಗೂ ಸಂದಿಗೊಂದಿಗಳಲ್ಲಿ ಓಡಾಡುತ್ತಿದ್ದಾರೆ. ನೋಡಿ, ಹೇಗಿದೆ ಈ ಧರ್ಮದರ್ಶಿಯ ಧರ್ಮಕಾರ್ಯ?

ಇನ್ನು ದೇವಸ್ಥಾನಕ್ಕೆಂದು ಜಮೀನುಗಳನ್ನು ಖರೀದಿಸಿದ ಈ ಭೂಪ ಅದನ್ನು ಸರಿಯಾದ ಕ್ರಮದಲ್ಲಿ ಟ್ರಸ್ಟ್‌ನ ಹೆಸರಿಗಾಗಲಿ ಅಥವಾ ಮಾರಮ್ಮನ ಹೆಸರಿಗಾಗಲಿ ಮಾಡಬಹುದಿತ್ತು, ಆದರೆ ಒಂದಲ್ಲ ಒಂದು ರೀತಿಯಲ್ಲಿ ತನ್ನ ಹಿಡಿತವನ್ನು ಸಾಧಿಸಬೇಕೆಂಬ ದುರುದ್ದೇಶದಿಂದ ದೇವಸ್ಥಾನದ ಅಜುಬಾಜಿನ ಈ ಭೂಮಿಗಳನ್ನು ತನ್ನ ಸ್ವಂತ ಹೆಸರಿಗೆ ರಿಜಿಸ್ಟರ್ ಮಾಡಿಸಿಕೊಂಡಿದ್ದಾನೆ. ಈ ಬಗ್ಗೆ ಮುಜರಾಯಿ ಇಲಾಖೆಯ ಉಪ ಆಯುಕ್ತರ ವರದಿಯಲ್ಲಿರುವ ಉಲ್ಲೇಖವನ್ನೇ ನೋಡಿ. "ದೇವರ ಹೆಸರಿನಲ್ಲಿರುವ 8.25 ಗುಂಟೆ ಜಮೀನಿನ ಜೊತೆಗೆ ಆ ನಂತರ ಸರ್ವೆ ನಂ. 95 ರಲ್ಲಿ 32 ಗುಂಟೆ, 9/1 ರಲ್ಲಿ 24 ಗುಂಟೆ, 9/2 ರಲ್ಲಿ 20 ಗುಂಟೆ, 77/1 ರಲ್ಲಿ 37 ಗುಂಟೆ ಜಮೀನುಗಳನ್ನು ಕ್ರಯಕ್ಕೆ ಪಡೆದಿದ್ದು ಹೀಗೆ ಕ್ರಯಕ್ಕೆ ಪಡೆದಿರುವುದು ಕ್ರಮಬದ್ಧವಾಗಿರುವುದಿಲ್ಲ."

ಹೋಗಲಿ, ಸಾವಿರಾರು ಸಂಖ್ಯೆಯಲ್ಲಿ ಮಾರಮ್ಮನ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಸರಿಯಾದ ವ್ಯವಸ್ಥೆಯಾದರೂ ಮಾಡಿದ್ದಾರಾ ಅಂತ ನೋಡಿದರೆ ಇಡೀ ಪ್ರದೇಶ ಕೊಳಕಿನಿಂದ ನಾರುತ್ತಿರುವುದು ಕಣ್ಣಿಗೆ ರಾಚುತ್ತದೆ. ಸರಿಯಾದ ಕುಡಿಯುವ ನೀರಿನ ವ್ಯವಸ್ಥೆಯಾಗಲಿ, ಶೌಚಾಲಯದ ವ್ಯವಸ್ಥೆಯಾಗಲಿ ಇಲ್ಲದೇ ಭಕ್ತಾದಿಗಳು ಪರದಾಡುತ್ತಿದ್ದಾರೆ. ಇಲ್ಲಿ ನಿರ್ಮಾಣವಾಗಿರುವ ಬಹುತೇಕ ಕಟ್ಟಡಗಳನ್ನು ದಾನಿಗಳೇ ಕಟ್ಟಿಸಿಕೊಟ್ಟಿದ್ದು.



ಮಾರಮ್ಮನ ಗುಡಿಯಲ್ಲಿ ದರ್ಶನ ಕುಟುಂಬ

ಈ ಟ್ರಸ್ಟ್ ಕಿಸಿದದ್ದು ಅಷ್ಟರಲ್ಲೇ ಇದೆ.

ಹೀಗೆ ಕೋಟ್ಯಾಂತರ ಬಾಚುತ್ತಿರುವ ಟ್ರಸ್ಟ್ ಇದುವರೆಗೆ ಗ್ರಾಮ ಪಂಚಾಯತಿಗೆ ಒಂದು ಬಿಡಿಕಾಸೂ ಕೊಟ್ಟಿಲ್ಲ. ಇದುವರೆಗೆ ಎರಡು ವರ್ಷಕ್ಕೋ ಮೂರು ವರ್ಷಕ್ಕೊಮ್ಮೆ 10-12 ಟ್ಯೂಬ್ ಲೈಟ್ ಕೊಡಿಸಿ ಕೈತೊಳೆದುಕೊಳ್ಳುತ್ತಿದ್ದರು. ಆದರೆ ಕಳೆದ ವರ್ಷ ದರಸುಗುಪ್ಪೆ ಗ್ರಾಮ ಪಂಚಾಯತಿಯಿಂದ ಟ್ರಸ್ಟ್‌ಗೆ ಒಂದು ನೋಟಿಸ್ ನೀಡಿ, ಪ್ರತಿವರ್ಷ 2 ಲಕ್ಷ ರೂಪಾಯಿ ತೆರಿಗೆ ಪಾವತಿಸಬೇಕೆಂದು, ಇಲ್ಲವಾದರೆ ದೇವಾಲಯದ ಉಸ್ತುವಾರಿಯನ್ನು ನೇರವಾಗಿ ಪಂಚಾಯತಿಯೇ ವಹಿಸಿಕೊಳ್ಳುವುದಾಗಿಯೂ ತಿಳಿಸಿದರು.

ಮಾರಮ್ಮನ ಹಣದ ಬಲದಿಂದ ಕೊಬ್ಬಿದ್ದ ಚಂದ್ರು ಮೊದಲಿಗೆ ತನ್ನ ಪೊಗರು ತೋರಿಸಿದ. ಪಂಚಾಯತಿಯವರು ದೇವಸ್ಥಾನದ ವಿಷಯದಲ್ಲಿ ತಲೆಹಾಕುವಂತಿಲ್ಲ ಎಂದು ಲಾಯರ್ ಮೂಲಕ ನೋಟಿಸ್ ಕೊಡಿಸಿದ. ಯಾವಾಗ ಪಂಚಾಯತಿಯವರು ಮುಂದಿನ ಕ್ರಮಕ್ಕೆ ಮುಂದಾದರೋ ಆಗ ಬಾಲಮುದುರಿಕೊಂಡು ಮಧ್ಯಸ್ಥರ ಮೂಲಕ ರಾಜೀ ಕುದುರಿಸಿ ಪಂಚಾಯತಿಗೆ ತೆರಿಗೆ ಕಟ್ಟಲು ಒಪ್ಪಿಕೊಂಡ. ಹಾಗೆ ಕಳೆದ ವರ್ಷ 50 ಸಾವಿರ ರೂಪಾಯಿ ಕಟ್ಟಿದ್ದಾನೆ ಹಾಗೂ ಈ ವರ್ಷದ ತೆರಿಗೆಯಾಗಿ 75 ಸಾವಿರ ಕಟ್ಟಲು ಒಪ್ಪಿಕೊಂಡಿದ್ದಾನೆ. ಅಂದರೆ ಇಷ್ಟು ವರ್ಷ ನುಂಗಿಹಾಕಿದ ಪಂಚಾಯತಿ ತೆರಿಗೆ ಬಾಬತ್ತು ಎಷ್ಟು ಎಂಬುದನ್ನು ನೀವೇ ಲೆಕ್ಕ ಹಾಕಿ.

ಈತ ಎಂಥಾ ಪಾತಕಿ ಎಂದರೆ ದೇವಸ್ಥಾನದ ಆವರಣದಲ್ಲಿ ಮೂಳೆಯ ಆಸೆಗೆ ಬಂದಿದ್ದ ಸುಮಾರು 50ಕ್ಕೂ ಹೆಚ್ಚು ನಾಯಿಗಳನ್ನು ಕುಣಿಕೆ ಹಾಕಿ ಹಿಡಿಸಿ, ಮಾರಮ್ಮನ ಸನ್ನಿಧಿಯಲ್ಲೇ ವಿಷದ ಇಂಜಕ್ಷನ್ ಚುಚ್ಚಿ ಕೊಲ್ಲಿಸಿಬಿಟ್ಟ. ಪ್ರಾಣಿ ದಯಾ ಸಂಘದವರು ಪೊಲೀಸ್ ಕಂಪ್ಲೈಂಟ್ ಕೊಟ್ಟ ಪರಿಣಾಮ ಐಪಿಸಿ 428, 429 ಮುಂತಾದ ಕಾಯಿದೆಗಳಡಿ ಕೇಸು ದಾಖಲಾಗಿದೆ. ಈ ಕೇಸು ಸರಿಯಾದ ದಿಕ್ಕಿನಲ್ಲಿ ಮುನ್ನಡೆದರೆ ಈ ಪಾಖಂಡಿಗಳಿಗೆ ಎರಡು ವರ್ಷ ಜೈಲು ಶಿಕ್ಷೆ ಗ್ಯಾರಂಟಿ.

ಇಷ್ಟೆಲ್ಲಾ ರಾದ್ಧಾಂತಗಳನ್ನು ಕಂಡ ರೈತಸಂಘದ ಯುವ ಮುಖಂಡರಾದ ಕಿರಂಗೂರು ಪಾಪು ಹಾಗೂ ಸಂಗಡಿಗರು ಈ ಅಕ್ರಮಗಳನ್ನು ತಡೆಗಟ್ಟಲು ನಡೆಸಿದ ನಿರಂತರ ಪ್ರಯತ್ನದ ಫಲವಾಗಿ ರೆವಿನ್ಯೂ ಇನ್ಸ್‌ಪೆಕ್ಟರ್, ತಹಶೀಲ್ದಾರ್, ಜಿಲ್ಲಾಧಿಕಾರಿ ಎಲ್ಲರೂ ಈ ಟ್ರಸ್ಟ್‌ನ ಅಕ್ರಮಗಳನ್ನು ತಮ್ಮ ವರದಿಯಲ್ಲಿ ದಾಖಲಿಸಿದ್ದು, ಅಕ್ರಮಗಳು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ದೇವಾಲಯವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ತಮ್ಮ ಅಕ್ರಮ ಗಳಿಕೆಗೆ ಅಡ್ಡಗಾಲಾಗುತ್ತಿರುವ ಪಾಪು ಅವರ ಬಾಯಿ ಮುಚ್ಚಿಸಲು ಬೆದರಿಕೆ ಕರೆಗಳು ಬರುತ್ತಿವೆ. ಆದರೆ ಇದಾವುದಕ್ಕೂ ಜಗ್ಗದ ಪಾಪು ಈ ಕಳ್ಳರು ಗಳಿಸಿರುವ ಅಕ್ರಮ ಆಸ್ತಿಗಳ ಬಗ್ಗೆ ಸೂಕ್ತ ತನಿಖೆಯಾಗಬೇಕೆಂದು ಒತ್ತಾಯಿಸುತ್ತಿದ್ದಾರೆ.

ಅಂತಿಮವಾಗಿ ಕಳೆದ ಏಪ್ರಿಲ್‌ನಲ್ಲಿ ಅಂದಿನ ಮುಖ್ಯಮಂತ್ರಿ ಸದಾನಂದಗೌಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಧಾರ್ಮಿಕ ಪರಿಷತ್ ದೇವಸ್ಥಾನವನ್ನು ಸರ್ಕಾರದ ಸುಪರ್ದಿಗೆ ಪಡೆಯುವಂತೆ ಶಿಫಾರಸ್ಸು ಮಾಡಿದೆ. ಆದರೆ ಅಂದಿನಿಂದ ಇಂದಿನವರೆಗೆ ಆ ನಿರ್ಣಯ ಜಾರಿಯಾಗದಂತೆ ತಡೆಯುವಲ್ಲಿ ಚಂದ್ರುವಿನ ಅಕ್ರಮ ಹಣದ ಥೈಲಿ ಯಶಸ್ವಿಯಾಗಿದೆ. ಇನ್ನು ಮುಂದಾದರೂ ಸರ್ಕಾರ ಭಕ್ತರ ಹಿತವನ್ನು ಕಾಯುತ್ತದೋ ಅಥವಾ ಚಂದ್ರುನಂಥಾ ಭಕ್ತ ಕಂಟಕರನ್ನು ಬೆಂಬಲಿಸುತ್ತದೋ ಕಾದು ನೋಡಬೇಕು. ●



ಹೊನ್ನಾಳಿಯಿಂದ ಯಡ್ಡಿಯ ಅಸ್ತಿತ್ವದ ಹೋರಾಟ

ದಾವಣಗೆರೆ ಜಿಲ್ಲೆಯ ಹೊನ್ನಾಳಿಯಿಂದ ಯಡಿಯೂರಪ್ಪ ತನ್ನ ರಾಜಕೀಯ ಅಸ್ತಿತ್ವವನ್ನು ...ಸಿಕೊಳ್ಳುವ ಕಸರತ್ತು ಶುರುಮಾಡಿದಂತಿದೆ.


ಮೊನ್ನೆ ಹೊನ್ನಾಳಿಯಲ್ಲಿ ಹೆಂಡದ ಮಂತ್ರಿ ರೇಣುಕಾಚಾರ್ಯ ಏರ್ಪಡಿಸಿದ್ದ ಬಿಜೆಪಿ ...ಳಾ ಸಮಾವೇಶವೇ ಯಡ್ಡಿಯ ರಾಜಕೀಯ ದುರುದ್ದೇಶಕ್ಕೆ ವೇದಿಕೆ ಆಯಿತು. ಯಡಿಯೂರಪ್ಪ ತನ್ನ ಭಾಷಣದುದ್ದಕ್ಕೂ ತಮ್ಮ ಎದೆಯೊಳಗೆ ಹುದುಗಿರುವ ಅಧಿಕಾರ ...ವನ್ನು ಹೊರಕಕ್ಕಿದರು. ಹಾಗೆ ಮಾಡುವ ಮೂಲಕ ತನಗೆ ಕಿಂಚಿತ್ತೂ ಸ್ವಾಭಿಮಾನವಿಲ್ಲ ...ಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು.

ಬಿಜೆಪಿ ಪಕ್ಷದ ಬಗ್ಗೆ ಮಾತನಾಡುತ್ತಲೇ ತನಗೆ ಅಧಿಕಾರ ಕೊಡದಿದ್ದರೆ ತಾನು ಪಕ್ಷ ...ರೆಯಲೂ ಸಿದ್ಧ ಎಂಬ ಸತ್ಯವನ್ನೂ ಹೊರಹಾಕಿದರು. ಇದಕ್ಕೂ ಮುನ್ನ ತನ್ನ ಪಟಾಲಂನ ...ಸ್ಯ ಸದಸ್ಯನಾಗಿರುವ ಉದಾಸಿಯ ಕ್ಷೇತ್ರ ಹಾವೇರಿಯಿಂದಲೂ ಇಂಥದ್ದೇ ಸಂದೇಶವನ್ನು ...ಡ್ಡಿ ಬಿತ್ತರಿಸಿದ್ದರು. ಅವರ ಬೆಂಬಲಿಗ ಶಾಸಕರ ಕ್ಷೇತ್ರಗಳನ್ನೇ ಗುರಿಯಾಗಿಟ್ಟುಕೊಂಡು ...ಡ್ಡಿ ತನ್ನ ಚುನಾವಣಾ ಪ್ರಚಾರ ಶುರು ಮಾಡಿದಂತಿದೆ.

ರೇಣುಕನ ಎಡವಟ್ಟುಗಳು

ರೇಣುಕಾಚಾರ್ಯ ಅಬಕಾರಿ ಮಂತ್ರಿಯಾದ ನಂತರ ಆತನ ಖಾಸಗಿ ಖಜಾನೆ ...ರ್ಣಯಾಗಿದೆ. ಬರುವ ಚುನಾವಣೆಗಳನ್ನು ಹಣ ಮತ್ತು ಹೆಂಡವನ್ನಾಧರಿಸಿಯೇ ಆತ ...ದುರಿಸಬೇಕಾಗಿದೆ. ಯಾಕೆಂದರೆ ಈಗ ರೇಣುಕನಿಗೆ ಲಿಂಗಾಯತರ ಮತ್ತು ಚೆಡ್ಡಿಗಳ ...ಬಲ ಇಲ್ಲದಂತಾಗಿದೆ. ಇಲ್ಲಿನ ಜನರಂತೂ ಇವನ ಸಹೋದರರ ಉಪಟಳದಿಂದ ...ತ್ತು ಸ್ವತಃ ರೇಣುಕಾಚಾರ್ಯನ ಎಡವಟ್ಟುಗಳಿಂದ ರೋಸಿ ಹೋಗಿದ್ದಾರೆ.

ಈ ಹಿಂದೆ ಕಾಂಗ್ರೆಸ್‌ನಿಂದ ಬಿಜೆಪಿಗೆ ವಲಸೆ ಬರುವ ಮೂಲಕ ರೇಣುಕನ ...ನಾವಣಾ ಗೆಲುವಿಗೆ ಕಾರಣರಾಗಿದ್ದ ಗಂಗಪ್ಪ ಮತ್ತು ಕೃಷ್ಣಪ್ಪ ಈಗ ಬಿಜೆಪಿಯಲ್ಲೇ ...ಬೆಗುಂಪಾಗಿದ್ದಾರೆ. ರೇಣುಕನ ಅಧಿಕಾರದ ದರ್ಪದಿಂದ ಇವರಿಬ್ಬರೂ ಮಾನಸಿಕವಾಗಿ



ನರಕ ಅನುಭವಿಸಿದ್ದಾರೆ. ರೇಣುಕಾಚಾರ್ಯನನ್ನು ನಂಬಿದ್ದ ಇತರೆ ನಾಯಕರೆಲ್ಲ ಈಗ ಅವನ ಕೈಬಿಟ್ಟಿದ್ದಾರೆ.

ಯಡ್ಡಿಯ ಮಾನಸಿಕ ಪುತ್ರ ತಾನು ಎಂದು ಹಿಂದೆ ಘೋಷಿಸಿದ್ದ ರೇಣುಕ ಆನಂತರ ಯಡ್ಡಿಯ ವಿರುದ್ಧವೇ ತಿರುಗಿಬಿದ್ದನಲ್ಲದೆ, ಯಡ್ಡಿಯ ಆಪ್ತೆ ಶೋಭಾ



...ದ್ಲಾಜೆಯನ್ನು ಸಚಿವ ಸಂಪುಟ...ದ ಹೊರದೂಡುವಂತೆ ...ಡಿದ್ದ. ಆಗಲೇ ಹೊನ್ನಾಳಿಯ ...ಗಾಯತರು ಈ ರೇಣುಕಾ...ರ್ಯ ನಂಬಿಕೆಗೆ ಯೋಗ್ಯನಲ್ಲ ...ಬ ತೀರ್ಮಾನಕ್ಕೆ ಬಂದಿದ್ದರು. ...ಷ್ಟೇ ಅಲ್ಲ, ಇತ್ತೀಚೆಗೆ ಹೊನ್ನಾ...ಯ ಲಿಂಗಾಯತ ಮುಖಂಡರು ...ದ್ದು ಯಡ್ಡಿ ಎದುರೇ ರೇಣುಕ...ನ್ನು ನಂಬುವ ಬಗ್ಗೆ ಎಚ್ಚರ ಕೊಟ್ಟಿದ್ದಾರೆ. ಅವರ ಮಾತಿಗೆ ಯಡ್ಡಿಯೂ ಮೌನದ ...ಮ್ಮತಿ ನೀಡಿದ್ದಾರೆ. ಅಂದರೆ ಬರುವ ಬಾರಿ ಲಿಂಗಾಯತರು ರೇಣುಕಾಚಾರ್ಯನನ್ನು ...ಬೆಂಬಲಿಸುವುದು ಗ್ಯಾರಂಟಿ ಇಲ್ಲ ಎಂಬಂತಾಗಿದೆ.


ಕಳೆದೆರಡು ಚುನಾವಣೆಗಳಲ್ಲಿ ರೇಣುಕನನ್ನು ಅಧಿಕಾರಕ್ಕೆ ತಂದದ್ದು ಕಾಂಗ್ರೆಸ್ ಪಕ್ಷದೊಳಗಿನ ...ಳಜಗಳ ಮತ್ತು ಯಡ್ಡಿಯ ಪರವಾಗಿ ನಿಂತಿದ್ದ ಲಿಂಗಾಯತ ಸಮುದಾಯ. ಆದರೆ ಈ ...ರಿ ರೇಣುಕಾಚಾರ್ಯ ಅದೆಷ್ಟೇ ಪ್ರಯತ್ನಿಸಿದರೂ ಆತ ಮೇಲೇಳಲು ಸಾಧ್ಯವಾಗದಂತಹ ...ಸ್ಥಿತಿ ಕ್ಷೇತ್ರದಲ್ಲಿದೆ.

ಜನರಿಗೆ ಉಪದ್ರವ ಕೊಡದ ಕಾಂಗ್ರೆಸ್‌ನ ಶಾಂತನಗೌಡರು ಈಗಾಗಲೇ ಪ್ರಚಾರಕ್ಕೆ ...ಳಿದಿದ್ದಾರೆ. ಅವರು ಹೋದ ಕಡೆಯೆಲ್ಲಾ ಮತದಾರರು ಅವರಿಗೆ ತಮ್ಮ ಬೆಂಬಲವನ್ನು ...ಸೂಚಿಸುತ್ತಿದ್ದಾರೆ. ರೇಣುಕಾಚಾರ್ಯನ ಬಗ್ಗೆ ಬೇಸರ ಹೊಂದಿರುವ ಹೊನ್ನಾಳಿಯ ಮತದಾರರು ...ಬರುವ ಚುನಾವಣೆಯಲ್ಲಿ ಆತನ ಹಣೆಬರಹ ಬರೆಯಲು ನಿರ್ಧರಿಸಿದಂತಿದೆ. ಅಂದರೆ 2013 ರ ಚುನಾವಣೆ ರೇಣುಕನ ಪಾಲಿಗೆ ರಾಜಕೀಯ ಅವಸಾನದ ಯಾತ್ರೆಯಂತಾದರೂ ...ಚ್ಚರಿಪಡಬೇಕಾಗಿಲ್ಲ.


● ಟಿ.ಎಸ್.ಷಣ್ಮುಖ

ಡಾ. ಸುಲೋಚನಾ ಗುಣಶೀಲ

ಅಸಾಧ್ಯತೆಯಲ್ಲಿ ಸಾಧ್ಯತೆಯನ್ನು ಕಂಡ ಸಾಧಕಿ



ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ಒಂದು ದಿನ ನಾನು ಡಾ. ಸುಲೋಚನಾ ಗುಣಶೀಲ ಅವರ ಮನೆಯಲ್ಲಿ ಕುಳಿತು ಅವರೊಂದಿಗೆ ಮಾತನಾಡುತ್ತಿದ್ದಾಗ, ಅವರ ಕಣ್ಣುಗಳು 'ನಾನು ತಿರುಗಿ ಬಾರದ ಊರಿಗೆ ಪಯಣಿಸುತ್ತಿದ್ದೇನೆ ಎಂದು ನಿಮಗೆ ತಿಳಿಯುತ್ತಿಲ್ಲವೇ?' ಎಂದು ಪ್ರಶ್ನಿಸುತ್ತಿರುವಂತೆ ನನಗೆ ಭಾಸವಾಯಿತು. ಅವತ್ತು ಸುಲೋಚನಾ ಅವರು ನನಗೆ "ಕಮಲ, ನಾನು ಮುಂದಿನ ವಾರ ಹಾಂಕಾಂಗ್‌ಗೆ ಚಿಕಿತ್ಸೆಗಾಗಿ ತೆರಳುತ್ತಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಆದನಂತರ ಒಂದೆರಡು ದಿನ ವಿಶ್ರಾಂತಿ ಪಡೆಯಬೇಕು. ಆಮೇಲೆ ಏನಾಗುತ್ತೋ ಗೊತ್ತಿಲ್ಲ" ಎಂದರು. ಅದನ್ನು ಕೇಳಿ ನಾನು "ನಿಮಗೆ ಏನೂ ಆಗೋಲ್ಲ, ಹೋಗಿ ಬನ್ನಿ. ನೀವು ಬರುವ ಹೊತ್ತಿಗೆ ಪ್ರನಾಳ ಶಿಶುವಿನ ಬಗೆಗಿನ ಪುಸ್ತಕದ ಕೆಲಸವನ್ನು ಎನ್.ಎಸ್.ಲೀಲಾ ಅವರು ಮುಗಿಸಿರುತ್ತಾರೆ" ಎಂದು ಹೇಳಿ ಅವರನ್ನು ಬೀಳ್ಕೊಟ್ಟಿದ್ದು ಇನ್ನೂ ಹಸಿರಾಗಿಯೇ ಇದೆ. ಆದರೆ ಸೆಪ್ಟೆಂಬರ್ 13ರ ಗುರುವಾರ ಸುಲೋಚನಾ ಅವರ ಸಹಾಯಕಿ ಚಿತ್ರಾ ಅವರಿಗೆ ಫೋನ್ ಮಾಡಿದ ನಾನು "ಡಾಕ್ಟರ್ ಊರಿನಿಂದ ಬಂದರೆ? ಅವರು ಹೇಗಿದ್ದಾರೆ?" ಎಂದು ವಿಚಾರಿಸುವ ಹೊತ್ತಿಗೆ ಅವರ ಪ್ರಾಣಪಕ್ಷಿ ಹಾಂಕಾಂಗ್‌ನಲ್ಲಿ ಹಾರಿಹೋಗಿತ್ತು.



ಸೆಮಿನಾರ್‌ನಲ್ಲಿ ಡಾ. ಗುಣಶೀಲ (ಬಲಕ್ಕೆ)

ಅಲ್ಲಿಗೆ ಕರ್ನಾಟಕದ - ಅಷ್ಟೇ ಏಕೆ ಭಾರತದ - ಅತ್ಯಂತ ಪ್ರತಿಭಾನ್ವಿತ ಮಹಿಳಾ ಮತ್ತು ಸ್ತ್ರೀರೋಗ ತಜ್ಞರಲ್ಲಿ ಒಬ್ಬರಾಗಿದ್ದ ಡಾ. ಸುಲೋಚನಾ ಗುಣಶೀಲ ಅವರು ಇತಿಹಾಸದ ಪುಟ ಸೇರಿದರು.

ಸಕಲೇಶಪುರದ ಚೌಲಗೆರೆ ಎಂಬ ಹಳ್ಳಿಯಿಂದ ಬೆಂಗಳೂರಿಗೆ ಬಂದು ನೆಲೆಸಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಂಜಿನಿಯರ್ ಆಗಿದ್ದ ಸಿ.ರಾಮಚಂದ್ರೇಗೌಡ (ಸಿ.ಆರ್.ಗೌಡ) ಮತ್ತು ಟಿ.ನರಸೀಪುರದ ಬಳಿಯ ಮೂಗೂರಿನ ಚನ್ನಮ್ಮ ದಂಪತಿಗಳ ಆರನೇ ಮಗಳಾಗಿ ಸುಲೋಚನಾ ಜನಿಸಿದ್ದರು. ಸುಲೋಚನಾ ಅವರ ಹಿರಿಯ ಅಕ್ಕ ಆಗಿದ್ದ ಕೆ.ಎಸ್.ನಾಗರತ್ನಮ್ಮ ಕರ್ನಾಟಕದ ಮೊದಲ ಮಹಿಳಾ ವಿಧಾನ ಸಭಾಧ್ಯಕ್ಷೆಯಾಗಿದ್ದರು.

ಸುಲೋಚನಾ ಬಾಲ್ಯದಿಂದಲೂ ಬಹಳ ಪ್ರತಿಭಾವಂತೆ ಹಾಗೂ ಬುದ್ಧಿವಂತ ವಿದ್ಯಾರ್ಥಿನಿ. ಅವರು ಒಂದನೇ ತರಗತಿಯಿಂದ ಮೂರನೇ ತರಗತಿಗೆ ಡಬಲ್ ಪ್ರಮೋಷನ್ ಪಡೆದಿದ್ದರು. ಏಳನೇ ತರಗತಿಯವರೆಗೂ ಕನ್ನಡ ಮಾಧ್ಯಮದಲ್ಲಿ ಓದಿದ್ದ ಅವರು ಎಂಟನೇ ತರಗತಿಯಲ್ಲಿ ಇಂಗ್ಲಿಷ್ ಮೀಡಿಯಂಗೆ ಸೇರಿದಾಗ ಅವರಿಗೆ ಕಷ್ಟವಾಯಿತು. ಆದರೆ 'ನಾನು ಸೋಲಲು ಹುಟ್ಟಿದವಳಲ್ಲ' ಎಂದು ಹೇಳುತ್ತಿದ್ದ ಅವರ ಅಂತರಾಳ ಅವರನ್ನು ಕಷ್ಟಪಟ್ಟು ಓದಲು ಪ್ರೇರೇಪಿಸಿತು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಸುಲೋಚನಾ ಉನ್ನತ ಶ್ರೇಣಿಯಲ್ಲಿ ಪಾಸು ಮಾಡಿ ಶಾಲೆಯ ಅತ್ಯುತ್ತಮ ವಿದ್ಯಾರ್ಥಿನಿಯಾಗಿ ಹೊರಹೊಮ್ಮಿದರು.

ಶಾಲೆಯಲ್ಲಿ ಇಷ್ಟೆಲ್ಲ ಸಾಧನೆ ಮಾಡಿದ ಸುಲೋಚನಾ ಅವರಿಗೆ ಅವರ ರೂಪಿನ ಬಗ್ಗೆ ಕೀಳರಿಮೆ ಇತ್ತು. ಅವರ ಸುತ್ತಲಿನವರು ಚಂದವಿದ್ದು ಒಮ್ಮೊಮ್ಮೆ ಇವರನ್ನು ಅಪಹಾಸ್ಯ ಮಾಡುತ್ತಿದ್ದರು. ಆಗೆಲ್ಲಾ ಸುಲೋಚನಾ 'ಇವರೆಲ್ಲರನ್ನೂ ಮೀರಿಸುವ ಏನಾದರೊಂದು ಸಾಧನೆ ಮಾಡಬೇಕು' ಎಂಬ ಸಂಕಲ್ಪವನ್ನು ಮನಸ್ಸಿನಲ್ಲೇ ಮಾಡುತ್ತಿದ್ದರು.

ಸಂಕಲ್ಪದೆಡೆಗಿನ ನಡೆ

"ನಮ್ಮ ಮನೆಯ ಪಕ್ಕದಲ್ಲಿದ್ದ ಡಾ.ಲಲಿತಾ ಲಿಂಗಯ್ಯ ಎಂಬ ಸುಂದರ ಸಂಪನ್ನ ವೈದ್ಯೆಯೇ ನಾನು ವೈದ್ಯಳಾಗಲು ಪ್ರೇರೇಪಣೆಯಾಗಿದ್ದು" ಎಂದು ಸುಲೋಚನಾ ಸದಾ ಹೇಳುತ್ತಿದ್ದರು. ಸುಲೋಚನಾ ಅವರು ಪದವಿಪೂರ್ವ ಶಿಕ್ಷಣವನ್ನು ರಾಜ್ಯಕ್ಕೆ ಮೊದಲಿಗರಾಗಿ ಪಾಸುಮಾಡಿ ಮೈಸೂರು ಮೆಡಿಕಲ್ ಕಾಲೇಜನ್ನು ಸೇರಿದರು. ಅದೇ ಹೊತ್ತಿಗೆ ಅವರ ಮತ್ತೊರ್ವ ಅಕ್ಕ ಮುತ್ತು ಎಂಬುವವರು ಅದೇ ಕಾಲೇಜಿನಲ್ಲಿ ವೈದ್ಯಕೀಯವನ್ನು ಓದುತ್ತಿದ್ದರು. ಅಷ್ಟುಹೊತ್ತಿಗೆ ವಿಧವೆ ಆಗಿದ್ದ ದೊಡ್ಡಕ್ಕ ಕೆ.ಎಸ್. ನಾಗರತ್ನಮ್ಮ ಇವರಿಬ್ಬರನ್ನು ತಮ್ಮ ಮನೆಯಲ್ಲೇ ಇಟ್ಟುಕೊಂಡು ತನ್ನ ಸ್ವಂತ ಮಕ್ಕಳಂತೆ ಸಾಕಿ ಸಲುಹಿದರು. ಎಂಬಿಬಿಎಸ್ ಪರೀಕ್ಷೆಯನ್ನು ಸುಲೋಚನಾ ಉನ್ನತ ಶ್ರೇಣಿಯಲ್ಲಿ ಪಾಸ್ ಮಾಡಿದ್ದರಿಂದ ಮೈಸೂರು ಮಹಾರಾಜರು ಅವರಿಗೆ ಒಂದು ಚಿನ್ನದ ಪದಕವನ್ನು ಅದರ ಜೊತೆಗೆ ನಾಲ್ಕು ನೂರು (400) ರೂಪಾಯಿಗಳನ್ನು ಬಹುಮಾನವಾಗಿ ನೀಡಿದರು. ತನಗೆ ದೊರೆತ ಬಹುಮಾನದ ಹಣದಲ್ಲಿ ತನ್ನನ್ನು ಸಾಕಿದ ಅಕ್ಕ ನಾಗರತ್ನಮ್ಮನವರಿಗೆ ಒಂದು ಸೀರೆಯನ್ನು ಕೊಂಡೊಯ್ದು ಅದನ್ನು ಅವರಿಗೆ ಅರ್ಪಿಸಿದ ಸುಲೋಚನ ಕಣ್ಣೀರು ಸುರಿಸಿ ತನ್ನ ಅಕ್ಕನಿಗೆ ಧನ್ಯವಾದವನ್ನು ಸೂಚಿಸಿದ್ದರು.

ಎಂಬಿಬಿಎಸ್ ಆದನಂತರ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಹೌಸ್ ಸರ್ಜನ್ಸಿ ಮುಗಿಸಿದರು. ಈ ಅವಧಿಯಲ್ಲಿ ಅವರ ಮನಸ್ಸು ಸಂತಾನ ಹೀನ ದಂಪತಿಗಳೆಡೆಗೆ ಅನುಕಂಪವನ್ನು ಬೆಳೆಸಿಕೊಂಡಿತ್ತು. ಅದೇ ಹೊತ್ತಿಗೆ ಸುಲೋಚನಾರಿಗೆ ಅವರಿಗಿಂತ ಒಂದು ವರ್ಷ ಹಿರಿಯರಾಗಿದ್ದ ಡಾ. ಮಾವಹಳ್ಳಿ ಗುಣಶೀಲ ಎಂಬ ವೈದ್ಯರ ಸ್ನೇಹವೂ ದೊರಕಿತು. ಕೆಲ ದಿನಗಳಲ್ಲೇ ಡಾ.ಗುಣಶೀಲ ಅವರು ಸುಲೋಚನಾರಿಗೆ ಸ್ನೇಹಿತರು, ಹಿತೈಷಿಗಳು ಹಾಗೂ ಮಾರ್ಗದರ್ಶಕರೂ ಆದರು. ಹೌಸ್ ಸರ್ಜನ್ಸಿ ಮುಗಿಸಿದ ಡಾ.ಸುಲೋಚನಾ ಕೊಚ್ಚಿನ್‌ನ ರಾಮಕೃಷ್ಣ ಮಿಷನ್ ಆಸ್ಪತ್ರೆ ಯಲ್ಲಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಕೊಚ್ಚಿನ್‌ನಲ್ಲಿ ಅವರು ಕೆಲಸ ಮಾಡುತ್ತಿದ್ದ ಅವಧಿಯಲ್ಲೇ ಡಾ.ಮಾವಹಳ್ಳಿ ಗುಣಶೀಲ ಅವರಿಗೆ ತಮ್ಮ ಸ್ನೇಹಿತೆಯ ಶಕ್ತಿಯ ಅರಿವಿದ್ದುದರಿಂದ, ಆಕೆಯಲ್ಲಿ ಇಂಗ್ಲೆಂಡ್‌ಗೆ ಹೋಗಿ ಓದುವ ಕನಸನ್ನು ಬಿತ್ತಿದರು. ಕನಸಿನ ಬೆನ್ನುಹತ್ತಿದ್ದ ಇವರಿಬ್ಬರೂ 1957ರಲ್ಲಿ ಪ್ರತ್ಯೇಕವಾಗಿ ಇಂಗ್ಲೆಂಡಿಗೆ ಪಯಣಿಸಿದರು. ಇಂಗ್ಲೆಂಡಿಗೆ ಹೋಗುವಾಗ ಸುಲೋಚನಾ ಕೈಯಲ್ಲಿ ಇದ್ದದ್ದು ಕೇವಲ 50 ಪೌಂಡುಗಳು ಮಾತ್ರ!

ಇಂಗ್ಲೆಂಡಿನ ಬಂದರಿನಲ್ಲಿ ಇಳಿಯುತ್ತಿದ್ದಂತೆ ತಮ್ಮ ತಂದೆಯ ನಿಧನ ವಾರ್ತೆಯನ್ನು ಹೊತ್ತು ತಂದ ತಂತಿ (Telegraph) ಸುಲೋಚನಾರ ಕೈಸೇರಿತು. ಹಿಂದೆ ಕಂಡಿರದ ದೇಶ, ತನ್ನವರು ಎಂಬ ಯಾರೂ ಇಲ್ಲದ ಜಾಗದಲ್ಲಿ ತಂದೆಯ ಸಾವಿನ ಸುದ್ದಿ ಕೇಳಿ ಅಳುತ್ತಾ ಕೂರಲು ಸುಲೋಚನಾರಿಗೆ ಸಮಯವಿರಲಿಲ್ಲ, ತಕ್ಷಣವೇ ಅವರು ಕೆಲಸ ಮಾಡಲು ಪ್ರಾರಂಭಿಸಿದರು. ಮುಂದಿನ ಎರಡು ವರ್ಷಗಳ ಕಾಲ ಇಂಗ್ಲೆಂಡಿನ ಬೇರೆ ಬೇರೆ ಊರುಗಳಲ್ಲಿ ವೈದ್ಯೆಯಾಗಿ ಕೆಲಸ ಮಾಡುತ್ತಾ ಸಂಪಾದಿಸಿದ ಹಣದಲ್ಲಿ ಪರೀಕ್ಷೆಗಳನ್ನು ಕಟ್ಟಿ ಪಾಸು ಮಾಡುತ್ತಾ ಮುಂದುವರೆದರು. ಇವುಗಳ ಮಧ್ಯೆಯೇ ಸುಲೋಚನಾ ಮತ್ತು ಗುಣಶೀಲ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ಜ್ಞಾನಸಂಪಾದನೆಯನ್ನು ಒಂದು ತಪಸ್ಸು ಎಂಬಂತೆ ಸ್ವೀಕರಿಸಿದ್ದ ಸುಲೋಚನಾ ಅವರು ಇಂಗ್ಲೆಂಡಿನಲ್ಲಿ DA, FRCS, MRCOG ಪದವಿಗಳನ್ನು ಪಡೆದರು. ಇದನ್ನು ಸಾಧಿಸಿದ ಕರ್ನಾಟಕದ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆ ಸುಲೋಚನಾ ಅವರದ್ದಾಗಿತ್ತು. ಕೊನೆಗೆ ತಾಯ್ನಾಡಿಗೆ ಸೇವೆ ಸಲ್ಲಿಸುವ, ಅಲ್ಲಿ ಏನನ್ನಾದರೂ ಸಾಧಿಸುವ ಛಲ ಹೊತ್ತು 1965ರಲ್ಲಿ ಭಾರತಕ್ಕೆ ವಾಪಸ್ ಬಂದರು.


ಬೆಂಗಳೂರಿಗೆ ಬಂದ ಸುಲೋಚನಾ ನೇರವಾಗಿ ತನ್ನ ತಾಯಿ ಚಿನ್ನಮ್ಮನವರ ಬಳಿ ಹೋದರು. ಅಂತರಜಾತಿ ವಿವಾಹವಾಗಿದ್ದ ತನ್ನ ಮಗಳ ಮೇಲಿನ ಮುನಿಸು ಚಿನ್ನಮ್ಮನವರಿಗಿನ್ನೂ ಕಡಿಮೆಯಾಗಿರಲಿಲ್ಲ. ಆದರೆ ಸುಲೋಚನಾ ಇಂಗ್ಲೆಂಡ್‌ನಲ್ಲಿ ತಾನು ಪಟ್ಟ ಕಷ್ಟ, ಸಂಪಾದಿಸಿದ ಪದವಿಗಳು, ಗಳಿಸಿದ ಗೌರವ ಎಲ್ಲವನ್ನೂ ತಾಯಿಯ ಮುಂದೆ ಮಗುವಿನಂತೆ ಕುಳಿತು ವಿವರಿಸಿದರು. ಮಂಜು ಕರಗಿ ನೀರಾದಂತೆ ಚಿನ್ನಮ್ಮನವರ ಕೋಪ ಕರಗಿ ನೀರಾಯಿತು. ಅಮ್ಮ ಮಗಳಿಬ್ಬರೂ ಅಪ್ಪಿ ಒಂದಾದರು. ಇತ್ತ ಗುಣಶೀಲ ಅವರ ಮನೆಯಲ್ಲಿ ಸೊಸೆ ಸುಲೋಚನಾರನ್ನು ಆದರಾತಿಥ್ಯದಿಂದ ಮನೆ ತುಂಬಿಸಿಕೊಂಡರು.

ಎಲ್ಲ ಶುಭಕಾರ್ಯಗಳು ಮುಗಿದನಂತರ ಡಾ. ಸುಲೋಚನಾ ಅವರು ವಾಣಿವಿಲಾಸ್ ಆಸ್ಪತ್ರೆಯಲ್ಲೂ, ಡಾ. ಗುಣಶೀಲ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲೂ ರೋಗಿಗಳ ಸೇವೆಗೆ ಸಜ್ಜಾದರು. ಆಗ ಕೇವಲ ಮುನ್ನೂರು ರೂಪಾಯಿಗಳ ಸಂಭಾವನೆ ಅವರಿಗೆ ಸಿಗುತ್ತಿತ್ತು. ಏಳು ವರ್ಷಗಳ ಕಾಲ ವಾಣಿವಿಲಾಸ್ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ ಸುಲೋಚನಾ ಅವರು ಅಲ್ಲಿ ತಮಗೆ ಸಿಕ್ಕ ವೈದ್ಯಕೀಯ ಅನುಭವಕ್ಕೆ ಸದಾ ಕೃತಜ್ಞರಾಗಿದ್ದರು.

ಆದರೆ ತನ್ನಲ್ಲಿರುವ ಜ್ಞಾನವು ಸಂಪೂರ್ಣವಾಗಿ ಪ್ರಯೋಜನಕ್ಕೆ ಬರಬೇಕಾದರೆ ತಾನು ವಾಣಿವಿಲಾಸ್ ಆಸ್ಪತ್ರೆಯ ಕಲ್ಲು ಕಟ್ಟಡದಿಂದಾಚೆ ಬೆಳೆಯಬೇಕೆಂಬ ಸತ್ಯವನ್ನು ಅವರು ಅರಿತರು. ಆಗ ಬೆಂಗಳೂರಿನ ಬಸವನಗುಡಿಯಲ್ಲಿ 'ಗುಣಶೀಲ ಸರ್ಜಿಕಲ್ ಮತ್ತು ಮೆಟರ್ನಿಟಿ ಹೋಂ' ಅಂದರೆ 'ಗುಣಶೀಲ ನರ್ಸಿಂಗ್ ಹೋಂ' ಅನ್ನು 1975ರಲ್ಲಿ ಕಟ್ಟಿಸಲು ಪ್ರಾರಂಭಿಸಿದರು. ಆ ಮೂಲಕ ತಮ್ಮ ಅಸ್ತಿತ್ವದ ಹೆಜ್ಜೆಗುರುತುಗಳನ್ನು ಮೂಡಿಸಲು ಮುಂದಾದರು. ಇವೆಲ್ಲದರ ಜೊತೆಜೊತೆಗೆ ಅವರು ಮಾಧವಿ ಮತ್ತು ದೇವಿಕಾ ಎಂಬ ಇಬ್ಬರು ಹೆಣ್ಣು ಮಕ್ಕಳ ತಾಯಿಯೂ ಆದರು.

ಪ್ರನಾಳಶಿಶು - ಸಾಧನೆಯ ಹಾದಿ

ಗುಣಶೀಲ ನರ್ಸಿಂಗ್ ಹೋಂ ಸ್ಥಾಪನೆ ಆದ ಮೂರೇ ವರ್ಷಗಳಲ್ಲಿ - ಅಂದರೆ 1978ರ ಜುಲೈ 25ರಂದು - ಪ್ರಪಂಚದ ಮೊಟ್ಟಮೊದಲ ಪ್ರನಾಳ ಶಿಶುವಿನ ಜನನವಾಯಿತು. ಈ ಸುದ್ದಿ ಪ್ರಪಂಚಾದ್ಯಂತ ಸಂಚಲನವನ್ನುಂಟುಮಾಡಿತು. ಮಕ್ಕಳಿಲ್ಲದ ದಂಪತಿಗಳಂತೂ ಇದನ್ನು ಕಾರ್ಮೋಡದಲ್ಲಿ ಮೂಡಿ ಬಂದ ಬೆಳ್ಳಿಗೆರೆಯೆಂದೇ ಭಾವಿಸಿದರು. ಪ್ರೊ. ರಾಬರ್ಟ್ ಎಡ್ವರ್ಡ್ ಮತ್ತು ಡಾ. ಪ್ಯಾಟ್ರಿಕ್ ಸ್ಟೆಪ್ಟೋ ಪ್ರನಾಳಶಿಶು ತಂತ್ರಜ್ಞಾನದ ಜನಕರಾಗಿದ್ದರು.



ಬೆಂಗಳೂರಿನ ತನ್ನ ಆಸ್ಪತ್ರೆಯಲ್ಲಿ ಕುಳಿತು ಸುಲೋಚನಾ ಅವರು ಮನುಷ್ಯ ಮಾತ್ರರಾದ ರಾಬರ್ಟ್ ಮತ್ತು ಸ್ಟೆಪ್ಟೋ ಅವರಿಗೆ ಇದು ಸಾಕಾರವಾಗಿದ್ದರೆ ಇದು ನನಗೂ ಸಾಧ್ಯವಾಗಲೇ ಬೇಕಲ್ಲವೇ? ಎಂದು ಯೋಚಿಸತೊಡಗಿದರು. ಕನಸನ್ನು ಕಾಣತೊಡಗಿದರು. ಆದರೆ ಅವರ ಈ ಕನಸು ಅವರ ಇಡೀ ಅಂತಃಶಕ್ತಿಯನ್ನು ಬೇಡುತ್ತಿತ್ತು. ಸಂತಾನಹೀನ ದಂಪತಿಗಳಿಗೆ ಅನುಕಂಪದ ಸಾಂತ್ವನವನ್ನು ಮೀರಿ ಯಾವುದಾದರೂ ಚಿಕಿತ್ಸೆಯನ್ನು ನೀಡಬೇಕೆಂದರೆ ಪ್ರನಾಳಶಿಶು ವಿಧಾನ ತನ್ನ ಆಸ್ಪತ್ರೆಯಲ್ಲಿ ಸಾಧ್ಯವಾಗಲೇಬೇಕು ಎಂದು ಅವರು ನಿರ್ಧರಿಸಿದರು. ಆದಾಗಲೇ ಸಂತಾನಹೀನರ ಬಗ್ಗೆ ಸಾಕಷ್ಟು ವ್ಯಾಕುಲ ಹೊಂದಿದ್ದ ಅವರ ಮನಸ್ಸು ಪ್ರನಾಳಶಿಶುವನ್ನು ತಮ್ಮ ಆಸ್ಪತ್ರೆಯಲ್ಲಿ ಸಾಕಾರಗೊಳಿಸಲು ಪಣತೊಟ್ಟಿತು. ಈ ಪಣಕ್ಕಾಗಿ ಅವರು ಅಪಾರವಾದ ಹಣವನ್ನು ಹೊಂದಿಸಬೇಕಾಯಿತಲ್ಲದೆ ಅಧ್ಯಯನವನ್ನು ಪ್ರಾರಂಭಿಸಿದರು. ಏಕವ್ಯಕ್ತಿ ಪ್ರದರ್ಶನದ ಸಣ್ಣ ಆಸ್ಪತ್ರೆಯಲ್ಲಿ ಇಂತಹ ಪಣ ತೊಡುವುದು ಹುಡುಗಾಟದ ಮಾತಲ್ಲ. ಆದರೆ ಸಾತ್ವಿಕ ಹಠ ಮತ್ತು ಛಲ ಸುಲೋಚನಾ ಅವರ ವ್ಯಕ್ತಿತ್ವದಲ್ಲಿ ಅಂತರ್ಗತವಾಗಿದ್ದ ಗುಣಗಳು.

ಪ್ರನಾಳಶಿಶು ಯೋಜನೆಗಾಗಿ ಅವರು ತಮ್ಮ ಆಸ್ಪತ್ರೆಗೆ ಹಲವಾರು ಉಪಕರಣಗಳನ್ನು ತರಿಸಿದರು. ಅವುಗಳಲ್ಲಿ ಬೆಂಗಳೂರಿನ ಮೊಟ್ಟ ಮೊದಲ ಸ್ಕ್ಯಾನಿಂಗ್ ಯಂತ್ರವೂ ಒಂದಾಗಿತ್ತು (1982). ಇದಾದನಂತರ ಲ್ಯಾಪ್ರೋಸ್ಕೋಪಿ ಉಪಕರಣಗಳನ್ನು ತರಿಸಿದರು. ಜೊತೆಗೆ ಅವುಗಳನ್ನು ಉಪಯೋಗಿಸುವ ಪರಿಣಿತಿಯನ್ನು ದೇಶದ ಬೇರೆ ಬೇರೆ ಜಾಗಗಳಿಗೆ ತೆರಳಿ ಪಡೆದರು. ಲ್ಯಾಪ್ರೋಸ್ಕೋಪಿ ಚಿಕಿತ್ಸೆಯು ಸಂತಾನಹರಣ ಶಸ್ತ್ರಚಿಕಿತ್ಸೆಯಲ್ಲಿ ಬಹಳ ಪರಿಣಾಮಕಾರಿ ವಿಧಾನ ಎಂದರಿತ ಅವರು ಅದನ್ನು ರಾಜ್ಯಾದ್ಯಂತ ಪ್ರಚಾರಪಡಿಸಲು ಅವಿರತವಾಗಿ ಶ್ರಮಿಸಿದರು.


ಇದೆಲ್ಲದರ ಜೊತೆಗೆ ಪ್ರಪಂಚದಾದ್ಯಂತ ನಡೆಯುತ್ತಿದ್ದ ಪ್ರನಾಳಶಿಶು ಸಂಬಂಧಿತ ಸಮ್ಮೇಳನಗಳಿಗೆ ತೆರಳಿ ಜ್ಞಾನ ಸಂಪಾದಿಸುತ್ತಿದ್ದರು. ಡಾ. ಜೋಶ್ವ ಪೀಟರ್ ಆಗಿನ ದಿನಗಳಲ್ಲಿ ಪ್ರನಾಳಶಿಶು ತಂತ್ರಜ್ಞಾನದ ಬಗ್ಗೆ ಸಾಕಷ್ಟು ಪರಿಣಿತಿ ಪಡೆದಿದ್ದ ಭಾರತ ದೇಶದ ತಜ್ಞರಾಗಿದ್ದರು. ಇವರ ಸಂಪರ್ಕ ಸಾಧಿಸಿದ ಸುಲೋಚನಾ ಅವರು ಪೀಟರ್ ಅವರನ್ನು ತಮ್ಮ ಆಸ್ಪತ್ರೆಗೆ ಬರಮಾಡಿಕೊಂಡು ಅಲ್ಲಿಂದಾಚೆಗೆ ಅವರ ಯೋಜನೆ ವೇಗವನ್ನು ಪಡೆದುಕೊಂಡಿತು. ಅನೇಕ ಸಫಲತೆ-ವಿಫಲತೆ, ಆಸೆ-ನಿರಾಸೆ, ನೋವು-ನಲಿವುಗಳ ನಂತರ GIFT (gamete intrafellopian transfer) ಎಂಬ ವಿಧಾನದ ಮೂಲಕ 1988ರಲ್ಲಿ ಗುಣಶೀಲ ನರ್ಸಿಂಗ್ ಹೋಂ ಶ್ವೇತಾ ಎಂಬ ದಕ್ಷಿಣ ಭಾರತದ ಮೊದಲ ಪ್ರನಾಳಶಿಶುವನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಯಿತು. ಶ್ವೇತಾಳ ಜನನ ಸುಲೋಚನಾ ಅವರನ್ನು ಇದ್ದಕ್ಕಿದ್ದಂತೆ ತಾರಾಪಟ್ಟಕ್ಕೇರಿಸಿತು. ಅಲ್ಲಿಂದಾಚೆಗೆ ಸುಲೋಚನಾ ಅವರು ಒಂದಾದ ಮೇಲೊಂದರಂತೆ ಸಾಧನೆಗಳನ್ನು ಮಾಡಿದರು. ಇದನ್ನೆಲ್ಲ ಗುರುತಿಸಿದ ಕರ್ನಾಟಕ ಸರ್ಕಾರ ಅವರಿಗೆ ರಾಜ ಪ್ರಶಸ್ತಿಯನ್ನಿತ್ತು ಗೌರವಿಸಿತು.

ಒಂದೇ ಸಾಧನೆಯಲ್ಲಿ ಸಂತೃಪ್ತಿ ಕಂಡು ಸುಮ್ಮನೆ ಕೂರುವ ಜಾಯಮಾನದವರಲ್ಲ ಸುಲೋಚನಾ. ಅವರು ಮುಂದೆ 2003ರಲ್ಲಿ ಅಪಕ್ವ ಅಂಡಾಣುಗಳನ್ನು ಕೃತಕ ವಾತಾವರಣದಲ್ಲಿ ಪಕ್ವಗೊಳಿಸಿ, ವೀರ್ಯಾಣುವಿನೊಂದಿಗೆ ಮಿಲನಗೊಳಿಸಿ ಮಗುವನ್ನು ಪಡೆಯುವಲ್ಲಿ ಯಶಸ್ವಿಯಾದ ಭಾರತದ ಮೊದಲ ಮಹಿಳಾ ವೈದ್ಯೆಯಾದರು. ಕಳೆದ ವರ್ಷ- ಅಂದರೆ 2011ರಲ್ಲಿ-ಅಪಕ್ವ ಅಂಡಾಣುವನ್ನು ಶೈತ್ಯೀಕರಿಸಿ ಸಂಗ್ರಹಿಸಿಟ್ಟು ಹಲವು ದಿನಗಳ ನಂತರ ಅದನ್ನು ಹೊರತೆಗೆದು ಬೆಚ್ಚಗೆಮಾಡಿ (ವಾತಾವರಣದ ಉಷ್ಣತೆಗೆ ತಂದು) ವೀರ್ಯಾಣುವಿನೊಂದಿಗೆ ಮಿಲನಗೊಳಿಸಿ ಭ್ರೂಣವನ್ನು ತಾಯಗರ್ಭಕ್ಕೆ ವರ್ಗಾಯಿಸುವ ವಿಧಾನದಿಂದ ಜೀವಂತ ಮಗುವನ್ನು ಪಡೆಯುವಲ್ಲಿ ಯಶಸ್ವಿಯಾದ ಮೊಟ್ಟಮೊದಲ ಮಹಿಳೆಯಾದರು. ಇದು ಅವರ ಸಾಧನೆಗಳನ್ನು ಹೆಸರಿಸಲು ಕೆಲವು ಉದಾಹರಣೆಗಳಷ್ಟೇ. ಅವರು ಮಾಡಿದ ಸಾಧನೆಗಳ ಪಟ್ಟಿ ಬಹಳ ದೊಡ್ಡದಿದೆ.

ಕರ್ತವ್ಯದೆಡೆಗೆ ನಿರಂತರ ತುಡಿತ ಮತ್ತು ಬದ್ಧತೆಯನ್ನು ಹೊಂದಿದ್ದ ಸುಲೋಚನಾ ಅವರನ್ನು ಅನೇಕ ಗೌರವಗಳು ಅರಸಿ ಬಂದವು. ಅವುಗಳಲ್ಲಿ ರಾಜ್ಯ ಪ್ರಶಸ್ತಿ (1989 ಇಂಗ್ಲೆಂಡ್‌ನ ರಾಯಲ್ ಕಾಲೇಜಿನಲ್ಲಿ ಕಲಿತ ಪ್ರಸೂ ಮತ್ತು ಸ್ತ್ರೀರೋಗ ತಜ್ಞರ ಭಾರತೀಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷತೆ (1999), ಭಾರತದ ಸಹಾಯಕ ಸಂತಾನೋತ್ಪ ಕೇಂದ್ರಗಳ ನೀತಿನಿಯಮ ರೂಪಿಸುವ ಸಮಿತಿಯ ಸದ (2002) ಪ್ರಮುಖವಾಗಿವೆ.

ಭಾರತದಂತಹ ದೇಶದಲ್ಲಿ 1950ರ ದಶಕದಲ್ಲಿ ಒ ಮಹಿಳೆ ಕಾಲೇಜಿಗೆ ಹೋಗುವುದೇ ಕಷ್ಟವಾಗಿತ್ತು. ಅಂತ ಕಾಲದಲ್ಲೇ ವೈದ್ಯೆಯಾದ, ಅಂತರಜಾತಿ ವಿವಾಹದ ಮೂಲ ಸಂಪ್ರದಾಯಸ್ಥ ಸಮಾಜವನ್ನೆದುರಿಸಿದ, ಮಕ್ಕಳ ತಾಯಿಯಾ ತನ್ನ ಸ್ವಂತ ಆಸ್ಪತ್ರೆ ಕಟ್ಟಿದ, ಆನಂತರವೂ ತಾನು ಬಯಸಿ ಸಾಧನೆ ಮಾಡುವುದು ತಮಾಷೆಯ ಮಾತಲ್ಲ. ಅದನ್ನೆ ಸುಲೋಚನಾ ಮಾಡಿ ತೋರಿಸಿದ್ದರು.

ಈಗ್ಗೆ ನಾಲ್ಕು ವರ್ಷಗಳ ಹಿಂದೆ ಒಮ್ಮೆ ನಾ "ಡಾಕ್ಟ್ರೆ ನಿಮ್ಮ ಆತ್ಮಚರಿತ್ರೆ ಬರೆಯಿರಿ" ಎಂದು ಹೇಳಿದಾ ಅವರು "ನಾನೇನು ಮಹಾ ಸಾಧನೆ ಮಾಡಿದ್ದೇನೆ ಎಂ ಬರೆಯಲಿ? ಯಾರೋ ಮಾಡಿದ ಪ್ರಯೋಗವನ್ನು ನಾ ನನ್ನ ಆಸ್ಪತ್ರೆಯಲ್ಲಿ ಮತ್ತೊಮ್ಮೆ ಸಾಕಾರಗೊಳಿಸು ಕೆಲಸವನ್ನಷ್ಟೇ ಮಾಡಿದ್ದೇನೆ" ಎಂದು ವಿನಮ್ರವಾ ಸುಲೋಚನಾ ಅವರು ಉತ್ತರಿಸಿದ್ದರು.



ಆದರೂ ಅವರು ಪ್ರನಾಳಶಿಶುವಿನ ಬಗೆಗಿನ ಮಾಡಿ ಪ್ರಯೋಗಗಳನ್ನು ಕುರಿತ ಪುಸ್ತ ಕೆಲಸವನ್ನು ಎನ್.ಎಸ್.ಲೀ ಮುಂದುವರೆಸಿದ್ದರು. ಅದೀಗ ಅಚ್ಚ ಬಿಡುಗಡೆಗೆ ಸಿದ್ಧವಾಗುತ್ತಿರುವಾಗ ಸುಲೋಚನಾ ಅವರು ಸೆ.13ರಂ ಎದ್ದು ಹೊರಟೇಬಿಟ್ಟರು...

● ಡಾ.ವೈ.ಸಿ.ಕಮ

...ತುಮಕೂರು ಟಿವಿ ಪತ್ರಕರ್ತ ಮಂಜುನಾಥ್ ಪಾಟೀಲ್ ನಾಪತ್ತೆ

ತುಮಕೂರಿನ ಸುವರ್ಣ ನ್ಯೂಸ್ ...ಬಗಾರ ಮಂಜುನಾಥ್ ಪಾಟೀಲ ...ತ್ತೆಯಾಗಿದ್ದಾನೆ. ಮತ್ತವನನ್ನು ನ್ಯೂ... ಟೆನ್ಷನ್ ಪೊಲೀಸರು ಹುಡು...ತ್ತಾರೆ.!



...ಪೊಲೀಸರೊಬ್ಬರ ಮೇಲೆ ಹಲ್ಲೆ ...ಸಿದ ಆರೋಪ ಈತನ ಮೇಲಿದೆ. ...ದೇನು ನಡೆಯಿತೆಂಬ ಸಂಕ್ಷಿಪ್ತ ಮಾಹಿತಿ ...ದೆ.

...ಸೆಪ್ಟೆಂಬರ್ 15 ರ ರಾತ್ರಿ ತುಮಕೂರಿನ ಶಿವಕುಮಾರ ...ಮಿ ಸರ್ಕಲ್ ಹತ್ತಿರವಿರುವ ನವೀನ್ ಬಾರ್ ಅಂಡ್ ...ಸ್ಟೋರೆಂಟ್‌ನಲ್ಲಿ ಐದಾರು ಮಂದಿ ಟಿವಿ ಪತ್ರಕರ್ತರು ... ಮಂಜುನಾಥ್ ಪಾಟೀಲನೊಂದಿಗೆ ಇದ್ದರು. ಅಲ್ಲಿ ...ತ ನಡೆದಿತ್ತೆಂಬುದನ್ನೇನು ಪ್ರತ್ಯೇಕವಾಗಿ ಹೇಳುವ ...ಶ್ಯವಿಲ್ಲ ಬಿಡಿ.

...ಅದೇ ಜಾಗಕ್ಕೆ ತುಮಕೂರು ಜಿಲ್ಲಾ ರಿಸರ್ವ್ ...ಲೀಸ್‌ನ ಕಾನ್ಸ್‌ಟೇಬಲ್ ಸಂತೋಷ್ ಎಂಬುವರು ...ಯ ಊಟಕ್ಕೆ ಬಂದಿದ್ದಾರೆ. ಅವರಿಗೆ ಅವತ್ತು ಆರೋಗ್ಯ ...ಇರಲಿಲ್ಲ. ಆಗಲೇ ಒಂದೆರಡು ಟೇಬಲ್ ಪಕ್ಕದಲ್ಲಿದ್ದ ...ಜುನಾಥ್ ಪಾಟೀಲ್ ಎದ್ದು ಬಂದು ಫ್ಯಾನ್ ಹಾಕಿದ್ದಾನೆ. ...ತೋಷ್‌ಗೆ ಅದರಿಂದ ಚಳಿ ಅನ್ನಿಸಿ ಮತ್ತು ಫ್ಯಾನ್ ... ಮಂಜುನಾಥ್‌ರ ಗ್ಯಾಂಗ್ ಇದ್ದ ಟೇಬಲ್‌ವರೆಗೂ ...ಗುತ್ತಲೂ ಇರಲಿಲ್ಲವಾದ್ದರಿಂದ ಸಂತೋಷ್ ಫ್ಯಾನ್ ...ಸಲು ಕೋರಿದರಂತೆ.



...ಆದರೆ ಅಷ್ಟಕ್ಕೆ ಕೆರಳಿ ಬಿದ್ದ ...ಜುನಾಥ್ ಪಾಟೀಲ "ಸೂ...ಮಗನೆ ...ನ್ಯಾರಂತ ಗೊತ್ತೇನೋ..." ಎಂಬಿತ್ಯಾದಿ ...ಚಾಡುತ್ತಾ ಬಿಯರ್ ಬಾಟಲ್ ...ದನ್ನು ಒಡೆದು ಪೊಲೀಸ್ ...ತೋಷ್‌ರತ್ತ ಬೀಸಿದ್ದಾನೆ. ಅದು ...ತೋಷ್ ಕೈಗೆ ತಾಕಿ ದೊಡ್ಡಗಾಯವಾಗಿ, ...ಹರಿದು ರಾದ್ಧಾಂತವಾಗಿದೆ. ಆಗ ಅಲ್ಲೇ ಇದ್ದ ಅಮೋಘ್ ... ಚಾನಲ್ಲಿನ ವಿನಯ್ ಹಾಗೂ ಪ್ರಕಾಶ್ ಏಟಾಗಿದ್ದ ...ತೋಷ್‌ರನ್ನು ವಿನಾಯಕ ಆಸ್ಪತ್ರೆಗೆ ಕರೆದುಕೊಂಡು ...ಗಿ ಚಿಕಿತ್ಸೆ ಮಾಡಿಸಿ ಕಳಿಸಿದ್ದಾರೆ. ಈ ಸುದ್ದಿ ಹರಡುತ್ತಾ ...ಲ್ಲಾ ಪೊಲೀಸ್ ಮುಖ್ಯಸ್ಥ ಸುರೇಶ್‌ರಿಗೂ ಗೊತ್ತಾಗಿ ಅವರು ಕಂಪ್ಲೇಂಟ್ ನೀಡಲು ಹೇಳಿದ ಕಾರಣ ಈಗ ಹೊಸ ಬಡಾವಣೆ ಪೊಲೀಸ್ ಸ್ಟೇಷನ್ನಿನಲ್ಲಿ ಮಂಜು ನಾಥ್ ಪಾಟೀಲ್ ಅಂಡ್ ಅದರ್ಸ್ ಎಂದು ಎಂಟು ಜನರ ವಿರುದ್ಧ ಕೇಸು ದಾಖಲಾಗಿದೆ. (263/2012) ಗಾಯಗೊಂಡಿರುವ ಸಂತೋಷ್ ಕೈಗೆ 15 ಹೊಲಿಗೆ ಹಾಕಿಸಿ ಕೊಂಡು ಈಗ ರಜೆ ಹಾಕಿ ಸುಧಾರಿಸಿ ಕೊಳ್ಳುತ್ತಿದ್ದಾರೆ.

ಮಂಜುನಾಥ್ ಪಾಟೀಲ ಪೊಲೀಸರಿಗೆ ಹೆದರಿ ತಲೆಮರೆಸಿಕೊಂಡಿದ್ದಾನೆ. ಒಂದು ಕಾಲದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಬಾಗಲಕೋಟೆ ಘಟಕದಲ್ಲಿದ್ದ ಮಂಜುನಾಥ್ ಭಕ್ಷಣೆಯ ತರಬೇತಿ ಪಡೆದಿದ್ದ ಆಸಾಮಿ. ಈ ಹಿಂದೆ ಶಿಕ್ಷಕರ ಎಂಎಲ್‌ಸಿ ಚುನಾವಣಾ ಪ್ರಚಾರ ಸಮಯದಲ್ಲಿ ಜೆಡಿಎಸ್ ಕ್ಯಾಂಡಿಡೇಟ್ ಮಾಂಸದೂಟ ಅರೇಂಜ್ ಮಾಡಿದ್ದರೆಂದು ಭಾವಿಸಿ ಒಂದಿಬ್ಬರು ಕ್ಯಾಮೆರಾಮೆನ್‌ಗಳನ್ನು ಜೊತೆಗಿಟ್ಟುಕೊಂಡು "ಕನ್ರೋ ಕ್ಯಾಮರಾ, ಶೂಟ್ ಮಾಡಿ" ಎಂದು ಆವಾಜ್ ಹಾಕಿದ್ದ, ಅವರನ್ನು ಗಾಬರಿ ಗೊಳಿಸಿ ಕೊಂಚ ಹಣ ಕೀಳುವ ಉದ್ದೇಶ ಮಂಜುನಾಥನಿಗಿತ್ತು, ಆದರೆ ಅಲ್ಲಿದ್ದ ಶಿಕ್ಷಕರೆಲ್ಲ ಮಂಜುನ ಆಟಾಟೋಪ, ಹಾರಾಟ ಗಳನ್ನೆಲ್ಲಾ ನೋಡಿ ಕೆರಳಿದವರೆ ಸಮಾ ಒದೆ ಕೊಟ್ಟು ಓಡಿಸಿದ್ದರು. ಇನ್ನೊಮ್ಮೆ ಫುಡ್ ಇನ್ಸ್‌ಪೆಕ್ಟರ್ ಒಬ್ಬನನ್ನು ಲಂಚದ ಬಲೆಗೆ ಕೆಡವುವ ಪ್ಲಾನ್ ಮಾಡಿ ಅಲ್ಲೂ ಹಣ ಕೀಳಲು ಹೋಗಿ ವಿವಾದವಾಗಿತ್ತು. ಶ್ರೀ ಮಂಜುನಾಥನ ಮಹಿಮೆ, ತುಮಕೂರಿನಲ್ಲಿ ಹೀಗೆ ಸಾಗುತ್ತಿತ್ತು.

ಪ್ರತಿಯೊಬ್ಬರನ್ನು ತಾತ್ಸಾರವಾಗಿ ನೋಡುತ್ತಾ ದರ್ಪದಿಂದಿರುತ್ತಿದ್ದ ಮಂಜುನಾಥ್ ಈಗ ತಾನಾಗೇ ಮಾಡಿಕೊಂಡ ಎಡವಟ್ಟುಗಳಿಂದಾಗಿ ಪೊಲೀಸರ ಕೈಗೆ ಸಿಗದೆ ತಲೆ ಮರೆಸಿಕೊಂಡಿದ್ದಾನೆ. ಇದುವರೆಗೂ ಇವನಿಗೆ ಸಾಥ್ ಕೊಡುತ್ತಿದ್ದ ಇತರ ಪತ್ರಕರ್ತರು ಈಗಲಾದರೂ ತಮ್ಮ ವರ್ತನೆ ಬದಲಿಸಿಕೊಳ್ಳಲಿ. ಸುವರ್ಣ ಚಾನಲ್ ಮುಖ್ಯಸ್ಥರಾಗಿರುವ ವಿಶ್ವೇಶ್ವರ ಭಟ್ ಈ ಮಂಜುನಾಥನ ಇತ್ಯೋಪರಿಗಳ ಬಗ್ಗೆ ಸರಿಯಾಗಿ ವಿಚಾರಿಸಿಕೊಂಡು ಕ್ರಮ ತೆಗೆದುಕೊಳ್ಳುವುದು ಉತ್ತಮ ಎನಿಸುತ್ತದೆ.

ಮೀಡಿಯಾ ಮಸಾಲ

ಮೈಸೂರಿನ ಆಟೋ ರಾಣಿ ಬಗ್ಗೆ ಸುವರ್ಣದ ಸವಿತಾ ಕೈಲಿ ಬಿಟ್ಟದ್ದು!

ಈಗ್ಗೆ ಕೆಲ ತಿಂಗಳ ಹಿಂದೆ ಸುವರ್ಣ ಚಾನಲ್‌ನಲ್ಲಿ 'ಆಟೋರಾಣಿ ಸೌಮ್ಯ' ಎಂಬ ಒಂದು ಪ್ರೋಗ್ರಾಂ ಪ್ರಸಾರವಾಗಿತ್ತು.

ಮೈಸೂರಿನ ಸೌಮ್ಯ ಎಂಬಾಕೆ ಆಟೋ ಓಡಿಸುತ್ತಾ ಜೀವನ ನಡೆಸುತ್ತಿರುವ ಬಗ್ಗೆ ಸುವರ್ಣ ಚಾನಲ್ಲಿನ ಸವಿತಾ ಶೆಟ್ಟಿ ಆಗ ಒಂದು ಕಾರ್ಯಕ್ರಮ ಮಾಡಿದ್ದರು. ಅದು ಡಿಫರೆಂಟಾಗಿತ್ತು ಕೂಡ.

ಅದಾದನಂತರ ಸೌಮ್ಯ ಆಟೋ ಚಾಲಕಿ ಕೆಲಸ ಬಿಟ್ಟು ತನ್ನ ಓದು ಮುಂದುವರೆಸಿ ಈಗ ಮಾಸ್ ಕಮ್ಯುನಿಕೇಷನ್ ಸಹ ಮುಗಿಸಿಕೊಂಡು ಕೆಲಸ ಮಾಡುತ್ತಿದ್ದಾರೆ.

ಆದರೆ ಸವಿತಾ ಶೆಟ್ಟಿಗೆ ಅದೇನಾಯಿತೋ ಏನೋ ಇತ್ತೀಚೆಗೆ ತಿರುಗಾ ಮೈಸೂರಿಗೆ ಹೋಗಿ ಸೌಮ್ಯರನ್ನು ಹಿಡಿದಿದ್ದಾರೆ. ಆಕೆ ಈಗ ಆಟೋ ಓಡಿಸದಿದ್ದರೂ ಒತ್ತಾಯ ಮಾಡಿ ಒಂದು ಬಾಡಿಗೆ ಆಟೋ ತಂದು, ಸೌಮ್ಯಳನ್ನು ಪುನಃ ಆಟೋ ಡ್ರೈವರ್ ಥರ ತೋರಿಸಿ ಇನ್ನೊಂದು ಪ್ರೋಗ್ರಾಂ ಮಾಡಿ ತಮ್ಮ ಕ್ರಿಯೇಟಿವಿಟಿ ತೋರಿಸಿಕೊಂಡಿದ್ದಾರೆ. ಸುವರ್ಣ ಆಫೀಸಲ್ಲಿ ಈಗ ಸವಿತಾ ಶೆಟ್ಟಿಯ ಸ್ವಯಂ ರಿಮೇಕ್ ಎಪಿಸೋಡ್ ಬಗ್ಗೆ ತಮಾಷೆಯ ಮಾತು ಕೇಳಿಬರುತ್ತಿದೆ.

ಸಮಯ ಟಿವಿಲಿ ಸಮಯಕ್ಕೆ, ಸರಿಯಾಗಿ ಸಂಬಳವಿಲ್ಲ

ಬಹುತೇಕ ಕರ್ನಾಟಕದ ಜನ ಸಮಯ ಟಿವಿ ಚಾನಲ್ ಅನ್ನು ಮರೆತೇಬಿಟ್ಟಿರುವಾಗ ಅದೇ ಚಾನ್ಲಲ್‌ನಿಂದ ಸಿಬ್ಬಂದಿಯ ಸಂಬಳದ ಕೂಗು ಕೇಳಿಬರುತ್ತಿದೆ.

ಅವರಿಗೆಲ್ಲಾ ಕಳೆದ ತಿಂಗಳಿಂದ ಮಾಲೀಕರು ಸಂಬಳವನ್ನೇ ಕೊಟ್ಟಿಲ್ಲ. ಕೇಬಲ್ ಟಿವಿ ನೆಟ್‌ವರ್ಕ್‌ನವರೊಂದಿಗೆ ಎಂತದೋ ಮನಸ್ತಾಪವಾಗಿರುವುದಕ್ಕೋ ಏನೋ ಇತ್ತೀಚೆಗೆ ಸಮಯ ನ್ಯೂಸ್ ಚಾನಲ್ ಬಹುತೇಕ ಕಡೆ ವೀಕ್ಷಕರಿಗೆ ನೋಡಲು ಸಿಗುತ್ತಿಲ್ಲ. ಟಿವಿ ಮಾಲೀಕರಾಗಿರುವ ಬಿಜೆಪಿಯ ಕೆಲ ಭ್ರಷ್ಟ ರಾಜಕಾರಣಿಗಳು ಈಗ ಕೇಬಲ್‌ನವರೊಂದಿಗೆ ಮಾತಾಡಿ ಈ ಸಮಸ್ಯೆ ಬಗೆಹರಿಸಿಕೊಳ್ಳುವ ತಲೆಬಿಸಿಯಲ್ಲಿ ತಮ್ಮ ಸಿಬ್ಬಂದಿಗೆ ಸಂಬಳ ಕೊಡುವುದನ್ನೇ ಮುಂದೂಡಿರುವುದು ಅನೇಕರಲ್ಲಿ ಅನುಮಾನ ಹುಟ್ಟಿಸುತ್ತಿದೆ.

ಚಾನಲ್ ಮಾರಾಟಕ್ಕಿಟ್ಟಿದ್ದಾರಂತೆ ಎಂಬ ರೂಮರ್‌ಗೂ ಅದು ಕಾರಣವಾಗಿದೆ.

ಮತ್ತೊಂದೆಡೆ ಕಸ್ತೂರಿ ಹಾಗೂ ಜನಶ್ರೀ ಚಾನಲ್‌ನಲ್ಲೂ ಸಿಬ್ಬಂದಿಗೆ ಸಂಬಳ ಸಿಗುವುದು ಕೊಂಚ ತಡವೇ ಆಗುತ್ತಿದೆ.

ಬರುತ್ತಿರುವ ಆದಾಯಕ್ಕಿಂತ ಖರ್ಚೇ ಜಾಸ್ತಿಯಾಗುತ್ತಿರುವುದು ಹಾಗೂ ಚಾನಲ್ ಮಾಲೀಕರ ಹಣಕಾಸಿನ ಕಷ್ಟಗಳು, ತಿಜೋರಿಯ ಬೀಗದ ಕೈಗಳು ಕಾಣೆಯಾಗಿರುವುದೆಲ್ಲಾ ಇದಕ್ಕೆ ಕಾರಣವಾಗಿರಲಿಕ್ಕೂ ಸಾಕು.

ಇದನ್ನೆಲ್ಲ ಸೇರಿಸಿ ಲೆಕ್ಕ ಹಾಕಿದರೆ ಕನ್ನಡದ ಎಲೆಕ್ಟ್ರಾನಿಕ್ ಮೀಡಿಯಾದಲ್ಲಿ ಇವತ್ತು ಕನಿಷ್ಠ ಒಂದು ಸಾವಿರ ಮಂದಿ ಸಮಯಕ್ಕೆ ಸರಿಯಾಗಿ ಸಂಬಳ ಸಿಗದೆ ಪರಿತಪಿಸುತ್ತಿರುವುದು ಕಾಣುತ್ತದೆ. ಇದು ದೂರದ ಬೆಟ್ಟ ನುಣ್ಣಗೆ ಎನ್ನುವಂತಿದೆ.

● ಓಡಿ ಬಾ ಜೂಟ್

...ಹೊಲೆ-ಮಾದಿಗರ ನೋವೇ ಬಿಜೆಪಿ ಸರ್ಕಾರದ ಸಾವು

ಸದಾಶಿವ ಆಯೋಗ ವರದಿಯ ಸಂವಾದ

...ನಮ್ಮ ಸಂವಿಧಾನ ಅಸ್ಪೃಶ್ಯ ಸಮುದಾಯಗಳ 101 ...ಪಜಾತಿಗಳಿಗೆ 1950ರಲ್ಲಿನ ಜನಸಂಖ್ಯೆಯ ಪ್ರಮಾಣವನ್ನು ...ಮನದಲ್ಲಿಟ್ಟುಕೊಂಡು 15%ರ ಮೀಸಲಾತಿಯನ್ನು ...ಡಿದೆ. ಜನಸಂಖ್ಯೆಗೆ ತಕ್ಕಂತೆ ಮೀಸಲಾತಿ ಪ್ರಮಾಣ ...ಚ್ಚಿಸುವದಿರಲಿ, ಕನಿಷ್ಟ ನಿಗದಿಪಡಿಸಿದ ಮೀಸಲಾತಿಯನ್ನು ...ರ್ಹ ಫಲಾನುಭವಿಗಳಿಗೆ ಸಂಖ್ಯೆಗೆ ಅನುಗುಣವಾಗಿ ಹಂಚಿಕೆ ...ಮಾಡಿದ್ದರೂ ವಿದ್ಯೆ ಹಾಗೂ ಉದ್ಯೋಗಾವಕಾಶಗಳಲ್ಲಿ ...ಗಣನೀಯವಾದ ಬದಲಾವಣೆ ಬರುತ್ತಿತ್ತು. ಹಾಗಾಗಿದ್ದರೆ ... ತಾರತಮ್ಯ ಹೋಗಲಾಡಿಸಲು ಬಹುಶಃ 10 ವರ್ಷಗಳ ...ಮೀಸಲಾತಿ ಮುಂದುವರಿಕೆ ಸಾಕಾಗಿತ್ತು.

ಪ. ಜಾತಿಗಳ ಒಳಮೀಸಲಾತಿ ಚಳವಳಿ ಹಿನ್ನೆಲೆ

70ರ ದಶಕದಲ್ಲಿ ಆರಂಭಗೊಂಡ ದಲಿತ ಚಳವಳಿಗಳು ...ಮೀಸಲಾತಿಯ ಒಳಹಂಚಿಕೆಯ ಅಂಶಕ್ಕೆ ಗಮನಹರಿಸಲು ...ಸಾಧ್ಯವಾಗಿರಲಿಲ್ಲ, ಹೀಗಾಗಿ 1997ರಲ್ಲಿ ಆಂಧ್ರಪ್ರದೇಶದ ...ಮಾದಿಗರು ಪ್ರತ್ಯೇಕವಾಗಿ ಒಳಮೀಸಲಾತಿ ಆಂದೋಲನವನ್ನು ...ಸಂಘಟಿಸಿ ವಿರೋಚಿತ ಹೋರಾಟವನ್ನು ನಡೆಸಿದ ಪರಿಣಾಮ ...ನೇಮಕಗೊಂಡ ಜಸ್ಟೀಸ್ ರಾಮಚಂದ್ರರಾಜು ಆಯೋಗದ ...ಶಿಫಾರಸ್ಸುಗಳನ್ನು ಆಂಧ್ರ ಸರ್ಕಾರ ಅನುಷ್ಠಾನಗೊಳಿಸಲು ...ಮುಂದಾಯಿತು. ಆದರೆ ವಿದ್ಯೆ ಹಾಗೂ ಉದ್ಯೋಗಾವ...ಕಾಶಗಳಲ್ಲಿ ತಮ್ಮ ಪಾಲು ಕಡಿತಗೊಳ್ಳಬಹುದೆಂಬ ...ಭಯದಿಂದ ಮಾಲ ಸಮುದಾಯವು ನ್ಯಾಯಾಲಯದ ...ಮೊರೆ ಹೋಗಿರುವುದರಿಂದ ಒಳಮೀಸಲಾತಿ ಪ್ರಕ್ರಿಯೆಗೆ ...ತಾತ್ಕಾಲಿಕವಾಗಿ ಹಿನ್ನಡೆಯಾಗಿದೆ.

ಆಂಧ್ರಪ್ರದೇಶದ ಪ. ಜಾತಿ ಪಟ್ಟಿಯಲ್ಲಿ ಕೇವಲ ...ಲ, ಮಾದಿಗ ಸಂಬಂಧಿತ 58 ಉಪಜಾತಿ ...ಗಳಿರುವುದರಿಂದ ಮಾದಿಗರಿಗೆ 7%, ಮಾಲ 6%, ... ಆಂಧ್ರ 1% ಹಾಗೂ ರೆಲ್ಲಿ(ಮೆಹತಾರ್) 1% ...ತ ವರ್ಗೀಕರಿಸಲಾಗಿದೆ. ಇದ್ದದ್ದರಲ್ಲೇ ಆರ್ಥಿಕವಾಗಿ ...ಮಾದಿಗ ಸಮುದಾಯಕ್ಕಿಂತ ಪ್ರಬಲವಾಗಿರುವ ಮಾಲ ...ಜನಾಂಗ ವಿದ್ಯೆ ಹಾಗೂ ಉದ್ಯೋಗಗಳಲ್ಲಿ ಹೆಚ್ಚು ಪ್ರಾತಿನಿಧ್ಯ ...ಪಡೆದಿರುವ ಕಾರಣ ಮೀಸಲು ವರ್ಗೀಕರಣವನ್ನು ತೀವ್ರವಾಗಿ ...ವಿರೋಧಿಸುತ್ತಿದೆ. ಆಂಧ್ರದಲ್ಲಿ ಬೋವಿ, ಲಂಬಾಣಿ, ಕೊರಚ, ...ಕೊರಮ ಜನಾಂಗಗಳು ಎಸ್.ಟಿ. ಪಟ್ಟಿಯಲ್ಲಿ ಬರುವುದರಿಂದ ಒಳಮೀಸಲಾತಿ ವಿಚಾರಕ್ಕೆ ತಲೆಹಾಕಲಿಲ್ಲ. ಈ ಜನಾಂಗಗಳು ಕರ್ನಾಟಕದಲ್ಲಿ ಪ.ಜಾತಿ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದರಿಂದ ಆಂಧ್ರದಲ್ಲಿ ಮಾಲ ಸಮುದಾಯದ ಪಾತ್ರವನ್ನು ಈ ಮೇಲಿನ ಸ್ಪೃಶ್ಯ ಜನಾಂಗಗಳು ಕೈಗೆತ್ತಿಕೊಂಡಿವೆ.

ಈ ಎಲ್ಲಾ ಸೂಕ್ಷ್ಮತೆಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡಿದ ಸನ್ಮಾನ್ಯ ಸದಾಶಿವರವರು ಮಾದಿಗ ಹಾಗೂ ಛಲವಾದಿ ಸಂಬಂಧಿತ ಉಪಜಾತಿಗಳಾದ ಸಮಗಾರ, ಮೋಚಿ, ಡೋಹಾರ್, ಡಕ್ಕಲಿಗ, ಮೆಹತಾರ್, ಮಾಲದಾಸರು, ಚನ್ನದಾಸರು, ಬೇಗಾರ ಹಾಗೂ ಹೊಲೆಯ ಇತ್ಯಾದಿ ಜಾತಿಗಳಿಗೆ 11% ನಿಗದಿಪಡಿಸಿದರೆ ಜಾತಿಯನ್ನು ಬಹಿರಂಗವಾಗಿ ಹೇಳಿಕೊಳ್ಳದ ಅಸ್ಪೃಶ್ಯರಿಗೆ 1%ನ್ನೂ, ಸದ್ಯ ಪ.ಜಾತಿ ಪಟ್ಟಿಯಲ್ಲಿರುವ ಸ್ಪೃಶ್ಯ ಜಾತಿಗಳಿಗೆ 3% ನಿಗದಿಪಡಿಸಿದ್ದಾರೆ. ಸಹಜ ನ್ಯಾಯದ ಇಂಥಾ ಶಿಫಾರಸ್ಸುಗಳನ್ನು ಅವೈಜ್ಞಾನಿಕ ಎನ್ನುವುದಾಗಲಿ, ಯಾವುದೋ ಜಾತಿಯ ಒತ್ತಡಕ್ಕೆ ಮಣಿದಿದ್ದಾರೆ ಎನ್ನುವುದಾಗಲಿ ಸತ್ಯಕ್ಕೆ ದೂರವಾದ ಸಂಗತಿ.




1997ರಿಂದ ಮಾದಿಗರು ನಡೆಸಿದ ಅವಿಶ್ರಾಂತ ಹೋರಾಟದ ಪರಿಣಾಮ 2004ರಲ್ಲಿ ಕಾಂಗ್ರೆಸ್ ಸರ್ಕಾರ ಆಯೋಗವನ್ನು ನೇಮಕ ಮಾಡಿದರೂ, 6 ವರ್ಷಗಳ ಕಾಲ ಅಗತ್ಯ ಹಣಕಾಸು ನೀಡದೆ ಕಡೆಗಣಿಸಲಾಯಿತು. ಸಂಘಟನೆಗಳ ನಿರಂತರ ಒತ್ತಡದಿಂದ 2010ರಲ್ಲಿ ಬಿ.ಜೆ.ಪಿ. ಸರ್ಕಾರ ಒಲ್ಲದ ಮನಸ್ಸಿನಿಂದ ಹಣಕಾಸು ಒದಗಿಸಿದ್ದು, ಈಗ ಆಯೋಗದ ವರದಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಜುಲೈ ತಿಂಗಳಲ್ಲಿ ನಡೆದ ವಿಧಾನಸಭಾ ಅಧಿವೇಶನದಲ್ಲಿ ಅಂಗೀಕಾರವಾಗಬಹುದೆಂಬ ಅಸ್ಪೃಶ್ಯರ ಮಹದಾಶೆಗೆ ಸ್ಪೃಶ್ಯ ಜಾತಿಗಳ ಪ್ರಭಾವಿ ರಾಜಕಾರಣಿಗಳ ಒತ್ತಡ ಮುಳ್ಳಾಗಿ ಪರಿಣಮಿಸಿದೆ. ಬಿ.ಜೆ.ಪಿ.ಯು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಒಳಮೀಸಲಾತಿ ಅನುಷ್ಠಾನಗೊಳಿಸುವ ಆಶ್ವಾಸನೆಯನ್ನು ಅನಿರ್ದಿಷ್ಟವಾಗಿ ಮುಂದೂಡಿದೆ. ಮತ್ತೊಂದೆಡೆ ಸಚಿವ ಅರವಿಂದ ಲಿಂಬಾವಳಿ, ಮಾನಪ್ಪ ವಜ್ಜಲ್, ವಲ್ಯಾಪುರನಂತಹ ರಾಜಕಾರಣಿಗಳು ಆಯೋಗದ ವರದಿ ಸಲ್ಲಿಕೆಯಾದ ಮರುದಿನದಿಂದಲೇ ಬಹಿರಂಗವಾಗಿ ಟೀಕಿಸುತ್ತಾ ಬೃಹತ್ ರ‍್ಯಾಲಿಗಳನ್ನು ಆಯೋಜಿಸುತ್ತಾ ಹಂಚಿ ತಿನ್ನುವ ಅಸ್ಪೃಶ್ಯ ಸಮಾಜದಲ್ಲಿ ಪರಸ್ಪರರನ್ನು ಎತ್ತಿಕಟ್ಟುವ ಕೃತ್ಯಕ್ಕೆ ಮುಂದಾಗಿದ್ದಾರೆ.

ಆಳುವ ಸರ್ಕಾರಗಳ ಇಬ್ಬಗೆಯ ನೀತಿ


ಆಯೋಗದ ನೇಮಕಕ್ಕೆ ಕಾರಣವಾದ ಕಾಂಗ್ರೆಸ್ ಪಕ್ಷದ ವಿರುದ್ಧವೇ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಪರಮೇಶ್ವರ್‌ರವರು ಹಾಗೂ ವಿಧಾನ ಪರಿಷತ್ ಮಾಜಿ ವಿರೋಧ ಪಕ್ಷದ ನಾಯಕಿಯಾದ ಮೋಟಮ್ಮ ಜಾತಿಯ ಚೌಕಟ್ಟಿಗೆ ಸಿಕ್ಕು ಆಯೋಗದ ನೇಮಕವೇ ತಪ್ಪೆಂದು ಪಕ್ಷ ಹಾಗೂ ಸಂವಿಧಾನದ ವಿರುದ್ಧ ಹರಿಹಾಯ್ದರೆ, ಜಾತ್ಯತೀತ ಜನತಾದಳ ಚುನಾವಣಾ ಪ್ರಣಾಳಿಕೆಗೆ ಮಾತ್ರ ಸೀಮಿತವಾಗಿ ತನ್ನ ಸಾಮಾಜಿಕ ಜವಾಬ್ದಾರಿಯಿಂದ ನುಣುಚಿಕೊಂಡಿರುವ ಸತ್ಯ ಮಾದಿಗ ಸಮುದಾಯಕ್ಕೆ ಮನವರಿಕೆಯಾಗಿದೆ.

ಉತ್ತರ ಕರ್ನಾಟಕದಲ್ಲಿ ಮಾದಿಗ ಛಲವಾದಿಗಳ ಬಹುತೇಕ ಸವಲತ್ತುಗಳನ್ನು ಸ್ಪೃಶ್ಯ ಜಾತಿಗಳೆನಿಸಿಕೊಂಡ ಬೋವಿ, ಲಂಬಾಣಿಗಳು ಕಬಳಿಸಿರುವುದರಿಂದ ಗಾಯಗೊಂಡ ಎರಡು ಸಮುದಾಯಗಳು ಒಂದೇ ವೇದಿಕೆಯಡಿ ಐಕ್ಯವಾಗುತ್ತಿವೆ. ಮೈಸೂರು ಭಾಗದಲ್ಲಿ ಕಡಿಮೆ ಸಂಖ್ಯೆಯಿರುವ ಬೋವಿ, ಲಂಬಾಣಿಗಳ ಪ್ರತಿಸ್ಪರ್ಧೆ ಅಷ್ಟೇನು ಇಲ್ಲದಿರುವುದರಿಂದ ಒಳಮೀಸಲಾತಿ ಪರ ನಿಲುವು ತೆಗೆದುಕೊಳ್ಳಲು ಅವರಿಗೆ ಸಾಧ್ಯವಾಗುತ್ತಿಲ್ಲ. ಹಾಗೆಯೇ ಮೇಲ್ಜಾತಿ ಪಟ್ಟಭದ್ರ ಹಿತಾಸಕ್ತಿಗಳು ಓಟ್ ಬ್ಯಾಂಕ್‌ನ ವಕ್ರದೃಷ್ಟಿಯಿಂದ ಸ್ಪೃಶ್ಯಜಾತಿಗಳನ್ನೇ ಓಲೈಸುತ್ತಿವೆ. ಆಳುವ ಹಾಗೂ ವಿರೋಧ ಪಕ್ಷಗಳ ಇಬ್ಬಗೆಯ ಧೋರಣೆಯ ವಿರುದ್ಧ ಉತ್ತರ ಕರ್ನಾಟಕದ ಪ್ರತಿ ಜಿಲ್ಲೆಯಲ್ಲೂ ಕಳೆದ 2 ತಿಂಗಳುಗಳಿಂದ 30-40 ಸಾವಿರ ಸಂಖ್ಯೆಯ ಬೃಹತ್ ಸಮಾವೇಶಗಳನ್ನು ನಡೆಸಿವೆ. ಮುಂದಿನ ನವೆಂಬರ್ ತಿಂಗಳಲ್ಲಿ ರಾಜಧಾನಿ ಕೇಂದ್ರಕ್ಕೆ ಲಗ್ಗೆ ಹಾಕಲು ತೀರ್ಮಾನಿಸಿವೆ. ಬಿ.ಜೆ.ಪಿ. ಸರ್ಕಾರವು ಮುಂದಿನ ಹಾಗೂ ಕೊನೆಯ ಅಧಿವೇಶನದಲ್ಲಿ ಸದಾಶಿವರವರ ಶಿಫಾರಸ್ಸುಗಳನ್ನು ಅಂಗೀಕರಿಸದಿದ್ದಲ್ಲಿ "ಹೊಲೆ ಮಾದಿಗರ ನೋವೇ ಬಿ.ಜೆ.ಪಿ. ಸರ್ಕಾರದ ಸಾವು" ಎಂಬ ಘೋಷಣೆಯಡಿ ಕರ್ನಾಟಕದ ಮಾದಿಗ ಛಲವಾದಿ ಸಮುದಾಯಗಳು ಸೇರಿದಂತೆ ಮೋಚಿ, ಸಮಗಾರ, ಡೋಹಾರ್, ಡಕ್ಕಲಿಗ, ಮೆಹತಾರ್, ಮಾಲದಾಸರು, ಚನ್ನದಾಸರು, ಬೇಗಾರ ಹಾಗೂ ಹೊಲೆಯ ಸಮುದಾಯಗಳು ಹೋರಾಟಕ್ಕೆ ಸನ್ನದ್ಧರಾಗಿವೆ.



● [illegible]

ರೌಡಿ ಆನೆಯೊಂದಿಗೆ ಮುಖಾಮುಖಿ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಭೈರನ ಎಚ್ಚರಿಕೆಯನ್ನು ಕೇಳಿದ ಮೇಲೂ ನಾವು ಚಾರಣವನ್ನು ಮುಂದುವರೆಸಲು ತೀರ್ಮಾನಿಸಿದ್ದೆವು. ಚೀಲಕ್ಕೆ ತುಂಬಿದ್ದ ಹೆಬ್ಬಾವು ಭದ್ರವಾಗಿದೆಯೆಂದು ಖಾತ್ರಿ ಮಾಡಿಕೊಳ್ಳುತ್ತಾ ನಾನು ಕಿಟ್‌ಬ್ಯಾಗ್‌ನ್ನು ಹೆಗಲಿಗೇರಿಸಿದೆ. ನಮ್ಮ ಹಟವನ್ನು ನೋಡಿದ ಭೈರ ತಾನೂ ಬೆಳಗಾಗುವವರೆಗೆ ನಮ್ಮ ಜೊತೆಗಿದ್ದು ತನ್ನಿಂದ ಸಾಧ್ಯವಾದ ರಕ್ಷಣೆಯನ್ನು ನಮಗೆ ನೀಡುತ್ತೇನೆ ಎಂದು ಹೊರಟುನಿಂತ.

ಆಗ ರಾತ್ರಿ ಎರಡು ಗಂಟೆ. ಚಳಿ ತೀವ್ರವಾಗಿತ್ತು. ನಮ್ಮ ಹಾಜರಿಯನ್ನು ಗಮನಿಸಿದ ಹುಂಜ, ಕಾಡುಬೆಕ್ಕು ಮುಂತಾದ ಪ್ರಾಣಿಗಳೆಲ್ಲಾ ತಮ್ಮ ಸಮಯಬದ್ಧ ಕೂಗುವಿಕೆಯನ್ನು ಮುಂದುವರೆಸಿದ್ದವು.

ನಾವು ಅರ್ಧ ಮೈಲಿಯಷ್ಟು ನಡೆದಿರಬಹುದು. ಇದ್ದಕ್ಕಿದ್ದಂತೆ ಭೈರ ನನ್ನನ್ನು ಕೈಹಿಡಿದು ನಿಲ್ಲಿಸಿ ಟಾರ್ಚ್ ಆರಿಸಿದ. ಇಡೀ ಕಾಡು ನಮ್ಮನ್ನು ಸುತ್ತುವರೆದ ತಳವೇ ಇಲ್ಲದ ಕತ್ತಲಿನ ಕುಣಿಯಂತಿತ್ತು. ಬರೀ ನಕ್ಷತ್ರಗಳ ಬೆಳಕಿನಲ್ಲಿ ನಮ್ಮಿಂದ ಕೆಲವು ಅಡಿ ದೂರ ಮಾತ್ರ ನೋಡಬಲ್ಲವರಾಗಿದ್ದೆವು.

ನಾನು ಭೈರನನ್ನು ಪ್ರಶ್ನಾರ್ಥಕವಾಗಿ ನೋಡಿದೆ. ಅವನು ಆನೆ ಎಂದು ಕೈಸನ್ನೆ ಮಾಡಿ ತೋರಿದ. ಆನೆಗಳು ಹತ್ತಿರವಿದ್ದಾಗ ಬರುವ ವಾಸನೆಯನ್ನು ಭೈರ ಗುರುತಿಸಿದ್ದ ಅವನು ಮಾತನಾಡದಿದ್ದ ಮೇಲೆ ಆನೆ ಅತಿ ಹತ್ತಿರದಲ್ಲಿರಬೇಕು ಎಂದು ನಾನು ತಿಳಿದುಕೊಂಡೆ. ನಾನು ತಲೆಯನ್ನು ಎಲ್ಲಾ ಕಡೆ ತಿರುಗಿಸಿ ದೀರ್ಘವಾಗಿ ಉಸಿರೆಳೆದು ವಾಸನೆ ಹಿಡಿಯಲು ಯತ್ನಿಸಿದೆ. ಒಂದು ರೀತಿಯ ವಿಶಿಷ್ಟ ವಾಸನೆ ಬಂದಂತೆ ಅನ್ನಿಸಿತು ಅಥವಾ ಇದು ನನ್ನ ಊಹೆಯಾಗಿತ್ತು!



ಕಾಡಿನ ನಿಶ್ಯಬ್ದವಾದ ರಾತ್ರಿಯಲ್ಲಿ ತಂಗಾಳಿಯೂ ಬೀಸುತ್ತಿರಲಿಲ್ಲ. ಹಾಗಾಗಿ ಆನೆ ನಮ್ಮ ವಾಸನೆ ಹಿಡಿದಿರಲು ಸಾಧ್ಯವಿಲ್ಲ, ಆದರೂ ನಾವು ಮುಂದೆ ಅಡಿಯಿಡಲು ಪ್ರಾರಂಭಿಸಿದರೆ ಅದು ನಮ್ಮನ್ನು ಶಬ್ದದಿಂದ ಪತ್ತೆಹಚ್ಚಬಹುದಿತ್ತು. ಭೈರನೂ ನನ್ನಂತೆಯೇ ಯೋಚಿಸುತ್ತಿದ್ದಿರಬೇಕು. ಹಾಗಾಗಿ ನಿಶ್ಚಲವಾಗಿರಬೇಕೆಂದು ಸೂಚಿಸಿದ.

ಸಮಯ ಉರುಳಿದಂತೆ ನಮಗೆ ಯಾವುದೇ ಶಬ್ದ ಕೇಳಲಿಲ್ಲ. ಬಹುಶಃ ಭೈರನ ಲೆಕ್ಕಾಚಾರ ತಪ್ಪಿರಬೇಕು ಎಂದುಕೊಳ್ಳುವಷ್ಟರಲ್ಲಿ ಕಾಡಿನ ಮೌನವನ್ನು ಬೇಧಿಸುತ್ತಾ ಆನೆಯ ನಡಿಗೆಯ ಸದ್ದು ಕೇಳಿಸಿತು. ಅದು ನಮ್ಮ ಕಾಲುದಾರಿಯ ಹತ್ತಿರದ ಗಿಡಗಂಟೆಗಳ ಮರೆಯಲ್ಲಿದ್ದು ಯಾವ ಕ್ಷಣದಲ್ಲಾದರೂ ನಮ್ಮ ದಾರಿಗೆ ಅಡ್ಡವಾಗಬಹುದಿತ್ತು. ಭೈರ ನಾವು ಹಿಂತಿರುಗಬೇಕೆಂದು ಸೂಚಿಸುತ್ತಾ ತಾನೇ ಮುಂದಾಗಿ ಓಡತೊಡಗಿದ. ನಮ್ಮ ದುರಾದೃಷ್ಟಕ್ಕೆ ಆಗಷ್ಟೇ ಬೀಸಲು ಶುರುವಾದ ಗಾಳಿ ನಮ್ಮ ವಾಸನೆಯನ್ನು ಆನೆಗೆ ತಲುಪಿಸಿತ್ತು.

ಮರುಕ್ಷಣದಲ್ಲಿಯೇ ಆನೆ ಗಿಡಗಂಟೆಗಳಲ್ಲಿ ದಾರಿ ಮಾಡಿಕೊಂಡು ಕಾಲುದಾರಿಗೆ ಬಂದು ನಿಂತಿತು. ನಾವು ಹಿಂತಿರುಗಿ ನೋಡಿದೆವು. ಕಪ್ಪಾದ ದೊಡ್ಡ ಬಂಡೆಯಂತಹ ದೇಹದಲ್ಲಿ ಎರಡು ಉದ್ದ ಬಿಳಿಯ ದಂತಗಳು. ಹೌದು ಭೈರ ಹೇಳುತ್ತಿದ್ದ ರೌಡಿ ಸಲಗ ಇದೇ!

ನಾವು ಓಡಿ ತಪ್ಪಿಸಿಕೊಳ್ಳುವುದು ಸಾಧ್ಯವೇ ಇರಲಿಲ್ಲ. ಆ ಘೋರ ಕತ್ತಲಿನಲ್ಲಿ ಕಾಲುಹಾದಿಯ ಪಕ್ಕದ ಸಸ್ಯರಾಶಿಯಲ್ಲಿ ಅಡಗಿಕೊಳ್ಳುವುದೂ ಆಗದ ಮಾತು. ಆನೆ ನಮ್ಮನ್ನು ತುಳಿದು ಪಚಡಿ ಮಾಡುವುದು ಖಾತ್ರಿ. ಬಹುಶಃ ಭೈರನೊಬ್ಬ ಬದುಕುಳಿಯಬಲ್ಲ- ನಮ್ಮ ದುರಂತ ಅಂತ್ಯದ ಕಥೆ ಹೇಳಲು.

ನಮಗಿದ್ದುದ್ದು ಒಂದೇ ದಾರಿ, ಅದೂ ಕ್ಷುಲ್ಲಕವಾದದ್ದು. ನಾನು ನನ್ನ ಟಾರ್ಚ್‌ನ್ನು ಹತ್ತಿಸಿ ಬೆಳಕನ್ನು ಆನೆಯ ಕಣ್ಣಿಗೆ ಕೇಂದ್ರೀಕರಿಸಿ ಗಂಟಲು ಹರಿಯುವಂತೆ ಕೂಗಿಕೊಳ್ಳತೊಡಗಿದೆ! ನಮ್ಮಿಂದ ಹತ್ತೇ ಅಡಿ ದೂರವಿದ್ದ ಆನೆ ಸೊಂಡಿಲನ್ನು ಮಡಿಸಿ, ತಲೆಯೆತ್ತಿ, ಅರೆತೆರೆದ ಬಾಯಿಯಿಂದ ನಮ್ಮತ್ತ ನೋಡುತ್ತಿದ್ದರೂ ನನ್ನ ವಿಚಿತ್ರ ಕ್ರಿಯೆಯಿಂದ ಕಂಗಾಲಾಗಿ, ಮುಂದೆ ಬರುತ್ತಾ ಇರಲಿಲ್ಲ. ಆನೆ ಸಿಟ್ಟಿನಿಂದ ನೆಲವನ್ನು ಮುಂಗಾಲುಗಳಿಂದ ಬಡಿದು ಧೂಳೆಬ್ಬಿಸಿತು. ಭೈರನೂ ನನ್ನ ಜೊತೆ ಸೇರಿ ಕೂಗತೊಡಗಿದ. ನನ್ನ ಕೂಗು ಶಬ್ದಗಳನ್ನು ಪಡೆದುಕೊಂಡು ಆನೆಯ, ಮತ್ತದರ ವಂಶವನ್ನೆಲ್ಲಾ ಶಪಿಸತೊಡಗಿದೆ!

ಇದಾವುದರ ಪರಿವೆಯೇ ಇಲ್ಲದೆ ಎರಿಕ್ ಕುಂದಿಗೆ ಕಾಲು ಕೊಟ್ಟು ಓಟ ಮುಂದುವರೆಸಿಬಿಟ್ಟಿದ್ದ. ಜೀವನ್ಮರಣದ ಮಧ್ಯೆ ಇದ್ದ ನಾನು, ಭೈರನ ಎಚ್ಚರಿಕೆಯನ್ನು ನೆನೆಪಿಸಿಕೊಂಡೆ. ಆದರೇನು ಮಾಡಲು ಸಾಧ್ಯ ಪರಿಸ್ಥಿತಿ ಕೈಮೀರಿತ್ತು.

ಆ ದೈತ್ಯ ದೇಹಿ, ತಲೆಯನ್ನು ಅಲ್ಲಾಡಿಸುತ್ತಾ ಟಾರ್ಚ್‌ನ ಬೆಳಕು ಕಣ್ಣಿಗೆ ಬೀಳುವುದನ್ನು ತಪ್ಪಿಸಲು ಯತ್ನಿಸುತ್ತಿತ್ತು. ನಾನು ಟಾರ್ಚ್‌ನ್ನು ಅದೇ ದಿಕ್ಕಿನಲ್ಲಿ ಅಲ್ಲಾಡಿಸುತ್ತಾ ಬೆಳಕು ಅದರ ಕಣ್ಣಿಗೇ ಬೀಳುವಂತೆ ಮಾಡುತ್ತಿದ್ದೆ. ಜೊತೆಗೆ ಅರಚಾಟವನ್ನೂ ಮುಂದುವರೆಸಿದ್ದೆ. ಆನೆ ಮುಂದೆ ಬರದೆ ಅಲ್ಲೇ ನಿಂತಿತ್ತು. ನಾನು ಕೊನೆಯ ಪ್ರಯತ್ನವನ್ನು ಮಾಡಲು ನಿರ್ಧರಿಸಿದೆ. ಟಾರ್ಚ್‌ನ್ನು ಅದರ ತೀಕ್ಷ್ಣ ಕಣ್ಣಿಗೇ ಹಿಡಿದು ಕೂಗಾಡುತ್ತಾ ಮುಂದಡಿಯಿಟ್ಟೆ! ನನ್ನ ಪ್ರಯತ್ನ ಫಲಿಸಿತು. ಆನೆ ಧೈರ್ಯಗುಂದಿದಂತೆ ಕಂಡಿತು. ನಿಧಾನವಾಗಿ ತನ್ನ ದೇಹವನ್ನು ಹಿಂತಿರುಗಿಸಿ ನಡೆಯತೊಡಗಿತು. ಇದೇ ಅವಕಾಶಕ್ಕೆ ಕಾದಿದ್ದ ನಾವು ಮತ್ತೆ ಅರಚಾಡುತ್ತಾ ಆನೆಯನ್ನು ಬೆನ್ನು ಹತ್ತಿದೆವು. ಎದುರಿಗೆ ಬಂದವುಗಳನ್ನೆಲ್ಲ ಪುಡಿಪುಡಿ ಮಾಡುವುದಕ್ಕೆ ಒಗ್ಗಿದ್ದ ಆನೆಗೆ ಇದು ಬಹುಶಃ ಪ್ರಥಮವಾದ ಸೋಲಿರಬೇಕು.

ಸ್ವಲ್ಪ ದೂರ ಹೋದ ನಾನು ಮತ್ತು ಭೈರ ಹಿಂತಿರುಗಿ ನಡೆಯತೊಡಗಿದೆವು. ನಾವು ಓಡಿದ್ದರೆ ನಮ್ಮ ಭಯವನ್ನು ಗುರುತಿಸಿ ಆನೆ ಮತ್ತೆ ನಮ್ಮನ್ನು ಬೆನ್ನು ಹತ್ತಬಹುದಿತ್ತು. ಇದೆಲ್ಲದರ ಮಧ್ಯೆ ಎರಿಕ್‌ನ ಪತ್ತೆಯೇ ಇರಲಿಲ್ಲ. ನಾವು ಕೆಂಪೆಕೆರೈಗೆ ಹೋಗಬೇಕಾದ ತಿರುವನ್ನು ಗುರುತಿಸದೆ ಎರಿಕ್ ಸೀದಾ ಹೋಗಿಬಿಟ್ಟಿರಬೇಕು. ಭೈರ ಅವನನ್ನು ಹುಡುಕಿ ತರಲು ಹೊರಟ. ನನಗೆ ವಾಂತಿ ಬರುವಂತಾಗಿ ಬೆವರಿನಿಂದ ತೋಯ್ದಿದ್ದರೂ ಆನೆಯ ಭಯದಿಂದ ನಿಲ್ಲುವಂತಿರಲಿಲ್ಲ. ಅಂತೂ ಕೆಂಪೆಕೆರೈ ತಲುಪಿ ಚೀಲವನ್ನು ಬಿಸಾಕಿ ಧೊಪ್ಪನೆ ಕುಸಿದೆ. ಸ್ವಲ್ಪ ಹೊತ್ತಿನಲ್ಲಿ ಭೈರ ಎರಿಕ್‌ನನ್ನು ಹುಡುಕಿ ಕರೆತಂದ. ಆನೆ ನಮ್ಮಿಬ್ಬರ ಕಥೆ ಮುಗಿಸಿದೆ ಎಂದುಕೊಂಡಿದ್ದ ಎರಿಕ್ ನಾಗಾಲೋಟದಲ್ಲಿ ಓಡಿಹೋಗಿದ್ದ.

ಮುಂದಿನ ಚಾರಣದ ಯೋಜನೆ

ಈ ಎಲ್ಲಾ ಘಟನೆಗಳಿಂದ ಭೈರ ವಿಚಲಿತನಾದಂತೆ ಕಾಣಲಿಲ್ಲ ಯಾಕೆಂದರೆ ಅವನಿಗೆ ಇವೆಲ್ಲಾ ಕಾಡಿನಲ್ಲಿ ನಿತ್ಯಜೀವನದ ಅನಿವಾರ್ಯತೆಯಾಗಿತ್ತು. ಪೂರ್ಣ ದಣಿದಿದ್ದ ನಾನು ಅಲ್ಲೇ ಮಣ್ಣಿನಲ್ಲೇ ಮಲಗಿಬಿಟ್ಟೆ. ಎಚ್ಚರವಾದಾಗ ಸೂರ್ಯ ಪ್ರಖರವಾಗಿ ಬೆಳಗುತ್ತಿದ್ದ. ಪಕ್ಕದಲ್ಲೇ ಎರಿಕ್ ಮತ್ತು ಭೈರ ಇಬ್ಬರೂ ಗೊರಕೆ ಹೊಡೆಯುತ್ತಿದ್ದರು. ಚಳಿ ಕೊರೆಯುತ್ತಿತ್ತು. ಬೆಳಗ್ಗೆ ಎದ್ದ ತಕ್ಷಣ ನಮ್ಮ ಸುಪ್ತ ಮನಸ್ಸು ಸ್ವಚ್ಛವಾಗಿದ್ದು ಚಿಂತನೆಗಳು ಹೊಸ ರೂಪ ಪಡೆದುಕೊಂಡಿರುತ್ತವೆ. ಇವೆಲ್ಲಾ ಕೆಲವೇ ಹೊತ್ತಿನಲ್ಲಿ ಮಾಸಿ ಮನುಷ್ಯ ತನ್ನ ಹಳೆಯ ಚಿಂತನೆಗಳಿಗೆ ಶರಣಾಗುತ್ತಾನೆ. ಹಾಗಾಗಿ ಎದ್ದ ತಕ್ಷಣದ ಚಿಂತನೆಗಳಿಗೆ ರೂಪ ಕೊಟ್ಟರೆ ಏನಾದರೂ ಸಾಧಿಸಲು ಸಾಧ್ಯ ಎಂದು ಎಲ್ಲೋ ಓದಿನ ನೆನಪು.

ನಾನು ಎರಿಕ್‌ನನ್ನು ಎಬ್ಬಿಸಿಕೊಂಡು ಹಳ್ಳದಲ್ಲಿ ಸ್ನಾನಕ್ಕೆ ಹೋದೆ. ಇಂತಹ ಚಳಿಯಲ್ಲಿಯೂ ಬೆಟ್ಟದಿಂದ ಹರಿದುಬರುವ ನೀರಿನಲ್ಲಿನ ಸ್ನಾನ ನಮ್ಮ ಮಿದುಳು ಮತ್ತು ದೇಹಗಳಿಗೆ ಹೊಸ ಚೈತನ್ಯ ನೀಡಿತು. ಹಿಂತಿರುಗಿ ಬರುವಷ್ಟರಲ್ಲಿ ಭೈರ ಟೀಯನ್ನೇನೋ ತಯಾರಿಸಿದ್ದ ಆದರೆ ಅರ್ಧಕ್ಕೂ ಹೆಚ್ಚನ್ನು ಕುಡಿದೇ ಬಿಟ್ಟಿದ್ದ. ತನಗೆ ಜ್ವರ ಬಂದಂತೆ ಇತ್ತೆಂದೂ ಮತ್ತು ಜ್ವರಕ್ಕೆ ಟೀ ಒಳ್ಳೆಯ ಔಷಧಿಯೆಂದು ನಾನು ಹಿಂದೆ ಹೇಳಿದ್ದೆನೆಂದೂ ಸುಳ್ಳು ಸಮಜಾಯಿಷಿ ಕೂಡ ನೀಡಿದ! ನಾವು ಉಳಿದ ಟೀ ಮತ್ತು ನಮ್ಮ ಚೀಲದಲ್ಲಿದ್ದ ತಂಗಳು ತಿಂಡಿಯನ್ನು ತಿಂದೆವು.

ನಾವು ಇಡೀ ಹಗಲು ನಿದ್ದೆ ಮಾಡಿ ರಾತ್ರಿ ನಮ್ಮ ಚಾರಣವನ್ನು ಮುಂದುವರೆಸಿ ಮಧ್ಯರಾತ್ರಿಯ ಹೊತ್ತಿಗೆ ಚಿನಾರ್ ನದಿ ಹಳ್ಳ ಸೇರುವ ಜಾಗವನ್ನು ಸೇರಬೇಕು; ನಂತರ ಬೆಳಗಿನವರೆಗೆ ನಿದ್ರಿಸಿ ಮರುದಿನ ಹಗಲಿನಲ್ಲಿ ಹಿಂತಿರುಗಿ ಅಯ್ಯೂರಿನ ಅತಿಥಿ ಗೃಹ ಸೇರಬೇಕು-ಎನ್ನುವ ನನ್ನ ಮುಂದಿನ ಯೋಜನೆಯನ್ನು ಭೈರನಿಗೆ ವಿವರಿಸಿದೆ, ಅಲ್ಲಿನ ಪೂಜಾರಿಗಳು ಅದನ್ನು ವಿರೋಧಿಸಿದರು. ಹಗಲು ಆನೆಗ ತಂಪಿನಲ್ಲಿ ವಿರಮಿಸುತ್ತವೆ; ಆದ್ದರಿಂದ ನಾವು ಮಧ್ಯಾಹ್ನ ಎರಡಕ್ಕೆ ಹೊರ ಕತ್ತಲಾಗುವಷ್ಟರಲ್ಲಿ ಈ ಆನೆಗಳ ವಲಯದಿಂದ ದೂರ ಹೋಗಬೇಕು- ಎನ್ನುವ ಅವರ ಸಲಹೆಯಾಗಿತ್ತು. ಇಲ್ಲೂ ಅಪಾಯವಿದ್ದರೂ ಬಹಳ ಕಡಿಮೆ ಮಟ್ಟದ್ದಾಗಿ ಹಾಗೆ ಮಾಡದೆ ಮತ್ತೆ ರಾತ್ರಿ ಚಾರಣ ಕೈಗೊಂಡರೆ ನಾವು ಪದೇ ಪ ಹೊಡೆತ ತಿಂದರೂ ಬುದ್ಧಿ ಕಲಿಯದ ಕತ್ತೆಗಳಂತಾಗುತ್ತೇವೆ ಎಂದು ವಿವರಿಸಿದ ಭೈರ ಮಾತ್ರ ಯಾವುದೇ ಕಾರಣಕ್ಕೂ ನಮ್ಮನ್ನು ಮತ್ತೆ "ಸಡನ್ ದೆ ಹತ್ತಿಸುವವರೆಗೆ ನಮ್ಮ ಜೊತೆ ಬರುವುದಿಲ್ಲವೆಂದು ಶಪಥ ಮಾಡಿದ. ಚರ್ಚೆ ನಂತರ ಪೂಜಾರಿಗಳ ಸಲಹೆಯನ್ನು, ಕಡಿಮೆ ಸಾಹಸಮಯವಾಗಿದ್ದ ಒಪ್ಪಲೇಬೇಕಾಯಿತು.

ಮತ್ತೊಂದು ಗಡದ್ದಾದ ನಿದ್ದೆ ತೆಗೆದು, ತಂಗಳು ತಿಂದು ಹೊರಟೆವು. ಸಾರಿ ಆನೆಯ ಬಗೆಗೆ ಇನ್ನೂ ಎಚ್ಚರ ವಹಿಸಲು ನಿರ್ಧರಿಸಿದ್ದೆವು. ಆ ದುರಾದೃಷ್ಟ ನಮ್ಮ ಬೆನ್ನ ಹಿಂದಿನಿಂದ ಬಲವಾದ ಗಾಳಿಯ ರೂಪದಲ್ಲಿ ಬ ಆನೆಗೆ ನಮ್ಮ ಸುಳಿವನ್ನು ಕೊಡಲು ನಿರ್ಧರಿಸಿದಂತಿತ್ತು. ನಾವು ನಡೆಯು ಹೋದಂತೆ ರಾತ್ರಿಯ ನಮ್ಮ ಹೆಜ್ಜೆ ಗುರುತುಗಳು ಒದ್ದೆ ನೆಲದಲ್ಲಿ ಇನ ಉಳಿದಿರುವುದನ್ನು ಕಂಡೆವು.

ಗಾಳಿಯ ದಿಕ್ಕನ್ನು ಆಗಾಗ ಪರೀಕ್ಷಿಸುತ್ತ ಭೈರ ಮುಂದೆ ಹೋಗುತ್ತಿ ಇಡೀ ಕಾಡು ಚಟುವಟಿಕೆಯಿಂದ ತುಂಬಿದಂತೆ ಕಾಣುತ್ತಿತ್ತು. ವಿವಿಧ ಪಕ್ಷಿ ವಿಧವಿಧದ ಕೂಗುಗಳು ಅದಕ್ಕೆ ಸಾಕ್ಷಿಯಾಗಿತ್ತು. ದೂರದಿಂದ ನಮ್ಮ ಸುಳಿ ಹಿಡಿದ ಜಿಂಕೆ "ಖರ್.. ಖರ್.." ಎಂದು ಕೂಗಿತು. ಇದನ್ನು ಕೇಳಿ ಲಂಗೂರ್ ಕೋತಿಗಳು "ವ್ಹೂಂಪ್..ವ್ಹೂಂಪ್.." ಎಂದು ಖುಷಿಯಿಂ ಕುಣಿದಾಡುತ್ತಾ ಕೂಗಿದವು. ಜಿಂಕೆಯ ಕೂಗು ಮುಂದುವರೆದಂತೆ ಅಪಾಯವ ಮನಗಂಡ ಕೋತಿಗಳು ತಮ್ಮ ಕೂಗನ್ನು ನಿಲ್ಲಿಸಿ ಎಚ್ಚರಿಕೆಯಿಂ ಗಮನಿಸತೊಡಗಿದವು. ಈ ಲಂಗೂರ್‌ಗಳು ತಮ್ಮ ಸೂಕ್ಷ್ಮ ಕಣ್ಣಿನಿಂದ ಗಮನಿ ಇತರ ಕೋತಿಗಳನ್ನು ಕೂಗಿನಿಂದ ಎಚ್ಚರಿಸಿ ಅಪಾಯದಿಂದ ದೂರ ಕಳಿಸುತ್ತಿದ್ದ ನಾವು ದೂರದಲ್ಲಿದ್ದುದರಿಂದ ಅದರ ಕಣ್ಣಿಗೆ ಯಾವ ಶತ್ರುವೂ ಕಾಣಿಸಲ ನಮ್ಮ ವಾಸನೆ ಹಿಡಿದಿದ್ದ ಜಿಂಕೆಗಳು ತಮ್ಮ ಕೂಗನ್ನು ಮುಂದುವರೆಸಿ ಇದ್ದವು. ಕೊನೆಗೆ ಲಂಗೂರ್ ಸಹನೆ ಕಳೆದುಕೊಂಡು ಅಪಾಯದ ಗ ಬಾರಿಸಿಯೇ ಬಿಟ್ಟಿತು. ಆಗ ಮರಿಗಳನ್ನು ಎದೆಗೊತ್ತಿ ಮರೆಗೆ ಓಡುವ ಕೋತಿಗ ದೊಡ್ಡ ಗದ್ದಲವೆಬ್ಬಿಸಿದವು. ಅವೆಲ್ಲಾ ತಮ್ಮನ್ನು ಎಚ್ಚರಿಸಿದ ಲಂಗೂರ್‌ನ ಗಮನಿಸುತ್ತಿದ್ದವು. ಹುಲಿ ಅಥವಾ ಚಿರತೆ ಬಂದಿದ್ದರೆ ಆ ವಾಚ್‌ಮ ಮರದಿಂದ ಮರಕ್ಕೆ ಹಾರುತ್ತಾ, ಎರಡು ಕಾಲಿನಲ್ಲಿ ನಿಂತು ಬಾಲವ ನಿಗುರಿಸಿಕೊಂಡು ತಮ್ಮ ಲಂಗೂರ್ ಭಾಷೆಯಲ್ಲಿ ವೈರಿಯನ್ನು ಬೈಯುತ್ತಿದ್ದ ಅಂತದೇನನ್ನೂ ಮಾಡದ ಲಂಗೂರ್ ಕೂಗನ್ನು ಮುಂದುವರೆಸಿಯೇ ಇ ಹುಲ್ಲಿನ ಮೆದೆಯಲ್ಲಿ ಮಲಗಿದ್ದ ಸಾರಂಗವು ಈ ಕೂಗಾಟದಿಂದ ಎಚ್ಚರಗೊಂ ತಾನೂ "ಧಾಂಕ್..ಧಾಂಕ್.." ಎಂದು ಆವಾಜು ಹಾಕಿತು. ಕಾಡಿನಲ್ಲಿ ಹಿ ಎಲ್ಲಾ ಪ್ರಾಣಿಗಳು ಇತರರ ಭಾಷೆಯನ್ನು ಅರ್ಥಮಾಡಿಕೊಂಡು ತಮ್ಮ ರಕ್ಷಿಸಿಕೊಳ್ಳುತ್ತವೆ.

ಆಗ ಮರೆಯಲ್ಲೆಲ್ಲೋ ನಿಶ್ಚಲವಾಗಿ ನಿಂತಿದ್ದ ಸಲಗ ಈ ಶಬ್ದವನ್ನು ಕೇಳಿದ್ದ ನಮ್ಮ ವಾಸನೆಯನ್ನು ಹಿಡಿದಿರಬೇಕು. ಹಾಗಾಗಿ ಅದು ತನ್ನ ಈ ಎರ ಕಾಲಿನ ವೈರಿಯನ್ನು ಅಲ್ಲೇ ಹೊಸಕಿ ಹಾಕಲು ನಿರ್ಧರಿಸಿತು.

(ಮುಂದುವರೆಯುವುದ

ಸಾಕ್ಷ್ಯ

ಅವರ ಬಳಿ ಇತ್ತು
ಪುಟ್ಟದೊಂದು ಪಿಸ್ತೂಲು;
ಜತೆಗೆ
ಜಿಹಾದಿ ಸಾಹಿತ್ಯ?!
ದೇಶದ ಮೇಲೆಯೇ
ಯುದ್ಧ ಸಾರಲು ಹೊರಟಿದ್ದರು ಅವರು

ಲ್ಯಾಪ್ ಟಾಪೂ ಇತ್ತು ಅವರಲ್ಲಿ
ಲಾಡೆನ್ ಚಿತ್ರವಿತ್ತು ಅದರಲ್ಲಿ;

ಜತೆಗೆ
ಮೋದಿಯ ಗುಜರಾತಿನ ಸತ್ಯಗಳೂ

ಎಲ್ಲಕ್ಕಿಂತ ಮುಖ್ಯವಾಗಿ
ಮುಸ್ಲಿಮರಾಗಿದ್ದರು ಅವರು

ಅಂದಮೇಲೆ ಇನ್ನೇನು ಬೇಕು ಪುರಾವೆ?
ಅವರು ದೇಶದ್ರೋಹಿಗಳು, ಉಗ್ರರು
ಒಳಗಿಟ್ಟುಬಿಡಿ ಅವರನ್ನು
ಕೊಳೆಯುತ್ತಿರಲಿ ಕಂಬಿಯ ಹಿಂದೆ

ಶಂಕಿತರೆಂದು ಕರೆಯಬೇಕೆಂದಿರಾ?
ತೀರ್ಪು ಕೊಟ್ಟಾಗಿದೆಯಲ್ಲ



ಕರುನಾಡಿನ ಮಾಧ್ಯಮಗಳೇ;
ಖಂಡಿತವಾಗಿಯೂ ಅವರು ಉಗ್ರರು

ನಿರಪರಾಧಿಗಳೇ ಆಗಿದ್ದರೇನಂತೆ
ಬಿಡುಗಡೆಗೊಳಿಸುತ್ತವಲ್ಲ ಕೋರ್ಟುಗಳು
ದಶಕಗಳ ಬಳಿಕ

ಕಾನೂನು, ಸಂವಿಧಾನ ಎಂದಿರಾ?
ಅವೆಲ್ಲ ಕೇವಲ ಭಾರತೀಯರಿಗೆ ಮಾರಾಯ್ರೆ;
ಓದಿಲ್ಲವಾ ನೀವು
ಗೋಲ್ವಾಲ್ಕರ್ ಸಂಹಿತೆ?

• ಶ್ರೀನಿವಾಸ ಕಾರ್ಕಳ

ಹಾದಿಬೀದಿಲಿ ಭಿಕ್ಷೆ ಮಾಡಿ ಹಬ್ಬ ಮಾಡು ಅಂದಿದ್ದನೆ ದೇವ್ರು!

ಬಯಲುಸೀಮೆ ಕಟ್ಟೆಪುರಾಣ

• ಬಿ.ಚಂದ್ರೇಗೌಡ

ಉಗ್ರಿ, ಜಮೀನಿನಲ್ಲಿ ಒಂದು ಪವಾಡ ...ಡುಹೋಗಿತ್ತು. ಆಕಸ್ಮಾತ್ ಅವನು ಹೊಲದ ಕಡೆ ...ದಾಗ ಎರಡು ತುಂಡು ಹೊಲಕ್ಕೆ ತೆಂಗಿನ ಸಸಿ ...ತ್ತು ಮಾವಿನ ಸಸಿ ನೆಟ್ಟು ಹೋಗಿದ್ದರು! ಅಚ್ಚರಿಗೊಂಡು ...ಾರಿಸಲಾಗಿ ಅವರು ಜಲಾನಯನ ಅಭಿವೃದ್ಧಿ ...ಗಳೆಂದು ತಿಳಿಯಿತು. ಈ ಸುದ್ದಿ ಹೊತ್ತುಕೊಂಡು ...ದವನು,

"ನಿಜವಾಗ್ಲೂ ಮಾವ ಇಂತ ದಡ್ಡ ಸರಕಾರನೆ ನೋಡಲಿಲ್ಲ ...ಪ್ಪ" ಎಂದ.

"ಸರ್ಕಾರಗಳು ಯಾವತ್ತು ಬುದ್ಧಿವಂತಿಕೆ ...ರಿದ್ದವುಲ?" ಎಂದ ಕಾಳಮಾವ.

"ಒಂದೊಂದು ಸತಿ ಅಧಿಕಾರಿಗಳು ... ಜನಿದ್ದಾಗ ಬುದ್ಧಿವಂತಿಕೆ ...ಗಳು ನ್ಯಡಿತವೆ. ಅಲ್ಲಾ ಊರು ... ಇರೊ ಗುಂಡಿ ಗೊಟರೆಲ್ಲೂ ...ಲ್ಲ. ಇಂಥಾ ಟೇಮಲ್ಲಿ ತಗಂಡು ...ದು ಮಾವು, ತೆಂಗು ನೆಟ್ಟು ...ೋಗ್ಯವುರಲ್ಲಾ. ನಾನು ಯಂಗೆ ...ಮುಕಿಸಿಗಳ್ಳಿ?"

"ಅದ್ಯಾರ್ಲ ನೆಟ್ಟು ಹೋದೋರು?"

"ಯಾರೊ ಜಲಾನಯನ ಇಲಾಖೆ ಜನ ಕಣಮಾವ. ...ಹಿಂದೆ ಬಂದು ಬದ ಹಾಕಿಹೋಗಿದ್ರು. ಈಗ ಬಂದು ...ವು, ತೆಂಗು ಸಿಗಿಸಿ ಹೋಗ್ಯವುರೆ. ಅವಾಗ್ಲೆ ಬತ್ತಿ ...ೀಯ್ತಾ ಅವೆ."

"ಯರಡು ತಿಂಗಳು ಮದ್ಲೆ ನೆಟ್ಟಿದ್ರೆ ಹತ್ತಿಗಳವು ...ಪ್ಪ. ಆಗ ಹೊಸ ಬೇರು ಬರೊ ಕಾಲ. ಈಗಾದ್ರೆ ಕಷ್ಟ."

"ಈಗ್ಲೂ ಏನೂ ಕಷ್ಟಿಲ್ಲ. ನ್ಯಲ ಹಸಿಯಾಗಿದ್ದು ನೆಟ್ಟಾಗ ...ದು ಗಡಗೆ ನೀರೂದ್ರೆ ಹತ್ತಿಗತ್ತವೆ" ಎಂದ ಸೀರ.

"ಈಗಾಗಿರೊ ಕತೆ ನೋಡಿದ್ರೆ ಹತ್ತಿಗಳ್ಳಿ ಹತ್ತಿಗಳದೆ ...ೋಗ್ಲಿ, ನಡೆದಷ್ಟೆ ನಮ್ಮ ಕ್ಯಲಸ ಅನ್ನಂಗೆ ಮಾಡಿ ...ೋಗ್ಯವುರೆ. ಅವುರಿಗೇನು, ಸುಳ್ಳು ಬಿಲ್ಲು ಮಾಡಿಕೊಂಡು ...ದು ಕಿತಗಳದೆ ಅವ್ರುರ ಕ್ಯಲಸ."

"ತೆಂಗಿನ ಸೊಸಿ ಚನಾಗಿದ್ದವೇನ್ಲ?" ಎಂದಳು ಜುಮ್ಮಿ.

"ಇನ್ನೂ ಮಳಕೆ ಸಸಿ ಕಣೆ. ಮುಂದಿನ ಬ್ಯಾಸಿಗೆಲಿ ...ವು ಉಳುದು ಬದುಕೊ ಯಾವ ಭರವಸೆನೂ ಇಲ್ಲ. ...ದಕ್ಕಿಂತ ಇನ್ನೊಂದು ವಾರದಲ್ಲಿ ಮಳೆ ಉಯ್ಯದೆ ಇದ್ರೆ ...ಲ್ಲಾ ಸತ್ತೊಯ್ತವೆ. ಅದ ನೋಡಕ್ಯಾಗದಿಲ್ಲ."

"ನಿನಗೆ ನೋಡಕ್ಯಾಗದಿಲ್ಲ, ನೀರು ತಂದು ...ಯ್ಯಕ್ಯಾಗದಿಲ್ಲ ಅನ್ನೊ ಸಮಾಚಾರಕೂ ಅವರಿಗೂ ಏನ್ಲಾ ...ಬಂಧ?"

"ದಡ್ಡ ಸರ್ಕಾರ ಇದ್ದಾಗ ಆಗದೇ ಇಂಗೆ."

"ವಳ್ಳಿ ಗೋಳು ತಂದಿಟ್ರಲ್ಲ ಮಾವ."

"ಒಂದು ಕ್ಯಲಸ ಮಾಡು, ಅವುನ್ನೆಲ್ಲ ಕಿತಗಂಡು ಬಂದು ...ಲ್ಯಾರ ಗ್ಯಪ್ಪಿಗಾಕು. ಮುಂದಲೊರ್ಸಕ್ಕೆ ಮಳೆಯಾದ್ರೆ ...ಗಂಡೋಗಿ ನೆಡಿವೆ."

"ಅದು ವಳ್ಳೆ ಪ್ಲಾನೆ ಕಣಮಾವ. ಆದ್ರು ನೆಟ್ಟಿರೊ ಸಸಿ ಕೀಳದ್ಯಂಗೇ?"

"ಕೀಳಕ್ಯಾಗದೆಯಿದ್ರೆ ಬುಡ್ಯ ಹೋಗ್ಲಿ, ನೀನೇನು ದುಡ್ಡು ಕೊಟ್ಟು ತಂದಾಕಿದ್ದಾ. ಮಳೊದ್ರೆ ಬದಿಕತ್ತವೆ, ಇಲ್ದಿದ್ರೆ ಸಾಯ್ತವೆ" ಎಂದಳು ಜುಮ್ಮಿ.

"ಓಹೊ, ತೆಂಗಿನ ಸಸಿ ನೆಟ್ಟೊರು ಯಾರು ಅಂತ ಈಗೊತ್ತಾಯ್ತು ಕಂಡ್ಯ" ಎಂದ ಸೀರ.

"ಯಾರಪ್ಪಾ?"

"ರಾಮಕಿಸ್ನ ಯಗಡೆ ಕಡಿಯೋರು ಕಂಡ್ಯ. ಅವುರು ಅದ್ಯಂತದೊ ಪಾರ್ಟಿ ಮಾಡಿಕಂಡು ತೆಂಗಿನ ಸಸಿ ಕೊಡತಿದ್ರುಲವೆ."

"ರಾಮಕೃಷ್ಣ ಯಗಡೆ ತೀರಿಕಂಡು, ತೆಂಗಿನಸಸಿ ತಂದುಕೊಡತಿದ್ದ ಆಳ್ವನೂ ತೀರಿಕೊಂಡು, ನವನಿರ್ಮಾಣ ವೇದಿಕೆನೇ ನಿರ್ನಾಮ ಆಗ್ಯದೆ ಕಣಮಾವ."



"ಓಹೊ ಅಂಗವುರಲ್ಲ ಬುಡು."

"ಇಸಿಸಿ, ಜಲಾನಯನ ಅಭಿವೃದ್ಧಿ ಜನಗಳ ಕ್ಯಲಸ ಅಂತ ಹೇಳ್ತಾಯಿದ್ದಿನಿ. ತಿರಗಾ ನೀನು ಅಡ್ಡಮಾತ ಯಸಿತಿ."

"ಹೋಗ್ಲಿ, ಮಾರಿಕಳ್ಳ ಅತ್ತಗೆ. ಏನಿಲ್ಲ ಅಂದ್ರು ಒಂದು ಸಸಿ ನೂರುಪಾಯಿಗೆ ಹೋಯ್ತದೆ. ಆ ದುಡ್ಡಲ್ಲಿ ಹಬ್ಬ ಮಾಡಿವೆ" ಎಂದು ಜುಮ್ಮಿ ನಕ್ಕಳು.

"ಅಲ್ಲಾ ಕಣೆ, ಸರ್ಕಾರ ದಾನ ಕೊಟ್ಟ ಸಸಿ ಮಾರಿಕಂಡು ಹಬ್ಬ ಮಾಡು ಅಂತಿಯಲ್ಲಾ, ಅದಕ್ಕಿಂತ ಆ ಗಣೇಶನ ಕುಂಡ್ರುಸ್ತಿವಿ ಅಂತ ಕಾಸು ಕೇಳ್ತವಲ್ಲ ಅಂಗೆ ಕೇಳಿ ಹಬ್ಬ ಮಾಡಿದ್ರಾಗದೆ?"

"ಗಣೇಶನ ಭಿಕ್ಷೆ ಜನಗಳದು ಭಾರಿ ಹಾವುಳಿ ಆಯ್ತು ಕಣೊ ಉಗ್ರಿ. ಇದು ರಿಯಲಿ ಡರ್ಟಿ ಫೆಸ್ಟಿವಲ್" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಾಕ್ಲ ಅಂಗಂತಿ? ಇದ್ರೆ ಕಾಸುಕೊಡು, ಇಲ್ದಿದ್ರೆ ಸುಮ್ಮನಿರ್ಲ" ಎಂದಳು ಜುಮ್ಮಿ.

"ಅಕ್ಕಾ, ಗಣಪತಿ ಹಬ್ಬಕ್ಕೆ ಕಾಸುಕೇಳೊ ಹುಡುಗ್ರು ಮುಂದೆ ಏನಾಯ್ತರೆ ನಿನಿಗೆ ಗೊತ್ತೆ? ಇಟೀಸ್ ರಿಯಲಿ ಡೈನ್ಜರ್ ವರ್ಕು."

"ಅದೇನಾದರ್ಲ?"

"ಏನಾಯ್ತರೆ ಅಂತ ಕೇಳಕ್ಕ ಕೈಕಾಲು ಚನ್ನಾಗಿದ್ದು ಆರೋಗ್ಯವಾಗಿರೊ ಜನ ಭಿಕ್ಷೆ ಕೇಳದು ಅವುಮಾನ. ಭಿಕ್ಷೆಯನ್ನು ದಕ್ಷಿಣೆ ಅಂತ ಮಾಡಿಕಂಡು ಸುಖವಾಗಿ ಬದುಕ್ತಾಯಿರೊ ಧರ್ಮ ನಮ್ಮದು. ಪರೆಗ್‌ಜಾಂಪಲ್ ಗುಡಿಲಿರೊ ಪೂಜಾರಿಗಳು. ಆ ಪೂಜಾರಿ ಸಂತತಿಗಳ ನಾವು ಇವತ್ತು ಬೀದಿಬೀದಿಲಿ ನೋಡ್ತಾಯಿದ್ದಿವಿ. ಯಾವ ನಾಚಿಕೆನೂ ಇಲ್ದೆ ಧೀಮಾಕಿನಲ್ಲಿ ರಸ್ತೆಲಿ ನಿಂತಗಂಡು ಹೋಗೋ ಬರೊ ಜನಗಳತ್ರ ದುಡ್ಡು ಕೇಳ್ತರೆ ಅಂದ್ರೆ ಈಗಿನಿಂದ್ಲೆ ವಸೂಲಾತಿ ಟ್ರೈನಿಂಗ್ ತಗತಾ ಅವುರೆ ಅಂತ."

"ಅದೇನೊ ನಿಜ ಬುಡೊ."

"ಈ ತರ ಬೀದಿಲಿ ಟ್ರೈನಿಂಗ್ ತಗಂಡೋರು ಮುಂದೆ ಭಾಳ ದೊಡ್ಡದಾಗಿ ಬೆಳದು, ಭಾಷೆ ಚಳವಳಿ, ಗಡಿ ಚಳವಳಿಲ್ಲಿ ಸೇರಿಕತ್ತರೆ. ಬ್ಯಾಡ ಹಪ್ತಾ ವಸೂಲಿ ಗ್ಯಾಂಗೊಳಗೆ ಸೇರಿಕತ್ತರೆ. ಆದ್ರಿಂದ ಸರ್ಕಾರ ಹಾದಿಬೀದಿ ಗಣಪತಿಗೆ ಅಂತ ಕಾಸು ಕೇಳೊ ಹುಡುಗ್ರ ನಿಯಂತ್ರಿಸಬೇಕು ಕಣೆ."

"ಅಲ್ಲಾ ಕಣೊ, ಈ ಬಿಜೆಪಿ ಸರ್ಕಾರನೆ ಗಣಪತಿ ಹಬ್ಬದ ಕಾಸುಕೇಳೊ ಹುಡುಗರ ವಾರುಸ್ದಾರ್ರು ಅಥವಾ ಅಪ್ಪಅವ್ವದಿರಂಗ ಕಾಣ್ತದೆ. ಅಂತದ್ರುಲಿ ನಿಯಂತ್ರಿಸಬೇಕು ಅಂತಿಯಲ್ಲಾ ಯಂಗೇ?"

"ಮಿಸ್ಟರ್ ಉಗ್ರಿ, ದೇವರ ಹಬ್ಬ ಪೂಜೆ ಇವು ನಿನ್ನ ಭಕ್ತಿ ಆಚರಣೆಗೆ ಸಂಬಂಧಪಟ್ಟಿದ್ದು. ಭಿಕ್ಷೆ ಮಾಡಿ ಹಬ್ಬ ಮಾಡು ಅಂತ ಯಾವ ಧರ್ಮನು ಹೇಳಿಲ್ಲ ಗೊತ್ತೆ."

"ಹಿಂದೆ ತಿರುಪ್ತಿಗೋಗೊರು ಹಾದಿಬೀದಿಲಿ ಕಾಸು ಕೇಳೋರು. ಈಗ್ಲು ಧರ್ಮಸ್ಥಳ ಅಯ್ಯಪ್ಪನ ಸನ್ನಿದಿಗೋಗೋರೆಲ್ಲಾ ಭಿಕ್ಷೆ ಕೇಳ್ತರೆ ಗೊತ್ತೆ?"

"ಬಿಜೆಪಿ 'ಕಾರ್ಯಕರ್ತನಂಗೆ ವಾದ ಮಾಡಬ್ಯಾಡ. ಭಿಕ್ಷೆ ಬೇಡಿ ಹಬ್ಬ ಮಾಡದು ಸರಿಯೊ ತಪ್ಪೊ ಅಂತ ಕಾಳದೊಡಪ್ಪ ಹೇಳಿಬುಡ್ಲಿ. ಹೇಳು ದೊಡಪ್ಪ."

"ಏನೇ ಆಗ್ಲಿ ಸಾಬರು ಮಾಡೋ ಹಬ್ಬನೆ ಸರಿ ಕಂಡ್ಯ. ಉಪಾಸ ಮಾಡಿ ದಾನಧರ್ಮ ಮಾಡಿ ಹಬ್ಬ ಮಾಡ್ತರೆ."

"ಅಷ್ಟು ನಿಷ್ಟೆಯಿಂದ ಹಬ್ಬ ಮಾಡಿ ಅವುರೇನು ನ್ಯಟ್ಟಗಿಲ್ಲ ದೊಡಪ್ಪಾ."

"ನಾನು ಹಬ್ಬದ ಮಾತೇಳಿದೆ ಕಂಡ್ಯ. ಏನೇ ಆಗ್ಲಿ ಯಾಚಕತನ ಮಾಡಿ ಹಬ್ಬ ಮಾಡದು ತೆಪ್ಪು. ಅದಿರ್ಲಿ, ಈ ಸತಿ ಯಾಕ್ಲ ಗಣಪತಿ ಕುಂಡ್ರುಸಲಿಲ್ಲ?"

"ಕುಂಡ್ರುಸಿದ್ರೆ, ಗಣಪತಿಯ ಗುಂಡಿ ತಗದು ಹೂಣಬೇಕಾಯ್ತಿತ್ತು ದೊಡಪ್ಪ. ಇರೊ ಯರಡು ಕ್ಯರೆನೂ ಬತ್ತಿ ಕುಂತವೆ. ಕುಡಿಯೋ ನೀರಿಗೆ ಬೋರವೆಲ್ ಅವೆ. ಗಣಪತಿ ಎಲ್ಲಿ ಬುಡಬೇಕೂ? ಅದ್ಕೆ ಸುಮ್ಮನಾದ್ರು. ಇಲ್ಲ ಅಂದ್ರೆ ನಾವಿಲ್ಲಿ ಕೂತಗಳಕ್ಕೆ ಬುಡತಿತ್ತ ಮೈಕು?"

"ಗಣಪತಿಲೂ ಕಾಂಗ್ರೆಸ್ಸು, ಬಿಜೆಪಿ, ದಳದವು ಅಂತ ಪಾರ್ಟಿ ಗಣಪತಿ ಆಗಿದ್ದವಂತೆ ಕಂಡ್ಯ" ಎಂದಳು ಜುಮ್ಮಿ.

"ಅದು ಹಳೆ ಮ್ಯಾಟ್ರು ಕಣಕ್ಕ. ಆಕ್ಚುವಲಿ ದಳದೋರು ಎಷ್ಟಾರ ಖರ್ಚಾಗ್ಲಿ ನಾವು ಕೊಡ್ತಿವಿ ಕುಂಡ್ರಿಸಿ ಅಂದ್ರಂತೆ. ಬರಗಾಲ ಬಂದದೆ ಬ್ಯಾಡ ಅಂತ ಸುಮ್ಮನಾದ್ರು. ಅದ್ಕೆ ಕುಮಾರಣ್ಣನ ಟೀಮು ದಲ್ಲಾಗ್ಯದೆ."

"ಆ ಕುಮಾರಣ್ಣನ ಗುಂಪ ಆಯನೂರು ಮಂಜುನಾಥ ದಂಡುಪಾಳ್ಯದ ಗುಂಪು ಅಂದವುನಲ್ಲಾ, ಅದ್ಯಾಕಂಗಂದಾ?" ಎಂದ ಉಗ್ರಿ.

"ಗ್ರೂಪ್ ಪೋಟೋ ನೋಡಿ ಅಂಗಂದನಂತೆ ಕಣೊ ಉಗ್ರಿ. ಸೊರಬದಲ್ಲಿ ಬಗರ್‌ಹುಕುಂ ರೈತರು ಭಾಳ ಜನ ಇದ್ದರಂತೆ. ಬಾಡಿಗೆ ಮನೇಲಿರೋರಿಗೆ ಯಂಗೆ ನೆಮ್ಮದಿ ಇರದಿಲವ್ವೊ, ಅಂಗೇ ಬಗರ್‌ಹುಕುಂ ರೈತರಿಗೂ ನೆಮ್ಮದಿ ಇರದಿಲ್ಲ. ನಲವತ್ತೊರ್ಸ ರಾಜಕೀಯ ಮಾಡಿದ ಬಂಗಾರಪ್ಪ ಅವುರಿಗ್ಯಲ್ಲ ಏನೂ ಮಾಡದೆ ನಡುನೀರಲ್ಲಿ ಕೈಬುಟ್ಟು ಹೋದ. ಅಂತ ಜನ ಹಿಡಕಂಡು ನಿಮಗ್ಯಲ್ಲಾ ಖಾತೆ ಮಾಡುಸ್ತಿನಿ, ನನ್ನ ಜ್ಯತೆ ಬನ್ನಿ ಅಂತ ಬಂಗಾರಿ ಮಗ ಮಧು ಬಂಗಾರಪ್ಪ ಶಿವಮೊಗ್ಗದಗಂಟ ಕಾಲ್ನಡಗೆ ಜಾಥಾ ಮಾಡಿಸಿದನಂತೆ."

"ರಾಮುಲು ಗಾಳಿ ಅವುನಿಗೂ ಬೀಸ್ತು ಅನ್ನು."


"ರಾಮುಲು ಗಾಳಿ ಯಾರಿಗೂ ಬೀಸದಿಲ್ಲ ಕಣೊ. ಅದಿರ್ಲಿ, ಮಧು ಬಂಗಾರಪ್ಪನ ಜೊತೆಗೆ ಕುಮಾರಣ್ಣ ಅವುನ ಹಿಂಬಾಲಕರು ಜೊತೆಗೆ ದಂಡುಪಾಳ್ಯದ ಈರೊಯಿನ್ ಪೂಜಾಗಾಂಧಿನೂ ನ್ಯಡದರಂತೆ. ಯಲ್ಲರು ಬಿಸ್ಲಲ್ಲಿ ವಣಗಿ, ತಲೆ ಕೆದರಿಕೊಂಡು, ಅದರಲ್ಲೂ ಮಧು ಬಂಗಾರಪ್ಪನ ತಲಿಯಂತೂ ಯಣ್ಣೆ ನೀರು ಕಾಣದ ಕದಬೆ ಜುಂಗಿನಂಗೆ ಕಾಣ್ತದೆ. ಅದ ಯಾರೊ ಪೋಟಾ ವಡದು ಆಯನೂರ ಮಂಜುನಾಥನಿಗೆ ತೋರಿದನಂತೆ. ಅದ ನೋಡಿ ಆಯನೂರ್ 'ಏನಿವುರ್ಯಲ್ಲ ದಂಡುಪಾಳ್ಯದೋರಂಗೆ ಕಾಣ್ತರಲ್ಲಾ?' ಅಂದನಂತೆ. ಅದೇ ದೊಡ್ಡ ಸುದ್ದಿಯಾಗಿ ಟಿವಿ ನನಮಕ್ಕಳಿಗೆ ಮೂರು ದಿನಕ್ಕಾಗೋವಷ್ಟು ಸಾಮಗ್ರಿ ಸಿಕ್ತು."

"ಅಲ್ಲಾ ಏನೇ ಸಿಕ್ಕಿದ್ರು, ಟಿವಿಯೋರು ಅಳದು ಸುರುದು ಅದ ತಿಪ್ಪೆಗೊಬ್ಬರ ಮಾಡಿ ಬಿಸಾಕ್ತವಲ್ಲಾ? ರಾಜಕಾರಣಿಗಳು ಮಾತಾಡಿದ್ರೂ ಕಷ್ಟ, ಮಾತಾಡದೆ ಇದ್ರೂ ಕಷ್ಟ ಹೋಗತ್ತಿಗೆ."


"ಮಾತಾಡದೇ ಆದ್ರೆ, ನಮ್ಮ ಪಟೇಲ್ರುಂಗೆ ಮಾತಾಡಬೇಕು ಕಣೊ. ಅವುರು ಉತ್ತರ ರಡಿ ಇಟಗಂಡು ಮಾತಾಡೊರು. ಈ ಕುಮಾರಣ್ಣನಂಗೆ ನಾಳೆಯಿಂದ ಪೂಜಾಗಾಂಧಿ ಪಾರ್ಟಿ ಕೆಲಸ ಮಾಡದು ಬ್ಯಾಡ ಅಂತಿರಲಿಲ್ಲ."

"?!"


ಹೊತ್ತು ಮೂಡುವಾಗ



ಇಬ್ಬರು ಒಂದೇ ಕತೆಯನ್ನು ಎತ್ತಿಕೊಂಡು ಬರೆದ ಕತೆಗಳು ಬೇರೆಬೇರೆ ರೀತಿ ಇರುತ್ತವೆ. ಅದೇ ಕತೆ. ...ದೇ ಘಟನೆಗಳು. ಇಬ್ಬರೂ ಬರೆದಿರುತ್ತಾರೆ. ಆದರೆ ಇಬ್ಬರ ಕತೆಗಳೂ ಭಿನ್ನವಾಗಿರುತ್ತವೆ. ಇದು ನಮ್ಮ ...ರುಣ ಬರಹಗಾರರು ಗಂಭೀರವಾಗಿ ಯೋಚಿಸಬೇಕಾದ ಪ್ರಶ್ನೆ. ಯಾಕೆಂದರೆ ನಾನು ಬರೆಯುವ ಅದೇ ...ತೆಗೆ ಅದೇ ಘಟನೆ, ಪಾತ್ರಗಳನ್ನು ತಂದರೂ ನಾನು ಬಳಸುವ ಧೋರಣೆ, ಭಾಷೆ, ಘಟನೆಗಳ ನಿರ್ವಹಣೆ ...ಮತ್ತು ಪಾತ್ರಗಳ ಚಿತ್ರಣ ನನ್ನದೇ ರೀತಿಯಲ್ಲಿ ಇರುತ್ತವೆ. ಕತೆ ಎನ್ನುವುದಕ್ಕೆ ವಸ್ತು, ಘಟನೆಗಳು ...ಮುಖ್ಯವಾದರೂ ಲೇಖಕನ ದನಿ ಮುಖ್ಯವಾಗುತ್ತದೆ; 'ರಾಮ ಅಲ್ಲಿ ನಿಂತು ಸೂರ್ಯ ಹುಟ್ಟುವುದನ್ನು ...ನೋಡಿದ. ಬೆಳಕು ಹರಿಯುವ ಪವಾಡ ಅವನನ್ನು ಮೂಕನನ್ನಾಗಿಸಿತು' ಎನ್ನುವುದಕ್ಕೂ 'ಹೊತ್ತು ಮೂಡುವಾಗ ...ದ್ದು ಊರಿಗೆ ಹೊರಡಲು ಸಿದ್ಧನಾದ ರಾಮ ಗೂಟದಲ್ಲಿದ್ದ ಅಂಗಿಯನ್ನು ಹಾಕಿಕೊಂಡು ನಡೆಯತೊಡಗಿದ' ...ನ್ನುವುದಕ್ಕೂ 'ರಾಮ ತನ್ನ ಪ್ರೇಯಸಿಯನ್ನು ನೆನೆಸಿಕೊಳ್ಳುತ್ತ ಮನೆಯಿಂದ ಹೊರಬಿದ್ದಾಗ ಕೋಳಿ ...ಕೂಗಿತು. ಪೂರ್ವ ಪ್ರೇಯಸಿಯ ಕೆನ್ನೆಯಂತೆ ರಂಗೇರುತ್ತಿತ್ತು. ವಿರಹದ ನೋವು ಮತ್ತು ಬೆಳಗಿನ ...ಹುಮ್ಮಸ್ಸು ಅವನ ನಡಿಗೆಯಲ್ಲಿ ಸಮಸಮವಾಗಿ ಬೆರೆತಿದ್ದವು' ಎನ್ನುವುದಕ್ಕೂ ವ್ಯತ್ಯಾಸವಿದೆ. ಮೊದಲನೆಯದರಲ್ಲಿ ...ಸೂರ್ಯೋದಯ ಕತೆಗೆ stage ಒದಗಿಸುತ್ತದೆ; ಎರಡನೆಯದರಲ್ಲಿ ರಾಮ ಏನನ್ನೂ ...ನೋಡದೆ, ಗ್ರಹಿಸದೆ ನಡೆಯುತ್ತಿದ್ದಾನೆ; ಮೂರನೆಯದರಲ್ಲಿ ರಾಮನ ಪ್ರೇಮ ಬಂದಿದೆ.



...ನಾನು ಕತೆಗಳ ಬಗ್ಗೆ ಮಾತಾಡುವಾಗ, "ನೀನು 'ಚಂದಮಾಮ' ಕತೆಗಳನ್ನು ಓದಿ ಆನಂದಿಸಬೇಕು. ...ಸರಳವೂ ಮುಗ್ಧವೂ ಆದ ಈ ಕತೆಗಳ ಆಕರ್ಷಣೆ ಇಲ್ಲದಿದ್ದರೆ ಯಾವ ಕತೆಯೂ ಶೋಭಿಸುವುದಿಲ್ಲ. ...ದರೆ 'ಚಂದಮಾಮ' ಕತೆಯ ಮಟ್ಟದಲ್ಲೇ ಉಳಿದುಬಿಡುವ ಕತೆಗಳು ಬಹಳ ಕಾಲ ...ಉಳಿಯುವುದಿಲ್ಲ. ಆ ಕತೆಗಳಿಗೆ ಪ್ರಬುದ್ಧತೆಯ ಕಾವು ಬಂದಾಗ ಮಾತ್ರ ಸಮರ್ಪಕ ಕತೆಯಾಗುತ್ತದೆ. ...ವಾಗೆಂದು 'ಚಂದಮಾಮ' ಕತೆಯ ಹಂಗೇ ಇಲ್ಲದೆ ಕೇವಲ ಶಿಷ್ಟನ ಕತೆಯಾದರೆ ಅದರಲ್ಲಿ ...ಜೀವ ಇರುವುದಿಲ್ಲ. ಅನೇಕ ಪ್ರಸ್ತ ಕತೆಗಾರರ ನಿರೂಪಣೆಗಳು ಕಗ್ಗವಾಗುತ್ತವೆ; ಕೆಲವರ ಕತೆಗಳು ...ಸ್ಫೂರ್ತಿಯೇ ಇಲ್ಲದೆ ತರಗೆಲೆಗಳಂತಾಗುತ್ತವೆ. ಇದಕ್ಕೆ ಅನೇಕ ಉದಾಹರಣೆ ಕೊಡಬಲ್ಲೆ."



...ಮೊನ್ನೆ ಅಮರೇಶ ನುಗಡೋಣಿ ಎಂಬ ಹುಡುಗ ತನ್ನ ಕತೆಗಳ ಮೇಲೆ ಬಂದ ನನ್ನ ...ಸಮ್ಮತಿ ನೋಡಿ, "ಇಷ್ಟು ಮುಷ್ಟು ಮತ್ತು ಕಾಯಿಲೆಯಲ್ಲೂ ನನ್ನ ಕತೆ ಓದಿದ್ದಕ್ಕೆ ಕೃತಜ್ಞ" ...ಎಂದು ಮುಂತಾಗಿ ಬರೆದು ತನ್ನ ವ್ಯಂಗ್ಯ ತೋರಿದ; ಆತನ ಅರ್ಥ ನಾನು ಅವನ ಕತೆ ...ಮೆಚ್ಚಿಕೊಳ್ಳಬಾರದಿತ್ತು, ಬಿಡ್ತಾಗಿದ್ದೇನೆ ಎನ್ನುವುದು. ಆ ತರಹದ ಮಸ್ತಿಯನ್ನು ತರುಣರು ...ಬಿಡಬೇಕು. ಚೆನ್ನಾಗಿ ಬರೆಯಲು ಯತ್ನಿಸಬೇಕು.

ಬದುಕೆಂಬ ಯಕ್ಷಿಣಿ

ಇಂಗ್ಲೆಂಡಿನಲ್ಲಿ **arise** ಎಂಬ ಒಂದು ಸಂಸ್ಥೆ ಇದೆ. ಅದು **Association for Research into the Science of Enjoyment.** ನಿತ್ಯ ಹರಳೆಣ್ಣೆ ಮುಖ ಹಾಕಿಕೊಂಡು ಸಣ್ಣಪುಟ್ಟ ತಲೆನೋವು, ಕೆಮ್ಮಿಗೂ ಮಾತ್ರೆ ತೆಗೆದುಕೊಂಡು ಬದುಕನ್ನು ವ್ರತದಂತೆ ನಡೆಸುವವರು ಬೇಗ ಗೋತಾ ಹೊಡೆಯುತ್ತಾರೆ, ಆದರೆ ಖುಷಿಯಾಗಿದ್ದು ಒಳ್ಳೆಯ ಊಟ, ಸಂಗ, ಪಾನ, ಓದು, ಚರ್ಚೆ, ನಗೆಯಲ್ಲಿ ಮುಗ್ಧರಾಗಿರುವವರು ಬಹಳ ದಿನ ಬದುಕುತ್ತಾರೆ. ಇದೇ ಸತ್ಯ ಇದೇ ಸಮರ್ಪಕ ಎಂಬ ನಿಯಮವಿಲ್ಲವಾದರೂ ಈ ದೇಹ ವಿಚಿತ್ರವೆನ್ನುವುದು ಮಾತ್ರ ನಿಜ. ರೋಮಾಂಚಕ ದಿನಚರಿ ಮನುಷ್ಯನೊಳಗಿನ ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವಂತೆ ಕಾಣುತ್ತದೆ. ನಮ್ಮಲ್ಲಿ ಕೆಲವರು ಲೇಖಕರು ಅರವತ್ತು, ಅರವತ್ತೆರಡಕ್ಕೇ ತೀರಿಕೊಂಡರು; ನಿತ್ಯ ಓದಿ, ಬರೆದು, ಸಂತೋಷ ಕೂಟಗಳಲ್ಲಿ, ಸಭೆಸಮಾರಂಭಗಳಲ್ಲಿ, ಇಸ್ಪೀಟ್ ಕ್ಲಬ್ಬಿನಲ್ಲಿ ಖುಷಿಯಾಗಿರುತ್ತಿದ್ದ ಮಾಸ್ತಿ ಒಂಭತ್ತೂವರೆ ದಶಕಗಳ ಕಾಲ ಬದುಕಿದರು. ಅವರಿಗಿಂತ ವಿಚಿತ್ರ ಡಿ.ವಿ. ಗುಂಡಪ್ಪನವರು. ಚಿಕ್ಕಂದಿನಿಂದ ಸ್ವಲ್ಪ ಸ್ಥೂಲವಾಗಿದ್ದ ಗುಂಡಪ್ಪ ಡಯಾಬಿಟಿಸ್, ರಕ್ತದೊತ್ತಡ ಪಡೆದೇ ಹುಟ್ಟಿದಂತಿದ್ದರು. ಅವರಿಗೆ ಓದು, ಚರ್ಚೆ, ಊಟ, ಸಂಘಟನೆ ಎಂದರೆ ಇಷ್ಟ. ಎಪ್ಪತ್ತು ದಾಟಿದ ಮೇಲೆ ಒಂದು ದಿನ ಅವರು ಜಿಲೇಬಿಯ ಗುಡ್ಡೆ ಹಾಕಿಕೊಂಡು ತಿನ್ನುವುದನ್ನು ಕಂಡ ಗೆಳೆಯರೊಬ್ಬರು, "ಸಕ್ಕರೆ ಕಾಯಿಲೆಯಿರುವ ನೀವು ಹೀಗೆ ತಿನ್ನಕೂಡದು" ಅಂದರಂತೆ. ಅದಕ್ಕೆ ಉತ್ತರವಾಗಿ ಗುಂಡಪ್ಪ ಜಿಲೇಬಿಯ ಇನ್ನಷ್ಟು ಗಾಲಿಗಳನ್ನು ಬಾಯಲಿಟ್ಟುಕೊಂಡು ಸವಿದು, "ಸಕ್ಕರೆ ಕಾಯಿಲೆ ಇದೆ... ಆದರೆ ನನ್ನಲ್ಲಿ ಇನ್‌ಸುಲಿನ್ ಔಷಧದ ಇಲಾಖೆಯೇ ಬೇರೆ, ಜಿಲೇಬಿ ಇಲಾಖೆಯೇ ಬೇರೆ!" ಎಂದು ದೊಡ್ಡದಾಗಿ ನಕ್ಕರಂತೆ... ಅದದ್ದು ಏನೆಂದರೆ, ಗುಂಡಪ್ಪನವರು ಬದುಕನ್ನು ಎಷ್ಟು ತೀವ್ರವಾಗಿ ಅನುಭವಿಸಿದರೆಂದರೆ ಅವರು ತೀರಿಕೊಂಡಾಗ ಅವರಿಗೆ ಎಂಭತ್ತೈದು ವರ್ಷ.

ನನ್ನ ಪರಿಚಿತರೊಬ್ಬರು ಎಪ್ಪತ್ತೈದು ವರ್ಷದವರು. ಸದಾ ಗೂರಲು, ಮೈಕೈ ನೋವು; ಆದರೆ ಅವರ ಜೀವನಪ್ರೇಮವೇನೂ ಕಮ್ಮಿಯಾಗುವುದಿಲ್ಲ. ಮೊನ್ನೆ ಅವರನ್ನು 'ಹೇಗಿದ್ದೀರಿ?' ಎಂದು ಕೇಳಿದರೆ, "ನಾಲ್ಕು ದಿನದಿಂದ ಆರಾಮಾಗಿದ್ದೇನೆ. **I'm leading life of bliss!** ನನ್ನ ನಾಲ್ಕು ದಿನಗಳ ಆರೋಗ್ಯವನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದೇನೆ... ಎರಡು ಸ್ವೀಟ್ ಥಾ!" ಅಂದು ಮಗುವಿನಂತೆ ನಕ್ಕರು.

–ಡಿಸೆಂಬರ್ 31, 1997

ಕರಾವಳಿಯಲ್ಲಿ ಗೋಸಂರಕ್ಷಣೆ ಮತ್ತು ದೇಶಸೇವೆ

ಒಂದು

ದಕ್ಷಿಣ ಕನ್ನಡ ಜಿಲ್ಲೆಯ ಮಲೆನಾಡಿನ ಒಂದು ಹಳ್ಳಿ. ಮುಖ್ಯರಸ್ತೆಯ ಬದಿಯಲ್ಲಿ ಒಂದು ಬಸ್‌ಸ್ಟಾಪ್. ಕತ್ತಲಾವರಿಸುವ ಹೊತ್ತು, ತಾಲೂಕು ಕೇಂದ್ರದಿಂದ ಆ ಮಾರ್ಗವಾಗಿ ಸಾಗುವ ಆ ದಿನದ ಕೊನೆಯ ಬಸ್ ಬಂದು ನಿಲ್ಲುತ್ತದೆ. ಸುಮಾರು ಇಪ್ಪತ್ತು ವರ್ಷದ ಕುರುಚಲು ಗಡ್ಡದ ತರುಣನೊಬ್ಬ ಕಪ್ಪು ಬಣ್ಣದ ಬ್ಯಾಗೊಂದನ್ನು ಹೆಗಲಿಗೆ ನೇತುಹಾಕಿಕೊಂಡು ಬಸ್ಸಿನಿಂದ ಇಳಿಯುತ್ತಾನೆ. ಆ ಊರಿಗೆ ಅಪರಿಚಿತನಂತೆ ಕಾಣುವ ಆತ ಯಾರನ್ನೋ ಹುಡುಕುವವನಂತೆ ಅತ್ತಿತ್ತ ನೋಡುತ್ತ ಬಸ್‌ಸ್ಟಾಪ್‌ನಲ್ಲಿ ನಿಲ್ಲುತ್ತಾನೆ. ಒಂದೆರಡು ಕ್ಷಣಗಳಲ್ಲಿ ನಾಲ್ಕಾರು ಜನರ ಗುಂಪೊಂದು ಅವನತ್ತ ಬರುತ್ತದೆ. ಅವರಲ್ಲೊಬ್ಬ ದಾಂಡಿಗನಿದ್ದಾನೆ. ಎಲ್ಲರೂ ಆಗಂತುಕ ತರುಣನನ್ನು ಸುತ್ತುವರಿದು ನಿಲ್ಲುತ್ತಾರೆ.

ದಾಂಡಿಗ: ಏಯ್ ..ಯಾರು ನೀನು?

ತರುಣ: ನಾನು ಇಲ್ಲಿ ..ಫ್ರೆಂಡ್ ಮನೆಗೆ ಬಂದಿದ್ದೇನೆ.

ದಾಂಡಿಗ: ಯಾರವನು ನಿನ್ನ ಗೆಳೆಯ?

ತರುಣ: ಅದು.. ಅವರು ನನ್ನ ಫ್ರೆಂಡಿನ ಫ್ರೆಂಡು. ನನ್ನನ್ನು ಕರೆದೊಯ್ಯಲು ಇಲ್ಲಿಗೆ ಈಗ ಬರ್ಬೇಕಿತ್ತು, ನಾನು ಕಾಯ್ತಿದ್ದೇನೆ.

ದಾಂಡಿಗ: ಇಲ್ಲಿ ಎಲ್ಲರೂ ಹಾಗೇ ಬರುವುದು, ನಿನ್ನ ಹೆಸರೇನು? ಯಾರವನು ನಿನ್ನ ಫ್ರೆಂಡು ಅವ್ನ ಹೆಸರೇನು?

ತರುಣ: (ಗಾಬರಿಯಾಗಿ) ಅವ್ನ ಹೆಸರು ಕೃಷ್ಣ ಅಲ್ಲ... ಹಾಗೇನೋ ಹೆಸರು.. ಸರೀ ಗೊತ್ತಿಲ್ಲ...

ಇನ್ನೊಬ್ಬ: (ದಾಂಡಿಗನನ್ನುದ್ದೇಶಿಸಿ) ಅಣ್ಣ... ಪಾಪ ಇವನಿಗೆ ಫ್ರೆಂಡಿನ ಹೆಸರೂ ಗೊತ್ತಿಲ್ಲ? ಪಾಪ ತೊಟ್ಟಿಲ ಮಗು?!

ತರುಣ: ಸ್ವಲ್ಪ ನಿಲ್ಲಿ ಅವರೇ ಬರಬಹುದು ಈಗ. ನಾನು ರೀಸರ್ಚ್ ಸ್ಟೂಡೆಂಟು..

ದಾಂಡಿಗ: ಅವರು ಅಂದ್ರೆ ಯಾರೂ .. ನಿನ್ನ ತಂಡದವರೋ.. ಎಲ್ಲ ಕಳ್ಳರು, ದೇಶದ್ರೋಹಿಗಳು. ಎಲ್ಲಿ ನಿನ್ನ ಚೀಲ ತೆಗಿ.. ಯಾರವ ನಿನ್ನ ಫ್ರೆಂಡು ಬೇಗ ಬೊಗಳು..

ತರುಣ: (ಇನ್ನೂ ಗಾಬರಿಯಿಂದ) ನಿಲ್ಲಿ ಫೋನ್ ಮಾಡ್ತೇನೆ.. ಅಯ್ಯೊ ಇಲ್ಲಿ ರೇಂಜಿಲ್ಲ...

(ಅಷ್ಟರಲ್ಲಿ ಒಬ್ಬ ಮೊಬೈಲ್ ಕಿತ್ತುಕೊಳ್ಳುತ್ತಾನೆ, ತರುಣ ಪ್ರತಿಭಟಿಸುತ್ತಿದ್ದಂತೆ ಎಲ್ಲರೂ ಸೇರಿ ಅವನಿಗೆ ಹೊಡೆಯುತ್ತಾರೆ. ತರುಣ ಕುಸಿದು ಬಸ್‌ಸ್ಟಾಪಿನಲ್ಲಿ ಕೂರುತ್ತಾನೆ, ಕತ್ತಲಾಗಿದೆ. ಅಷ್ಟರಲ್ಲಿ ಸ್ಕೂಟರೊಂದು ಬರುತ್ತದೆ. ಅದರಲ್ಲಿ ಬಂದ ವ್ಯಕ್ತಿ ಯಾರನ್ನೋ ಹುಡುಕುತ್ತಾನೆ.)

ಗುಂಪಿನವನೊಬ್ಬ: (ಸ್ಕೂಟರಿನವನ ಗುರುತು ಹಿಡಿದು) ಏನು ಕೇಶವಣ್ಣ?

ಕೇಶವ: ನನ್ನ ಫ್ರೆಂಡೊಬ್ಬರು ಅವರ ಕಡೆಯ ಸ್ಟೂಡೆಂಟ್ ಒಬ್ಬರನ್ನು ಕಳಿಸ್ತೇನೆ ಅಂತ ಹೇಳಿದ್ರು. ಬಸ್ ಹೋಗಿರ್ಬೇಕು. ನಾನು ಬರುವಾಗ ಸ್ವಲ್ಪ ತಡವಾಯ್ತು..

ಮತ್ತೊಬ್ಬ: ಇಲ್ಲಿ ಒಬ್ಬ ಇದ್ದಾನೆ ಇವನೋ ನೋಡಿ.

ಕೇಶವ: (ಕೇಶವ ತರುಣನನ್ನು ನೋಡುತ್ತಾನೆ, ಅವನ ಬಟ್ಟೆ ಹರಿದಿದೆ, ಮುಖಕ್ಕೆಲ್ಲ ಪೆಟ್ಟಾಗಿದೆ.) ಅಯ್ಯಯ್ಯೋ ಹೌದು ಇವರೇ. ಇದೆಲ್ಲ ಏನು..

ದಾಂಡಿಗ: ಏನಿಲ್ಲ ಕೇಶವಣ್ಣ ಅವ ಕೇಳಿದ್ದಕ್ಕೆ ಒಂದಕ್ಕೂ ಸರಿಯಾಗಿ ಉತ್ತರ ಕೊಡ್ಲಿಲ್ಲ.. ಕಳ್ಳ ಕಳ್ಳನ ಹಾಗೆ ಆಡಿದ, ಹುಡುಗ್ರು ಒಂದೆರಡು ಏಟು ಕೊಟ್ಟರು ಅಷ್ಟೆ.. ನಮಗೇನು ಗೊತ್ತು? ಅವನಿಗೆ ಬಾಯಿರಲಿಲ್ಲವ್ರೋ..

ತರುಣ: ನೋಡಿ ನನಗೆ ಸರಿಯಾಗಿ ಮಾತಾಡೋಕೆ ಇವರು..



ದಾಂಡಿಗ: ಹ್ಞೂಂ ಸಾಕು.. ಇನ್ನೀಗ ಹೊರಡಿ..

ಕೇಶವ: (ತರುಣನಿಗೆ ಸುಮ್ಮನಿರುವಂತೆ ಕಣ್ಣಲ್ಲೇ ಸೂಚಿಸುತ್ತಾ) ತಪ್ಪೆಲ್ಲಾ ನನ್ನದೇ. ನಾನು ಸರಿಯಾದ ಸಮಯಕ್ಕೆ ಬರ್ಬೇಕಿತ್ತು.. ಆದರೂ ನೀವು.. ಹೀಗೆ..

ದಾಂಡಿಗ: ಕೇಶವಣ್ಣ ನೀವು ಬೇಸರ ಮಾಡುವುದು ಬೇಡ.. ನಿಮ್ಮ ಫ್ರೆಂಡಿಗೆ ಹೇಳಿ. ಅಂದಹಾಗೆ ಎಚ್ಚರ.. ಹ್ಞಾಂ. ಇದನ್ನೇ ಒಂದು ದೊಡ್ಡ ವಿಷಯ ಅಂತ ಸುದ್ದಿ ಮಾಡ್ಬೇಡಿ. ದೇಶರಕ್ಷಣೆ ಅಂದರೆ ಸುಲಭದ ಮಾತಲ್ಲ, ಹ್ಞೂಂ.. ಎಲ್ಲ ಹೊರಡಿ.

ಎರಡು

ರೈತ: ನಿಮಗೆ ಇಲ್ಲಿಂದ ಹದಿನೈದು ಕಿ.ಮೀ. ದೂರ ಇರವುದು. ಅದಕ್ಕೆಷ್ಟು ಖರ್ಚು ಬಂದೀತು?

ಗಿರಾಕಿ: ಸ್ವಾಮಿ ನಿಮಗೆ ಗೊತ್ತಿದ್ದೂ ಕೇಳುತ್ತೀರಿ. ಈಗ ಹಸು ಸಾಗಣೆಗೆ ಕಷ್ಟ ಎಷ್ಟುಂಟು, ಪಂಚಾಯತಿಯಿಂದ ಒಪ್ಪಿಗೆ ಪತ್ರಬೇಕು, ಗೋಸಂರಕ್ಷಣೆಯವರನ್ನು ಕಾಣಬೇಕು, ಅವರು ಒಪ್ಪಬೇಕು. ಆಮೇಲೆ ವಾಹನದವರು, ಅವರಂತೂ ದನ ಸಾಗಿಸುವುದು ಅಂದರೆ ಸುಲಭದಲ್ಲಿ ಬರುವುದೇ ಇಲ್ಲ, ಇನ್ನು ಹೆಚ್ಚಿನ ಬಾಡಿಗೆ ವಾಹನಗಳೆಲ್ಲ ಇರುವುದು ಬ್ಯಾರಿಗಳದ್ದು. ಅವರಂತೂ ನಮಗ್ಯಾಕೆ ಇಲ್ಲದ ಉಸಾಬರಿ ಎಂದು ಹೆಚ್ಚಿಗೆ ಬಾಡಿಗೆ ಕೊಡುತ್ತೇನೆಂದರೂ ಹಸು ಸಾಗಿಸಲು ಬರುವುದಿಲ್ಲ, ಹಾಗಾಗಿ ಬಹಳ ಕಷ್ಟ ಸ್ವಾಮಿ.

ರೈತ: ಅದಕ್ಕೆಲ್ಲ ನೀವು ಹೆದರಬೇಕಾಗಿಲ್ಲ, ನಿಮ್ಮ ಮನೆವರೆಗೆ ನಾನೇ ಬರುತ್ತೇನೆ. ಯಾರು ಏನು ಮಾಡ್ತಾರೆ?

ಗಿರಾಕಿ: ನೀವು ದೊಡ್ಡವರು, ನಿಮ್ಮನ್ನು ಹೇಗೆ ನಾನು ಕರೆಯಲಿ? ಆದರೆ ನೀವೇ ಜೊತೆಯಲ್ಲಿ ಬಂದರೆ ಒಳ್ಳೆಯದೇ ಆಯ್ತು..

ರೈತ: ಸರಿ ಹಾಗಾದರೆ ಹಸುವಿಗೆ ಹತ್ತು ಸಾವಿರ ಕೊಡ್ತೀರೋ?

ಗಿರಾಕಿ: ಸ್ವಾಮೀ ನೀವೇ ಮನೆವರೆಗೆ ಸಾಗಿಸಿಕೊಟ್ಟರೆ ಐನೂರು ಹೆಚ್ಚಿಗೆ ಸೇರಿಸಿ ಕೊಡ್ತೇನೆ. ಹೇಗೂ ಅವರಿವರಿಗೆ ಕೊಡುವ ಹಣ..

(ಪಂಚಾಯತ್ ಪರವಾನಗಿಯನ್ನು ಪಡೆದು ರೈತರು ಬಾಡಿಗೆ ವಾಹನ ಮಾತಾಡಿ ಸ್ವತಃ ಹಸುವಿನೊಂದಿಗೆ ಪ್ರಯಾಣಮಾಡಿ ಹದಿನೈದು ಕಿ.ಮೀ. ದೂರದ ಗಿರಾಕಿಯ ಮನೆಗೆ ತಲುಪಿಸಿ ಬಂದರು.)

ಮೂರು

(ಸಂಜೆ ರೈತರ ಮನೆಯ ಲ್ಯಾಂಡ್ ಫೋನು ರಿಂಗಾಯಿತು..ರೈತರು ಫೋನೆತ್ತಿದರು..)

ಗೋರಕ್ಷಕ: ಹಲೋ.. ನಮಸ್ಕಾರ ನಾನು ಗೋರಕ್ಷಕದಳದ ಅಧ್ಯಕ್ಷ ಮಾತಾಡ್ತಾ ಇರೋದು.

ರೈತ: ನಮಸ್ಕಾರ?

ಗೋರಕ್ಷಕ: ಏನಿಲ್ಲಾ. ಹೀಗೇ.. ನೀವು ನಿನ್ನೆ ಒಂದು ಹಸು ಮಾರಾಟ ಮಾಡಿದ್ರಂತೆ..

ರೈತ: ಮಾರಾಟ ಹೌದು ಅದು ನಿಜವಾದ ಅರ್ಥದಲ್ಲಿ ಮಾರಾಟ ಅಲ್ಲ.. ತುಂಬಾ ಕಡಿಮೆಗೆ ಕೊಟ್ಟೆ.. ಸಾಕುವುದಕ್ಕೆ ಕಷ್ಟ ಆಗ್ತಿತ್ತು, ಹಾಲು ಸ್ವಲ್ಪ ಕಡಿಮೆ ಆಗ್ತಾ ಇತ್ತು.

ಗೋರಕ್ಷಕ: ನೀವು ಕಡಿಮೆಗೆ ಕೊಡುವುದಾಗಿದ್ರೆ ಅದರ ಬದಲಿಗೆ ಮಠಕ್ಕೋ ಗೋಶಾಲೆಗೋ ಕೊಡಬಹುದಾಗಿತ್ತು. ನಿಮಗೇನು ಅದು ದೊಡ್ಡ ಹಣ ಅಲ್ಲ. ಅಲ್ಲದೇ ಪುಣ್ಯದ ಕೆಲಸ. ನೀವೇ ಹೋಗಿ ಗಿರಾಕಿಯ ಮನೆಗೆ ತಲುಪಿಸಿ ಬಂದಿರಂತೆ?

ರೈತ: ಹೌದು ಅವರಿಗೆ ಸಾಗಿಸಲು ಧೈರ್ಯವೇ ಇಲ್ಲ, ಹಾಗಾಗಿ ನಾನೇ ಹೋಗಬೇಕಾಯ್ತು.

ಗೋರಕ್ಷಕ: ನಿಮ್ಮ ಮುನ್ನೆಚ್ಚರಿಕೆ ಮೆಚ್ಚುವಂಥಾದ್ದೇ. ಇರಲಿ... ಅಲ್ಲ ಕೆಲವು ಸಾರಿ ಹೆಸರು ಸುಳ್ಳು ಹೇಳಿಕೊಂಡು ಬ್ಯಾರಿಗಳು ವ್ಯಾಪಾರಕ್ಕೆ ಬರ್ತಾರೆ. ಅಲ್ಲ ನೀವು ಅಂತವರಿಗೆಲ್ಲ ಕೊಡುವವರಲ್ಲ ನಮಗೆ ಗೊತ್ತು, ಆದರೂ ಎಚ್ಚರಿಕೆಗೆ ಹೇಳಿದ್ದು.

ರೈತ: ಅದು ಹಾಗಲ್ಲ, ಈಗ ವಾಹನದವರೂ ಸಾಗಿಸಲು ಒಪ್ಪುತ್ತಿಲ್ಲ.

ಗೋರಕ್ಷಕ: ಹೌದು ಈಗ ನಾವು ಎಚ್ಚರಗೊಂಡಿದ್ದೇವೆ. ನಮ್ಮ ಕಣ್ಣು ತಪ್ಪಿಸುವುದು ಸುಲಭವಲ್ಲ, ಈಗ ನೀವೇ ಹೋದಿರಲ್ಲ ಆ ವ್ಯಾನಿನವನೂ ನನಗೆ ಮುಂಚಿತವಾಗಿ ಫೋನ್ ಮಾಡಿ ಒಪ್ಪಿಗೆ ಪಡೆದಿದ್ದ ನೀವು ಎಂಟು ಸಾವಿರದ ಐನೂರಕ್ಕೆ ಕೊಟ್ಟದ್ದಲ್ಲವ್ರೋ ಹಸುವನ್ನು ..ಹ..ಹಹ್ಹಾ?

ರೈತ: ನಿಮಗೆ ಎಲ್ಲ ವಿವರ ಗೊತ್ತುಂಟು?

ಗೋರಕ್ಷಕ: ನಾವು ಹಾಗೇ ಸ್ವಾಮಿ, ರಕ್ಷಣೆ ಅಂದರೆ ಸುಲಭದ ಮಾತೇ? ಅದಿರಲಿ, ನಾನೀಗ ಫೋನ್ ಮಾಡಿದ್ದು ಯಾಕಂದ್ರೆ ನಿಮ್ಮಲ್ಲಿ ಇನ್ನೂ ಒಂದೆರಡು ಮುದಿ ಹಸುಗಳು ಇದೆಯಲ್ಲ, ನಾವೀಗ ನಮ್ಮ ತಾಲೂಕಿನಿಂದ ಎಲ್ಲ ಮುದಿ ಜಾನುವಾರನ್ನೂ ಗೋಶಾಲೆಗಳಿಗೆ ಕಳಿಸುತ್ತಿದ್ದೇವೆ. ಈಗಾಗ ನಮ್ಮ ಕರಾವಳಿಯ ಗೋಶಾಲೆಗಳೆಲ್ಲ ಭರ್ತಿಯಾಗಿ ಹಾಗಾಗಿ ನಾವೀಗ ಘಟ್ಟದ ಮೇಲಿನ ಗೋಶಾಲೆಗ ಕಳಿಸುತ್ತಿದ್ದೇವೆ. ನೋಡಿ ರಾಮಣ್ಣ ಗೌಡ್ರಲ್ಲಿ ಎರಡು ಉಂ ಪಟೇಲ್ರು ಒಂದು ಹೋರಿ ಕೊಡುತ್ತಿದ್ದಾರೆ, ಶೀನಪ್ಪಣ್ಣನಲ್ಲಿ ಮೂರು ಹೀಗೆ.. ನೀವೇ ವಿಚಾರಿಸಿಕೊಳ್ಳಿ.. ಘಟ್ಟ ಗೋಶಾಲೆ ಆದ್ರಿಂದ ಸ್ವಲ್ಪ ಸಾಗಾಣಿಕೆ ಖರ್ಚು ನೀ ಕೊಡ್ಬೇಕು. ಒಂದು ಜಾನುವಾರಿಗೆ ಐನೂರು ಕೊಡಿ ಸಾ ಇಲ್ಲೇ ಆಗಿದ್ರೆ ನಾವೇ ಕೈಯಿಂದ ಹಾಕ್ತಿದ್ದೆವು. ಮುಂದಿ ವಾರ ಲಾರಿ ಬರುವ ಮುಂಚೆ ಫೋನ್ ಮಾಡ್ತೇನೆ. ಇ ಯಾವುದನ್ನೂ ಮಾರುವ ಯೋಚನೆ ಇಲ್ವಲ್ಲ ನಿಮ ಹಾಗೆ ಮಾರಿದರೂ ನಮ್ಮ ಹುಡುಗರೇ ಸಾಗಿಸಬೇಕಲ ಹಹ್ಹಹ್ಹಾ?? ನಿಮ್ಮಲ್ಲಿಂದ ಎರಡು ಹಸು ಅ ಬರ್ಕೊಂಡಿದ್ದೇನೆ. ನಮಸ್ಕಾರ.

ನಾಲ್ಕು

ಮುಂದಿನ ಒಂದು ವಾರದಲ್ಲಿ ರೈತರ ಮನೆಯಂಗಳದ ಗೋರಕ್ಷಕದಳದವರ ಲಾರಿಬಂದು ನಿಂತಿತು. ರೈತರು ಎರ ಮುದಿಹಸುಗಳನ್ನೂ ಲಾರಿಗೆ ಹತ್ತಿಸಿ ಒಂದುಸಾ ರೂಪಾಯಿ ಸಾಗಾಣಿಕೆ ಖರ್ಚು ನೀಡಿದರು. ಲಾರಿ ಡ್ರೈವ ಹದಿನೈದು ವರ್ಷಗಳ ಹಿಂದೆ ಅವರದೇ ಊರಿನಲ್ಲಿ ಕೂ ಮಾಡುತ್ತಿದ್ದ ತನಿಯಪ್ಪನ ಮಗ ಸುಂದರ. ಅವನೇ ಗುರು ಹಿಡಿದು ರೈತರನ್ನು ಮಾತಾಡಿಸಿದ. ಲಾರಿಯಲ್ಲಿ ಆಗ ನಾಲ್ಕೈದು ಜಾನುವಾರುಗಳಿದ್ದವು. ಎಲ್ಲವನ್ನೂ ತುಂಬಿಕೊಂ ಲಾರಿ ಮುಖ್ಯ ರಸ್ತೆಯನ್ನು ಹಾದು ಹೈವೇಯತ್ತ ಚಲಿಸಿ ನಾಲ್ಕಾರು ಜನ ರೈತರು ಪುಣ್ಯ ಕಟ್ಟಿಕೊಂಡೆವೆಂದೋ ಮು ಹಸುಗಳು ವಿಲೇವಾರಿಯಾದವೆಂದೋ ಹಗುರಾದರು.

ತಿಂಗಳ ನಂತರ ಪೇಟೆಯ ಹೋಟೆಲಿನಲ್ಲಿ ಕಾ ಕುಡಿಯುವಾಗ ರೈತರಿಗೆ ಲಾರಿ ಚಾಲಕ ಸುಂದರ ಕಾಣಸಿ ತಮ್ಮೂರ ಹುಡುಗನೆಂಬ ಪ್ರೀತಿಯಿಂದ ರೈತ ಮಾತಾಡಿಸಿದರು. ಅವತ್ತು ಯಾವ ಗೋಶಾಲೆಗೆ ಹಸುಗಳ ಬಿಟ್ಟಿರಿ ಎಂದು ವಿಚಾರಿಸಿದರು. ಅದಕ್ಕೆ ಸುಂದರ ಕೊ ಉತ್ತರ ಹೀಗಿತ್ತು: "ಅದು ನಾನು ಕಾಯಂ ಓಡಿಸು ಲಾರಿ ಅಲ್ಲಣ್ಣ, ನಾನು ಅವತ್ತು ಟೆಂಪರರಿ. ಕೇರಳ ಗಡಿವ ಮಾತ್ರ ನಾನು ಓಡಿಸಿದೆ. ನಂತರ ಡ್ರೈವರ್ ಬದಲಾದ ನನಗೆ ಒಂದು ಸಾವಿರ ಕೊಟ್ಟರು. ನಾನು ಬಸ್ಸಿನಲ್ಲಿ ವಾಪ ಬಂದೆ. ಯಾರಿಗೂ ಹೇಳ್ಬೇಡಿ.. ಬಡವ ಬದುಕ್ಬೇಕು."

*****

ಇದು ಕತೆಯಲ್ಲ, ನಾಟಕದ ದೃಶ್ಯಗಳೂ ಅಲ್ಲ, ನ ಕರಾವಳಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ನಿಜ ಘಟನೆಗಳು

● ಪ್ರಸಾದ್ ರಕ್ಷಿ

ಓದುಗರ ಗಮನಕ್ಕೆ

ಅನಿವಾರ್ಯ ಕಾರಣಗಳಿಂದ ಈ ವಾರ 'ಅಣ ಪ್ರಕಟವಾಗುತ್ತಿಲ್ಲ. ಮುಂದಿನ ಸಂಚಿಕೆಯಿಂದ ಎಂದಿನ ಪ್ರಕಟವಾಗುವುದು... –ಸ

ಬೇಲೇಕೇರಿ ಹಗರಣ: ಪೊಲೀಸರಿಗೂ ಶಿಕ್ಷೆ ಆಗಲಿ

ಬೇಲೇಕೇರಿ ಬಂದರಿನಿಂದ ಆದ ಅದಿರು ಕಳ್ಳತನವನ್ನು ಕರ್ನಾಟಕದ ಸಿಸಿಬಿ ಮತ್ತು ಸಿಐಡಿ ಪೊಲೀಸರು ಬರೋಬ್ಬರಿ 18 ತಿಂಗಳ ಕಾಲ ತನಿಖೆ ನಡೆಸಿ, ಒಂದು ಲಕ್ಷದಷ್ಟು ದಾಖಲೆಗಳನ್ನು ಕಲೆಹಾಕಿದ್ದರು. ಆದರೂ ಈ ಹಗರಣದಲ್ಲಿ ಭಾಗಿ ಆಗಿದ್ದ ಮುಂಬೈ, ಗೋವಾ ಮತ್ತು ಕರ್ನಾಟಕ ಮೂಲದ ಹಿರಿಯ ರಾಜಕಾರಣಿಗಳ ಮತ್ತು ಉದ್ಯಮಿಗಳ ವಿರುದ್ಧ ಮಾಹಿತಿಯನ್ನು ಸಂಗ್ರಹಿಸಲಾಗಿರಲಿಲ್ಲ, ಬದಲಾಗಿ ಈ ಪೊಲೀಸರು ಕಾರವಾರ ಬಂದರಿನ ಕಿರಿಯ ಅಧಿಕಾರಿಗಳ




ವಿರುದ್ಧ ಚಾರ್ಜ್‌ಶೀಟ್ ಹಾಕಿ ರಾಜಕರಣಿಗಳನ್ನು ಮತ್ತು ಉದ್ಯಮಿಗಳನ್ನು ಬಚಾವ್ರು ಮಾಡಲು ತಯಾರಿ ನಡೆಸಿದ್ದರು.

ಕೊನೆಗೆ ಎಸ್.ಆರ್. ಹಿರೇಮಠರು ತೆಗೆದುಕೊಂಡ ಕ್ರಮದಿಂದಾಗಿ ಒಂದೇ ವಾರದಲ್ಲಿ ಸಿಬಿಐ ಪೊಲೀಸರು ಈ ಹಗರಣದಲ್ಲಿ ಭಾಗಿ ಆಗಿದ್ದ ಹಿರಿಯ ರಾಜಕಾರಣಿಗಳ ಮತ್ತು ಉದ್ಯಮಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತಾಯಿತು.

ಓರ್ವ ಸಾಮಾನ್ಯ ಮನುಷ್ಯ ಕಳ್ಳನಿಗೆ ರಕ್ಷಣೆ ನೀಡಿದರೆ ಅದನ್ನೂ ಒಂದು ಅಪರಾಧ ಎಂದು ಪರಿಗಣಿಸಿ ಕಾನೂನು ಆ ಸಾಮಾನ್ಯನಿಗೂ ಶಿಕ್ಷೆ ವಿಧಿಸುತ್ತದೆ. ಹಾಗೆಯೇ ಆರೋಪಿಯೊಬ್ಬನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗುತ್ತಿರುವಾಗ ಆರೋಪಿ ತಪ್ಪಿಸಿಕೊಂಡರೆ ಆತನನ್ನು ಕರೆದುಕೊಂಡು ಹೋಗುತ್ತಿದ್ದ ಪೇದೆಗಳನ್ನು ತಕ್ಷಣವೇ ಕೆಲಸದಿಂದ ವಜಾ ಮಾಡಲಾಗುತ್ತದೆ. ಇದೇ ನಿಯಮವನ್ನು ರಾಜ್ಯದ ರಾಜಕಾರಣಿಗಳ ಮತ್ತು ಉದ್ಯಮಿಗಳ ರಕ್ಷಣೆಗೆ ನಿಂತ ಸಿಸಿಬಿ ಮತ್ತು ಸಿಐಡಿ ಇಲಾಖೆಯ ಅಧಿಕಾರಿಗಳಿಗೂ ಅನ್ವಯಿಸಬೇಕಲ್ಲವೇ? ಯಾಕೆಂದರೆ ಅಪರಾಧವನ್ನು ಎಸಗಿದವರ ರಕ್ಷಣೆಗೆ ನಿಲ್ಲುವುದು ಅಪರಾಧಕ್ಕಿಂತ ಘೋರ ಅಪರಾಧವಾಗುತ್ತದೆ. ಈ ಕಾರಣಕ್ಕೇ ಸಿಸಿಬಿ ಮತ್ತು ಸಿಐಡಿ ಪೊಲೀಸ್ ಅಧಿಕಾರಿಗಳನ್ನೂ ಈ ಹಗರಣದಲ್ಲಿ ಆರೋಪಿಗಳನ್ನಾಗಿಸಬೇಕಿದೆ. ಮಾತ್ರವಲ್ಲ, ಅವರ ಮೇಲೆ ಒತ್ತಡ ತಂದ ರಾಜಕಾರಣಿಗಳು ಯಾರು ಎಂಬುದನ್ನೂ ವಿಚಾರಣೆಯಲ್ಲಿ ಹೊರತೆಗೆಯಬೇಕಿದೆ. ಈ ವಿಷಯವನ್ನು ಅರಿಯುವುದು ಜನಸಾಮಾನ್ಯರ ಹಕ್ಕೂ ಆಗಿದೆ.

ಈ ಹಗರಣದಲ್ಲಿ ಭಾಗಿ ಆಗಿರುವ ಪೊಲೀಸ್ ಅಧಿಕಾರಿಗಳನ್ನು ಯಾಕೆ ರಕ್ಷಿಸಬೇಕು?

- ಡಿ.ಎನ್.ವೀರಪ್ಪ, ಬೆಂಗಳೂರು



ಚೆಡ್ಡಿಗಳ ಪಂಚರಂಗಿ ಆಟ ಬಲ್ಲ ಜನ

ಬಿಜೆಪಿ ಅಧಿಕಾರ ವಹಿಸಿಕೊಂಡ ದಿನದಿಂದಲೂ ಒಂದಲ್ಲ ಒಂದು ಪಂಚರಂಗಿ ಆಟ ಆಡಿಕೊಂಡು ಬರುತ್ತಿರುವುದು ರಾಜ್ಯದ ಪ್ರಜ್ಞಾವಂತ ಮತದಾರರಿಗೆ ಗೊತ್ತು. ಕಷ್ಟಪಟ್ಟು ದುಡಿಯುವ ಕೆಎಸ್‌ಆರ್‌ಟಿಸಿ ಕಾರ್ಮಿಕರನ್ನು ಕಾಲಕಸವಾಗಿ ಕಾಣುವುದು ಸರಿಯಲ್ಲ ಎಂದು ಸಾರಿಗೆ ಸಚಿವ ಮತ್ತು ಉಪಮುಖ್ಯಮಂತ್ರಿ ಅಶೋಕ್ ಸಾಹೇಬರಿಗೆ ಆದಷ್ಟು ಬೇಗ ಅರ್ಥವಾಗಲಿ.

- ವಿಷ್ಣುಶಂಕರ್, ಎಸ್‌ಎಂಎಸ್ ಮೂಲಕ

ಮಚಲಿ ಇನ್ನಷ್ಟು ಕಾಲ ಬದುಕಲಿ

ಮಚಲಿ ಎಂಬ ಹೆಣ್ಣು ಹುಲಿಯ ಬಗ್ಗೆ ಗೌರಿ ಅ ಚೆನ್ನಾಗಿ ಬರೆದಿದ್ದಾರೆ. ಈಗ ಸಾವಿನಂಚಿನಲ್ಲಿರುವ ಮ ಯನ್ನು ನೋಡಬೇಕೆನಿಸುತ್ತಿದೆ. ಆದರೆ ದೂರದಲ್ಲಿ ರಣಥಂಬೋರ್ ರಾಷ್ಟ್ರೀಯ ಉದ್ಯಾನವನಕ್ಕೆ ಹೋಗುವ ಶಕ್ತಿ ನನಗಿಲ್ಲ. ಆಕೆ ಮತ್ತಷ್ಟು ಕಾಲ ಬಾಳಲಿ ಎ ಹಾರೈಸುತ್ತೇನೆ.

- ಎನ್.ಕೆ.ವರದರಾಜ್, ಕೋ


ಕುಂಕುಮ ಇಡದ ಚೆಡ್ಡಿ ಅಸೀಮ್

ಅಸೀಮ್ ತ್ರಿವೇದಿ ಕುಂಕುಮ ಇಡದ ಚೆಡ್ಡಿ ಎ ಶಂಕೆ ನನಗಿತ್ತು, ಅಂಬೇಡ್ಕರ್ ಹಾಗೂ ಸಂವಿಧಾನದ ಆರೆಸ್ಸೆಸ್ ಅವರಿಗಿರುವ ಹೊಲಸು ತಿರಸ್ಕಾರವನ್ನು ಕ ಮೂಲಕ ಸೂಚ್ಯವಾಗಿ ಈ ಅಸೀಮ್ ತ್ರಿವ ವ್ಯಕ್ತಪಡಿಸಿದ್ದಾನೆ. ಇದು ಒಂದು ಅಭಿಪ್ರಾಯ ಸ್ವಾತ ಚೆಡ್ಡಿಗಳ ಮಾದರಿ!

ಅಂದಹಾಗೆ, ಈ ಹಿಂದೆ ಸಾಯಿ ಬಾಬಾನನ್ನು ಹೊಗಳಿದ್ದ ಆರೆಸ್ಸೆಸ್‌ನ ಹಾಲಿ ನಾಯಕ ಮೋಹ ಭಾಗವತ್ ಮತ್ತು ಬಿಜೆಪಿಯ 'ರಾಷ್ಟ್ರಪುರು ಎಲ್.ಕೆ.ಅದ್ವಾನಿ ಈಗ ಹೊರಬಿದ್ದಿರುವ ಸಾಯಿಬಾಬ ಚಿನ್ನದ ಕಕ್ಕಸ್ಸು ಗುಂಡಿ ಮತ್ತು ಕಪ್ಪು ಹಣದ ರಾಶಿ ಇನ್ನೂ ಏನನ್ನೂ ಹೇಳಿಲ್ಲವಲ್ಲ?!

- ರವಿಕುಮಾರ್, ಹಾ

ವಿ.ಸೂ. : ನಿಮ್ಮ ಅನಿಸಿಕೆಗ
lankesh70@rediffmail.co
ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹ
ನಿಮ್ಮ ಪ್ರತಿಕ್ರಿಯೆಗಳನ್ನು 9980331
ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹ



ದುಬಾರಿ ಐತಿಹಾಸಿಕ ಚಿತ್ರ ಅಪಸ್ವರದಲ್ಲಿ...


ಆನಂದ್ ಬಿ. ಅಪ್ಪುಗೋಳ್.


ಕನ್ನಡ ಚಿತ್ರರಂಗದ ಅತ್ಯಂತ ದುಬಾರಿ 'ಕ್ರಾಂತಿಯೋಗಿ ಸಂಗೊಳ್ಳಿ ರಾಯಣ್ಣ' ಬಿಡುಗಡೆಗೆ ತಯಾರಾಗಿದೆ. ಒಂದು ಅಂದಾಜಿನ ಪ್ರಕಾರ ಈ ಚಿತ್ರಕ್ಕೆ ಆಗಿರುವ ವೆಚ್ಚ 20 ಕೋಟಿ ರೂಪಾಯಿಗೂ ಹೆಚ್ಚು. ಇಂತಹ ಸಾಹಸಕ್ಕೆ ಕೈಹಾಕಿರುವವರು ನಿರ್ಮಾಪಕ ಆನಂದ್ ಬಿ. ಅಪ್ಪುಗೋಳ್.

ಮೊನ್ನೆ ಈ ಚಿತ್ರದ ಆಡಿಯೋ ಬಿಡುಗಡೆ ಸಮಾರಂಭ ಬಹಳ ಅದ್ದೂರಿಯಾಗೇ ನಡೆಯಿತು. ಆದರೂ ಈಗ ಈ ಚಿತ್ರತಂಡದಿಂದಲೇ ಅಲ್ಲೊಂದು, ಇಲ್ಲೊಂದು ಅಪಸ್ವರ ಕೇಳಿಬರುತ್ತಿದೆ. ಮುಖ್ಯವಾಗಿ ಚಿತ್ರದ ನಿರ್ದೇಶಕ ನಾಗಣ್ಣ ಮತ್ತು ಈ ಚಿತ್ರದ ಸಂಭಾಷಣೆ, ಗೀತರಚನೆ ಯಂತಹ ಜವಾಬ್ದಾರಿಯುನ್ನು ಹೊತ್ತಿದ್ದ ಕೇಶವಾದಿತ್ಯ - ಇವರಿಬ್ಬರ ನಡುವಿನ ಭಿನ್ನಾಭಿಪ್ರಾಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂಬ ಮಾತು ಕೇಳಿಬರುತ್ತಿದೆ. ಯಾಕೆಂದರೆ ಕೇಶವಾದಿತ್ಯ ಆಯ್ಕೆ ಮಾಡಿದ್ದ ಸಂಗೀತ ನಿರ್ದೇಶಕ ಯಶೋವರ್ಧನ್ ಅವರನ್ನು ನಾಗಣ್ಣ ಬಿಟ್ಟು ಸದ್ಯದ ಬಿಸಿ ಸಂಗೀತ ನಿರ್ದೇಶಕ ಎನಿಸಿಕೊಂಡಿರುವ ಹರಿಕೃಷ್ಣ ಅವರಿಂದ ಈ ಚಿತ್ರಕ್ಕೆ ರೀರೆಕಾರ್ಡಿಂಗ್ ಮಾಡಿಸಿದ ನಂತರ ನಾಗಣ್ಣ ಮತ್ತು ಕೇಶವಾದಿತ್ಯ ಪರಸ್ಪರ ಮಾತನಾಡುವುದನ್ನೇ ಬಿಟ್ಟು ಬಿಟ್ಟಿದ್ದಾರೆ. ಇವರಿಬ್ಬರ ಅಹಂನಿಂದಾಗಿ ಈ ಚಿತ್ರದ ಯಶಸ್ಸಿಗೆ ತೊಂದರೆಯಾಗಬಹುದು ಎಂದು ನಿರ್ಮಾಪಕ ಆನಂದ್.ಬಿ. ಅಪ್ಪುಗೋಳ್ ಆತಂಕಗೊಂಡಿದ್ದಾರೆ.

ಈ ಚಿತ್ರದ ಸಂಗೀತದ ಬಗ್ಗೆ ಹೇಳುವುದಾದರೆ ಬಹುತೇಕ ಎಲ್ಲ ಹಾಡುಗಳ ಟ್ಯೂನ್‌ಗಳು ಈ ಹಿಂದೆ ಎಲ್ಲೋ ಕೇಳಿಸಿದಂತಿವೆ. ಹಾಗಾಗಿ ಕೇಳುಗರಿಗೆ ಈ ಚಿತ್ರದ ಹಾಡುಗಳು ಅಷ್ಟೇನೂ ಮಜಾ ನೀಡುತ್ತಿಲ್ಲ. ಸಾಧಾರಣವಾಗಿ ಚಿತ್ರದ ಹಾಡುಗಳು ಜನಮನ್ನಣೆಯನ್ನು ಗಳಿಸಿದರೆ ಅದು ಚಿತ್ರದ ಯಶಸ್ಸಿಗೂ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂಗೀತ ನಿರ್ದೇಶಕ ಯಶೋವರ್ಧನ್ ಜನ ಮೆಚ್ಚುವ ರಾಗಗಳನ್ನು ನೀಡುವ ಬದಲು ಹಳೆಯ ಟ್ಯೂನ್‌ಗಳನ್ನೇ ಬಟ್ಟಿ ಇಳಿಸಿ ನಿರಾಸೆಗೊಳಿಸಿದ್ದಾರೆ ಎಂದು ಹೇಳಬಹುದು.


ಜಯಪ್ರದಾ

ಇದಕ್ಕಿಂತಲೂ ಮುಖ್ಯವಾಗಿ ಸಂಗೊಳ್ಳಿ ರಾಯಣ್ಣನ ಊರಿನ ಜನರಲ್ಲಿ ಈ ಚಿತ್ರದ ಬಗ್ಗೆ ಗೊಂದಲ ಸೃಷ್ಟಿಯಾಗಿದೆ. ಸಂಗೊಳ್ಳಿ ರಾಯಣ್ಣನನ್ನು ಬೆಳಗಾವಿಯ ಬೈಲಹೊಂಗಲದ ಸುತ್ತ ಮುತ್ತಲಿನ ಜನರೆಲ್ಲ ಒಬ್ಬ ರಾಷ್ಟ್ರ ನಾಯಕನನ್ನಾಗಿ, ದೇಶಪ್ರೇಮಿಯನ್ನಾಗಿ ನೋಡುತ್ತಾ ಬಂದಿದ್ದಾರೆ. ಆದರೆ ಈಗ ದಿಢೀರನೆ ಸಂಗೊಳ್ಳಿ ರಾಯಣ್ಣನನ್ನು ಈ ಚಿತ್ರತಂಡದವರು ಒಬ್ಬ ಕುರುಬರ ನಾಯಕನ ತರಹ ಪ್ರಾಜೆಕ್ಟ್ ಮಾಡುತ್ತಿರುವುದು ಎಲ್ಲರಿಗೂ ಬೇಸರ ತಂದಿದೆ.



ಕಿತ್ತೂರು ರಾಣಿ ಚನ್ನಮ್ಮನ ಆಸ್ಥಾನದಲ್ಲಿ ಒಬ್ಬ ಸಾಮಾನ್ಯ ಸಿಪಾಯಿಯಾಗಿದ್ದ ಸಂಗೊಳ್ಳಿ ರಾಯಣ್ಣ ಬ್ರಿಟಿಷರ ವಿರುದ್ಧ ಗೆರಿಲ್ಲಾ ಮಾದರಿಯಲ್ಲಿ ಯುದ್ಧ ಮಾಡಿದ್ದ. ಆದರೆ ಈ ಚಿತ್ರದಲ್ಲಿ ಸಂಗೊಳ್ಳಿ ರಾಯಣ್ಣನನ್ನು ವೈಭವೀಕರಿಸುವಾಗ ರಾಣಿ ಚನ್ನಮ್ಮಳನ್ನು ನಿರ್ಲಕ್ಷಿಸಿಬಿಟ್ಟರೆ ಆದರಿಂದ ಚಿತ್ರಕ್ಕೆ ಖಂಡಿತವಾಗಿಯೂ ತೊಂದರೆಯಾಗುತ್ತದೆ. ಏಕೆಂದರೆ ರಾಣಿ ಚನ್ನಮ್ಮ ಕೂಡ ತನ್ನ ಪರಾಕ್ರಮ ಮತ್ತು ಸಾಹಸ ಕಥೆಗಳಿಗೆ ಖ್ಯಾತಿ ಪಡೆದಿರುವವಳು.

ಇಲ್ಲಿ ಇನ್ನೊಂದು ಸೂಕ್ಷ್ಮ ವಿಷಯ ಅಡಗಿದೆ. ಅದೇನೆಂದರೆ ಯಾವಾಗ ಸಂಗೊಳ್ಳಿ ರಾಯಣ್ಣನನ್ನು ಕುರುಬರ ನಾಯಕನಂತೆ ಪ್ರಾಜೆಕ್ಟ್ ಮಾಡಲು ಚಿತ್ರದ ತಂಡದವರು ಪ್ರಾರಂಭಿಸಿದರೋ ಆಗ ಲಿಂಗಾಯತರೆಲ್ಲ ಸೇರಿ "ಕಿತ್ತೂರು ಚನ್ನಮ್ಮ ನಮ್ಮವರು" ಎಂದು ಹೇಳಲು ಆರಂಭಿಸಿದರು. 'ಸಂಗೊಳ್ಳಿ ರಾಯಣ್ಣ' ಚಿತ್ರ ಈ ತರಹ ಜಾತೀಯ ಕಾರಣಕ್ಕಾಗಿ ಸುದ್ದಿಯಾಗುತ್ತಿರುವುದು ನಿಜಕ್ಕೂ ವಿಷಾದನೀಯ.

ಈ ಎಲ್ಲ ಅಪಸ್ವರ ಮತ್ತು ವಾದ-ವಿವಾದದ ಹೊರತಾಗಿಯೂ ಈ ಚಿತ್ರ ಗೆಲ್ಲಲೇಬೇಕು. ಅದಕ್ಕೆ ಎರಡು ಕಾರಣಗಳಿವೆ.

ಮೊದಲನೆಯದಾಗಿ, ಐತಿಹಾಸಿಕ ಚಿತ್ರಗಳು ಅಪರೂಪವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಸದಭಿರುಚಿ ಪ್ರೇಕ್ಷಕರು ಇದನ್ನು ಗೆಲ್ಲಿಸಬೇಕು. ಎರಡನೆಯದಾಗಿ, ಸಂಗೊಳ್ಳಿ ರಾಯಣ್ಣನಂತಹ ಕ್ರಾಂತಿಕಾರಿಯನ್ನು ಕುರಿತ ಚಿತ್ರವನ್ನು ನಾವು ನೋಡುವ ಮೂಲಕ ಆತನ ಹೋರಾಟದ ಆಶಯವನ್ನು ಬೆಂಬಲಿಸಬೇಕು.

ಚಾಲೆಂಜಿಂಗ್ ಸ್ಟಾರ್ ದರ್ಶನ್ ಈ ಚಿತ್ರಕ್ಕಾಗಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದು ನಿಜಕ್ಕೂ ಮೆಚ್ಚುವಂತಹ ಸಂಗತಿ. ಚಿತ್ರೀಕರಣ ಸಂದರ್ಭದಲ್ಲಿ ನಿರ್ದೇಶಕ ನಾಗಣ್ಣನವರು ಕೇಳಿದಷ್ಟು ದಿನ ಕಾಲ್‌ಶೀಟ್ ನೀಡಿದ ದರ್ಶನ್ ಆನಂತರ ಡಬ್ಬಿಂಗ್ ಮಾಡಲು ಕೂಡ ಸಾಕಷ್ಟು ಸಮಯ ತೆಗೆದುಕೊಂಡು ಚಿತ್ರದ ತನ್ನ ಪಾತ್ರಕ್ಕೆ ಜೀವ ತುಂಬಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಇನ್ನು ಕಿತ್ತೂರು ಚನ್ನಮ್ಮನ ಪಾತ್ರದಲ್ಲಿ ನಟಿಸಿರುವ ಜಯಪ್ರದಾ ಕೂಡ ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿರುವ ಸುದ್ದಿ ಕೇಳಿಬಂದಿದೆ. ಆದರೆ ಈ ಹಿಂದೆ ಬಿ.ಸರೋಜಾದೇವಿಯವರು ನಿರ್ವಹಿಸಿದ ಕಿತ್ತೂರು ಚನ್ನಮ್ಮನ ಪಾತ್ರದಷ್ಟೇ ಈ ಪಾತ್ರವೂ ಖದರ್‌ನಲ್ಲಿ ಮೂಡಿಬಂದಿದೆಯೋ ಗೊತ್ತಿಲ್ಲ.


ಬಿ.ಸರೋಜಾದೇವಿ





ಅದೇನೇ ಇರಲಿ, ಅನೇಕ ವರ್ಷಗಳ ನಂತರ ಕನ್ನಡ ಸಿನಿಮಾ ಪ್ರೇಕ್ಷಕರು ಒಂದು ಅದ್ದೂರಿ ಮತ್ತು ಐತಿಹಾಸಿಕ ಚಿತ್ರವನ್ನು ನೋಡುವ ಸಂದರ್ಭ ಸದ್ಯದಲ್ಲೇ ಎದುರಾಗಲಿದೆ. 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಚಿತ್ರ ನಾಡಿನ ಜನರಲ್ಲಿ ಆತನ ಹೋರಾಟದ ಕಿಚ್ಚನ್ನು ಹುಟ್ಟಿಸಲಿ ಎಂಬ ಆಶೆ ನಮ್ಮದು.

• ಶೆಣೈ

ರಾವಣ ಮತ್ತು ಸಚ್ಚಿದಾನಂದಬಾಬು: ಕೆಲವೊಂದು ಪ್ರಶ್ನೆಗಳು

ಒಂದು ಪತ್ರ

ಸೆಪ್ಟೆಂಬರ್ 2 ರಂದು ಸಂಜೆ 5 ಗಂಟೆಗೆ ಟಿವಿ9 ನಲ್ಲಿ 'ಓಂ ನಮೋ ರಾವಣೇಶ್ವರ' ಎಂಬ ಕಾರ್ಯಕ್ರಮ ಪ್ರಸಾರವಾಯಿತು. ಈ ಕಾರ್ಯಕ್ರಮದಲ್ಲಿ ಮಳವಳ್ಳಿ ತಾಲ್ಲೂಕಿನ ನಿಡಘಟ್ಟ ಗ್ರಾಮದಲ್ಲಿರುವ ರಾವಣೇಶ್ವರ ದೇವಸ್ಥಾನದ ಬಗ್ಗೆ ಚರ್ಚೆ ನಡೆಯಿತು. ಚರ್ಚೆಯಲ್ಲಿ ಭಾಗವಹಿಸಿದವರು ದೇವಸ್ಥಾನದ ಅರ್ಚಕರಾದ ಅಶ್ವಥರು ಮತ್ತು ಜ್ಯೋತಿಷಿ/ವಾಸ್ತುತಜ್ಞರಾದ ಸಚ್ಚಿದಾನಂದ ಬಾಬು ಎಂಬುವವರು. ಒಟ್ಟಾರೆ ಕಾರ್ಯಕ್ರಮದಲ್ಲಿ ಗ್ರಾಮ್ಯ/ನಗರ, ಜನಪದ/ಶಿಷ್ಟ ಸಂಸ್ಕೃತಿ ಮತ್ತು ನಂಬಿಕೆಗಳ ನಡುವಿನ ಸಂಘರ್ಷವನ್ನು ಗಮನಿಸಿದೆ. ಈ ಸಂಘರ್ಷಕ್ಕೆ ಮೂಲಕಾರಣ ಸಚ್ಚಿದಾನಂದಬಾಬುರವರ ಶಿಷ್ಟ-ಕೇಂದ್ರಿತ, ವೈದಿಕ ಪ್ರತಿಷ್ಠೆ ಮತ್ತು, ಪುರಾಣ ಆಧಾರಿತ ಅನಿಸಿಕೆಗಳು ಮತ್ತು ಉಪದೇಶಗಳು. ಈ ಹಿನ್ನೆಲೆಯಲ್ಲಿ ನನ್ನಲ್ಲಿ ಉಂಟಾದ ಕೆಲವು ಸಂದೇಹಗಳನ್ನು ಮತ್ತು ಪ್ರಶ್ನೆಗಳನ್ನು ಅವರಿಗೆ ಕೇಳಲು ಇಚ್ಛಿಸುತ್ತೇನೆ. ಅವರ ಏಕ-ದೃಷ್ಟಿಕೋನದ ಅಭಿಪ್ರಾಯಗಳನ್ನು ಚರ್ಚಿಸುವ ಮೊದಲು ನಿಡಘಟ್ಟದ ರಾವಣೇಶ್ವರ ದೇವಸ್ಥಾನದ ಬಗ್ಗೆ ಒಂದೆರಡು ಮಾಹಿತಿಗಳನ್ನು ತಿಳಿದುಕೊಳ್ಳೋಣ.

ರಾವಣೇಶ್ವರ ದೇವಸ್ಥಾನ ಇಸ್ಕಾನ್‌ನ ಕೃಷ್ಣ ದೇವಸ್ಥಾನದ ಆಡಂಬರ ಅಥವಾ ತಿರುಪತಿಯ ದೇವಸ್ಥಾನದಷ್ಟು ಪ್ರಸಿದ್ಧಿ ಹೊಂದಿಲ್ಲ, ಗಾತ್ರದಲ್ಲಿ ಚಿಕ್ಕದಾದರೂ ಸಾಕಷ್ಟು ಸಂಖ್ಯೆಯಲ್ಲಿ ಭಕ್ತರನ್ನು ಹೊಂದಿರುವ ದೇವಸ್ಥಾನ. ಸಣ್ಣ ದೇವಸ್ಥಾನ. ಶಿವನನ್ನು ಪೂಜಿಸುವ ರಾವಣನ ಶಿಲ್ಪಕಲೆಗಳನ್ನು ಹೊಂದಿರುವ ಈ ದೇವಸ್ಥಾನದಲ್ಲಿ ರಾವಣನನ್ನು ಪ್ರತಿ ಸೋಮವಾರ ಮತ್ತು ಶುಕ್ರವಾರದಂದು ಪೂಜಿಸುತ್ತಾರೆ. ಅಂದು ಭಕ್ತಾದಿಗಳು ರಾವಣನನ್ನು ಪೂಜಿಸಿ ತಮ್ಮ ಕಷ್ಟ-ಕಾರ್ಪಣ್ಯಗಳು ನಶಿಸಿ ಹೋಗಲಿ ಎಂದು ಪ್ರಾರ್ಥಿಸುತ್ತಾರೆ. ಅನೇಕ ಮತ/ಪಂಥಗಳಿಗೆ ಸೇರಿರುವ ಜನ ಇಲ್ಲಿಗೆ ಹರಕೆಗಳನ್ನು ಹೊತ್ತುಕೊಂಡು ಬರುತ್ತಾರೆ. ಪುರೋಹಿತಶಾಹಿ ಸಂಸ್ಕೃತ ಸಾಲುಗಳನ್ನು ಬಿಟ್ಟರೆ (ವಿನಾಯಕ ಸ್ತೋತ್ರ) ಅರ್ಚನೆ, ಪೂಜಾವಿಧಿಗಳು ಕನ್ನಡದಲ್ಲೇ. ಅರ್ಥವಾಗದ ಮತ್ತು ಅರ್ಥಮಾಡಿಕೊಳ್ಳಬಾರದೆಂದು ಉಚ್ಚರಿಸುವ ಸಂಸ್ಕೃತ ಸ್ತೋತ್ರಗಳಿಗಿಂತ ಇದು ಭಿನ್ನ. ನೂರಾರು ವರ್ಷಗಳಿಂದ ಈ ದೇವಸ್ಥಾನದಲ್ಲಿ ಅರ್ಚನೆ, ಪೂಜಾವಿಧಿಗಳು ನಡೆಯುತ್ತಿವೆ ಎಂದು ಅಶ್ವಥರು ಹೇಳಿದರು.

ಚರ್ಚೆಯಲ್ಲಿ ಈ ದೇವಸ್ಥಾನದ ಔಚಿತ್ಯದ ಬಗ್ಗೆ ಟಿವಿ9ನ ನಿರೂಪಕರು ಸಚ್ಚಿದಾನಂದಬಾಬುರವರಿಗೆ ಪ್ರಶ್ನೆ ಕೇಳಿದಾಗ ಅವರು ಕೊಟ್ಟಂತ ಪ್ರತಿಕ್ರಿಯೆಗಳು ಗಾಬರಿ ಮತ್ತು ಪ್ರಚೋದನಕಾರಿಯಾಗಿದ್ದವು. ರಾವಣೇಶ್ವರನನ್ನು ಪೂಜಿಸುವುದು ಮೌಢ್ಯದ ಸಂಕೇತವೆಂದು ಪ್ರಾರಂಭಿಸಿದ ಅವರು ಈ ದೇವಸ್ಥಾನದ ಅಸ್ತಿತ್ವವನ್ನು ಪ್ರಶ್ನಿಸಿದರು. ರಾವಣನನ್ನು ಪೂಜಿಸುವುದು ತಪ್ಪು ಎಂದು ವಾದಿಸಿದರು. ತಮ್ಮ ಹೇಳಿಕೆಗಳಿಗೆ ಪುಷ್ಠಿಯಾಗಿ "ಮೂಲ" ರಾಮಾಯಣವನ್ನು ಉಲ್ಲೇಖಿಸಿ ರಾವಣ ಒಬ್ಬ ಸಾಮಾನ್ಯ ಮನುಷ್ಯ ಅವನು ಒಬ್ಬ ದುಷ್ಟ ವ್ಯಕ್ತಿ ಅವನಲ್ಲಿ ದೇವಾಂಶಗಳಿಲ್ಲ ಮತ್ತು ಅವನಿಂದ ನಾವು ಕಲಿಯಬೇಕಾದ ಯಾವುದೇ ಉತ್ತಮ ಗುಣಗಳಿಲ್ಲ; ಹಾಗಾಗಿ ಅವನನ್ನು



ಆರಾಧಿಸುವುದು ಮೂಢನಂಬಿಕೆಗಳಿಗೆ ಎಡೆ ಮಾಡಿಕೊಟ್ಟಂತೆ ಎಂದು ಪ್ರತಿಪಾದಿಸಿದರು. ದುಷ್ಟರನ್ನು ಪೂಜಿಸುವುದು ದಾವೂದ್ ಇಬ್ರಾಹಿಂನನ್ನು ಪೂಜಿಸುವಷ್ಟು ಅಪಾಯಕಾರಿಯಾಗಿರುತ್ತದೆ ಎಂದು ಪರೋಕ್ಷವಾಗಿ ಎಚ್ಚರಿಸಿದರು. ಈ ತರಹದ ಹೋಲಿಕೆಯು ಸೂಕ್ತವಾದುದೆ? ವೇದೋಪನಿಷತ್ತು "ಮೂಲ" ವಾಲ್ಮೀಕಿ ರಾಮಾಯಣದಲ್ಲಿ ರಾವಣನನ್ನು ಪೂಜಿಸುವುದರ ಬಗ್ಗೆ ಎಲ್ಲಿಯೂ ಉಲ್ಲೇಖಗಳು ಇಲ್ಲದಿರುವುದರಿಂದ ರಾವಣನನ್ನು ಪೂಜಿಸುವ ನಂಬಿಕೆ ಹುಸಿಯಾದುದು ಎಂದು ಅವರು ಅಭಿಪ್ರಾಯಪಟ್ಟರು.

ಸಚ್ಚಿದಾನಂದಬಾಬುರವರ ಅಭಿಪ್ರಾಯಗಳು ಏಕಮುಖಿ, ಪೂರ್ವಾಗ್ರಹಪೀಡಿತ ಮತ್ತು ತಮ್ಮದೇ ಸರಿಯೆಂದು ವಾದಿಸುವ ಮೊಂಡುತನವನ್ನು ತೋರಿಸಿದವು. ಅವರು ಪದೇಪದೇ ಉಲ್ಲೇಖಿಸುವ "ಮೂಲ" ವಾಲ್ಮೀಕಿ ರಾಮಾಯಣವನ್ನೇ ನಾವು ಪ್ರಶ್ನಿಸುವ ಅಗತ್ಯವಿದೆ. ಅದು ಎಲ್ಲಿಯದು? ಅದು ಯಥಾವತ್ತಾಗಿ ಕಾಲಾಂತರದಲ್ಲಿ ಸಾಗಿ ಬಂತೆ? ಯಾರಿಂದ ಬರೆಯಲ್ಪಟ್ಟಿದ್ದು? ಕಾಲಾಂತರದಲ್ಲಿ ಅದನ್ನು ಅನೇಕ ಪಂಡಿತರು ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸಿ, ಅನೇಕ ವಿಷಯಗಳನ್ನು ಸೇರಿಸಿರುವ ವಿಷಯ ಸಚ್ಚಿದಾನಂದಬಾಬುರವರಿಗೆ ಗೊತ್ತಿಲ್ಲವೇ? ಹೀಗಿದ್ದಾಗ "ಮೂಲ" ಎನ್ನುವುದು ನಾವು ಕಟ್ಟಿಕೊಂಡ ನಂಬಿಕೆಯಲ್ಲವೆ? ರಾವಣನನ್ನು ಪೂಜಿಸುವ ಜನರು ಅವನೊಬ್ಬ ದೇವರು ಎಂದು ನಂಬಿಕೆಯನ್ನು ಹೊಂದಿದ್ದಾರೆ. ಅದೇರೀತಿ ಹಿಂದೂ ಧರ್ಮದ ಪ್ರತಿಷ್ಠಿತ ದೇವರುಗಳನ್ನು ಪೂಜಿಸುವ ಜನರೂ ಕೂಡ ಯಾವುದೋ ಒಂದು ನಂಬಿಕೆಯನ್ನು ಪಾಲಿಸುತ್ತಿದ್ದಾರೆ. ಹೀಗಾಗಿ ರಾವಣನನ್ನು ಪೂಜಿಸುವ ನಂಬಿಕೆ ಮೌಢ್ಯದಿಂದ ಕೂಡಿದ್ದಾದರೆ, ಹಿಂದೂ ಧರ್ಮದ ಪ್ರತಿಷ್ಠಿತ ದೇವರುಗಳನ್ನು ಪೂಜಿಸುವ ಜನರು ಮೂಢರಾಗುತ್ತಾರೆ ಅಲ್ಲವೇ? ಎಷ್ಟು ಜನ ಹಿಂದೂ ಭಕ್ತರಿಗೆ ಪುರಾಣೇತಿಹಾಸಗಳ ಬಗ್ಗೆ ಗೊತ್ತಿದೆ? ಪರಂಪರೆ ಮತ್ತು ನಂಬಿಕೆಗಳನ್ನು ತಾನೆ ಅವರು ಆಚರಿಸುತ್ತಿರುವುದು? ದೇಶದ ಅನೇಕ ಕಡೆ ಇರುವ ರಾವಣೇಶ್ವರ ದೇವಸ್ಥಾನಗಳು ಮೌಢ್ಯದ ತಾಣಗಳೆಂದು ನಿಮ್ಮ ನಂಬಿಕೆಯೆ? ಅಲ್ಲಿಯ ಭಕ್ತರನ್ನು ಮೂರ್ಖರು ಅಥವಾ ಮೂಢರು ಎಂದು ನಿಮ್ಮ ಅಭಿಪ್ರಾಯವೇ? ಒಳ್ಳೆಯ ಗುಣಗಳನ್ನು ಹೊಂದಿರುವ ದೇವರುಗಳನ್ನು ಪೂಜಿಸುವುದರಿಂದ ಜನರಿಗೆ ಒಳ್ಳೆಯ ಸ್ಫೂರ್ತಿಯುಂಟಾಗುತ್ತದೆ ಎಂದು ಹೇಳುವ ನೀವು ಹಿಂದೂ ಧರ್ಮದ ಅನೇಕ ಪ್ರತಿಷ್ಠಿತ ದೇವರುಗಳ ಬಗ್ಗೆ ಪುರಾಣೇತಿಹಾಸಗಳಲ್ಲಿ ಕಾಣಬರುವ ಅವಾಂತರಗಳು, ಎಡವಟ್ಟುಗಳು, ನಯಗಾರಿಕೆ ಮತ್ತು ವಂಚನೆಗಳ ಬಗ್ಗೆ ಇರುವ ವಿವರಗಳ ಬಗ್ಗೆ ನೀವು ಏನು ಹೇಳುತ್ತೀರಿ? ಈ ದೇವರುಗಳನ್ನು ಪೂಜಿಸುವ ಜನರು ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಸಾಧ್ಯವೇ? ರಾವಣೇಶ್ವರ ದೇವಸ್ಥಾನದಲ್ಲಿ ಪೂಜೆಗಳನ್ನು ಕೈಗೊಳ್ಳುವ ಭಕ್ತಾದಿಗಳು ನೀವು ಹೇಳುವ ರಾವಣನ "ಕೆಟ್ಟ" ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆಯೇ? ನೀವು ವರ್ಣಿಸುವ ರಾವಣನ "ದುಷ್ಟ"ತನವನ್ನು ಅವನ ಭಕ್ತಾದಿಗಳು ಪ್ರತಿನಿತ್ಯದ ಜೀವನದಲ್ಲಿ ನಡೆಸಿಕೊಳ್ಳುತ್ತಿದ್ದಾರೆಯೇ? ನೀವೇ ಹೇಳಿದ ರಾವಣನ ಪಾಸಿಟಿವ್ ಗುಣಗಳಾದ ವೀಣಾವಾದನ, ಚತುರ್ವೇದಿತನ, ಸ್ಫುರದ್ರೂಪಿತನ ಅಥವಾ ಅವನ ಅತೀವ ಶಿವಭಕ್ತತನದಿಂದ ಅವನ ಭಕ್ತಾದಿಗಳು ಪ್ರಭಾವಿತರಾಗಿ ಅವನನ್ನು ಶಿವನ ಭಕ್ತನೆಂದು ಪೂಜಿಸುತ್ತಿರಬಹುದಲ್ಲವೇ (ರಾಮನ ಭಕ್ತ ಹನುಮಂತನನ್ನು ಪೂಜಿಸುವ ಹಾಗೆ)? ಪ್ರಾಯಶಃ ಅಲ್ಲಿಗೆ ಬರುವ ಭಕ್ತಾದಿಗಳು ಹಿಂದೂ ಧರ್ಮದ ಪ್ರತಿಷ್ಠಿತ ದೇವರುಗಳನ್ನು ಸಹ ಪೂಜಿಸುತ್ತಿರಬಹುದು! ಆ ದೇವರುಗಳ ಹಾಗೆ ರಾವಣನು ಒಬ್ಬ ದೇವರೆಂದು ಅವರು ತಿಳಿದಿರಬಹುದು.

ರಾವಣನನ್ನು ದುಷ್ಟ ಎಂದು ಹೇಳುವ ನೀವು ಕೇವಲ "ಮೂಲ" ವಾಲ್ಮೀಕಿ ರಾಮಾಯಣವನ್ನು ಮಾತ್ರ ಏಕೆ ಉಲ್ಲೇಖಿಸುತ್ತೀರಿ? ಖ್ಯಾತ ಎ.ಕೆ. ರಾಮನುಜರು ಸಂಕಲಿಸಿರುವ **"Many Ramayanas"** ಕೃತಿಯನ್ನು ತಾವು ಓದಿರುವಿರಾ? ಅದರಲ್ಲಿ ರಾಮ, ಸೀತೆ ಮತ್ತು ರಾವಣನ ಬಗ್ಗೆ ಇರುವ ಅನೇಕ, ಭಿನ್ನ, ಭಿನ್ನ ಐತಿಹ್ಯ/ನಂಬಿಕೆಗಳ ಬಗ್ಗೆ ತಮಗೆ ಯಾಕೆ ತಿಳಿದಿಲ್ಲ? ಸಂಸ್ಕೃತದಲ್ಲೇ ಬಹುಶಃ 20ಕ್ಕಿಂತ ಹೆಚ್ಚಿನ ಭಿನ್ನ, ಭಿನ್ನ ರಾಮಾಯಣಗಳಿರುವುದು ನಿಮಗೆ ಗೊತ್ತಿಲ್ಲವೇ? ಅವುಗಳು ಒಂದೇ ಸ್ವರೂಪ ಮತ್ತು ಕಥನಗಳನ್ನು ಹೊಂದಿವೆಯೆ? ಒಂದು ವೇಳೆ ರಾವಣನನ್ನು ದೇವರೆಂದು ಪೂಜಿಸಬೇಕು ಎಂದು ಪುರಾಣೇತಿಹಾಸಗಳಲ್ಲಿ ಹೇಳಿರದಿದ್ದರೂ, ರಾವಣನನ್ನು ಯಾವುದೋ ನಂಬಿಕೆ ಮತ್ತು ಭಕ್ತಿಯಿಂದ ಪೂಜಿಸುತ್ತಿರುವವರು ತಪ್ಪು ಮಾಡುತ್ತಿದ್ದಾರೆಯೆ? ನಿಮ್ಮಿಂದ ಮನ್ನಣೆಗೊಳಗಾಗಲ್ಪಟ್ಟ ದೇವರುಗಳನ್ನು ಮಾತ್ರ ಪೂಜಿಸಬೇಕೆ?

ಭಾರತದ ಅನೇಕ ಭಕ್ತರಿಗೆ ನಂಬಿಕೆ, ಸಂಪ್ರದಾಯ ಮತ್ತು ಅನೇಕ ದಿನಗಳಿಂದ ಸಾಗಿಬಂದ ಆಚಾರ-ವಿಚಾರಗಳೂ ಮುಖ್ಯವಾಗುತ್ತವೆಯೇ ಹೊರತು ಶ್ರೇಷ್ಠ ಅಥವಾ ಕನಿಷ್ಠ ದೇವರುಗಳಲ್ಲ, ಇದೇ ಕಾರಣಕ್ಕಾಗಿಯೇ ನಮ್ಮ ದೇಶದಲ್ಲಿ ಗಿಡ, ಮರ, ನರಿ, ಕೋತಿ, ಆನೆ, ಹಾವು, ನಾಯಿ, ಹುಲಿ, ಇಲಿ ಇತ್ಯಾದಿಗಳನ್ನು ಆರಾಧಿಸುವುದು. ಹೀಗಾಗಿ ದೇವರಲ್ಲೇ ಕನಿಷ್ಠ-ಗರಿಷ್ಠ ಎಂದು ನೀವು ಯಾಕೆ ಶ್ರೇಣೀಕೃತಗೊಳಿಸುತ್ತೀರಿ?

ರಾವಣನನ್ನು ದೂಷಿಸದೆ ತಮ್ಮ ರಾವಣೇಶ್ವರ ದೇವಸ್ಥಾನದ ಬಗ್ಗೆ ಮಾತನಾಡಿದ ಅಶ್ವಥರು ನಿಮ್ಮ ನಂಬಿಕೆ ಮತ್ತು ಅಭಿಪ್ರಾಯಗಳನ್ನು ವ್ಯಂಗ್ಯ ಮಾಡಲಿಲ್ಲ. ಆದರೆ ನೀವು ಅಶ್ವಥರನ್ನು ಅಜ್ಞಾನಿಯೆಂದು ಪರೋಕ್ಷವಾಗಿ ತಿವಿದಿರಿ. ಇದು ನಿಮ್ಮ ಜ್ಞಾನಕ್ಕೆ ಮತ್ತು ವ್ಯಕ್ತಿತ್ವಕ್ಕೆ ತಕ್ಕುದಾದುದೆ? ಕೊನೆಯದಾಗಿ ಹೇಳುವುದಾದರೆ "ಸಮಗ್ರತೆಗಳನ್ನು ಸ್ಥಾಪಿಸುವ ಮೊದಲು ತಿಳಿದವರನ್ನು ಒಮ್ಮೆ ಸಂಪರ್ಕಿಸಿ" ಎಂದು ಚುಚ್ಚಿದ ನಿಮ್ಮ ಮಾತಿಗೆ ಅಶ್ವಥರ ನಿರ್ಭೀತವಾದ, ನಿಷ್ಪಕ್ಷಪಾತ ಪ್ರತಿಕ್ರಿಯೆ ನನಗೆ ಮೆಚ್ಚುಗೆಯಾಯಿತು. ಆಶ್ಚರ್ಯವನ್ನುಂಟುಮಾಡಿತು ಕೂಡ!

-ಡಾ.ವಿಜಯಕುಮಾರ್ ಎಂ.ಬೋರಟ್ಟಿ,
ಮೈಸೂರು

Registered No.KA/RNP/BGS/2036/2011-13 Posted at : GPO, Bangalore-01. Fri/Saturday R B P LANKESH, Kannada Weekly Price Rs. 14/- 03-10-2012 RNI No. KARKAN2005/14648

'ನಾಯಕಿ'ಯ ಐಟಂ ಡ್ಯಾನ್ಸ್ ಮತ್ತು 'ನಾಯಕ'ರ ಹಾಡು



ಮೊನ್ನೆಮೊನ್ನೆಯಷ್ಟೇ 'ಶೋಮ್ ಅಪ್ಸ್' ಚಿತ್ರಕ್ಕಾಗಿ ಐಟಂ ಸಾಂಗ್‌ನಲ್ಲಿ ಬಿಂದಾಸಾಗಿ ಕುಣಿದು ಕುಪ್ಪಳಿಸಿದ ಕನ್ನಡ ಚಿತ್ರರಂಗದ ಸದ್ಯದ ಹಾಟ್ ತಾರೆ ರಾಗಿಣಿ ಈಗ ಮತ್ತೊಂದು ಐಟಂ ಸಾಂಗ್‌ಗಾಗಿ ಆಯ್ಕೆಯಾಗಿರುವ ಬಿಸಿಬಿಸಿ ಸುದ್ದಿ ಕೇಳಿಬಂದಿದೆ.

ಶಿವರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ 'ಲಕ್ಷ್ಮಿ' ಚಿತ್ರದ ನಿರ್ದೇಶಕ ರಾಘವ ಲೋಕಿ ಒಂದು ಐಟಂ ಸಾಂಗ್‌ನಲ್ಲಿ ರಾಗಿಣಿಯನ್ನು ಹಾಕಿಕೊಂಡು ಚಿತ್ರೀಕರಿಸುವುದು ಬಹುತೇಕ ಖಚಿತವಾಗಿದೆ. ವಿಶೇಷವೆಂದರೆ ಈ ಐಟಂ ಸಾಂಗನ್ನು ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಹಾಡಿದ್ದಾರಂತೆ. ಈ ಹಿಂದೆ ಶಿವರಾಜ್‌ಕುಮಾರ್ ನಟಿಸಿದ್ದ 'ಮೈಲಾರಿ' ಚಿತ್ರಕ್ಕೂ ಪುನೀತ್ ರಾಜ್‌ಕುಮಾರ್ ಇದೇ ತರಹ ಒಂದು ಹಾಡನ್ನು ಹಾಡಿದ್ದರು. ಆದರೆ ಐಟಂ ಸಾಂಗ್‌ಗೆ ಬೇಕಾದಂತಹ ವೈಯ್ಯಾರದ, ಫಾಸ್ಟ್‌ಬೀಟ್‌ನ ಹಾಡನ್ನು ಪುನೀತ್ ಹಾಡುತ್ತಿರುವುದು ಇದೇ ಮೊದಲ ಬಾರಿ.

ಅಂದಹಾಗೆ, 'ಲಕ್ಷ್ಮಿ' ಚಿತ್ರಕ್ಕೆ ಶಿವರಾಜ್‌ಕುಮಾರ್ ಕೂಡ ಒಂದು ಹಾಡನ್ನು ಹಾಡಿದ್ದಾರೆ. ಹೀಗಾಗಿ ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಇವರಿಬ್ಬರ ಹಾಡುಗಳನ್ನು ಒಮ್ಮೆಲೇ ಕೇಳುವ ಸೌಭಾಗ್ಯ ಅವರ ಅಭಿಮಾನಿಗಳಿಗೆ ದೊರಕಿದೆ. ಹೀಗೆ ಒಂದೇ ಚಿತ್ರದಲ್ಲಿ ಡಬಲ್ ದಮಾಕಾ ನೀಡಿರುವ ಸಂಗೀತ ನಿರ್ದೇಶಕ ಗುರುಕಿರಣ್ ತನ್ನ ಪ್ರತಿಭೆ ಮತ್ತು ಗಿಮಿಕ್ ಮೂಲಕ ಚಿತ್ರದ ಗೆಲುವಿಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.



ಇತ್ತೀಚಿಗಿನ ತನಕ ತೆಳ್ಳಗೆ, ಉದ್ದಕ್ಕೆ ಬಳುಕುವ ಮೈಕಟ್ಟನ್ನು ಹೊಂದಿದ್ದ ರಾಗಿಣಿ ಈಗ ಡಬಲ್‌ಡೆಕ್ಕರ್ ತರಹ ಊದಿಕೊಂಡಿದ್ದಾರೆ. ಅದರ ಜೊತೆಜೊತೆಗೆ ಈಗ ಐಟಂಸಾಂಗ್‌ಗಳಿಗೆ ಹೆಚ್ಚು ಹೆಚ್ಚು ಒಪ್ಪಿಕೊಳ್ಳುತ್ತಿದ್ದಾರೆ. ಇದು ಹೀಗೇ ಮುಂದುವರೆದರೆ ಬರುವ ದಿನಗಳಲ್ಲಿ ಗಾಂಧಿನಗರದ ಜನ ಆಕೆಗೆ ಪರ್ಮನೆಂಟ್‌ಆಗಿ ಐಟಂಸಾಂಗ್‌ಗಳನ್ನು ಮಾತ್ರ ನೀಡಿದರೆ ಅಚ್ಚರಿ ಇಲ್ಲ.

ಪುನೀತ್ ಹಾಡು, ಶಿವಣ್ಣನ ಹಾಡು, ಜೊತೆಗೆ ರಾಗಿಣಿಯ ಐಟಂ ಸಾಂಗು – ಈ ಮೂರರಲ್ಲಿ ಯಾವುದು ಕನ್ನಡದ ಪ್ರೇಕ್ಷಕರ ಮನಸ್ಸು ಗೆಲ್ಲುತ್ತದೋ ನೋಡಬೇಕು. ●

ಸಂಗೀತ ನಿರ್ದೇಶಕರ ಸಾಹಸ



ಈ ಹಿಂದೆ ಸಂಗೀತ ನಿರ್ದೇಶಕ ಹಂಸಲೇಖ ತಮ್ಮ ಜನಪ್ರಿಯತೆಯ ತುತ್ತತುದಿಯಲ್ಲಿದ್ದಾಗ ಮಕ್ಕಳಿಗಾಗಿ ಮ್ಯೂಸಿಕ್ ಆಲ್ಬಂ ಒಂದನ್ನು ಮಾಡುವ ತಮ್ಮ ಕನಸನ್ನು ನನಸಾಗಿಸಿ ಕೈ ಸುಟ್ಟುಕೊಂಡಿದ್ದರು. ಈಗ ಅಂತಹದ್ದೇ ಸಾಹಸಕ್ಕೆ ಚಿತ್ರ ನಿರ್ದೇಶಕ ಯೋಗರಾಜ್ ಭಟ್ ಮತ್ತು ಸಂಗೀತ ನಿರ್ದೇಶಕ ಹರಿಕೃಷ್ಣ ಜಂಟಿಯಾಗಿ ಮುಂದಾಗಿದ್ದಾರೆ.

ಇವರಿಬ್ಬರ ಜೋಡಿ ಈಗಾಗಲೇ ಕನ್ನಡ ಚಿತ್ರರಂಗದ ಪ್ರೇಕ್ಷಕರನ್ನು ಮೋಡಿ ಮಾಡಿರುವುದು ನಿಮಗೆಲ್ಲ ಗೊತ್ತಿದೆ. ಅದರಲ್ಲೂ ಯೋಗರಾಜ್ ಭಟ್ ಅವರ ಗದ್ಯ ರೂಪದ ಪದ್ಯಗಳು ಹರಿಕೃಷ್ಣರ ಸಂಗೀತದಿಂದಾಗಿ ಚಿಕ್ಕಮಕ್ಕಳ ನಾಲಗೆಯಲ್ಲಿ ಹರಿದಾಡುವುದು ಸಾಮಾನ್ಯವಾಗಿದೆ. ಈ ಕಾರಣಕ್ಕೇ ಇರಬೇಕು ಇವರಿಬ್ಬರು "ಮಕ್ಕಳಿಗಾಗಿ ನಾವು ಯಾಕೆ ಹಾಡನ್ನು ಬರೆಯಬಾರದು" ಎಂದೆನಿಸಿದೆ. ಮುಂದಿನ ವರ್ಷ ಈ ಅನಿಸಿಕೆಯನ್ನು ಕಾರ್ಯರೂಪಕ್ಕೆ ತರಲು ಅವರಿಬ್ಬರು ನಿರ್ಧರಿಸಿದ್ದಾರೆ. ಮಕ್ಕಳಿಗಾಗಿ ಒಂದು ಮ್ಯೂಸಿಕ್ ಆಲ್ಬಂ ಜೊತೆಜೊತೆಗೆ ಯೌವ್ವನದಲ್ಲಿರುವ ಹುಡುಗ-ಹುಡುಗಿಯರಿಗಾಗಿ ಪ್ರೀತಿಯ ಬಗ್ಗೆ ಒಂದು ಮ್ಯೂಸಿಕ್ ಆಲ್ಬಂ, ಮನೆಯಲ್ಲಿ ಕೆಲಸ ಮಾಡುವ ಹೆಂಗಸರಿಗಾಗಿ ಒಂದು ಮ್ಯೂಸಿಕ್ ಆಲ್ಬಂ ಹೀಗೆ ಇವರಿಬ್ಬರೂ ಏನೇನೋ ಪ್ಲಾನ್‌ಗಳನ್ನು ಹಾಕಿಕೊಂಡಿದ್ದಾರೆ.

ಜನಪ್ರಿಯತೆ ಇರುವಾಗ ಇಂತಹ ಪ್ರಯೋಗಗಳನ್ನು ಮಾಡುವುದನ್ನು ಮೆಚ್ಚಲೇಬೇಕು. ಆದರೆ ಇಂತಹ ಪ್ರಯೋಗಗಳು ಹಣ ಮಾಡುವ ದೃಷ್ಟಿಯೊಂದನ್ನು ಮಾತ್ರ ಹೊಂದಿದ್ದರೆ ಅದು ಸ್ವಾಗತಾರ್ಹವಲ್ಲ, ಬದಲಾಗಿ ಮಕ್ಕಳ ಜ್ಞಾನವನ್ನು ವೃದ್ಧಿಮಾಡುವ ಅಥವಾ ಅವರ ಪರ್ಸನಾಲಿಟಿಯನ್ನು ವೃದ್ಧಿಸುವ ಹಾಡುಗಳನ್ನು ಹೊರತಂದರೆ ಅದಕ್ಕೆ ಜನಬೆಂಬಲ ಇರುತ್ತದೆ. ಅದನ್ನು ಬಿಟ್ಟು 'ಶಿವ ಅಂತ ಹೋಗುತ್ತಿದ್ದೆ ರೋಡಿನಲಿ.........', 'ಹಳೆ ಪಾತ್ರೆ, ಹಳೆ ಕಬ್ಣ ಹಳೆ ಪೇಪರ್ ಕಣೋ ಹೋಯ್...' ತರಹದ ಹಾಡುಗಳನ್ನು ಭಟ್ಟರು ತಮ್ಮ ಮಕ್ಕಳ ಆಲ್ಬಂಗಳಲ್ಲಿ ನೀಡಿದರೆ ಅದು ಅವರಿಗೆ ಶೋಭೆ ತರುವುದಿಲ್ಲ.



ಚಿತ್ರದ ನಾಯಕಿ ಶ್ರೇಯಾ

'ದಂಡುಪಾಳ್ಯ'ಕ್ಕೆ ಮತ್ತೊಂದು ಬಲಿ

'ದಂಡುಪಾಳ್ಯ' ಚಿತ್ರಕ್ಕೆ ಮತ್ತೊಬ್ಬರು ಬಲಿಯಾಗಿದ್ದಾರೆ. ಈ ಬಾರಿ ಬಲಿಯಾಗಿರುವುದು ಬೇರೆ ಯಾರೂ ಅಲ್ಲ, ಆ ಚಿತ್ರದ ನಾಯಕಿ ಪೂಜಾ ಗಾಂಧಿ. "ಈಕೆಯ ಅಗತ್ಯ ನಮ್ಮ ಪಕ್ಷಕ್ಕಿಲ್ಲ, ಅವರು ಸಿನಿಮಾದಲ್ಲೇ ಇರಲಿ. ನಾವು ರಾಜಕೀಯದಲ್ಲೇ ಇರುತ್ತೇವೆ" ಎಂದು ಜೆಡಿಎಸ್ ಪಕ್ಷದ ಅಧ್ಯಕ್ಷ ಕುಮಾರಸ್ವಾಮಿಯವರು ಮೊನ್ನೆ ಪತ್ರಿಕಾಗೋಷ್ಠಿಯಲ್ಲಿ ಹೇಳುವ ಮೂಲಕ ಪೂಜಾ ಗಾಂಧಿಗೆ ಅವಮಾನ ಮಾಡಿದರಲ್ಲದೆ ಆಕೆಯನ್ನು ತಮ್ಮ ಪಕ್ಷದಿಂದ ಕೈಬಿಟ್ಟಿದ್ದಾರೆ.



ಪೂಜಾ ಗಾಂಧಿಯ ಈ ಪತನಕ್ಕೆ ಆಕೆ ನಟಿಸಿದ್ದ 'ದಂಡುಪಾಳ್ಯ' ಚಿತ್ರದ ಪಾತ್ರವೇ ಮುಖ್ಯ ಕಾರಣ. ರಾಜ್ಯಸಭಾ ಸದಸ್ಯರಾದ ಬಿಜೆಪಿಯ ಆಯನೂರು ಮಂಜುನಾಥ್ ಇತ್ತೀಚೆಗೆ ಶಿವಮೊಗ್ಗೆಯಲ್ಲಿ ಭಾಷಣ ಮಾಡುತ್ತ "ದಂಡುಪಾಳ್ಯ ರಾಣಿಯನ್ನು ಮುಂದಿಟ್ಟುಕೊಂಡು ಕುಮಾರಸ್ವಾಮಿಯವರು ಮತ ಕೇಳುತ್ತಿದ್ದಾರೆ. ಅವರ ಪಕ್ಷಕ್ಕೆ ಯಾರು ಓಟ್ ಹಾಕುತ್ತಾರೆ?" ಎಂದು ಗೇಲಿ ಮಾಡಿದ್ದರು. ಇದಾದ ಕೆಲವೇ ದಿನಗಳಲ್ಲಿ ಕುಮಾರಸ್ವಾಮಿ ತಮ್ಮ ಪಕ್ಷದಿಂದ ಪೂಜಾ ಗಾಂಧಿಗೆ ಗೇಟ್‌ಪಾಸ್ ನೀಡಿದರು.

ಇದರ ಸುತ್ತ ಈಗ ಗಾಂಧಿನಗರದಲ್ಲಿ ಚರ್ಚೆಗಳು ನಡೆಯುತ್ತಿವೆ. ಸಿನಿಮಾಗಳಲ್ಲಿ ವಿಲನ್ ಪಾತ್ರ ಮಾಡಿದವರು ರಾಜಕೀಯಕ್ಕೆ ಬರಲೇಬಾರದೇ? ಈ ಹಿಂದೆ ಖಳನಾಯಕ ಮತ್ತು ಖಳನಾಯಕಿಯಾಗಿ ಬೆಳ್ಳಿತೆರೆಯಲ್ಲಿ ಕಾಣಿಸಿಕೊಂಡ ಅನೇಕರು ಜನಪ್ರತಿನಿಧಿಗಳಾಗಿ ಆಯ್ಕೆ ಆಗಿರುವಾಗ ಪೂಜಾ ಗಾಂಧಿಯನ್ನು ಯಾಕೆ ಈ ರೀತಿ ಕೈಬಿಟ್ಟರು? ಎಂಬುದು ಹಲವರ ಪ್ರಶ್ನೆ.



ಆದರೆ ಉದ್ಯಮದ ಇನ್ನೊಂದು ವರ್ಗ ಹೇಳುವ ಮಾತೇ ಬೇರೆ. ಅದೇನೆಂದರೆ, ಫೇಸ್‌ಬುಕ್ ಮತ್ತು ಟ್ವಿಟರ್‌ನಂತಹ ಸಾಮಾಜಿಕ ಸಂಪರ್ಕ ತಾಣಗಳಲ್ಲಿ ಪೂಜಾ ಗಾಂಧಿ ಮತ್ತು ಕುಮಾರಸ್ವಾಮಿ ಬಗ್ಗೆ ಅನೇಕ ಜೋಕ್‌ಗಳು ಹರಿದಾಡಲಾರಂಭಿಸಿವೆಯು[illegible] ಇದರಿಂದ ಮನನೊಂದ ಕುಮಾರಸ್ವಾಮಿಯವರು ಈ ಅತಿರೇಕದ ಕ್ರಮವನ್ನು ಕೈಗೊಂಡಿದ್ದಾರೆ ಎಂಬುದು ಹಲವರ ತರ್ಕ. ಅಂದಹಾಗೆ ಕುಮಾರಸ್ವಾಮಿ ಆಸ್ಥಾನದಲ್ಲಿರುವ ರಾಧಿಕಾ ಅವರ ಆದೇಶದ ಮೇರೆಗೆ ಪೂಜಾ ಗಾಂಧಿಗೆ ಗೇಟ್‌ಪಾಸ್ ನೀಡಲಾಗಿದೆ ಎಂಬ ಮಾತೂ ಚಾಲ್ತಿಯಲ್ಲಿದೆ.

ಕೆಲತಿಂಗಳ ಹಿಂದೆ ತನ್ನ ತಲೆಮೇಲೆ ತೆ[illegible] ಹೊತ್ತು ದಳದ ಪರವಾಗಿ ಪ್ರಚಾರ ಮಾ[illegible] ಈ ಮುಂಗಾರು ಮಳೆ ಹುಡುಗಿ ಈಗ[illegible] ಯಾವುದೇ ಸಭೆ ಸಮಾರಂಭಗಳಲ್ಲಿ ಕಾಣಿಸಿಕೊಳ್ಳದೆ ಮನೆ ಹುಡುಗಿಯಾಗಿದ್ದಾಳೆ.

● ಶೆಣೈ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com